pISSN 09759484
eISSN 2395 5538
Volume 25 | Issue I(B)

March 2025

CARMELIGHT

Special Edition
for International Seminar

ಕನ್ನಡ ಸಾಹಿತ್ಯ ಮತ್ತು ವಿಜ್ಞಾನ

KANNADA LITERATURE AND SCIENCE

Organized by

ಕನ್ನಡ ವಿಭಾಗ

DEPARTMENT OF KANNADA

Mount Carmel College, Autonomous
58, Palace Road, Bengaluru - 560052

pISSN 09759484
eISSN 2395 5538
Volume 25 | Issue I(B

March 2025

CARMELIGHT

Special Edition
for International Seminar

ಕನ್ನಡ ಸಾಹಿತ್ಯ ಮತ್ತು ವಿಜ್ಞಾನ

KANNADA LITERATURE AND SCIENCE

Organized by

ಕನ್ನಡ ವಿಭಾಗ

DEPARTMENT OF KANNADA

Mount Carmel College, Autonomous
58, Palace Road, Bengaluru - 560052

EDITORIAL BOARD	
Editor-in-Chief	**Dr. Cletus D'Souza** *Research Advisor*
Editor	**Dr. Kavitha G Singh** *Dean - Research & Publications*
Research Coordinators	**Dr. Pradeep N** **Dr. Selva Ganapathy M**
REVIEW COMMITTEE	
Committee Members	**Mr. S.R Vijayashankar** *Literary Critic/Communication Excecutive*
	Dr.Padmini Nagaraju *Writer/Honorary Secretary : Kannada Sahitya Parishathu,Bengaluru*
	Mr. T G Shrinidhi *Founder/Editor : ejnana.com and Author (Information Technology)*
	Dr. Kavitha Singh *Research Dean, Mount Carmel College, Autonomous*
	Dr. Ravishankar A. K. *Author/ Assistant Professor (Kannada)* *Kristu Jayanthi College, Autonomous*
Special Edition	
Editors	**Dr. Ravisha H. V.** *HOD & Associate Professor, Kannada*
	Dr. Chetana Hegde *Assistant Professor, Kananda*
	Ms. Anitha K. V. *Assistant Professor, Kananda*
	Ms. Aruna S. *Lecturer*

CARMELIGHT EDITORIAL BOARD	
Associate Editors	**Dr. Vijaya Priya S** *Dept. of Economics*
	Dr. Geetha Santhosh *Dept. of Nutrition & Dietetics*
Editors	**Dr. Padmashree Kulkarni** *Dept. of Life Science*
	Ms. Shaila Mary J *Dept. of Computer Applications*
	Dr. Sivakami R. *Dept. of Commerce*
	Dr. Myrene Roselyn D'Souza *Dept. of Biochemistry*
	Dr. Vinitha Chandra *Dept. of English*

ಸಂಪಾದಕೀಯ

ಹೊಸ ಓದುಗಳಿಗೆ ತೆರೆದುಕೊಳ್ಳಬೇಕಾದ ತುರ್ತು ಸನ್ನಿವೇಶದಲ್ಲಿ ಇಂದಿನ ಅಧ್ಯಯನಗಳು ನಡೆಯುತ್ತಿವೆ. ಇಂತಹ ಅಧ್ಯಯನಗಳನ್ನು ನಾವು ವೈಜ್ಞಾನಿಕವಾಗಿ ಕಂಡುಕೊಳ್ಳಬೇಕಾದ ಮಾರ್ಗಗಳನ್ನು ರೂಪಿಸಬೇಕಿದೆ. ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ ಸಂಸ್ಥೆಯಾಗಿ ಇದುವರೆಗೂ ೭೬ ವರ್ಷಗಳ ಶೈಕ್ಷಣಿಕ ಸೇವೆಯನ್ನು ಅಮೂಲಾಗ್ರವಾಗಿ ನೀಡಿದೆ. ಜ್ಞಾನ–ವಿಜ್ಞಾನ ಸಹಿತವಾದ ಅರ್ಥಪೂರ್ಣ ವಿದ್ಯಾರ್ಥಿಗಳನ್ನಾಗಿ ರೂಪಿಸುವಲ್ಲಿ ಈ ಪದವಿ ಹಂತವು ಬಹು ಮುಖ್ಯ ಪಾತ್ರವಹಿಸುತ್ತದೆ. ನಮ್ಮ ವಿದ್ಯಾರ್ಥಿಗಳು ಸಮ ಸಮಾಜದ ಭಾಗವಾಗಿ, ಎಲ್ಲಾ ಕ್ಷೇತ್ರದಲ್ಲೂ ಸಾಧನೆ, ಉದ್ಯೋಗ ಹಾಗೂ ಶ್ರೇಷ್ಠ ಬದುಕನ್ನು ನಿರ್ವಹಿಸುತ್ತಿದ್ದಾರೆ. ಇದರ ಕಾಣಿಕೆಯಾಗಿ ೨೦೨೪–೨೫ನೇ ಸಾಲಿನಲ್ಲಿ ವಿಜ್ಞಾನ ಸಾಹಿತ್ಯವನ್ನು ವಿಭಿನ್ನ ನೆಲೆಗಳ ಮೂಲಕ ಕರ್ನಾಟಕ, ಭಾರತ ಹಾಗೂ ವಿಶ್ವದ ಮೂಲೆಮೂಲೆಗೆ ಓದಿನ ವಿಸ್ತಾರಗಳ ಮೂಲಕ ತಲುಪಿಸಿದ್ದೇವೆ. ಇದರ ಫಲವಾಗಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು 'ಕನ್ನಡ ಸಾಹಿತ್ಯ ಮತ್ತು ವಿಜ್ಞಾನ' ಎಂಬ ಶೀರ್ಷಿಕೆ ಅಡಿ ಹಮ್ಮಿಕೊಳ್ಳಲಾಗಿದೆ.

ಕನ್ನಡ ಸಾಹಿತ್ಯ ಮತ್ತು ವಿಜ್ಞಾನ ಎಂಬ ವಿಷಯವನ್ನು ಆಯ್ಕೆಮಾಡಿಕೊಳ್ಳುವಾಗ ಹಲವು ಪ್ರಶ್ನೆಗಳು ಎದುರಾದವು. ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ, ಕನ್ನಡ ಭಾಷೆಯಲ್ಲಿ ವಿಜ್ಞಾನ, ವೈಜ್ಞಾನಿಕ ಚಿಂತನೆಗಳು ಹೀಗೆ ಹಲವು ಸಂದಿಗ್ಧತೆಗಳ ನೆರಳಿನಲ್ಲೇ ಛಲ ಬಿಡದ ತ್ರಿವಿಕ್ರಮನಂತೆ ನಮ್ಮ ಕನ್ನಡ ವಿಭಾಗವು ಈ ವಿಷಯ ಆಯ್ಕೆ ಮಾಡಿಕೊಂಡಿತು. ಎಲ್ಲರಿಗೂ ಪ್ರತಿನಿತ್ಯ ವಿಜ್ಞಾನ ಬೇಕು ಆದರೆ ಅಧ್ಯಯನ ಮಾತ್ರ ಒಂದು ಪ್ರತ್ಯೇಕ ನೆರೆಯಾಗಿರುವುದು ಅತ್ಯಂತ ಕುತೂಹಲ ವಿಷಯವಾಗಿ ಕನ್ನಡ ಸಾಹಿತ್ಯವನ್ನು ಅಧ್ಯಾಪನ ಮಾಡುವ ನಾವೆಲ್ಲರೂ ವಿಜ್ಞಾನಮುಖಿ ಚಿಂತನೆಗಳ ಕಡೆ ತೆರೆದುಕೊಳ್ಳಲು ಆಲೋಚಿಸಿದೆವು. ನಮ್ಮ ವಿಚಾರ ಸಂಕಿರಣಕ್ಕೆ ಕನ್ನಡ ಸಾಹಿತ್ಯ ಮತ್ತು ವಿಜ್ಞಾನ ಎಂಬ ಶೀರ್ಷಿಕೆ ನೀಡಿ, ಹಲವು ವಿದ್ವಾಂಸರ ಸಲಹೆ ಪಡೆದು ವಿಷಯ ಚಿಂತನೆಗಳನ್ನು ಓದುಗರ ಮುಂದಿಟ್ಟೆವು. ಅದರ ಫಲಿತವಾಗಿ ಈ ಕೃತಿಯು ಸಂಪಾದನೆಗೊಂಡಿದೆ. ಈ ವರ್ತಮಾನದ ಮುಖಾಮುಖಿಯಾಗಿ ವಿಜ್ಞಾನದೊಂದಿಗೆ ತೆರೆದುಕೊಳ್ಳುವ ಹಲವು ನೋಟಗಳು ಇಲ್ಲಿವೆ. ಎಲ್ಲಾ ಕ್ಷೇತ್ರದವರೂ ಇಲ್ಲಿ ಅಧ್ಯಯನ ನಡೆಸಿ, ಲೇಖನ ರಚಿಸಿದ್ದಾರೆ. ಆದ್ದರಿಂದ ಇಲ್ಲಿ ಏಕಮುಖಿ ಬರಹಗಳಿಲ್ಲ. ಕೆಲವು ಪರಿಚಯ ಲೇಖನಗಳಾದರೆ, ಕೆಲವು ಒಂದು ವಿಷಯವನ್ನು ವೈಜ್ಞಾನಿಕವಾಗಿ ಬೆನ್ನತ್ತಿ ಬರೆದ ಸಂಶೋಧನೆಗಳಾಗಿವೆ. ಜೊತೆಯಲ್ಲಿ ತಮ್ಮ ಆಸಕ್ತಿ ಕ್ಷೇತ್ರದಲ್ಲಿಯೇ ವೈಜ್ಞಾನಿಕ ವಿಚಾರಗಳನ್ನು ಹುಡುಕುವ ಸಾಹಸ ಚಿಂತನೆಗಳು ಇಲ್ಲಿವೆ. ಒಟ್ಟಾರೆ ಇದೊಂದು ಸಮಗ್ರ ನೋಟದ ವಿಜ್ಞಾನ ಕೈಪಿಡಿ.

ಈ ಕೃತಿ ಕಾರ್ಯದಲ್ಲಿ ಕನ್ನಡ ಸಾಹಿತ್ಯದ ಗಂಭೀರ ಬರಹಗಾರರು ಕೂಡ ಸೂಕ್ತ ಸಮಯಕ್ಕೆ ಲೇಖನ ನೀಡಿ, ಕೃತಿಯ ಮೌಲ್ಯ ಹೆಚ್ಚಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ, ವೈಜ್ಞಾನಿಕ ಚಿಂತನೆಗಳು, ಪ್ರಾಚೀನ ವಿಜ್ಞಾನವಾದ ವೈದ್ಯಶಾಸ್ತ್ರ, ವೈದ್ಯಕೀಯ ಶಾಸ್ತ್ರದ ಇತಿಹಾಸ, ಹೆಜ್ಜೆ ಗುರುತುಗಳು ಈ ಮಾನವ ಪ್ರಪಂಚದ ವೈಜ್ಞಾನಿಕ ವಿಶ್ಲೇಷಣೆ, ಬಹುಮುಖ್ಯವಾಗಿ ಅತಿ ಹೆಚ್ಚು ಲೇಖಕರು ಅಧ್ಯಯನ ನಡೆಸಿದ ವಚನ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆಗಳು, ಜಾನಪದ ಲೋಕದಲ್ಲಿ ವಿಜ್ಞಾನದ ಚಿಂತನೆಗಳು, ನವೋದಯ ಸಾಹಿತ್ಯ, ಕುವೆಂಪು, ಜನಾರ್ಧನ ಗುರ್ಕಾರ, ಎಸ್. ಎಲ್. ಭೈರಪ್ಪ, ತೇಜಸ್ವಿ, ಸವಿತಾ ಶ್ರೀನಿವಾಸ್ ಮೊದಲಾದ ಲೇಖಕರ ಸಾಹಿತ್ಯದಲ್ಲಿ ವೈಜ್ಞಾನಿಕ ಅಂಶಗಳ ವಿವಿಧ ನೆಲೆ–ಚಿಂತನೆಗಳನ್ನು ದರ್ಶನ ಸ್ವರೂಪದಲ್ಲಿ ನೀಡಿರುವುದು, ಕನ್ನಡ ಸಾಹಿತ್ಯ ಮತ್ತು ವಿಜ್ಞಾನದ ಹುಡುಕಾಟವನ್ನು ತಮ್ಮ ಆಸಕ್ತಿ ಕ್ಷೇತ್ರಗಳಲ್ಲಿಯೇ ಕಂಡುಕೊಂಡಿರುವುದು ನಮ್ಮ ಈ ಕೃತಿಯ ಮೌಲ್ಯವನ್ನು ವಿಸ್ತರಿಸಿದೆ. ಇದು ಕನ್ನಡ ಸಾಹಿತ್ಯದಲ್ಲಿ ವಿಜ್ಞಾನವನ್ನು ಅಧ್ಯಯನ ಮಾಡುವ ಮತ್ತು ಸಂಶೋಧನೆ ನಡೆಸುವ ಪ್ರತಿಯೊಬ್ಬರಿಗೂ ಒಂದು ಅರ್ಥಪೂರ್ಣ ಕೃತಿಯಾಗುತ್ತದೆ ಎಂಬುದು ನಮ್ಮ ನಂಬಿಕೆಯಾಗಿದೆ.

ಇಂತಹ ಅರ್ಥಪೂರ್ಣ ಕಾರ್ಯಕ್ಕೆ ಬೆಂಬಲ ಹಾಗೂ ಸದಾ ಮಾರ್ಗದರ್ಶನ ನೀಡುತ್ತಿರುವ ಮೌಂಟ್ ಕಾರ್ಮೆಲ್ ಕಾಲೇಜಿನ ನಿರ್ದೇಶಕರಾದ ಸಿಸ್ಟರ್ ಎಂ. ಅಲ್ಬಿನ, ಪ್ರಾಂಶುಪಾಲರಾದ ಡಾ. ಜಾರ್ಜ್ ಲೇಖಾ ಅವರಿಗೂ ಗೌರವಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಪ್ರತಿ ಕಾರ್ಯದಲ್ಲೂ ಸಲಹೆಗಳನ್ನು ನೀಡುತ್ತಾ ಬೆಂಬಲಿಸುವ ಮಾನವಿಕ ನಿಕಾಯದ ಮುಖ್ಯಸ್ಥರಾದ ಡಾ. ಹಂಸ ಅವರ ಸಹಕಾರವನ್ನು ಸ್ಮರಿಸುತ್ತೇನೆ. ನಮ್ಮ ಕನ್ನಡ ವಿಭಾಗದಲ್ಲಿ ಈ ಹಿಂದೆ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಾ. ಸಿಸ್ಟರ್. ವಾಯಲೆಟ್ ಹಾಗೂ ಪ್ರೊ. ದಾಕ್ಷಾಯಣಿ ಕೆ. ಎನ್ ಅವರು ನಮ್ಮ ಪ್ರತಿ ಕಾರ್ಯಗಳಿಗೂ ಸೂಕ್ತ ಸಲಹೆಗಳನ್ನು ನೀಡುತ್ತಾ ಬೆಂಬಲವಾಗಿದ್ದಾರೆ, ಇವರಿಗೂ ಧನ್ಯವಾದಗಳು. ಅಂತರಾಷ್ಟ್ರೀಯವಾಗಿ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲು ನಮ್ಮ ಗುರುಗಳಾದ ಡಾ. ಎಚ್. ಎಸ್ ವೆಂಕಟೇಶಮೂರ್ತಿ ಅವರ ಸಂಪೂರ್ಣ ಮಾರ್ಗದರ್ಶನವಿದೆ, ಇವರಿಗೆ ವಿಶೇಷ ಧನ್ಯವಾದಗಳು. ಈ ವಿಚಾರ ಸಂಕಿರಣಕ್ಕೆ ವಿಮರ್ಶಕರಾದ ಎಸ್. ಆರ್. ವಿಜಯಶಂಕರ್, ಲೇಖಕಿ ಡಾ. ಪದ್ಮಿನಿ ನಾಗರಾಜ್, ವಿಜ್ಞಾನ ಲೇಖಕರಾದ ಟಿ. ಜಿ. ಶ್ರೀನಿಧಿ, ಲೇಖಕರಾದ ಡಾ. ರವಿಶಂಕರ್ ಎ. ಕೆ. ನಮ್ಮ ಕಾಲೇಜಿನ ಸಂಶೋಧನ ವಿಭಾಗದ ಮುಖಸ್ಥರಾದ ಡಾ. ಕವಿತಾ ಸಿಂಗ್, ಇವರು ಸಲಹಾ ಮಂಡಳಿಯ ಮುಖ್ಯ ಸಲಹೆಗಾರರಾಗಿ ವಿಷಯಗಳ ಆಯ್ಕೆ, ಸ್ವರೂಪ ಮೊದಲಾದಂತೆ ಆಯಾ ಸಂದರ್ಭಗಳಿಗೆ ಅನುಸಾರವಾಗಿ ಸಲಹೆಗಳನ್ನು ನೀಡಿದ್ದಾರೆ. ಇವರಿಗೆ ವಿಶೇಷವಾದ ಧನ್ಯವಾದಗಳು. ನಮ್ಮ ವಿಚಾರ ಸಂಕಿರಣದ ನೆಪದಲ್ಲಿ ಎಲ್ಲಾ ಭಾಗದ ವಿವಿಧ ಕ್ಷೇತ್ರದ ಲೇಖಕರು ಅಧ್ಯಯನ ನಡೆಸಿ, ಸಂಶೋಧನ ಲೇಖನಗಳನ್ನು ಸಲ್ಲಿಸಿ ಮಂಡಿಸುವ ಮೂಲಕ ಪ್ರಕಟಣೆಗೆ ಕಾರಣವಾಗುತ್ತಿರುವ ಎಲ್ಲಾ ಲೇಖಕರಿಗೂ ಅನಂತ ಧನ್ಯವಾದಗಳು.

'ಕನ್ನಡ ಸಾಹಿತ್ಯ ಮತ್ತು ವಿಜ್ಞಾನ' ಎಂಬ ಹೆಸರಿನಲ್ಲಿ ಪ್ರತಿ ಲೇಖನವನ್ನು ಪರಿಶೀಲಿಸಿ ಸಂಪಾದಿಸಲು ಕಾರಣರಾದವರು ಡಾ. ಚೇತನಾ ಹೆಗಡೆ, ಶ್ರೀಮತಿ ಅನಿತ ಕೆ. ವಿ., ಶ್ರೀಮತಿ ಅರುಣ ಎಸ್. ಇವರೆಲ್ಲರ ಸಮಶ್ರಮದ ಫಲವೇ ಈ ಕೃತಿ. ಇವರಿಗೆ ಮನಃಪೂರ್ವಕ ಧನ್ಯವಾದಗಳು. ಕಾರ್ಮೆಲೈಟ್ ಪತ್ರಿಕೆಯನ್ನು ಸುಂದರ ಹಾಗು ಗುಣಮಟ್ಟದಲ್ಲಿ ಮುದ್ರಿಸಿ ಪ್ರಕಟಿಸಲು ಸಹಕರಿಸಿದ ಡಾ. ಕವಿತಾ ಸಿಂಗ್ ಮತ್ತು ಕಾರ್ಮೆಲೈಟ್ ಸಲಹಾ ಸಮಿತಿ ಅವರಿಗೂ ಅನಂತ ಧನ್ಯವಾದಗಳು.

ಪರಿವಿಡಿ

1. ವಿಜ್ಞಾನ, ವೈಜ್ಞಾನಿಕತೆ ಮತ್ತು ತಂತ್ರಜ್ಞಾನ ಮತ್ತು ಕನ್ನಡ ಸಾಹಿತ್ಯ
– ಎಚ್. ಎಸ್. ರಾಘವೇಂದ್ರರಾವ್ 01

2. ವೈಜ್ಞಾನಿಕ ಚಿಂತನೆ ಮತ್ತು ಸಾಹಿತ್ಯ
– ಎಸ್. ಆರ್. ವಿಜಯಶಂಕರ 04

3. ಮೇರಿ ಶೆಲ್ಲಿಯ 'ಫ್ರಾಂಕೆನ್‌ಸ್ಟೈನ್'– ಮೊಟ್ಟಮೊದಲ ವೈಜ್ಞಾನಿಕ ಕಾಲ್ಪನಿಕ ಕಥನ
– ಡಾ. ಜೆ. ಬಾಲಕೃಷ್ಣ 09

4. ಪ್ರಾಚೀನ ವಿಜ್ಞಾನ ವೈದ್ಯಶಾಸ್ತ್ರ (ವಿಶೇಷವಾಗಿ ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ')
– ಡಾ. ಪದ್ಮಿನಿ ನಾಗರಾಜು 15

5. ವೈದ್ಯಕೀಯ ಶಾಸ್ತ್ರ ಮತ್ತು ಸಾಹಿತ್ಯ.
– ಗುರುಪ್ರಸಾದ ಕಾಗಿನೆಲೆ 23

6. ವಿಜ್ಞಾನ ಮತ್ತು ಮಾನವ ಪ್ರಪಂಚ
– ಡಾ. ಹಿಮಾನ್‌ಂಶು ಅಕ್ಕಮಹಾದೇವಿ 29

7. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ
– ಟಿ. ಜಿ. ಶ್ರೀನಿಧಿ 33

8. ಸೃಷ್ಟಿಯ ಕುರಿತು ವಚನ ವಿಜ್ಞಾನ
– ಡಾ. ರವಿಶಂಕರ್ ಎ. ಕೆ. 41

9. ಕನ್ನಡ ಸಾಹಿತ್ಯ ಮತ್ತು ವಿಜ್ಞಾನ
– ಡಾ. ರವೀಶ ಎಚ್. ವಿ. 47

10. ಚಂದಿರನ ಮಡಿಲಲ್ಲಿ: ಒಂದು ವೈಜ್ಞಾನಿಕ ಕಲ್ಪನೆ
– ಡಾ. ಚೇತನಾ ಹೆಗಡೆ 50

11. ವಿವಾಹ ಸಂಸ್ಕೃತಿ: ವೈಜ್ಞಾನಿಕ ಚಿಂತನೆಗಳು
– ಅನಿತ ಕೆ. ವಿ. 56

12. ಚೆನ್ನಬಸವಣ್ಣನ ವಚನಗಳಲ್ಲಿ ವೈಜ್ಞಾನಿಕ ಹೊಳಹು
– ರಾಜೇಶ್ವರಿ ವೈ. ಎಂ. ಮತ್ತು ಡಾ. ಬಸಯ್ಯ ಸ್ವಾಮಿ 63

ವಿಜ್ಞಾನ, ವೈಜ್ಞಾನಿಕತೆ ಮತ್ತು ತಂತ್ರಜ್ಞಾನ ಮತ್ತು ಕನ್ನಡ ಸಾಹಿತ್ಯ

ಎಚ್. ಎಸ್. ರಾಘವೇಂದ್ರರಾವ್
ಪ್ರಸಿದ್ಧ ವಿಮರ್ಶಕರು

ಆಧುನಿಕ ಪೂರ್ವ ಕನ್ನಡ ಸಾಹಿತ್ಯವು ವಿಜ್ಞಾನದೊಂದಿಗೆ ಇಟ್ಟುಕೊಂಡ ಸಂಬಂಧಾಂತರಗಳನ್ನು, ರೂಪುರೇಷೆಗಳನ್ನು ವಿವರಿಸುವುದು ಕೊಂಚ ಸಂಕೀರ್ಣವಾದ ಸಂಗತಿ. ಯಾಕೆಂದರೆ, ಸಾಹಿತ್ಯವು ಧರ್ಮದ ತಾತ್ವಿಕತೆ, ಆಚರಣೆ, ಪ್ರಚಾರ, ನೀತಿಬೋಧೆ, 'ಅಧಿಕಾರ' ಮುಂತಾದ ವಿಷಯಗಳೊಂದಿಗೆ ತೀವ್ರವಾದ ಸಂಬಂಧವನ್ನು ಇಟ್ಟುಕೊಂಡ ಆ ಶತಮಾನಗಳಲ್ಲಿ ವಿಜ್ಞಾನಕ್ಕೆ ಅಧ್ಯಯನ ಶಿಸ್ತಾಗಿ, ನಿಕರವಾದ ಸ್ವರೂಪ ದೊರಕಿರಲಿಲ್ಲ. ತಂತ್ರಜ್ಞಾನದ ವಿವಿಧ ನೆಲೆಗಳಲ್ಲಿ ರೂಪಿತವಾದ ಅಚ್ಚರಿಯೆನಿಸುವಷ್ಟು ತಿಳಿವಳಿಕೆಯು ಸಮುದಾಯಗಳ ಲೋಕದರ್ಶನದ ಭಾಗವಾಗಿತ್ತೆಂದು ತೋರುವುದಿಲ್ಲ. ಪಂಪನಿಂದ ಮೊದಲಾಗಿ ಕೆಲವಾದರೂ ಕವಿಗಳು ಲೋಕಸೃಷ್ಟಿಯ ಬಗೆಯನ್ನು ಕುರಿತು ಮಾತಾಡಿದರೂ ಅದು 'ಮೈಥಾಲಜಿ', 'ಪುರಾಣ', ಜಾನಪದ ನಂಬಿಕೆಗಳು ಮುಂತಾದ ಸಂಗತಿಗಳಿಂದ ರೂಪಿತವಾಗಿರುತ್ತಿತ್ತು. ಶಿಲ್ಪಶಾಸ್ತ್ರ, ಪ್ರತಿಮಾಶಾಸ್ತ್ರ ಮುಂತಾದ ಹತ್ತು ಹಲವು ಸಂಗತಿಗಳ ಪ್ರಸ್ತಾಪ ಸಾಹಿತ್ಯಕೃತಿಗಳಲ್ಲಿ ಬಂದರೂ ಅದು ವಿವರ/ವರ್ಣನೆಗಳಾಗಿ ಬರುತ್ತಿದ್ದವೇ ವಿನಃ ಲೇಖಕರ ನಿಲುವುಗಳ ನಿರೂಪಕ ಶಕ್ತಿಯಾಗಿ ಅಲ್ಲ. ವಚನಕಾರರು ಸೇರಿದಂತೆ ಹಲವರು ಮೂಢನಂಬಿಕೆಗಳ ಬಗ್ಗೆ ನಕಾರಾತ್ಮವಾಗಿ ಮಾತನಾಡಿದರೂ ಅದು ಧಾರ್ಮಿಕ ನಂಬಿಕೆಗಳಿಗೆ ಅಡ್ಡಿಯಾಗಿರಲಿಲ್ಲ. ಅದೂ ಅಲ್ಲದೆ 'ಮೌಲ್ಯತಟಸ್ಥ'ವಾದ ವಿಜ್ಞಾನಕ್ಕೆ ನೈತಿಕ ಎನ್ನಬಹುದಾದ ಯಾವುದೇ ತಳಹದಿ ಇರುವುದಿಲ್ಲ. ಆದ್ದರಿಂದಲೇ ಸಮಾಜ ಅಥವಾ ಸಾಹಿತ್ಯದ ಮಾರ್ಗದರ್ಶಕ ಸಂಗತಿಯಾಗಿ ವಿಜ್ಞಾನವನ್ನು ಸ್ವೀಕರಿಸುವುದು ಆ ಕಾಲಕ್ಕೆ ಅಸಾಧ್ಯವೆನಿಸಿತು. ಅದರ ಫಲಿತವಾಗಿ ಧರ್ಮಕ್ಕೆ ಆ ಸ್ಥಾನ ಸಿಕ್ಕಿತ್ತು. ಆದರೆ ಧರ್ಮದ ಫಲವಾಗಿ ನೈತಿಕವಾಗಿ 'ಆರೋಗ್ಯಕರವಾದ' (?) ಸಮಾಜ ರೂಪಿತವಾಯಿತೆಂದು ಹೇಳಲಾಗುವುದಿಲ್ಲ. ಆದ್ದರಿಂದ ಈ ಬರವಣಿಗೆಯು ತನ್ನನ್ನು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯಕೆ ಸೀಮಿತಗೊಳಿಸಿಕೊಳ್ಳುತ್ತದೆ.

ಇಪ್ಪತ್ತನೆಯ ಶತಮಾನದ ಕನ್ನಡಸಾಹಿತ್ಯವು ವಿಜ್ಞಾನದೊಂದಿಗೆ ಅನುಸಂಧಾನ ನಡೆಸಿದ ಬಗೆಯ ಇತಿಹಾಸವು ಬಹಳ ಕುತೂಹಲಕಾರಿಯಾಗಿದೆ. ಡಿ.ವಿ.ಜಿ.ಯವರು ಎಂಬತ್ತು ವರ್ಷಗಳ ಹಿಂದೆ ಬರೆದ 'ಸಾಹಿತ್ಯ ಮತ್ತು ವಿಜ್ಞಾನ' ಎನ್ನುವ ಲೇಖನ, ಜಿ. ಹನುಮಂತ ರಾವ್ ಅವರು ಬರೆದ 'ವಿಜ್ಞಾನ' ಎಂಬ ಪುಸ್ತಕಗಳು ಈ ಚರ್ಚೆಗೆ ನಾಂದಿಯನ್ನು ಹಾಡಿದವು. ವಿಜ್ಞಾನ ಮತ್ತು ತಂತ್ರಜ್ಞಾನಗಳೆರಡೂ ಪಾಶ್ಚಾತ್ಯರಿಂದ ದತ್ತವಾದ ಸಂಗತಿಗಳೆಂಬ ತಪ್ಪು ತಿಳಿವಳಿಕೆಯನ್ನು ಬೇಕೆಂದೇ ಭಿತ್ತಲಾಯಿತು ಎನ್ನುವುದು ಸ್ವಲ್ಪಮಟ್ಟಿಗೆ ನಿಜ. ಬ್ರಿಟಿಷರ ವ್ಯಾಪಾರೀ ಮತ್ತು ಶೈಕ್ಷಣಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಇದು ಅಗತ್ಯವಾಗಿತ್ತು. ಆದ್ದರಿಂದ ಸಾಂಪ್ರದಾಯಿಕ ಜ್ಞಾನಮೂಲಗಳನ್ನು ಹಿಂದೆ ತಳ್ಳುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಯಿತು. ಇದು ಆಯುರ್ವೇದ, ನೇಯ್ಗೆ, ಕುಶಲಕಲೆಗಳು ಮುಂತಾದ ನಿರ್ದಿಷ್ಟ ಜ್ಞಾನಶಿಸ್ತುಗಳ ಮಾತು ಮಾತ್ರ ಅಲ್ಲ. ಅದು ವಿದ್ಯಾವಂತರಾದ ದೃಷ್ಟಿಕೋನದಲ್ಲಿ ತರಬೇಕೆಂದು ಉದ್ದೇಶಿಸಲಾದ ಬದಲಾವಣೆ. ಆದ್ದರಿಂದ ಮೆಕಾಲೆಯ ಉದ್ದೇಶ ಯಾವುದೇ ಇರಲಿ, ಆ ದಿನಗಳಲ್ಲಿ ವೈಜ್ಞಾನಿಕ ಮಾಹಿತಿಗಳ ಸಂವಹನಕ್ಕಿಂತ ಹೆಚ್ಚಿನದೂ ನಡೆಯಿತು. ವಿಜ್ಞಾನವು ಕಂಡುಕೊಂಡ 'ಸತ್ಯಗಳು' ಸಾರ್ವಕಾಲಿಕ ಹಾಗೂ ಸಾರ್ವದೇಶಿಕ ಎನ್ನುವುದು ನಿಜವಾದರೂ, ಅದರ ಬಳಕೆಯಲ್ಲಿ ಸೇರಿಕೊಂಡಿರುವ ರಾಜಕೀಯದ ಕಡೆಗೆ ಹೆಚ್ಚಿನ ಗಮನ ಹರಿಯಲಿಲ್ಲ. 'ಆರ್ಥೋಡಾಕ್ಸ್', 'ಕನ್ಸರ್ವೇಟಿವ್', 'ಕನ್ವೆನ್ಷನಲ್' ಮುಂತಾದ ಪದಗಳನ್ನು ಪ್ರಗತಿವಿರೋಧಿ ಹಾಗೂ ವಿಜ್ಞಾನ ವಿರೋಧಿಯೆಂದೇ ತಿಳಿಯಲಾಯಿತು. ಅಂತಹ ಮೌಲ್ಯಗಳು ಸಾರಾಸಗಟಾಗಿ ಮೂಢನಂಬಿಕೆಯೆಂದು ಕರೆಸಿಕೊಂಡವು. ವೈಜ್ಞಾನಿಕ ಮನೋಧರ್ಮ, ರೇಷನಲಿಸಂ ಮುಂತಾದ ಪದಗಳು ವಿದ್ಯಾವಂತರ ಮನೋಧರ್ಮವನ್ನು ರೂಪಿಸುವ ಪ್ರಯತ್ನದಲ್ಲಿ ತೊಡಗಿದವು. ಗಾಂಧೀಜಿಯವರ 'ಹಿಂದ್ ಸ್ವರಾಜ್' ಎತ್ತಿದ ಪ್ರಶ್ನೆಗಳು ಬದಿಗೆ ಸರಿದವು. ಕನ್ನಡ ಸಾಹಿತಿಗಳು ಕೂಡ ವಿಜ್ಞಾನವನ್ನು ಪ್ರೀತಿ, ಗೌರವ, ಭಯ, ಭಕ್ತಿಗಳಿಂದಲೇ ನೋಡಿದರು. ಅಂದಿನ ಶಿಕ್ಷಣ ಕ್ರಮದ ಪರಿಣಾಮವಾಗಿಯೋ ಏನೋ

ಮುಖ್ಯ ಸಾಹಿತಿಗಳಾದ ಕುವೆಂಪು, ಬೇಂದ್ರೆ, ಮಾಸ್ತಿ, ಡಿವಿ.ಜಿ, ಪು.ತಿ.ನ., ವಿ.ಸೀ. ಮುಂತಾದವರು ವಿಜ್ಞಾನವನ್ನು ಆಸಕ್ತಿಯಿಂದ ಅಭ್ಯಾಸ ಮಾಡಿದ್ದರು ಅಥವಾ ಅವರ ಗೆಳೆಯರಿಂದ ಆ ಬಗೆಯ ತಿಳಿವಳಿಕೆಯನ್ನು ಪಡೆದಿದ್ದರು. ಶಿವರಾಮ ಕಾರಂತರಂತೂ ವಿಜ್ಞಾನದ ಓದು ಮತ್ತು ನಿತ್ಯಜೀವನದಲ್ಲಿ ಅದರ ಬಳಕೆಯನ್ನು ವ್ರತದಂತೆ ಪಾಲಿಸಿದ್ದರು. ಅಷ್ಟೇ ಅಲ್ಲ, ಅವರಲ್ಲಿ ಕೆಲವರಾದರೂ ವಿಜ್ಞಾನವನ್ನು ನಮ್ಮ ಪಾರಂಪರಿಕ ತಿಳಿವಳಿಕೆಯ ಜೊತೆಗೆ ಹೋಲಿಸಿ ಸರಿಯಾದ ಸಮನ್ವಯ ಹಾಗೂ ತೀರ್ಮಾನಗಳನ್ನು ತಲುಪಲು ಸಮರ್ಥರಾಗಿದ್ದರು. ವಿಜ್ಞಾನವನ್ನು ಅದು ಒದಗಿಸುವ ಮಾಹಿತಿಗಳು ಹಾಗೂ ಉಪಕರಣಗಳಾಚೆ ನೋಡುವ ಮತ್ತು ಬಳಸಿಕೊಳ್ಳುವ ಶಕ್ತಿ ಅವರಿಗಿತ್ತು. 'ವಿಜ್ಞಾನ ಸೂರ್ಯ' ಎಂಬ ಪದವನ್ನು ಟಂಕಿಸಿದ ಕುವೆಂಪು ಅವರ 'ವಿಜ್ಞಾನಿ' ಮತ್ತು 'ಯಂತ್ರರ್ಷಿ' ಕವಿತೆಗಳು ಅವರ ತಿಳಿವಳಿಕೆಗೆ ಕನ್ನಡಿಯಾಗಿವೆ. 'ವಿದ್ಯದಣುಗಳೆದೆಯ ಮಧ್ಯೆ, ವಿಲಯ ಮಾಡುತಿಹುದು ನಿದ್ದೆ, ಕಡಲಕುಡಿವಗಸ್ತ್ಯ ಶಕ್ತಿ ಹನಿಯೊಳಡಗಿದೆ' ಎಂಬ ಸಾಲುಗಳಾಗಲೀ, 'ಚೇತನವೆಲ್ಲೆಲ್ಲು ತೆಗೆ ಜಡವೆಂಬುದೆ ಬರಿ ಸುಳ್ಳು' ಎನ್ನುವ ಸಾಲುಗಳಾಗಲೀ ವೈಜ್ಞಾನಿಕ ಸತ್ಯಗಳ ಪ್ರತಿಫಲನವಾಗಿವೆ ಹಾಗೆಯೇ ತಾನು ಹೊರಟ ಕಡೆಗೆ ಮರಳಿ ಬಂದು ದಿಕ್ಕು ತೋಚದೆ ನಿಂತ ವಿಜ್ಞಾನಿಯನ್ನು ಕೂಡ ಅವರು ಕಾಣಬಲ್ಲರು. ವಿಶ್ವೇಶ್ವರಯ್ಯನವರ ಸಾಧನೆಗಳನ್ನು ಮೆಚ್ಚಿಕೊಳ್ಳುವಂತೆಯೇ 'ರೇಲ್ ರಸ್ತೆ'ಯ ಹಿಂದೆ ಇರುವ ಬಂಡವಾಳಶಾಹೀ ಹುನ್ನಾರಗಳನ್ನು ಮನಗಾಣಬಲ್ಲರು. ಆಧ್ಯಾತ್ಮ ಮತ್ತು ವಿಜ್ಞಾನಗಳು ಪರಸ್ಪರ ವಿರೋಧಿಗಳಾಗದೆ ಒಳಗಿರುವ 'ಖಾಸಗೀ ಬಗೆ'ಯನ್ನು ಅವರು ಕಂಡುಕೊಂಡಿದ್ದರು. ಕಾರಂತರು ಈ ವಿಷಯಗಳನ್ನು ಕಂಡ ಬಗೆ ಕೊಂಚ ಭಿನ್ನವಾಗಿತ್ತು. ಶುದ್ಧ ವಿಜ್ಞಾನ ಮತ್ತು ಅದರ ಹೊರಚಾಚುಗಳಲ್ಲಿ ಗಾಢವಾದ ಆಸಕ್ತಿಯನ್ನು ಹೊಂದಿದ್ದ ಅವರು ತಮ್ಮ ಬದುಕಿನ ತಾತ್ವಿಕತೆಯನ್ನು ಕಟ್ಟಿಕೊಳ್ಳಲು ವಿಜ್ಞಾನಕ್ಕೆ ಸಹಜವಾದ ತರ್ಕ, ಪ್ರಯೋಗಪರತೆ, ಅನುಭವ ಪ್ರಾಮಾಣ್ಯ, ಮುಂತಾದ ಉಪಕರಣಗಳನ್ನು ವಿಫುಲವಾಗಿ ಬಳಸಿಕೊಂಡರು. ಕಲೆಯ ವಿವಿಧ ಪ್ರಕಾರಗಳಲ್ಲಿ ಆಸಕ್ತಿ, ಪರಿಣತಿಯನ್ನು ಪಡೆದಿದ್ದರೂ ಅದು ಅವರ ಬದುಕಿನ ತಾತ್ವಿಕತೆಗೆ ನೆರವಾಗಲಿಲ್ಲವೆಂದೇ ತೋರುತ್ತದೆ. ಏಕೆಂದರೆ ವಿಜ್ಞಾನದ ಮಿತಿಗಳನ್ನು ಗುರುತಿಸುವ ಅಥವಾ ಕೈಗಾರೀಕರಣದ ಹಿಂದೆ ಇರುವ ಹುನ್ನಾರಗಳನ್ನು ಗ್ರಹಿಸುವ ಗೊಡವೆಗೆ ಅವರು ಹೋಗಲೇ ಇಲ್ಲ. ವಿಶ್ವದ ನಿಗೂಢತೆಯನ್ನು ಗುರುತಿಸಿದರೂ ಅದರ ಹಿಂದೆ ತರ್ಕಕ್ಕೆ ನಿಲುಕದ ನೆಲೆಗಳನ್ನು ಗುರುತಿಸಲು ಅವರು ಇಷ್ಟಪಡಲಿಲ್ಲ. ಈ ವಿಷಯದಲ್ಲಿ ಶಂ.ಬಾ. ಜೋಷಿ ಮತ್ತು ಎ. ಎನ್. ಮೂರ್ತಿರಾಯರು ಅವರಿಗೆ ಹತ್ತಿರದವರು. ಈ ಕೆಲವರನ್ನು ಬಿಟ್ಟರೆ ನವೋದಯ ಕಾಲದ ಸಾಹಿತಿಗಳು ವಿಜ್ಞಾನದ ಸಂಗಡ ಸಂಘರ್ಷದ ಸಂಬಂಧಗಳನ್ನು ಇಟ್ಟುಕೊಳ್ಳಲಿಲ್ಲ. ವಿಜ್ಞಾನದ ಮೂಲನೆಲೆಯಾದ 'ತಾಕ್ಷಣಿಕತೆ' ಅಥವಾ 'ಟೆಂಟೇಟಿವ್‌ನೆಸ್' ಜಾಗದಲ್ಲಿ ತಾನು ಎಲ್ಲದಕ್ಕೂ ಪರಿಹಾರ ಹೇಳಬಲ್ಲೆನೆಂಬ ಅಹಂಕಾರ ಮೂಡಿದ್ದನ್ನು ಈ ಶತಮಾನ ಕಂಡಿತು. ವಿಜ್ಞಾನವು ತನ್ನಷ್ಟಕ್ಕೆ ತಾನು 'ಮೌಲ್ಯ ತಟಸ್ಥ'ವಾದುದರಿಂದ ಅಣುಬಾಂಬಿನಿಂದ ಮೊದಲಾಗಿ 'ಕೆಮಿಕಲ್ ವಾರ್ ಫೇರ್'ವರೆಗೂ ಎಲ್ಲವೂ ಸರಿಯೆನಿಸಿತು. ಅಂತೆಯೇ ಇತ್ತೀಚಿನ ದಶಕದ ವಿಜ್ಞಾನಿಗಳಲ್ಲಿ ವಿಜ್ಞಾನ ಮತ್ತು 'ಮೂಢ'ವೆಂದೇ ಹೇಳಬೇಕಾದ ಧಾರ್ಮಿಕತೆಯನ್ನು ಒಟ್ಟಿಗೆ ನೋಡಬೇಕಾಗಿದೆ. ಐನ್‌ಸ್ಟೈನ್ ಯಾವುದೋ ಸಂದರ್ಭದಲ್ಲಿ ಹೇಳಿದ ಮಾತನ್ನು ಇವರು ಘೋಷವಾಕ್ಯದಂತೆ ಬಳಸಿಕೊಂಡರು.

ನಂತರದ ದಶಕಗಳಲ್ಲಿ ಸಾಹಿತಿಗಳು ಅದರಾಚೆಗಿನದನ್ನು, ಅದರಲ್ಲೂ ವಿಜ್ಞಾನವನ್ನು ಓದುವ ಅಭ್ಯಾಸವು ಬಹಳ ಕಡಿಮೆಯಾಯಿತು. ಅದಕ್ಕೆ ಸರಿಯಾಗಿ ವಿಜ್ಞಾನ ಶಿಕ್ಷಣವು ಕೇವಲ ಮಾಹಿತಿ ಹಾಗೂ ವಿಧಾನಗಳನ್ನು ಕಲಿಸುವುದಕ್ಕೆ ಸೀಮಿತವಾಯಿತು. ಗಣಿತ, ಇಂಗ್ಲಿಷ್ ಮತ್ತು ವಿಜ್ಞಾನಗಳನ್ನು ಶತ್ರುಗಳೆಂದು ಪರಿಗಣಿಸುವ ಸಾಹಿತಿಗಳ ಸಂಖ್ಯೆ ಜಾಸ್ತಿಯಾಯಿತು. ಯಶವಂತ ಚಿತ್ತಾಲ, ಪೂರ್ಣಚಂದ್ರ ತೇಜಸ್ವಿ ಮುಂತಾದದವರನ್ನು ಬಿಟ್ಟರೆ ವಿಜ್ಞಾನದ ಫಲಾನುಭವಿಗಳಾಗುತ್ತಲೇ ಅದರ ಟೀಕೆ ಮಾಡುವ ಸಾಹಿತಿಗಳ ಪ್ರಮಾಣವು ಜಾಸ್ತಿಯಾಯಿತು. ವಿಜ್ಞಾನವನ್ನೇ ಕಲಿತ ಕವಿ–ಕಲಾವಿದರು ಕೂಡ ಹಾಗೆಯೇ ನಡೆದುಕೊಂಡರು. ಗೌರೀಶ ಕಾಯ್ಕಿಣಿಯವರು ವಿಜ್ಞಾನ ಮತ್ತು ವೈಚಾರಿಕತೆಯಲ್ಲಿ ತೋರಿಸಿದ ಆಸಕ್ತಿಯನ್ನು ಸ್ವತಃ ವಿಜ್ಞಾನಿಯಾದ ಅವರ ಮಗ ಜಯಂತ ಕಾಯ್ಕಿಣಿಯವರು ತೋರಿಸುತ್ತಿಲ್ಲ. ಇತ್ತೀಚಿನ ದಶಕಗಳಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿರುವವರ 'ಓದು' ಪರಿಮಿತವಾದುದು. ಉಳಿದಂತೆ ಕೆ.ವಿ. ನಾರಾಯಣ ಮತ್ತು ಡಿ.ಆರ್. ನಾಗರಾಜ್ ಅವರು ಮಾತ್ರ ವಿಜ್ಞಾನದ ತಾತ್ವಿಕತೆ ಮತ್ತು ವಿಧಾನಗಳನ್ನು ಪರಿಶೀಲಿಸುವ, ಪ್ರಶ್ನಿಸುವ ಆಸಕ್ತಿಯನ್ನು ತೋರಿಸಿದ್ದಾರೆ. ತೇಜಸ್ವಿಯವರು ಮಾತ್ರವೇ ವಿಜ್ಞಾನದ ಆಧುನಿಕ ಪರಿಕರಗಳನ್ನು ಬಳಸಿಕೊಳ್ಳುವ ಆದರೂ ಬದುಕಿನ ನಿಗೂಢತೆಯ ಬಗ್ಗೆ ಅಪಾರವಾದ ಕುತೂಹಲವನ್ನು ಹೊಂದಿರುವ ಕರ್ವಾಲೋ ಅಂತಹ ಪಾತ್ರವನ್ನು ಸೃಷ್ಟಿಸಿದರು. ಅವರು ತಮ್ಮ ಕಾದಂಬರಿಗೆ ವಿಜ್ಞಾನಿಯ ಹೆಸರನ್ನು ಕೊಟ್ಟರೇ ವಿನಾಃ 'ಮಂದಣ್ಣ' ಎಂಬ ಹೆಸರನ್ನು ಕೊಡಲಿಲ್ಲ. ಅವರ 'ಕರ್ವಾಲೋ', 'ಚಿದಂಬರ ರಹಸ್ಯ' ಮತ್ತು 'ಜುಗಾರಿ ಕ್ರಾಸ್' ಕಾದಂಬರಿಗಳನ್ನು ಒಟ್ಟಾಗಿ ನೋಡಿದಾಗ, ಅವರು ವಿಜ್ಞಾನ, ಕೈಗಾರಿಕೆ, ರಾಜಕೀಯಗಳ ಮೈತ್ರಿಯನ್ನು ಅರ್ಥ ಮಾಡಿಕೊಂಡ, ಕಲೆಯಾಗಿ ಕಟ್ಟಿಕೊಟ್ಟ ಮತ್ತು ವಿಜ್ಞಾನದ ಬಗ್ಗೆ ಗೌರವ–ಪ್ರೀತಿಗಳನ್ನು ಉಳಿಸಿಕೊಂಡ ಏಕೈಕ ಕನ್ನಡ ಸಾಹಿತಿಯೆಂಬ ಮಾತು ಮನದಟ್ಟಾಗುತ್ತದೆ.

ವಿಜ್ಞಾನ ಮತ್ತು ವಿಚಾರಗಳ ಪರವಾದ ಇಂಥ ಒಲುಮೆಯ ಫಲವಾಗಿ ಸಾಹಿತ್ಯವು 'ವಾಸ್ತವತಾ' ವಾದದ ಕಡೆಗೆ ತಿರುಗಿತು. ಕವಿತೆ, ಕಾವ್ಯಗಳ ಜಾಗದಲ್ಲಿ ಕಥಾಸಾಹಿತ್ಯವು ಕೇಂದ್ರಕ್ಕೆ ಬಂದುದಕ್ಕೆ ಇದೂ ಒಂದು ಕಾರಣ. ಪಶ್ಚಿಮದಲ್ಲಿಯೂ ಕೈಗಾರಿಕಾ ಕ್ರಾಂತಿಯು ಇಂಥ ಬದಲಾವಣೆಗೆ ದಾರಿ ಮಾಡಿಕೊಟ್ಟಿದ್ದನ್ನು ಹಾಗೆಯೇ ಮುದ್ರಣ ತಂತ್ರಜ್ಞಾನವೂ ಅದರದೇ ಪರಿಣಾಮವೆನ್ನುವುದನ್ನು ನೆನಪು ಮಾಡಿಕೊಳ್ಳಬಹುದು, ಆದ್ದರಿಂದ ನಿರೂಪಣೆಯ ಧಾಟಿಯೂ ಸರಳವೂ ನೇರವೂ ಆಯಿತು. ಕಾವ್ಯ ಸಹಜವಾದ ಲಯಗಳು ಮತ್ತು

ಛಂದೋ ನಿಯಮಗಳ ಫಲವಾದ ವಾಕ್ಯ ರಚನೆಯು ಹೆಚ್ಚು ತರ್ಕಬದ್ಧವೂ, ಸಂವಹನಶೀಲವೂ ಆಯಿತು, ವಾಸ್ತವವಾದವೂ ವಿಜ್ಞಾನದಂತೆಯೇ ಅಸಂಭವನೀಯವಾದುದನ್ನು ಹೇಳುವುದಿಲ್ಲ. ಪ್ರಾಚೀನ ಕಾವ್ಯಗಳನ್ನು 'ವಾಸ್ತವ'ದ ನೆಲೆಯಲ್ಲಿ ನೋಡ ತೊಡಗಿದಾಗ ವ್ಯಾಖ್ಯಾನದ ಬಗೆಗಳು ಬೇರೆಯಾದವು. ತೀ.ನಂ.ಶ್ರೀ.ಯವರು ಪಂಪನ 'ಆದಿಪುರಾಣ'ದಲ್ಲಿ ಧರ್ಮದ ಕಸ ಸೇರಿಕೊಂಡಿದೆಯೆಂದು ಹೇಳಿದಾಗ, ಮಾಸ್ತಿಯವರು 'ಶ್ರೀ ರಾಮಪಟ್ಟಾಭಿಷೇಕ'ದಲ್ಲಿ ಪವಾಡಗಳನ್ನು ವಾಸ್ತವದ ನೆಲೆಗೆ ಇಳಿಸಲು ಪ್ರಯತ್ನಿಸಿದಾಗ, ಭೈರಪ್ಪನವರ 'ಪರ್ವ'ದಲ್ಲಿ ಮಹಾಭಾರತವು ಪಡೆದ ಸ್ವರೂಪವನ್ನು ಗಮನಿಸಿದಾಗ, ಕೆ.ಎಸ್. ಭಗವಾನ್ ಅವರು ರಾಮಾಯಣವನ್ನು ಶ್ರೀರಾಮನ ಜೀವನ ಚರಿತ್ರೆಯೆಂದು ಗ್ರಹಿಸಿ ಅವನ ಸರಿ–ತಪ್ಪುಗಳನ್ನು ಪಟ್ಟಿಮಾಡಿದಾಗ, ಸಂಘ ಪರಿವಾರದವರು ರಾಮಜನ್ಮಭೂಮಿಯನ್ನು ಒಂದು 'ಇಶ್ಯೂ' ಮಾಡಿಕೊಂಡಾಗ ಇಂತಹುದೇ ನಿಲುವುಗಳು ಕೆಲಸ ಮಾಡಿರುತ್ತವೆ, ಇಂತಹವುಗಳನ್ನು ಬರೆದವರಿಗೂ ತಿಳಿಯದಂತೆ ಸಾಹಿತ್ಯದ ಅಪ–ವ್ಯಾಖ್ಯಾನ ಮತ್ತು ವಿಕಸ್ತರೀಯವಾದ ಸೃಷ್ಟಿಗಳು ನಡೆಯುತ್ತವೆ. ಕಾಲಾನುಕ್ರಮವಾದ ನಿರೂಪಣಾ ಕ್ರಮವೂ ಇಂತಹುದೇ ದೃಷ್ಟಿಕೋನದ ಪರಿಣಾಮ. ಪ್ರಗತಿಶೀಲ, ಬಂಡಾಯ ಕೃತಿಗಳಲ್ಲಿ ಸಾಂಕೇತಿಕತೆಯು ಗೌಣವಾಗುವುದಕ್ಕೂ ವಾಸ್ತವಕ್ಕಂಟಿದ ಚಿಂತನೆಯೇ ಕಾರಣ. ಹಾಗೆ ನೋಡಿದರೆ ಕುವೆಂಪು ಅವರ ಕವಿತೆಗಳಿಗೂ ಬೇಂದ್ರೆಯವರ 'ನಿಗೂಢ' ಕವಿತೆಗಳಿಗೂ ಇರುವ ಅಂತರವೂ ವಿಜ್ಞಾನದಿಂದ ರೂಪಿತವಾದ ಚಿಂತನೆಯ ಪರಿಣಾಮವೇ. ನಿಗೂಢವಾದುದನ್ನು ಸಂದಿಗ್ಧಕ್ಕೆ ಎಡೆಯಾಗದಂತೆ ಹೇಳುವುದು ಕುವೆಂಪು ಅವರ ಲಕ್ಷಣ. ಆದರೆ ಬೇಂದ್ರೆಯವರ 'ಕಲ್ಪವೃಕ್ಷವೃಂದಾವನಂಗಳಲಿ', 'ಏಳು ಕನ್ನಿಕೆಯರು' ಮುಂತಾದ ಕವಿತೆಗಳು ಇಂದಿಗೂ ಅರ್ಥೈಸುವಿಕೆಗೆ ಸವಾಲಾಗಿಯೇ ಉಳಿದಿವೆ. ಕೆ.ಎಸ್.ನ. ಅವರ 'ಗಡಿಯಾರದಂಗಡಿಯ ಮುಂದೆ' ಕವಿತೆಯನ್ನೂ ನೆನಪು ಮಾಡಿಕೊಳ್ಳಬಹುದು. ಹೀಗಾಗಿ ಸಾಹಿತ್ಯದಲ್ಲಿ ತಲೆದೋರಿದ ನಿಗೂಢತೆ ಮತ್ತು ನೇರತೆಗಳ ನಡುವಿನ ಘರ್ಷಣೆಗೆ ವಿಜ್ಞಾನವೂ ಪರೋಕ್ಷ ಕಾರಣ. 'ಮಲೆಗಳಲ್ಲಿ ಮದುಮಗಳು', 'ಕುಸುಮಬಾಲೆ' ಮುಂತಾದ ಕೃತಿಗಳು ಅತಿ ವೈಜ್ಞಾನಿಕತೆಯು ಉಂಟುಮಾಡಿದ ಮಿತಿಗಳನ್ನು ಮೀರುವ ಸಾರ್ಥಕ ಪ್ರಯತ್ನಗಳು.

ಹಿಂದೆಯೇ ಹೇಳಿದಂತೆ ವಿಜ್ಞಾನದ ಬಗ್ಗೆ ಆಸಕ್ತಿಯಾಗಲೀ ಅದರ ಆಳವಾದ ಅಧ್ಯಯನವಾಗಲೀ ಇಲ್ಲದ ನವ್ಯ ಲೇಖಕರು 'ವಾಸ್ತವವಾದೀ ಶೈಲಿ'ಗೆ ವಿದಾಯ ಹೇಳಿದರು. ಸಾಂಕೇತಿಕತೆ, ಪ್ರತಿಮಾನಿರ್ಮಾಣ, ಅರ್ಥದ ಬಹುಸ್ತರೀಯತೆ, ವಿಭಿನ್ನ ವ್ಯಾಖ್ಯಾನಗಳ ಸಾಧ್ಯತೆ ಮುಂತಾದ ಸಂಗತಿಗಳು ಹೆಚ್ಚಾಗಿ ಕಾಣಿಸಿಕೊಂಡವು. ಇದು ಗುಣ ಅಥವಾ ದೋಷ ಎಂದು ನಾನು ಹೇಳುತ್ತಿಲ್ಲ. ಅದು ಲೇಖಕರ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

ದಲಿತ ಬಂಡಾಯ ಲೇಖಕರ ಮೊದಲ ಪೀಳಿಗೆಯ ನಂತರ ಬರೆಯತೊಡಗಿದ ಹಿಂದುಳಿದ ವರ್ಗಗಳಿಂದ ಬಂದ ಲೇಖಕರು ಮತ್ತು ಲೇಖಕಿಯರಲ್ಲಿ ಒಂದು ಕವಲು 'ಪಾಶ್ಚಾತ್ಯ ವಿಜ್ಞಾನ'ವನ್ನು ಕೊಂಚ ದೂರದಲ್ಲಿಯೇ ಇಟ್ಟು ತಮ್ಮ ಕುಲಮೂಲಗಳನ್ನು ಹುಡುಕುವ, ಪುರಾಣಸೃಷ್ಟಿ ಮಾಡುವ ಕೆಲಸದಲ್ಲಿ ತೊಡಗಿಕೊಂಡರು. ಅವರ ಗುರಿ ಕೂಡ ಸಮಕಾಲೀನ ವಾಸ್ತವಕ್ಕೂ ಅ–ವೈದಿಕ ಸಮುದಾಯಗಳ ಇತಿಹಾಸಕ್ಕೂ ಸಂಬಂಧ ಮತ್ತು ವಿಚ್ಛಿತಿಗಳನ್ನು ಕಂಡುಕೊಳ್ಳುವುದೇ ಆಗಿತ್ತು. ಈ ನಿಟ್ಟಿನಲ್ಲಿ ಚಂದ್ರಶೇಖರ ಕಂಬಾರರ 'ಚಕೋರಿ', 'ಶಿಖರಸೂರ್ಯ', 'ಶಿವನ ಡಂಗುರ' ಮುಂತಾದ ಕೃತಿಗಳು ವಿಪರ್ಡಿಸುವ ವಿಜ್ಞಾನ ಮತ್ತು ಕಲೆಗಳ ಮುಖಾಮುಖಿಯು ಬಹಳ ಮುಖ್ಯವಾದ ಪ್ರಯತ್ನ. ಅವರು ವಿಜ್ಞಾನದ 'ಈವಿಲ್' ಮತ್ತು 'ಬೆನಿಫಿಟ್' ಎರಡನ್ನೂ ಐತಿಹಾಸಿಕವಾಗಿ ಪರಿಶೀಲಿಸುತ್ತಾರೆ. ಸೂರ್ಯಮುತ್ತ ಮತ್ತು ಚಂದ್ರಮುತ್ತರು ನಮ್ಮ ಕಾಲದ ಬಹುಮುಖ್ಯ ಸಂಕೇತಗಳು. ಕೇವಲ 'ಇಮ್ಯಾಜಿನೇಷನ್' ಅನ್ನು ತೆಗೆದುಕೊಂಡರೆ ಕಂಬಾರರು ನಮ್ಮ ಕಾಲದ ಅತ್ಯಂತ ಮುಖ್ಯ ಲೇಖಕರು. ವಿಜ್ಞಾನದ ಸಾಧ್ಯತೆಗಳನ್ನು ತಿಳಿದುಕೊಂಡೂ ಅದನ್ನು ಕಡೆಗಣ್ಣಿನಿಂದಲೇ ನೋಡುವ ಅವರ ಪ್ರತಿಭೆಯು ಕಾವ್ಯ, ನಾಟಕ ಮತ್ತು ಕಥನಗಳೆಲ್ಲವನ್ನೂ ತನ್ನ ಬೀಸಿನೊಳಗೆ ತೆಗೆದುಕೊಂಡಿದೆ. ಇದನ್ನು ತೇಜಸ್ವಿಯವರ ಬರವಣಿಗೆಯೊಂದಿಗೆ ಹೋಲಿಸಿದಾಗ ಹಲವಾರು ಒಳನೋಟಗಳು ದೊರಕುತ್ತವೆ.

ಸಮಕಾಲೀನ ಸನ್ನಿವೇಶವು ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು 'ಕನ್ಫ್ಯೂಸ್'ಕೊಂಡಿದೆ. ಜನವಿರೋಧಿಯಾದ ರಾಜಕೀಯದ ಭದ್ರಹಿಡಿತದಲ್ಲಿ ಸಿಕ್ಕಿಕೊಂಡಿರುವ ತಂತ್ರಜ್ಞಾನವು ಸಹಜವಾಗಿಯೇ ಕೋಪವನ್ನು ಕೆರಳಿಸುತ್ತದೆ. 'ಅಪ್ರೊಪ್ರಿಯೇಟ್ ಟೆಕ್ನಾಲಜಿ' ಎನ್ನುವುದು ಮರೀಚಿಕೆಯಾಗಿಯೇ ಉಳಿದಿದೆ. ಆದರೆ ಅದನ್ನು ತಿರಸ್ಕರಿಸುವ ಅಥವಾ ನಿರಾಕರಿಸುವ ಸಾಧ್ಯತೆಯೇ ಇಲ್ಲ. ವ್ಯಕ್ತಿಗಳು ಮಾಡಿಕೊಳ್ಳುವ ಆಯ್ಕೆಗಳು ಸಮುದಾಯಗಳ ಆಯ್ಕೆಯಾಗುವುದಿಲ್ಲ. ಗಾಂಧೀಜಿಯವರೇ ವಿಫಲರಾದ ಕಡೆ ಪ್ರಸನ್ನ ಅವರ 'ಯಂತ್ರಗಳನ್ನು ಕಳಚೋಣ ಬನ್ನಿ' ಎಂಬ ಆಹ್ವಾನವು ಯಶಸ್ವಿಯಾಗುವ ಸಾಧ್ಯತೆಯಿಲ್ಲ. ಅಂತಾರಾಷ್ಟ್ರೀಯ ಮಾರುಕಟ್ಟೆಯು ನಮ್ಮ ದೈನಂದಿನ ಜೀವನವನ್ನು ರೂಪಿಸುತ್ತಿರುವ ಕಾಲದಲ್ಲಿ, ಚಕ್ರವನ್ನು ಹಿಂದೆ ಸರಿಸುವುದು ಸಾಧ್ಯವಿಲ್ಲ. ವಿಜ್ಞಾನದ ಆಧ್ಯತೆಗಳನ್ನು ಬದಲಿಸಲು ಪ್ರಾಮಾಣಿಕ ಪ್ರಯತ್ನ ಮಾಡಬಹುದು. ಅದರ ಅಹಂಕಾರವನ್ನು ಮಣಿಸಲು ಯತ್ನಿಸಬಹುದು. ಸಾಹಿತಿಗಳು ಈ ಕೆಲಸವನ್ನು ಮಾಡಿದರೂ ಅದು ಸಮುದಾಯಗಳನ್ನು ತಲುಪಲು ಸಾಧ್ಯವಿಲ್ಲದ ವಾತಾವರಣದಲ್ಲಿ ನಾವು ಬದುಕಿದ್ದವು. ವೈಜ್ಞಾನಿಕ ಮನೋಧರ್ಮವು ಕಾಣೆಯಾಗಿ ವಾಣಿಜ್ಯಕೇಂದ್ರಿತವಾದ ಹುಸಿಧಾರ್ಮಿಕತೆಯು ತಾಂಡವವಾಡುತ್ತಿರುವ ಈ ಕಾಲದಲ್ಲಿ ಸಾಹಿತಿಗಳು ಕೂಡ ವಿಜ್ಞಾನದ ಬಗ್ಗೆ ಸರಿಯಾದ ಧೋರಣೆಗಳನ್ನು ರೂಪಿಸಿಕೊಳ್ಳದಿರುವುದು ದುರಂತವೇ ಸರಿ.

ವೈಜ್ಞಾನಿಕ ಚಿಂತನೆ ಮತ್ತು ಸಾಹಿತ್ಯ

ಎಸ್. ಆರ್. ವಿಜಯಶಂಕರ
ಪ್ರಸಿದ್ಧ ವಿಮರ್ಶಕರು

ವೈಜ್ಞಾನಿಕ ಚಿಂತನೆ ಎಂದರೆ ಏನು? ಎಂಬುದಕ್ಕೆ ಲಕ್ಷ್ಯಕೊಟ್ಟು ಗಮನಿಸುವ ಶಕ್ತಿ ಮತ್ತು ಹಾಗೆ ನೋಡಿದ್ದರ ಬಗ್ಗೆ ವ್ಯವಸ್ಥಿತ ಚಿಂತನೆ (Perfect observation and methodical thinking) ಎಂಬುದು ಬಹಳ ಕಾಲ ನನ್ನ ಸರಳ ತಿಳಿವಳಿಕೆಯಾಗಿತ್ತು. ಬಹುಶಃ ಬಾಲ್ಯದಲ್ಲಿ ಓದಿದ ಫ್ರಾನ್ಸಿನ್ ಬೇಕನ್ (Francis Bacon) ಒಮ್ಮೆ ಹೇಳಿದಂತೆ, ವಿಜ್ಞಾನ ಎಂದರೆ ನಮ್ಮ ಇಂದ್ರಿಯಗಳಿಂದ ಗಳಿಸಿದ ಅನುಭವವನ್ನು ಪ್ರಯೋಗಗಳ ಮೂಲಕ ಜ್ಞಾನವಾಗಿ ಪರಿವರ್ತಿಸುವ ಕ್ರಮದ ಅರಿವು; ಎಂಬ ಮಾತು ನನ್ನ ಹಾಗೆ ಅನೇಕರ ಗ್ರಹಿಕೆಗೆ ಕಾರಣವಾಗಿರಲೂಬಹುದು. (Scientific knowledge is obtained through empiricism or observation through using the senses and then through inductive reasoning regarding those observations-Francis Bacon) ಬಹಳ ವರುಷಗಳ ಬಳಿಕ ಬೇಕನ್‌ನ ಕಾಲಮಾನದವನೇ ಆದ ಪ್ರಸಿದ್ಧ ವಿಜ್ಞಾನಿ ವಿಲಿಯಂ ಹಾರ್ವೆ ಬೇಕನ್ ಬಗ್ಗೆ ಹೇಳಿದ ಮಾತುಗಳು ತಿಳಿದವು. ಹಾರ್ವೆ ಪ್ರಕಾರ ವಿಜ್ಞಾನದ ಬಗೆಗಿನ ಬೇಕನ್‌ನ ಗ್ರಹಿಕೆ ಯಾವುದೇ ಉನ್ನತ ಸರಕಾರಿ ಅಧಿಕಾರಿ ನೀಡಬಹುದಾದ ಹೇಳಿಕೆ. ಅದರಲ್ಲಿ ವಿಶೇಷ ವ್ಯಾಖ್ಯೆ (Definition) ಏನೂ ಇಲ್ಲ. ಸಮಂಜಸ, ನಿಖರ ವೀಕ್ಷಣಾ ಶಕ್ತಿ ವಿಜ್ಞಾನಕ್ಕೆ ಬೇಕು ನಿಜ. ಆದರೆ ಯಾವುದನ್ನು ನಿಖರವಾಗಿ ವೀಕ್ಷಿಸಬೇಕು ಮತ್ತು ಯಾವುದಕ್ಕೆ ಆ ಮೂಲಕ ಗಮನ ಕೊಡಬೇಕು ಎಂಬುದು ವಿಜ್ಞಾನದಲ್ಲಿ ಬಹು ಮುಖ್ಯವಾದುದು. ಬೇಕನ್ ತನ್ನ ವ್ಯಾಖ್ಯೆಯಲ್ಲಿ ವಿಜ್ಞಾನದ ಈ ಮುಖ್ಯ ಅಂಶವನ್ನೇ ಕೈಬಿಟ್ಟಿದ್ದ ಎಂಬುದನ್ನು ಹಾರ್ವೆ ಗುರುತಿಸಿದ.

ಈ ಮಾತು ಇಂದು ಭಾರತಕ್ಕೆ ಮುಖ್ಯ. ಏಕೆಂದರೆ ನಮ್ಮ ದೇಶ ಆಧುನಿಕ ವಿಜ್ಞಾನವನ್ನು ಪಡೆದ ಕ್ರಮವು ಸಮಾಜದಲ್ಲಿ ವೈಜ್ಞಾನಿಕ ಚಿಂತನೆಯ ಬೆಳವಣಿಗೆಗೆ ಪೂರಕವಾದುದಲ್ಲ. ಭಾರತದಲ್ಲಿ ಹಿಂದೆ ವಿಜ್ಞಾನದ ಬೆಳವಣಿಗೆ ಇದ್ದಿರಬಹುದು. ಗಣಿಗಾರಿಕೆ, ಬಟ್ಟೆಯ ನೇಯ್ಗೆ, ಕೃಷಿ, ಪಶು ಸಂಗೋಪನೆ ಮೊದಲಾದೆಡೆ ಅದು ದೊಡ್ಡ ಸಾಧನೆಯನ್ನು ಮಾಡಿದ್ದುದರಿಂದಲೇ ಭಾರತ ವಿಶ್ವದಲ್ಲಿ ಅಂದಿನ ಕಾಲದಲ್ಲಿ ಅತ್ಯುನ್ನತ ಸ್ಥಿತಿ ತಲುಪಿತ್ತು. ತತ್ವಶಾಸ್ತ್ರ, ಸಾಹಿತ್ಯ ಮೊದಲಾದೆಡೆ ಮಾಡಿದ ಸಾಧನೆಗಳೂ ಅದಕ್ಕೆ ಕೊಡುಗೆ ನೀಡಿದವು. ಆದರೆ ಇಂದು, ಕೈಗಾರಿಕಾ ಕ್ರಾಂತಿಯ ನಂತರ, ಆಧುನಿಕ ವಿಜ್ಞಾನ ಮತ್ತು ಅದರಿಂದ ಹುಟ್ಟಿದ ತಂತ್ರಜ್ಞಾನ ಜಗತ್ತನ್ನು ಆಳುತ್ತಿದೆ. ಮೂಲ ವಿಜ್ಞಾನದ ಬೆಳವಣಿಗೆ ವೈಜ್ಞಾನಿಕ ಮನೋಭಾವ ಇಲ್ಲವಾದರೆ ನಡೆಯಲಾರದು. ಅದು ಹೊಸ ವೈಜ್ಞಾನಿಕ ಸೃಷ್ಟಿಯನ್ನು ಮಾಡಲಾರದು.

ಆದರೆ ತಂತ್ರಜ್ಞಾನದ ಮೂಲಕ ಒಂದು ಯಂತ್ರವನ್ನು ಸೃಷ್ಟಿಸಿದರೆ, ಅದನ್ನು ಉಪಯೋಗಿಸಲು ಬೇಕಾಗುವುದು ಬಳಸುವ ಕೌಶಲ್ಯ. ಮಾರುಕಟ್ಟೆ ಮತ್ತು ಮನುಷ್ಯನ ಉಪಯೋಗದ ಅಗತ್ಯಗಳಿಗನುಸಾರವಾಗಿ ತಂತ್ರಜ್ಞಾನ ಬೆಳೆಯುತ್ತಾ ಇರುತ್ತದೆ. ಮಾನವ ತನಗೆ ಅಗತ್ಯವಾದ ತೀರಾ ಅನಿವಾರ್ಯ ಯಂತ್ರಗಳನ್ನು ತಾನೇ ಹಣ ಕೊಟ್ಟು ಬೆಳೆಸುತ್ತಾ ಇರುತ್ತಾನೆ. ನಾವು ಸಾಗಣೆ ವಾಹನಗಳನ್ನು, (ಕಾರು, ಬಸ್, ಲಾರಿ, ರೈಲು, ವಿಮಾನ ಇತ್ಯಾದಿ) ಕಂಪ್ಯೂಟರ್‌ಗಳನ್ನು, ದೂರವಾಣಿ ಮತ್ತು ಮೊಬೈಲ್ ಇತ್ಯಾದಿಗಳನ್ನು ಹೊಸದು ಬಂದಂತೆ ನಿರಂತರ ಖರೀದಿಸಿ ಅವುಗಳ ಬೆಳವಣಿಗೆಗೆ ನಮ್ಮ ಸಂಪಾದನೆಯ ನೀರೆರೆದಿದ್ದೇವೆ. ಆದರೆ ಮೂಲಭೂತ ವೈಜ್ಞಾನಿಕ ಬೆಳವಣಿಗೆಗೆ ಬೇಕಾದ ವಾತಾವರಣವನ್ನು ಸರಕಾರವೇ ಜನರ ತೆರಿಗೆ ಹಣದಿಂದ ನಿರ್ಮಿಸಿಕೊಡಬೇಕು ಎಂದು ಬಯಸುತ್ತೇವೆ. ಒಟ್ಟಿನಲ್ಲಿ ವಿಜ್ಞಾನದ ಬೆಳವಣಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಡೆಯುವುದು ಜನರ ಹಣದಿಂದಲೆ ಎಂಬುದು ಇದರ ತಾತ್ಪರ್ಯ.

ಹಿಂದೆ ಭಾರತದಲ್ಲಿ ಮೂಲಭೂತ ವಿಜ್ಞಾನದ ಬೆಳವಣಿಗೆ ಇತ್ತು. ಹಲವಾರು ಚಾರಿತ್ರಿಕ ಕಾರಣಗಳಿಂದ ಅದು ನಿಂತುಹೋಯಿತು. ಆ ಚಾರಿತ್ರಿಕ ಕಾರಣಗಳನ್ನು ಚರ್ಚಿಸುವುದು ಈ ಪ್ರಬಂಧದ ಉದ್ದೇಶವಲ್ಲ. ಆದರೆ ಬ್ರಿಟಿಷರ ಆಡಳಿತ ಪ್ರಾರಂಭವಾದ ಮೇಲೆ ಭಾರತದಲ್ಲಿ ವೈಜ್ಞಾನಿಕ ಮನೋಭಾವ ಹೇಗೆ ಬೆಳೆಯಿತು ಎಂಬುದು ನಮಗೆ ಮುಖ್ಯ. ಅದು ನಮ್ಮ ಇಂದಿನ ಸಮಾಜೋ–ರಾಜಕೀಯ ವಾತಾವರಣದಲ್ಲಿ ವೈಜ್ಞಾನಿಕ ಎನ್ನಲಾದ ಮನೋಭಾವವನ್ನು ಅರಿಯಲು ಸಹಾಯ ಮಾಡುತ್ತದೆ.

ಇಂಗ್ಲೆಂಡ್ ಮತ್ತು ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿ ಸಂಭವಿಸಿದ ಬಳಿಕ ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕೆ ಅನುಗುಣವಾಗಿ ಭಾರತದಲ್ಲೂ ತಂತ್ರಜ್ಞಾನವನ್ನು ಪಸರಿಸಿದರು. ರೈಲು ಸಂಚಾರ, ಟೆಲಿಗ್ರಾಂ, ಟೆಲಿಗ್ರಾಫ್, ದೂರವಾಣಿ ಇತ್ಯಾದಿ ಸೇವೆಗಳು, ಆಧುನಿಕ ವೈದ್ಯಕೀಯ ಚಿಕಿತ್ಸೆ ನೀಡುವ ಆಸ್ಪತ್ರೆಗಳು, ನೂತನ ಮೇಯೋ ಕಾಲೇಜುಗಳು ಹಾಗೂ ಹೈಸ್ಕೂಲು, ಕಾಲೇಜುಗಳಲ್ಲಿ ಆಧುನಿಕ ವಿಜ್ಞಾನದ ಪಾಠಗಳು ಪ್ರಾರಂಭವಾದುದು ಈ ಕೈಗಾರಿಕಾ ಕ್ರಾಂತಿಯ ಬಳಿಕ. ವಿಜ್ಞಾನದ ಕಲಿಕೆ ಇಂಗ್ಲಿಷ್ ಭಾಷೆ ಮೂಲಕ ಪ್ರಾರಂಭವಾದುದರಿಂದ ಅದು ನಮ್ಮಲ್ಲಿ ಆ ತನಕ ಅಳಿದು–ಉಳಿದಿದ್ದ ಭಾರತೀಯ ವೈಜ್ಞಾನಿಕ ಜ್ಞಾನದೊಡನೆ ಸಹಜ ಸಂಪರ್ಕವನ್ನು ಕಳೆದುಕೊಂಡಿತ್ತು.

ಇದಲ್ಲದೆ ತಂತ್ರಜ್ಞಾನದ ಮೂಲಕ ವಿಜ್ಞಾನ ಪ್ರವೇಶಿಸಿದೊಡನೆ ಸಮಾಜವು ವಿಜ್ಞಾನದ ಸಂಶೋಧನೆಯ ಫಲಗಳನ್ನು ಅನುಭವಿಸಲು ಪ್ರಾರಂಭಿಸುತ್ತದೆ. ಆ ಸಮಾಜ ಆ ತನಕ ಇದ್ದ ಅಪಕಲ್ಪನೆಗಳ ವಿರುದ್ಧ ಮೂಲ ವಿಜ್ಞಾನ–ಚಿಂತನೆ ಹೋರಾಡಿ ಜ್ಞಾನವನ್ನು ಪಡೆದುಕೊಳ್ಳಲು ಪಟ್ಟ ಪಾಡುಗಳನ್ನು ಅನುಭವಿಸುವುದಿಲ್ಲ. ಯುರೋಪಿನಲ್ಲಿ ಮೂಲಭೂತ ವಿಜ್ಞಾನ ನಿರಂತರವಾಗಿ ಕ್ರಿಶ್ಚಿಯನ್ ಧಾರ್ಮಿಕತೆಯ ಹಾಗೂ ಆಡಳಿತದ ವಿರುದ್ಧ ಹೋರಾಡುತ್ತಾ ತನ್ನ ಜ್ಞಾನವನ್ನು ಸಾಧಿಸಿಕೊಳ್ಳಬೇಕಾಯಿತು. ತನ್ನ ಸಂಶೋಧನೆಗಾಗಿ ಜೈಲಿಗೆ ಹಾಕಲ್ಪಟ್ಟ ವಿಜ್ಞಾನಿ ಗೆಲಿಲಿಯೋನ ಕತೆ ನಿಮಗೆ ಗೊತ್ತೇ ಇದೆ. ಹಾಗೆ ಅನೇಕ ವಿಜ್ಞಾನಿಗಳು ಜೀವವನ್ನೂ ತೆತ್ತಿದ್ದಾರೆ. ಸೆರೆಮನೆಗೂ ಹೋಗಿದ್ದಾರೆ. ಡಾರ್ವಿನ್ ತನ್ನ ವಿಕಾಸವಾದವನ್ನು ಬರೆದಾದ ಬಳಿಕ ಮೂರು ವರುಷಗಳ ಕಾಲ ಅದನ್ನು ತನ್ನ ಕಪಾಟಿನಲ್ಲಿ ಬಚ್ಚಿಟ್ಟ. ಕಾರಣ ಅವನು ಕ್ರಿಶ್ಚಿಯನ್ ಧಾರ್ಮಿಕತೆಯ ಕೆಂಗಣ್ಣಿಗೆ ಹೆದರಬೇಕಾಗಿತ್ತು. ಅಂದರೆ ಯುರೋಪ್ ಒಂದು ರೀತಿಯಲ್ಲಿ ಹಲವು ಧಾರ್ಮಿಕ ಕಟ್ಟುಪಾಡುಗಳನ್ನು ಎದುರಿಸುತ್ತಾ ವೈಜ್ಞಾನಿಕ ಜ್ಞಾನವನ್ನು ಸಾದರಪಡಿಸಿಕೊಂಡಿತು. ಭೂಮಿ ಚಪ್ಪಟೆ ಎಂದು ತಿಳಿದ ಕಾಲದಲ್ಲಿ ಕೋಪರ್‌ನಿಕಸ್ ನ ಭೂಮಿ ಗೋಲಾಕಾರದಲ್ಲಿದೆ ಎಂಬ ವಾದಕ್ಕೆ ಪುರಸ್ಕಾರ ಸಿಗಲಿಲ್ಲ. ಭೂಮಿಯನ್ನು, ಅದರಲ್ಲಿ ಮನುಷ್ಯರನ್ನು ಮತ್ತು ಹಗಲು–ರಾತ್ರಿಗಳನ್ನು ದೇವರು ಸೃಷ್ಟಿಸಿದ ಎಂಬ ಬೈಬಲ್‌ನ ನಂಬಿಕೆಗೆ ಭಿನ್ನವಾದ ಡಾರ್ವಿನ್ನನ ವಿಕಾಸವಾದ ಆ ತನಕ ಭೂಮಿ ಮತ್ತು ಜೀವಿಗಳ ಬಗೆಗಿದ್ದ ಕ್ರಿಶ್ಚಿಯನ್ ನಂಬಿಕೆಯನ್ನು ಅಲ್ಲಾಡಿಸಿ ಬಿಟ್ಟಿತ್ತು. ನೂತನ ವಿಜ್ಞಾನ ಹೀಗೆ ಜ್ಞಾನದ ಪರವಾದ ತನ್ನ ಹಠದಲ್ಲಿ ಬೆಳೆಯಿತು. ವಿಜ್ಞಾನ ಕೇವಲ ಭೌತಿಕ ಜ್ಞಾನಕ್ಕೆ ಸಂಬಂಧಿಸಿದ್ದು. ಅದಕ್ಕೆ ಪಾರಮಾರ್ಥಿಕ ಜ್ಞಾನದ ಕಲ್ಪನೆಯಿಲ್ಲ ಎಂಬ ಧಾರ್ಮಿಕ ವಾದವನ್ನು ಇನ್ನೂ ಮೂಲವಿಜ್ಞಾನ ಎದುರಿಸುತ್ತಲೇ ಇದೆ. ಆದರೆ ಮೂಲ ವಿಜ್ಞಾನದ ಜ್ಞಾನದಿಂದ ಬೆಳೆದ ತಂತ್ರಜ್ಞಾನ ಅವುಗಳು ಸೃಷ್ಟಿಸುವ ಕೈಗಾರಿಕಾ ಉತ್ಪನ್ನಗಳು, ಅವುಗಳಿಂದ ಜನರಿಗಾಗುವ ಉಪಯೋಗ ಇತ್ಯಾದಿಗಳ ಮೇಲುಗೈಯಿಂದಾಗಿ ತಂತ್ರಜ್ಞಾನ ತನ್ನ ಅಭಿವೃದ್ಧಿಯಲ್ಲಿ ದಾಪುಗಾಲಿಡುತ್ತಿದೆ.

ಭಾರತದ ಆಧುನಿಕ ವೈಜ್ಞಾನಿಕ ಸ್ಥಿತಿ ಯುರೋಪಿಗಿಂತ ಭಿನ್ನವಾಗಿದೆ. ನಾವು ವಿಜ್ಞಾನವನ್ನು ತಂತ್ರಜ್ಞಾನದ ಫಲಾನುಭವಿಗಳಾಗಿ ಪಡೆದುದರಿಂದ, ನಮ್ಮ ನೆಲದಲ್ಲಿ ಆ ತನಕ ಇದ್ದ ಧಾರ್ಮಿಕ, ಮತೀಯ ವಿಚಾರಗಳೊಂದಿಗೆ ತಂತ್ರಜ್ಞಾನ–ವಿಜ್ಞಾನವು ಭಾರತದಲ್ಲಿ ಸಂಘರ್ಷಕ್ಕೆ ಇಳಿಯಲೇ ಇಲ್ಲ. ವೈಜ್ಞಾನಿಕ ಚಿಂತನಾ ವಿಧಾನ ಮತ್ತು ಧಾರ್ಮಿಕ ಚಿಂತನಾ ವಿಧಾನಗಳು ನಮ್ಮಲ್ಲಿ ಸಮಾನಾಂತರ ರೇಖೆಗಳಲ್ಲಿ ಬೆಳೆದವು. ತಂತ್ರಜ್ಞಾನದ ಪೂರಕ ವಾತಾವರಣ ದೊಡ್ಡ ಸಾಮಾಜಿಕ ಸಂಘರ್ಷವನ್ನು ಉಂಟುಮಾಡಲಿಲ್ಲ. ಕೈಗಾರಿಕೀಕರಣದೊಂದಿಗೆ ಬೆಳೆದ ನಗರೀಕರಣದಿಂದ ದೈಹಿಕ ಮಟ್ಟದಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲು ಕಷ್ಟವಾಯಿತು. ಸಿಟಿ ಬಸ್ಸಿನ ಇಕ್ಕಟ್ಟಿನೊಳಗೆ ಒಬ್ಬರನ್ನೊಬ್ಬರು ಮುಟ್ಟುವುದು ಅನಿವಾರ್ಯವಾಯಿತು. ಆದರೆ ಮನೆಗೆ ಹೋದೊಡನೆ ಪೇಟೆಯ ಮೈಲಿಗೆ ಬಟ್ಟೆಯನ್ನು ಬೇರೆ ತೆಗೆದಿಟ್ಟು ಮನೆಯೊಳಗಿನ ಮಡಿಯನ್ನು ಉಟ್ಟುಕೊಳ್ಳುವ ಸಂಪ್ರದಾಯದೊಂದಿಗೆ ನೂತನ ಅಸ್ಪೃಶ್ಯತಾ ಸಂಹಿತೆಯೂ ಮುಂದುವರಿಯಿತು. ಮನೆಯೊಳಗೆ ಒಂದು ಪ್ರತಿ ಹೆಚ್ಚಿಗೆ ಬಟ್ಟೆ ಇಟ್ಟುಕೊಳ್ಳುವ ಅನುಕೂಲವನ್ನು ನೂತನ ಬಟ್ಟೆ ಗಿರಣಿಗಳು ಮಧ್ಯಮ ವರ್ಗದವರಿಗೂ ಒದಗಿಸಿಕೊಟ್ಟವು. ಹೀಗೆ ನಮ್ಮ ವಿಜ್ಞಾನ ಚಿಂತನೆ ತಂತ್ರಜ್ಞಾನದೊಡನೆ ನಮ್ಮ ಅನೇಕ ಕಂದಾಚಾರಗಳನ್ನೂ ಉಳಿಸಿಕೊಂಡಿತು. ನಿಜವಾದ ವೈಜ್ಞಾನಿಕ ಚಿಂತನೆ ತರಬೇಕಾದ ಪರಸ್ಪರ ಮಾನವ ಪ್ರೀತಿಯನ್ನು ಮತ್ತು ಆ ಮೂಲಕ ಬೆಳೆಯಬೇಕಾದ ಸಮಾನತೆಯ ತತ್ವವನ್ನು ಸಹಜವಾಗಿ ಬೆಳೆಯಗೊಡಲಿಲ್ಲ. ಕೊನೆಗೂ ಅದನ್ನು ನಾವು ನಮ್ಮ ಸಂವಿಧಾನದ ಮೂಲಕ ಅನುಷ್ಠಾನಗೊಳಿಸಿಕೊಳ್ಳಬೇಕಾಯಿತು.

ಮೇಲಿನ ಉದಾಹರಣೆಯ ತಾತ್ಪರ್ಯ ಏನೆಂದರೆ ವೈಜ್ಞಾನಿಕ ಮನೋಭಾವ ಎಂಬುದು ಕೇವಲ ಪ್ರಯೋಗಶಾಲೆಯಲ್ಲಿ ಘಂಟಾಪಾತ್ರೆಯನ್ನು ಮುಚ್ಚಿ ತೆಗೆದು ಅಥವಾ ಪ್ರಣಾಳ ಇತ್ಯಾದಿಗಳನ್ನು ಬಳಸಿ ಮಾಡುವ ಕೆಲಸವಲ್ಲ. ಮನುಷ್ಯನ ಮನಸ್ಸು ತನ್ನ ಸುತ್ತಲಿನ ಜಗತ್ತನ್ನು ಅರಿತು ಬದುಕಿನ ಚೆಲುವನ್ನು ಅನುಕೂಲವನ್ನೂ ಹೆಚ್ಚಿಸಿಕೊಳ್ಳಲು ಮಾಡುವ ಎಲ್ಲಾ ಪ್ರಯತ್ನಗಳೂ ಒಂದು

ರೀತಿಯ ವೈಜ್ಞಾನಿಕ ನಡವಳಿಕೆಯೇ ಆಗಿದೆ. ವಿಶೇಷ ಜ್ಞಾನ ಎಂಬುದರಿಂದಲೇ 'ವಿಜ್ಞಾನ'. ಅದಕ್ಕೊಂದು ಸಾಮಾಜಿಕ ಆಯಾಮ, ರಾಜಕೀಯ ನೆಲೆಯೂ ಇದೆ ಎಂಬ ಕಾರಣದಿಂದ ಕಾರ್ಲ್‌ಮಾರ್ಕ್ಸ್ ತನ್ನ ತತ್ವವನ್ನು ವೈಜ್ಞಾನಿಕ ಸಮಾಜವಾದ ಎಂದು ಕರೆದ. ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ವಿಜ್ಞಾನ–ಕಲೆ–ಸಾಹಿತ್ಯ–ಭಾಷೆ ಎಲ್ಲವೂ ಪರಸ್ಪರ ಸಂಬಂಧವುಳ್ಳವುಗಳಾಗಿವೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಪರಸ್ಪರ ಸಂಬಂಧದಿಂದಾಗಿ ವೈಜ್ಞಾನಿಕ ಸಂಶೋಧನೆಗಳಿಂದ ಅನೇಕ 'ಹೊಸ ವಿಚಾರಗಳು' ಅಥವಾ 'ಹೊಸ ವಸ್ತುಗಳು' ಕೆಲವೊಮ್ಮೆ 'ಹೊಸ ಸೇವೆಗಳು' (ಉದಾ. ಬಾಹ್ಯಾಕಾಶ ಪ್ರವಾಸೋದ್ಯಮ) ಹುಟ್ಟಿಕೊಳ್ಳುತ್ತಾ ಇರುತ್ತವೆ. ಇದರಿಂದಾಗಿ ಕೆಲವರು ವಿಜ್ಞಾನವನ್ನು 'ಹೊಸತು' ಎಂದೇ ಗುರುತಿಸುವುದುಂಟು. ಸಮಕಾಲೀನತೆ ಅನೇಕ ಸಲ ಸಾಹಿತ್ಯದಲ್ಲಿ ಹೊಸತನಕ್ಕೆ ಕಾರಣವಾಗುವುದುಂಟು. ಸಾಹಿತ್ಯ ಮತ್ತು ವೈಜ್ಞಾನಿಕ ಚಿಂತನೆಯ ಸಂಬಂಧದ ಬಗ್ಗೆ ಯೋಚಿಸುವಾಗ 'ಹೊಸತನ' ಎಂದರೆ ಏನು? ಸಾಹಿತ್ಯ–ವಿಜ್ಞಾನ ಎರಡಕ್ಕೂ ಅದು ಸಮಾನ ಅಂಶವೆ? ಎಂಬ ಪ್ರಶ್ನೆ ಕೇಳಿಕೊಳ್ಳುವುದು ಒಳಿತು.

ಹೊಸತನ ಎಂಬುದು ಇವೆರಡರಲ್ಲೂ ಹೇಗಿದೆ ಎಂಬುದಕ್ಕೆ ತಕ್ಷಣ ನನಗೆ ಡಾ.ಕೆ.ವಿ.ತಿರುಮಲೇಶ್ ಹೇಳಿದ ಮಾತೊಂದು ನೆನಪಾಗುತ್ತದೆ. (ನೋಡಿ : ರಾಜು ಅಡಕಳ್ಳಿಯವರು ೧೯೮೭ರಲ್ಲಿ ಮಾಡಿದ ಕೆ.ವಿ. ತಿರುಮಲೇಶ್ ಸಂದರ್ಶನ.) ಹೊಸತನ ಎನ್ನುವುದು ತಿರುಮಲೇಶ್ ಹೇಳುವಂತೆ, "ಅದೊಂದು ದೃಷ್ಟಿಕೋನ. ವಿಜ್ಞಾನಿ ಕೂಡಾ ಏನು ಮಾಡುತ್ತಾನೆ? ಎರಡು ವಿಷಯಗಳ ನಡುವೆ ಸಂಬಂಧ ಕಲ್ಪಿಸುತ್ತಾನೆ. ಈ ಎರಡು ವಿಷಯಗಳೇನೂ ಹೊಸತಾಗಿರಬೇಕಾದ್ದಿಲ್ಲ. ಆದರೆ ಆ ಸಂಬಂಧ ಇದೆಯಲ್ಲ– ಅದು ಹೊಸತು. ವಿಜ್ಞಾನಿ ತೋರಿಸೋದು ಇದನ್ನ, ಅದೇ ರೀತಿ ಕವಿ– ಆತ ಒಂದು ರೂಪಕ ನಿರ್ಮಿಸಿದ್ದಾಗ ಹೊಸತೊಂದು ಸಂಬಂಧ ನಿರ್ಮಿಸುತ್ತಾನೆ. ನಮ್ಮ ದೃಷ್ಟಿಕೋನವನ್ನು ಬದಲಿಸುತ್ತಾನೆ. ವಿಜ್ಞಾನ ಮತ್ತು ಸಾಹಿತ್ಯದ ಸಂಬಂಧದಲ್ಲಿ ಜನರು ಅಂದರೆ ಸಮಾಜ ನೋಡುವ, ಚಿಂತಿಸುವ ದೃಷ್ಟಿಕೋನ ವೈಚಾರಿಕತೆ ಕಡೆಗೆ ಬದಲಾಗಬೇಕು. ಪರಾಮರ್ಶಿಸದೆ ಯಾರೋ ಹೇಳಿದರು ಅಥವಾ ಇನ್ಯಾವುದೋ ಆಚಾರ ಎಂಬ ಕಾರಣಕ್ಕೆ ಸ್ವೀಕರಿಸುವ ಗುಣ ಬದಲಾಗಬೇಕು. ವೈಜ್ಞಾನಿಕ ದೃಷ್ಟಿಕೋನ ಎಂಬುದೊಂದು ಚಿಂತನಾ ಕ್ರಮ.

ಈ ಸಂಬಂಧದ ಒಂದು ಸ್ವರೂಪವನ್ನು 'ವಿಕಾಸ' ಎಂಬ ತತ್ವದ ಅಡಿಯಲ್ಲಿ ಅನೇಕ ನವೋದಯ ಬರಹಗಾರರು ಸ್ವೀಕರಿಸಿದರು. ಈ ವಿಕಾಸ ತತ್ವದ ಹಿಂದೆ ಮಹರ್ಷಿ ಅರವಿಂದರ ಚಿಂತನೆ ಇತ್ತು. ಬೇಂದ್ರೆ, ಕುವೆಂಪು, ಮೊದಲಾದವರು ಮನುಷ್ಯನ ಈ ಬೆಳವಣಿಗೆಯನ್ನು ವಿಕಾಸ ತತ್ವದ ಅಡಿಯಲ್ಲಿ ಗುರುತಿಸಿದ ಕನ್ನಡದ ಪ್ರಮುಖರು. ಕುವೆಂಪು ಅವರಿಗೆ ಮನುಷ್ಯನ ಈ ಬೆಳವಣಿಗೆ ವಿಕಾಸ ಕ್ರಮದಲ್ಲಿ ಚಿಚ್ಛಕ್ತಿ ಆರೋಹಣ ಕ್ರಮವಾಗಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯಗಳಿಗೆ ಏರುವುದು. ಈ ವಿಕಾಸದಲ್ಲಿ ಕಾನೂರ ಹೆಗ್ಗಡತಿಯ ಬಾಡುಗಳ್ಳ ಸೋಮು, ಹೂವಯ್ಯನ ಸಂಪರ್ಕದಲ್ಲಿ ತನ್ನ ಕಂದಾಚಾರಗಳನ್ನು, ಕ್ಷುಲ್ಲಕ ಆಸೆ ಆಮಿಷಗಳನ್ನು ಕಳಕೊಂಡು ಹೊಸ ಮಾನಸಿಕ ಸ್ಥೈರ್ಯದಿಂದ ಸೇರೆಗಾರ ಸೋಮಯ್ಯರಾಗುವ ಮಟ್ಟಕ್ಕೆ ಏರುತ್ತಾನೆ. ಹಾಗೆಯೇ ಹೂವಯ್ಯ ಬುದ್ಧದೇವನ ಚಿಂತನೆ ಮೂಲಕ ಇನ್ನೂ ಎತ್ತರಕ್ಕೆ ಏರುತ್ತಾನೆ. ಹೂವಯ್ಯನ ಹೊಸ ಚಿಂತನೆಯಲ್ಲಿ ಕಾನೂರು ಬೆಳಗುತ್ತದೆ.

ಈ ಸಂದರ್ಭದಲ್ಲಿ ವಿಜ್ಞಾನ–ವೈಚಾರಿಕತೆ–ಸಾಹಿತ್ಯಗಳ ಹಿನ್ನೆಲೆಯಲ್ಲಿ, 'ವಿಚಾರಕ್ರಾಂತಿಗೆ ಆಹ್ವಾನ' ಎಂಬ ಭಾಷಣದಲ್ಲಿ ಕುವೆಂಪು ಅವರು ಹೇಳಿದ ಮಾತುಗಳು ಮನನಯೋಗ್ಯ. "ವಿಜ್ಞಾನ ಸಂಪನ್ನವಾದ ಪಾಶ್ಚಾತ್ಯ ನಾಗರೀಕತೆ ನಮ್ಮನ್ನು ಇನ್ನೂರು ವರ್ಷ ಆಳಿದರೂ ಅದರ ವಿಜ್ಞಾನ ಸೃಷ್ಟಿಸಿದ ಯಂತ್ರ ನಾಗರೀಕತೆಯನ್ನು ಅನುಸರಿಸಿದ್ದೇವೆ ಹೊರತು ಅದರ ವೈಜ್ಞಾನಿಕ ದೃಷ್ಟಿ ನಮ್ಮದಾಗಲಿಲ್ಲ; ಮತ್ತು ಆ ವೈಜ್ಞಾನಿಕ ದೃಷ್ಟಿಗೂ ತಾಯಿ ಬೇರಾದ ವೈಚಾರಿಕತೆಯನ್ನು ನಾವು ಮೈಗೂಡಿಸಿಕೊಳ್ಳಲಿಲ್ಲ. ಇನ್ನು ಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಜ್ಞಾನಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತ ಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು". ಕುವೆಂಪು ಅವರು ೧೯೩೦ರ ದಶಕದಲ್ಲೇ ಬರೆದ 'ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ' ಎಂದು ಸಾರಿದ ಕವನದಲ್ಲೆ ಮನುಜ ಮತಕೆ ಸೇರಲು 'ವಿಜ್ಞಾನ ದೀವಿಗೆಯ ಹಿಡಿದು ಬನ್ನಿ' ಎಂಬ ಕರೆಯಿತ್ತವರು. ಈ ಎಲ್ಲಾ ಚಿಂತನೆಯ ಮೂಲಕ ಕುವೆಂಪು ಅವರ ಹಾರೈಕೆ, "ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ– ಈ ಪದಗಳು ಮಂತ್ರಗಳಾಗಿ ನಿಮ್ಮನ್ನು (ಜನರನ್ನು) ಜಾತಿಮತಗಳಿಂದಲೂ, ಭೇದಭಾವಗಳಿಂದಲೂ ಪಾರುಮಾಡಿ ನಿಮ್ಮಿಂದ (ಜನರಿಂದ) ನಿಜವಾದ ಪ್ರಜಾಸತ್ತೆ ಮತ್ತು ಸಮಾಜವಾದ ಸ್ಥಾಪನೆಯಾಗಲಿ" ಎಂಬುದಾಗಿದೆ.

ಕುವೆಂಪು ವೈಜ್ಞಾನಿಕ ವಿಚಾರ ವಿದ್ಯಾಭ್ಯಾಸಗಳಲ್ಲಿ ಭಾಷೆಯ ಮಟ್ಟಿಗಾಗಲಿ, ಹೊಸ ವಿಚಾರ, ಪದಗಳ ಸ್ವೀಕಾರದ ಬಗೆಗಾಗಲಿ ಮಡಿವಂತರಲ್ಲ. ವಿಜ್ಞಾನ ಮತ್ತು ಅನುವಾದಗಳಿಗೆ ಸಂಬಂಧಿಸಿದಂತೆ ಕುವೆಂಪು ಅವರು, ವಿಜ್ಞಾನ ಪಾಠಗಳಲ್ಲಿ 'ಆಕ್ಸಿಜನ್'ಗೆ ಮಂಗಳೂರು ಕಡೆ 'ಆಮ್ಲಜನಕ' ಎಂದೂ ಧಾರವಾಡ ಕಡೆ 'ಪ್ರಾಣವಾಯು' ಎಂದೂ ಮಕ್ಕಳಿಗೆ ಹೇಳಿಕೊಡುವುದು ಸರಿಯಲ್ಲ. ವಿಜ್ಞಾನ ಎಲ್ಲಾ ಕಡೆ ಒಂದೇ ಕನ್ನಡ ಪದವನ್ನು ಬಳಸಬೇಕು. ಅದು ಸಾಧ್ಯವಾಗದೆ ಹೋದರೆ ಕನ್ನಡ ವಿಜ್ಞಾನ ಪಾಠದಲ್ಲಿ 'ಆಕ್ಸಿಜನ್' ಎಂಬ ಪದವನ್ನೇ ಕರ್ನಾಟಕದಾದ್ಯಂತ ಬಳಸಬಹುದು. ಅದರಲ್ಲಿ ತಪ್ಪಿಲ್ಲ. ವಿಜ್ಞಾನವನ್ನು ವಿಜ್ಞಾನದ ಕ್ರಮದಲ್ಲೆ ನಮ್ಮ ಭಾಷೆಯಲ್ಲಾದರೂ ಕಲಿಸಬೇಕು ಎಂದಿದ್ದಾರೆ.

ಕಳೆದ ಶತಮಾನದ ಆದಿಯಿಂದ ನಮ್ಮ ಎಲ್ಲಾ ಪ್ರಮುಖ ಲೇಖಕರೂ ವಿಜ್ಞಾನವೂ ಸೇರಿದಂತೆ ಜಗತ್ತಿನ ಮುಖ್ಯ ಜ್ಞಾನವನ್ನು ಕನ್ನಡ ಭಾಷೆಯೊಳಗೆ ತರಲು ಪ್ರಯತ್ನಿಸಿದ್ದಾರೆ. ಬಾಲಪ್ರಪಂಚ, ವಿಜ್ಞಾನ ಪ್ರಪಂಚ ಮತ್ತಿತರ ವಿಜ್ಞಾನ ಬರಹಗಳ ಮೂಲಕ ಡಾ.ಶಿವರಾಮ ಕಾರಂತರು ಆ ನಿಟ್ಟಿನಲ್ಲಿ ಬಹಳ ದೊಡ್ಡ ಕೆಲಸ ಮಾಡಿದ್ದಾರೆ. ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಕೆಲಸವನ್ನು ಅವರೊಬ್ಬರೇ ಮಾಡಿದ್ದಾರೆ. ವಿಜ್ಞಾನ ಮತ್ತು ವೈಚಾರಿಕತೆಯ ಸಂಬಂಧವನ್ನು ವಿವರಿಸಿದ್ದಾರೆ. ಡಾ. ಕಾರಂತರ 'ಬುದ್ಧಿಜೀವಿಯಾದ ಮಾನವ', 'ವಿಜ್ಞಾನ ಮತ್ತು ಅಂಧಶ್ರದ್ಧೆ' ಮೊದಲಾದ ಲೇಖನಗಳಲ್ಲಿ ಅವರ ವಿಚಾರಗಳು ಹರಳುಗಟ್ಟಿವೆ. ಅವರ ಬಹಳ ಮುಖ್ಯವಾದ 'ಬಾಳ್ವೆಯೇ ಬೆಳಕು' ಎಂಬ ಕೃತಿಯಲ್ಲಿ 'ನಮ್ಮ ಅಳತೆಯನ್ನು ಮೀರಲಾಗದ ದೇವರು' ಎಂಬ ವಿಭಾಗದಲ್ಲಿ ಮನುಷ್ಯ ಮತ್ತು ದೇವರ ಸಂಬಂಧವನ್ನು ವೈಚಾರಿಕವಾಗಿ ವಿವರಿಸಿದ್ದಾರೆ. ಜೀವನ ಮುಖ್ಯ ಎಂಬ ವಿಚಾರವನ್ನು ವಿವರಿಸುತ್ತಾ ಕಾರಂತರು, "ನಮ್ಮ ಬದುಕೇ ನಮ್ಮ ಭಾವನೆಗಳಿಗೆ ಅಡಿಗಲ್ಲು. ನಮ್ಮ ದೇವರು ಭಾವನೆಗಳಲ್ಲಿ ದೊಡ್ಡವನಾಗುವುದಕ್ಕೆ ಜೀವನ ದೊಡ್ಡದಾಗಬೇಕು" ಎಂದಿದ್ದಾರೆ.

ಡಾ. ಶಿವರಾಮ ಕಾರಂತರ ತತ್ವ–ಪರಿಸರ ತತ್ವ. ಈ ಭೂಮಿಯಲ್ಲಿ ಮನುಷ್ಯನೂ ಇತರ ಪ್ರಾಣಿಗಳಂತೆ ಒಬ್ಬ ಜೀವಿ. ಇತರ ಜೀವಿಗಳಿಗಿಂತ ಮೇಲೂ ಅಲ್ಲ, ಕೀಳೂ ಅಲ್ಲ. ಮಾನವನ ಚರಿತ್ರೆಯ ಮತ್ತು ವಿಜ್ಞಾನದ ಅರಿವು ಮನುಷ್ಯನೂ ಇತರರಂತೆ ಭೂಮಿಯಲ್ಲಿ ಒಬ್ಬ ಜೀವಿ ಎಂಬ ತಿಳಿವಳಿಕೆಯ ಆಳ ವಿಸ್ತಾರಗಳಿಗೆ ಪೂರಕವಾಗಬೇಕು. ಅವರ ವೈಜ್ಞಾನಿಕ ಹಾಗೂ ಕಲಾ ಚಿಂತನೆಗಳು ಪರಸ್ಪರ ಸೇರಿದ ಅತ್ಯಂತ ಸೃಷ್ಟಿಶೀಲವಾದ ವಿಶಿಷ್ಟ ಕಾದಂಬರಿ 'ಮೂಕಜ್ಜಿಯ ಕನಸುಗಳು'. ಈ ಕಾದಂಬರಿಯಲ್ಲಿ ಪರಂಪರೆಯಿಂದ ಬಂದ ಕಲ್ಪನಾ ವಿಚಾರಗಳನ್ನು, ಆಧಾರವಿಲ್ಲದ ಪರಂಪರೆಯ ಹೆಸರಿನಲ್ಲಿರುವ ಆಚರಣೆಗಳನ್ನು ಹಾಗೂ ಹಲವು ಸಾಂಪ್ರದಾಯಿಕ ನಂಬುಗೆಗಳನ್ನು ಮೂಕಜ್ಜಿ ತನ್ನ ವಿಶಿಷ್ಟ ವೈಜ್ಞಾನಿಕ ಎನ್ನಬಹುದಾದ ಮಟ್ಟದ ಕಲ್ಪನಾ ಜ್ಞಾನದಿಂದ ಪರೀಕ್ಷಿಸಿ ನೋಡುತ್ತಾಳೆ.

ವಿಜ್ಞಾನ ಮತ್ತು ಸಾಹಿತ್ಯ ಚಿಂತನೆಯ ಸಹಜ ಸಂಬಂಧಕ್ಕೆ ಮೂಕಜ್ಜಿಯ ಕನಸುಗಳು ಕಾದಂಬರಿಯ ಮುನ್ನುಡಿಯಲ್ಲಿ ಕಾರಂತರು ಹೇಳಿದ ಈ ಮಾತುಗಳು ಮನನಯೋಗ್ಯ : "ಮನೋಜೀವಿಯಾದ ಮಾನವ ಕುಲವು ಈ ಭೂಮಿಯ ಮೇಲೆ ನೆಲೆಸಿದ ಅಲ್ಪಾವಧಿಯಲ್ಲಿ ಅಮಿತ ವಿಶ್ವಗಳಿಂದ ಕೂಡಿರುವ, ಬಿಲಿಯಗಟ್ಟಲೆ ವರ್ಷಗಳಿಂದ ಕಾಣಿಸಿಕೊಂಡು ಬಂದ ಮಹಾ ಜಗತ್ತಿನ ಬರಿಯ ಸೆರಗೊಂದರ ಸೂಕ್ಷ್ಮ ಎಳೆಯನ್ನು ಕೂಡಾ ಚೆನ್ನಾಗಿ ಕಂಡಿರಲಾರದು. ಆದರೆ ತನ್ನ ಅಲ್ಪಮತಿಗೆ ಗೋಚರಿಸಿದ ಅದ್ಭುತ ಆಶ್ಚರ್ಯಗಳಿಂದ ಚಕಿತಗೊಂಡು– ಈ ಜಗತ್ತೇನು? ಯಾರು ಅದನ್ನು ಸೃಷ್ಟಿಸಿದರು, ಯಾಕೆ, ನಾನು ಎಂಥವ, ಯಾತಕ್ಕಿದ್ದೇನೆ– ಎಂಬ ಪ್ರಶ್ನೆ ಕೇಳತೊಡಗಿದ. ಬರಿದೆ ಪ್ರಶ್ನೆ ಕೇಳಿದರೆ ಸಾಲದಲ್ಲ, ತನ್ನ ಎಟುಕಿಗೆ ಸಿಗದಂಥ ವಿಷಯವನ್ನು ಸಿಕ್ಕಿದಂತೆಯೆ ನೆನೆದು,– ಮನಸ್ಸನ್ನು ಕಲ್ಪನಾಲೋಕಕ್ಕೆ ಹರಿಯಗೊಟ್ಟು, ಅಲ್ಲಿ ಕಂಡ ಕನಸನ್ನು ನಿಜ, ಸತ್ಯ– ಎಂದು ಸಾರುತ್ತಲೂ ಬಂದಿತು.

"ಅವರವರ ಕಲ್ಪನೆ ಎಷ್ಟೆಷ್ಟು ಬೆಡಗಿನದೋ, ಭವ್ಯವೋ, ಅದರ ಮೇಲಿಂದ ಅವರು ಹೇಳಿದ್ದೇ ಸತ್ಯವೆನಿಸಿತು. ಅಷ್ಟೊಂದು ವಿಸ್ತಾರಕ್ಕೆ ಕಲ್ಪನೆಯನ್ನು ಬೆಳೆಯಿಸಲಾರದವರು, ಅಂಥದನ್ನು ಮೂಢನಂಬಿಕೆಯಿಂದ ಹಿರಿಯರಾಡಿದ ಒಂದೊಂದು ಸೊಲ್ಲೂ ಅಕ್ಷರಶಃ ಸತ್ಯವೆಂದೂ ತಿಳಿದು, ನಂಬಿ ಬಂದರು. ಸಾವಿರ ಜನರು ಸಾವಿರ ಬಗೆಗಳಿಂದ ಹರಿಯಿಸಿದ ಈ ಕಲ್ಪನಾ ವಿಲಾಸಗಳು ಪರಸ್ಪರ ಘರ್ಷಣೆಗಳಿಗೆ ಕಾರಣವಾದುದೂ ಉಂಟು"

ಕಾರಂತರ ತಾತ್ವಿಕತೆ ವಿಜ್ಞಾನದ ಅರಿವಿನಿಂದ ಬೆಳೆದ ಪರಿಸರದ ಅರಿವು. ಅಲ್ಲಿ ಮನುಷ್ಯನೂ ಇತರರಂತೆ ತಾನೂ ಒಂದು ಜೀವಿ ಎಂಬ ತಿಳಿವು, ಮನುಷ್ಯನು ವಿಜ್ಞಾನ– ತಂತ್ರಜ್ಞಾನ ಹಾಗೂ ಒಟ್ಟೂ ಸೃಜನಶಕ್ತಿಯಿಂದ ಸಾಧಿಸುವ ಎಲ್ಲಾ ಕೆಲಸಗಳಲ್ಲೂ ಸಂಯಮವನ್ನು ತರಬಲ್ಲದು. ಅದು ಇತರ ಜೀವಿಗಳಿಗೆ ತಾನು ತೊಂದರೆ ಕೊಡದೆ ಬದುಕಬೇಕೆಂಬ ಅರಿವಿನ ಮೂಲಕ ಅವರ ವೈಜ್ಞಾನಿಕ ಚಿಂತನೆಯಲ್ಲಿಡಗಿದೆ. ಮೂಕಜ್ಜಿಯ ಕನಸಿನಲ್ಲಿ ಅವರು ಹೇಳುವ ಹಾಗೆ ವಿಜ್ಞಾನದಿಂದ ನಾವು ಸಾಧಿಸಬೇಕಾದ್ದು ಪ್ರಕೃತಿಯನ್ನು ಮಣಿಸುವುದಲ್ಲ. ಬದಲಾಗಿ ಮನುಷ್ಯ ಅರಿಯಬೇಕಾದ್ದು. ಪ್ರಾಣಿ–ಪಶು–ಸಸ್ಯ ಜಗತ್ತೂ ಸೇರಿದಂತೆ "ಇರುವಷ್ಟು ದಿವಸ ನನಗೂ ಹಿತವಾಗಿ, ನಾಲ್ಕು ಜನರಿಗೂ ಹಿತವಾಗುವ ಹಾಗೆ ಬಾಳುವುದಪ್ಪ"

ವಿಜ್ಞಾನ–ಸಾಹಿತ್ಯ–ಸಮಾಜಗಳ ಪರಸ್ಪರ ಸಂಬಂಧಗಳ ಅಗತ್ಯ, ಅನಿವಾರ್ಯತೆ ಮತ್ತು ಅಲ್ಲಿ ತಾಳ ತಪ್ಪಿದರೆ ಉಂಟಾಗುವ ಅಪಾಯದ ಪ್ರಮಾಣವನ್ನು ಅದನ್ನು ನಮಗೆ ತೋರಿಸುವ ಜಾರ್ಜ್ ಆರ್ವೆಲ್ಲನ 'ವಿಜ್ಞಾನ ಎಂದರೇನು?' (What is science? By George Orwell) ಎಂಬ ಪ್ರಬಂಧದ ನೆನಪಿನಿಂದ ಹೇಳಿ ಈ ಪ್ರಬಂಧವನ್ನು ಮುಗಿಸಬಹುದು. ಜಾರ್ಜ್ ಆರ್ವೆಲ್ಲನು ಆ ಪ್ರಬಂಧದಲ್ಲಿ ವಿಜ್ಞಾನ ಎಂದರೆ ಕೇವಲ ಪ್ರಯೋಗ ಶಾಲೆಗಳ ಜ್ಞಾನ ಎಂದು ತಿಳಿಯುವುದಿಲ್ಲ. ಅದರ ಪರಿಣಾಮ ಸಮಾಜದ ಮೇಲಾಗುವುದರಿಂದ ವಿಜ್ಞಾನ, ರಾಜಕೀಯ, ಸಾಹಿತ್ಯ, ಸಮಾಜ ಸೇರಿದಂತೆ ಅವುಗಳ ಪರಿಣಾಮ ಜವಾಬ್ದಾರಿ ಬಗೆಗೂ ಚಿಂತಿಸಬೇಕು. ನರಮೇಧಕ್ಕೆ ಕಾರಣವಾದ ಹಲವು ವೈಜ್ಞಾನಿಕ ಶಕ್ತಿಗಳನ್ನು ಸೃಷ್ಟಿಸಿದ ಹಿಟ್ಲರ್‌ನ ಕಾಲದ ವಿಜ್ಞಾನಿಗಳು ಅವರ ಸೃಷ್ಟಿಯ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ಯೋಚಿಸಲಿಲ್ಲ. ಅವರಲ್ಲಿ ಅನೇಕರು ಹಿಟ್ಲರನ ಪರವಾಗಿದ್ದರು. ಐನ್‌ಸ್ಟೈನ್ ಹಾಗೆ ಹಿಟ್ಲರ್‌ನ ಬಿಗಿಮುಷ್ಟಿಯಿಂದ ತಪ್ಪಿಸಿಕೊಂಡು ಚಿಂತಿಸಿದವರು ಕಡಿಮೆ. ಹಾಗಾಗಿ ವಿಜ್ಞಾನ ಕೇವಲ ಪ್ರತ್ಯೇಕವಾದ (Isolated) ಚಿಂತನಾ ವಿಧಾನವಲ್ಲ. ಅದೊಂದು

ಮನೋಭಾವ. ಸಮಷ್ಟಿಯಲ್ಲಿ ಎಲ್ಲರೊಡಗೂಡಿ (Collective) ಬೆಳೆಯಬೇಕಾದ ಚಿಂತನಾ ವಿಧಾನ. ಕನ್ನಡದಲ್ಲಿ ಅದರ ತಾತ್ವಿಕ ನೆಲೆಗಳನ್ನು ಕಂಡು ಕಾಣಿಸಿದವರು ಶಿವರಾಮ ಕಾರಂತರು ಮತ್ತು ಕುವೆಂಪು ಅವರು. ಆ ವೈಜ್ಞಾನಿಕ ತಾತ್ವಿಕತೆಯನ್ನು ಜನಮಾನಸದಲ್ಲಿ ಸಮರ್ಥವಾಗಿ ಬಿತ್ತಲು ಸಾಹಿತ್ಯ ಮಹತ್ತರವಾದ ಕೊಡುಗೆ ನೀಡಬಲ್ಲದು.

ಮೇರಿ ಶೆಲ್ಲಿಯ 'ಫ್ರಾಂಕೆನ್‌ಸ್ಟೈನ್'– ಮೊಟ್ಟಮೊದಲ ವೈಜ್ಞಾನಿಕ ಕಾಲ್ಪನಿಕ ಕಥನ

ಡಾ. ಜೆ. ಬಾಲಕೃಷ್ಣ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು (ನಿವೃತ್ತ)
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಹತ್ತೊಂಬತ್ತನೇ ಶತಮಾನದ ಪ್ರಾರಂಭದಲ್ಲಿ ರಾಬರ್ಟ್ ವಾಲ್ಟನ್ ಎಂಬ ಸಾಹಸಿ ನಾವಿಕ ತನ್ನ ಬದುಕಿನ ಧ್ಯೇಯವಾದ ಉತ್ತರ ಧ್ರುವವನ್ನು ತಲುಪಲು ಹೊರಟಿರುತ್ತಾನೆ. ಆತ ತನ್ನ ಪಯಣ ಮತ್ತು ಸಾಹಸಗಳ ಬಗೆಗೆ ತನ್ನ ಸೋದರಿ ಸೆವೆಲ್‌ಳಿಗೆ ನಿಯತವಾಗಿ ಪತ್ರ ಬರೆಯುತ್ತಿರುತ್ತಾನೆ. ರಷಿಯಾದ ಹಿಮಾವೃತ ಸಾಗರದಲ್ಲಿ ತನ್ನ ಪಯಣ ಮುಂದುವರಿಸಿದ್ದಾಗ ಭಯಂಕರ ಚಳಿ ಮತ್ತು ಹಿಮದಲ್ಲಿ ಒಬ್ಬ ಬಸವಳಿದ ಹಾಗೂ ಸಾವಿನಂಚಿನಲ್ಲಿದ್ದ, ಬದುಕಿನಲ್ಲಿ ತೀರಾ ಹತಾಶನಾದಂತಹ ವ್ಯಕ್ತಿಯೊಬ್ಬ ದೊರೆತು ಆತನನ್ನು ಕಾಪಾಡುತ್ತಾನೆ. ಆತ 'ತನ್ನಿಂದ ಓಡಿ ಹೋಗಿರುವ ರಕ್ಕಸನೊಬ್ಬನನ್ನು' ಅರಸುತ್ತಿರುವುದಾಗಿ ತಿಳಿಸುತ್ತಾನೆ. ಆ ಅತ್ಯಂತ ಪ್ರತಿಕೂಲ ವಾತಾವರಣದಲ್ಲಿ ರಕ್ಕಸನನ್ನು ಅರಸುತ್ತ ಹೊರಟ ವ್ಯಕ್ತಿಯೇ ವಾಲ್ಟರ್ ಫ್ರಾಂಕೆನ್‌ಸ್ಟೈನ್. ಈ ಘಟನೆ ಬರುವುದು ೧೮೧೮ರ 'ಫ್ರಾಂಕೆನ್‌ಸ್ಟೈನ್ ಆರ್ ದ ಮಾಡರ್ನ್ ಪ್ರೊಮೆಥೆಯೆಸ್' ಕಾದಂಬರಿಯಲ್ಲಿ. ಫ್ರಾಂಕೆನ್‌ಸ್ಟೈನ್ ಎನ್ನುವ ಪದ ಇಂದು ಒಂದು ರೂಪಕವಾಗಿ ವಿಜ್ಞಾನ ಜಗತ್ತಿನಲ್ಲಿ ಅತ್ಯಂತ ಜನಪ್ರಿಯವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಶ್–ಕನ್ನಡ ನಿಘಂಟಿನಲ್ಲಿ 'ಫ್ರಾಂಕೆನ್‌ಸ್ಟೈನ್' (ಈಡಿಚಿಟಿ–ಇಜಟಿಣಜುಟಿ) ಪದದ ಅರ್ಥ 'ಒಂದು ಭಯಂಕರ ಭೂತ. ಪೆಡಂಭೂತ; ಸೃಷ್ಟಿಸಿದವನಿಗೇ ಎದುರಿಸಲು ಕಷ್ಟವಾದ ಯಾವುದೇ ಸಮಸ್ಯೆ' ಎಂದಿದೆ. ಇಂದು 'ಫ್ರಾಂಕೆನ್‌ಸ್ಟಿನಿಯನ್' (Frankensteinian) ಎನ್ನುವ ಪದ ಗುಣವಾಚಕವಾಗಿಯೂ ಬಳಕೆಯಲ್ಲಿದೆ. ಆದರೆ ಫ್ರಾಂಕೆನ್‌ಸ್ಟೈನ್ ಅಥವಾ ಫ್ರಾಂಕೆನ್‌ಸ್ಟಿನಿಯನ್ ಎನ್ನುವ ಪದ ವಿಜ್ಞಾನವನ್ನು ಮತ್ತು ಅದರ ಸಾಧನೆಯನ್ನು ಹೆಮ್ಮೆಯಿಂದ ಹೊಗಳುವ ಪದವಲ್ಲ, ಬದಲಿಗೆ ವಿಜ್ಞಾನವನ್ನು ಟೀಕಿಸುವ, ಅದರಿಂದ ಎಂಥದೋ ಆಪತ್ತು ಉಂಟಾಗುತ್ತದೆ ಎಂಬುದನ್ನು ಸೂಚಿಸುವ ಪದವಾಗಿ ಬಳಸುತ್ತಾರೆ. ವಿಜ್ಞಾನದಿಂದಾಗುವ ಕೆಡಕಿಗೆ ಹಾಗೂ ಅದರಿಂದ ಮನುಕುಲಕ್ಕಾಗುವ ತೊಂದರೆಗಳಿಗೆ ಫ್ರಾಂಕೆನ್‌ಸ್ಟಿನಿಯನ್ ವಿಜ್ಞಾನವೆನ್ನುತ್ತಾರೆ. ಇದರ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕಾದಲ್ಲಿ 'ಫ್ರಾಂಕೆನ್‌ಸ್ಟೈನ್ ಆರ್ ದ ಮಾಡರ್ನ್ ಪ್ರೊಮೆಥೆಯೆಸ್' ಕಾದಂಬರಿಯನ್ನು ಹಾಗೂ ಅದರ ಕರ್ತೃವನ್ನು ಅರಿತುಕೊಳ್ಳಬೇಕಾದುದು ಅತ್ಯವಶ್ಯಕ.

ಫ್ರಾಂಕೆನ್‌ಸ್ಟೈನ್ ಕಾದಂಬರಿ ಆಧುನಿಕ ಸಾಹಿತ್ಯದ ಪ್ರಮುಖ ಪಠ್ಯಗಳಲ್ಲೊಂದಾಗಿದೆ. ಅದರ ಕರ್ತೃ ಮೇರಿ ವೊಲ್‌ಸ್ಟೋನ್‌ಕ್ರಾಫ್ಟ್ ಶೆಲ್ಲಿ ಹಾಗೂ ಅದರ ರಚನೆಯಾಗಿದ್ದು ೧೮೧೮ರಲ್ಲಿ, ಇಂದಿಗೆ ೧೯೭ ವರ್ಷಗಳ ಹಿಂದೆ! ಮೇರಿ ಶೆಲ್ಲಿ ಖ್ಯಾತ ಆಂಗ್ಲ ಕವಿ ಪರ್ಸಿ ಶೆಲ್ಲಿಯ ಪತ್ನಿ ಹಾಗೂ ಫ್ರಾಂಕೆನ್‌ಸ್ಟೈನ್ ರಚಿಸಿದಾಗ ಆಕೆಯ ವಯಸ್ಸು ಕೇವಲ ೧೯ ವರ್ಷಗಳು! ಪ್ರಕಟಿಸಿದ ಮೂರು ವರ್ಷಗಳ ನಂತರ ಆಕೆ ಅದನ್ನು ಪರಿಷ್ಕರಿಸಿದಳು. ವೈಜ್ಞಾನಿಕ ಕಾಲ್ಪನಿಕ ಕಥನ (Science Fiction) ಸಾಹಿತ್ಯವನ್ನು ನಿರ್ಧರಿಸುವ ತರ್ಕದ ಆಧಾರದ ಮೇಲೆ ಪರಿಗಣಿಸುವುದಾದಲ್ಲಿ ಫ್ರಾಂಕೆನ್‌ಸ್ಟೈನ್ ಮೊಟ್ಟಮೊದಲ ವೈಜ್ಞಾನಿಕ ಕಾಲ್ಪನಿಕ ಕಥನ ಸಾಹಿತ್ಯವೆಂದು ಪರಿಗಣಿಸಬಹುದು. ಅದು ಆಕೆಯ ಮೊಟ್ಟಮೊದಲ ಕೃತಿ ಹಾಗೂ ಅದರಲ್ಲಿ ಆಕೆಯ ವಯಸ್ಸನ್ನೂ ಮೀರಿದ ಅದ್ಭುತ ಕಾಲ್ಪನಿಕ ಜಗತ್ತಿದೆ. ಬಹುಶಃ ಆಕೆಯ ಉದ್ದೇಶ ವಿಜ್ಞಾನದಿಂದಾಗಬಹುದಾದ ಕೆಡಕನ್ನು ಬಿಂಬಿಸುವುದಾಗಿರಲಿಲ್ಲ. ಫ್ರಾಂಕೆನ್‌ಸ್ಟೈನ್ ಕೃತಿಯಲ್ಲಿನ ಕೇಡನ್ನು ಬಗೆಯುವ 'ರಕ್ಕಸ'ನ ಹೆಸರು ಫ್ರಾಂಕೆನ್‌ಸ್ಟೈನ್ ಆಗಿರುವುದಿಲ್ಲ, ಬದಲಿಗೆ ಅದರ ಸೃಷ್ಟಿಕರ್ತನ ಹೆಸರು ವಿಕ್ಟರ್ ಫ್ರಾಂಕೆನ್‌ಸ್ಟೈನ್ ಎಂದಾಗಿರುತ್ತದೆ. ಆದರೆ ಇಂದು ಸೃಷ್ಟಿಕಾರನ ಹೆಸರೇ ಕೇಡನ್ನು ಬಗೆಯುವುದರ ಸೂಚಕವಾಗಿ ಬಳಕೆಯಲ್ಲಿದೆ.

ಮೇರಿ ಶೆಲ್ಲಿ ಜನಿಸಿದ್ದು ೧೭೯೭ರಲ್ಲಿ. ಆಕೆಯ ತಂದೆತಾಯಿಗಳು ಆಗಿನ ಖ್ಯಾತ ಮತ್ತು ಕ್ರಾಂತಿಕಾರಿ ವಿಚಾರವಾದಿ ಲೇಖಕರಾಗಿದ್ದ ಮೇರಿ ವೂಲ್‌ಸ್ಟೋನ್‌ಕ್ರಾಫ್ಟ್ ಮತ್ತು ವಿಲಿಯಂ ಗಾಡ್ವಿನ್. ಆಕೆಯ ತಾಯಿ ಮಗುವಿಗೆ ಜನ್ಮ ನೀಡಿದ ಕೆಲದಿನಗಳಲ್ಲೇ ತೀರಿಕೊಂಡಳು. ಮಗುವನ್ನು ತಂದೆಯೇ ಸಾಕಿದರು ಸಹ ಆಕೆಗೆ ತಾಯಿ ಮತ್ತು ತಂದೆಯರ ಇಬ್ಬರ ಪ್ರೀತಿ ಪ್ರೇಮದ ಕೊರತೆಯಿತ್ತು. ಆ ಕೊರತೆ ಆಕೆಯ ತಂದೆ ಮತ್ತೊಂದು ಮದುವೆಯಾದ ಮೇಲೆ ಮತ್ತಷ್ಟು ಹೆಚ್ಚಾಯಿತು. ತನ್ನ ತಾಯಿಯ ಸ್ಥಾನವನ್ನು ಮತ್ತಾರೂ ಪಡೆಯುವುದು ಆಕೆಗೆ ಇಷ್ಟವಿರಲಿಲ್ಲ. ಆಕೆಯ ಅಸಹನೆಯಿಂದ ಬೇಸತ್ತ ಆಕೆಯ ತಂದೆ ಮೇರಿಯನ್ನು ಬೇರೆಯ ಊರಿಗೆ ಕಳುಹಿಸಿದ. ಮೇರಿ ಶೆಲ್ಲಿ ಆಗಿನ ಕಾಲದ ಹುಡುಗಿಯರಿಗೆ ದೊರಕುವುದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದಿದ್ದಳು. ಮೇರಿ ತನ್ನ ಹದಿನೇಳನೇ ವಯಸ್ಸಿನಲ್ಲಿಯೇ ಖ್ಯಾತ ಆಂಗ್ಲ ಕವಿ ಹಾಗೂ ಅಷ್ಟೊತ್ತಿಗಾಗಲೇ ಮದುವೆಯೂ ಆಗಿದ್ದ ಪರ್ಸಿ ಬೈಷೆ ಶೆಲ್ಲಿಯೊಂದಿಗೆ ಓಡಿಹೋದಳು. ಆಗಲೂ ಮೇರಿಯ ತಂದೆ ಆಕೆಯನ್ನು ತಿರಸ್ಕರಿಸಿದ. ಆಕೆಗೆ ಜನಿಸಿದ ನಾಲ್ಕು ಮಕ್ಕಳಲ್ಲಿ ಒಂದು ಮಗು ಮಾತ್ರ ಬದುಕುಳಿಯಿತು ಹಾಗೂ ೧೮೨೨ರಲ್ಲಿ ಆಕೆಯ ಪತಿ ಪರ್ಸಿ ಶೆಲ್ಲಿ ನೀರಿನಲ್ಲಿ ಮುಳುಗಿ ಮರಣಿಸಿದ. ಆಕೆ ಫ್ರಾಂಕೆನ್‌ಸ್ಟೈನ್ ನಂತರವೂ ಹಲವಾರು ಕೃತಿಗಳನ್ನು ರಚಿಸಿದರೂ ಆಕೆಯ ಸ್ಮರಣೆ ಇಂದಿಗೂ ಇರುವುದು ಫ್ರಾಂಕೆನ್‌ಸ್ಟೈನ್‌ನಿಂದಾಗಿಯೇ. ಮೇರಿ ಶೆಲ್ಲಿ ೧೮೫೧ರಲ್ಲಿ ಮರಣಿಸಿದಳು.

ಫ್ರಾಂಕೆನ್‌ಸ್ಟೈನ್ ಮೊದಲು ಪ್ರಕಟವಾಗಿದ್ದು ಅನಾಮಧೇಯವಾಗಿ. ಅದರ ಜನಪ್ರಿಯತೆಯ ನಂತರ ಹಲವಾರು ಜನ ತಾವೇ ಅದರ ಕೃತಿಕಾರರೆಂದು ಮುಂದೆಬಂದರು. ಆನಂತರವೇ ಅದರ ಕರ್ತೃವನ್ನು ಬಹಿರಂಗಪಡಿಸಲಾಯಿತು. ನಂತರದ ಪ್ರಕಟಣೆಗಳಲ್ಲಿ ಆಕೆ ಹಲವಾರು ಬದಲಾವಣೆಗಳನ್ನು ಮಾಡಿದಳು ಹಾಗೂ ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಅಷ್ಟೊಂದು 'ಭಯಂಕರ' ಕಾದಂಬರಿಯನ್ನು ಆಕೆಗೆ ಹೇಗೆ ಬರೆಯಲು ಸಾಧ್ಯವಾಯಿತು ಎನ್ನುವ ಹಲವಾರು ಪ್ರಶ್ನೆಗಳಿಗೆ ಆಕೆ ಉತ್ತರಗಳನ್ನು ಸಹ ನೀಡಿದ್ದಳು. ಆಕೆಯನ್ನು ಕಾಡುತ್ತಿದ್ದ ಒಂದು ಭಯಾನಕ ಕನಸೇ ಆ ಕೃತಿಗೆ ಸ್ಫೂರ್ತಿ ಎಂದಿದ್ದಾಳೆ. ಆಕೆ ಆಗ ಓದುತ್ತಿದ್ದ ಕೃತಿಗಳಾದ ಜಾನ್ ಮಿಲ್ಟನ್ನನ 'ಪ್ಯಾರಡೈಸ್ ಲಾಸ್ಟ್' (ಈ ಪುಸ್ತಕವನ್ನು ಆಕೆಯ ಫ್ರಾಂಕೆನ್‌ಸ್ಟೈನ್ ಕೃತಿಯಲ್ಲಿನ 'ರಕ್ಕಸ' ಸಹ ಓದುತ್ತಾನೆ), ಶೇಕ್ಸ್‌ಪಿಯರ್‌ನ ಹಲವಾರು ಕೃತಿಗಳು ಹಾಗೂ ಸರ್ವಾಂಟಿಸ್‌ನ 'ಡಾನ್ ಕ್ವಿಹೋತೆ'ಯ ಎಳೆಗಳು ತನ್ನ ಕೃತಿಯಲ್ಲಿ ಕಂಡುಬರುತ್ತವೆಂದು ಆಕೆಯೇ ಹೇಳಿದ್ದಾಳೆ. ೧೮೧೮ರಲ್ಲಿ ಫ್ರಾಂಕೆನ್‌ಸ್ಟೈನ್ ಕೃತಿ ಪ್ರಕಟವಾದಾಗ ಹಲವಾರು ಪತ್ರಿಕೆಗಳು ಅದನ್ನು ಟೀಕಿಸಿದವು ಹಾಗೂ ಅದೊಂದು ಆಧಾರ್ಮಿಕ ಕೃತಿ, ಅದರ ಲೇಖಕರು ಆ ರೀತಿಯ ಕೃತಿ ಬರೆದದ್ದಕ್ಕೆ ಕ್ಷಮಾಪಣೆ ಕೇಳಬೇಕು ಎಂದಿದ್ದವು. ಮೇರಿ ಶೆಲ್ಲಿಯ ದುರಂತ ಬಾಲ್ಯದ, ಪ್ರೀತಿ ಪ್ರೇಮದ ಕೊರತೆಯ ಬದುಕನ್ನು ಅಧ್ಯಯನ ಮಾಡಿರುವ ಹಲವಾರು ವಿದ್ವಾಂಸರು ಫ್ರಾಂಕೆನ್‌ಸ್ಟೈನ್ ಆಕೆಯ 'ಆತ್ಮಕತೆ' ಎನ್ನುತ್ತಾರೆ. ಆಕೆ ಆ ಕೃತಿಯ ರಚನೆಗೆ ಕೈ ಹಾಕುವುದಕ್ಕೂ ಒಂದು ಹಿನ್ನೆಲೆ ಇದೆ. ಜಿನೀವಾದ ಚಳಿ ಮತ್ತು ಮಳೆಗೆ ಬೇಸತ್ತ ಗೆಳೆಯರ ಗುಂಪೊಂದು ಒಮ್ಮೆ ಜೊತೆಗೂಡಿದ್ದಾಗ ಬೇಸರ ಹಾಗೂ ಚಳಿ ನೀಗಿಸುವಂತಹ ದೆವ್ವದ ಕತೆಯೊಂದನ್ನು ಏಕೆ ಬರೆಯಬಾರದು ಎಂದು ಲಾರ್ಡ್ ಬೈರನ್ ಸೂಚಿಸುತ್ತಾನೆ. ಅದರಂತೆ ಆ ಗುಂಪಿನಲ್ಲಿದ್ದ ಮೇರಿ ಶೆಲ್ಲಿ, ಪರ್ಸಿ ಶೆಲ್ಲಿ ಹಾಗೂ ಇತರರು ಬರೆಯಲು ಆರಂಭಿಸುತ್ತಾರೆ. ಅದರ ಫಲಿತಾಂಶವಾಗಿಯೇ ಮೇರಿ ಫ್ರಾಂಕೆನ್‌ಸ್ಟೈನ್ ಬರೆದದ್ದು ಎನ್ನುತ್ತಾರೆ.

ಫ್ರಾಂಕೆನ್‌ಸ್ಟೈನ್ ಕೃತಿಯ ಸಾರಾಂಶ ಇಷ್ಟು: ವಿಕ್ಟರ್ ಫ್ರಾಂಕೆನ್‌ಸ್ಟೈನ್ ಎಂಬಾತ ಜಿನೀವಾದಲ್ಲಿ ಹುಟ್ಟಿ ಬೆಳೆದು ಜರ್ಮನಿಯ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಾನೆ. ಒಂದು ದಿನ ತಾನೇ ಸ್ವತಃ ಏಕೆ ಜೀವ ಸೃಷ್ಟಿ ಮಾಡಬಾರದು? ತಾನೇ ಏಕೆ ದೇವರಂತಾಗಬಾರದು? ಎಂದು ಆಲೋಚಿಸಿ ಸ್ಮಶಾನದಿಂದ ಶವಗಳನ್ನು ತಂದು ಬೇರೆ ಬೇರೆ ಶವಗಳಿಂದ ಅಂಗಾಂಗಗಳನ್ನು ತೆಗೆದು ಒಂದು ಮಾನವಾಕೃತಿಯನ್ನು ರಚಿಸುತ್ತಾನೆ. ಹೇಗೂ ಮಾಡುತ್ತಿದ್ದೇನೆ ಇರಲಿ ಎಂದು ಸಾಧಾರಣ ಮನುಷ್ಯರಿಗಿಂತ ದೊಡ್ಡ ಗಾತ್ರದ ವ್ಯಕ್ತಿಯನ್ನೇ ರಚಿಸುತ್ತಾನೆ. ತನ್ನ ಸೃಷ್ಟಿ ಅದ್ಭುತವಾಗಿರುತ್ತದೆ ಹಾಗೂ ತಾನು ಹೇಳಿದಂತೆ ಕೇಳುತ್ತದೆ ಎಂಬ ಭಾವನೆಯಿಂದ ಅದಕ್ಕೆ ಜೀವವನ್ನೂ ನೀಡುತ್ತಾನೆ. ಆದರೆ ಉತ್ಸಾಹದ ಆತುರದಿಂದ ನಿರ್ಮಿಸಿದ ಆ ಜೀವ ಅತ್ಯಂತ ಕುರೂಪ ಹಾಗೂ ವಿಕಾರವಾಗಿರುತ್ತದೆ. ವಿಕ್ಟರ್ ಫ್ರಾಂಕೆನ್‌ಸ್ಟೈನ್‌ನಿಗೆ ತನ್ನ ಸೃಷ್ಟಿಯ ಬಗ್ಗೆಯೇ ಹೇಸಿಗೆಯಾಗಿ ಅದರ ಭೀಭತ್ಸ ರೂಪದಿಂದ ತಲ್ಲಣಗೊಂಡು ಅದನ್ನು ತನ್ನಷ್ಟಕ್ಕೇ ಬಿಟ್ಟು ಓಡಿಹೋಗುತ್ತಾನೆ. ಆ ವಿಲಕ್ಷಣ ಅನುಭವದಿಂದ ಕಾಯಿಲೆಯೂ ಬೀಳುತ್ತಾನೆ.

ಹೊಸದಾಗಿ ಸೃಷ್ಟಿಯಾದ 'ರಕ್ಕಸ' ಎಲ್ಲಿಗೆ ಹೋದರೂ ಜನ ಅವನ ಆಕಾರ ರೂಪಕ್ಕೆ ಹೆದರಿ ಅವನಿಗೆ ಕಲ್ಲುಗಳಿಂದ ಹೊಡೆಯುತ್ತಾರೆ ಹಾಗೂ ಅವನ ಬದುಕು ದುರ್ಬರ ಮಾಡಿಬಿಡುತ್ತಾರೆ. ತನ್ನ ಸೃಷ್ಟಿಕರ್ತನೇ ತನ್ನನ್ನು ತಿರಸ್ಕರಿಸಿರುವಾಗ ಬೇರೆಯವರು ತಾನೆ ಹೇಗೆ ತನ್ನನ್ನು ಸ್ವೀಕರಿಸಲು ಸಾಧ್ಯ ಎಂದು ಓಡಿ ಹೋಗಿರುವ ತನ್ನ ಸೃಷ್ಟಿಕರ್ತನಾದ ವಿಕ್ಟರ್ ಫ್ರಾಂಕೆನ್‌ಸ್ಟೈನ್ ವಾಪಸ್ಸು ಬರುವಂತೆ ಮಾಡಲು ಆ 'ರಕ್ಕಸ' ಮೊದಲಿಗೆ ಫ್ರಾಂಕೆನ್‌ಸ್ಟೈನ್‌ನ ತಮ್ಮನಾದ ವಿಲಿಯಂನನ್ನು ಕೊಂದು ಅದರ ಅಪವಾದವನ್ನು ಅವನನ್ನು ನೋಡಿಕೊಳ್ಳುತ್ತಿದ್ದ ಜಸ್ಟೀನ್ ಎಂಬಾಕೆಯ ಮೇಲೆ ಬರುವಂತೆ ಮಾಡುತ್ತಾನೆ. ಆ ಅಪರಾಧಕ್ಕಾಗಿ ಜಸ್ಟೀನ್‌ಳನ್ನು ಗಲ್ಲಿಗೇರಿಸಿ ಕೊಲ್ಲಲಾಗುತ್ತದೆ. ತನ್ನ ತಮ್ಮನ ಹಾಗೂ ಜಸ್ಟೀನ್‌ಳ ಸಾವಿಗೆ ತಾನೇ ಕಾರಣವೆಂಬಂತೆ ಫ್ರಾಂಕೆನ್‌ಸ್ಟೈನ್ ತಹತಹಿಸುತ್ತಾನೆ. ಹಿಂದಿರುಗಿ ಬಂದ ಫ್ರಾಂಕೆನ್‌ಸ್ಟೈನ್‌ನನ್ನು ತನ್ನನ್ನು ಪ್ರೀತಿಸಿ ಸ್ವೀಕರಿಸುವಂತೆ 'ರಕ್ಕಸ' ಪರಿಪರಿಯಾಗಿ ಕೇಳಿಕೊಳ್ಳುತ್ತಾನೆ. ಆದರೆ ಫ್ರಾಂಕೆನ್‌ಸ್ಟೈನ್ ಅವನ ಮುಖವನ್ನೂ ನೋಡಲೂ

ಹೇಸಿಕೊಳ್ಳುತ್ತಾನೆ. ಆ 'ರಕ್ಕಸ' ಜನರಿಗೆ ಸಹಾಯಮಾಡಲು ಹೋದರೂ ಅವರು ಅವನನ್ನು ಹೊಡೆದು ಬಡೆದು ದೂರ ಅಟ್ಟುತ್ತಾರೆ. ಕಾಡಿನಲ್ಲಿ ಅವಿತು ಜನರನ್ನು ನೋಡಿ ಅವರ ನಡೆನುಡಿಗಳನ್ನು ಕಲಿಯುತ್ತಾನೆ. ಅವನಿಗೊಂದು ಪುಸ್ತಕದ ರಾಶಿ ಸಿಕ್ಕಿ ಓದು ಸಹ ಕಲಿಯುತ್ತಾನೆ. ಒಮ್ಮೆ ಭೇಟಿಯಾಗುವ ಫ್ರಾಂಕೆನ್‌ಸ್ಟೈನ್‌ನಿಗೆ ತನಗೆ ಜೊತೆಯಾಗಿ ಮತ್ತೊಂದು ಹೆಣ್ಣನ್ನು ರಚಿಸಿ ಅದಕ್ಕೆ ಜೀವನೀಡಿ ಕೊಡುವಂತೆ ಕೇಳಿಕೊಳ್ಳುತ್ತಾನೆ. ತಾವಿಬ್ಬರು ದೂರ ಕಾಡಿಗೆ ಹೋಗಿ ಯಾರ ಜನರ ತಂಟೆಗೂ ಬರದಂತೆ ಬದುಕುತ್ತೇವೆ ಎನ್ನುತ್ತಾನೆ. ಆ ಪ್ರಯತ್ನಕ್ಕೂ ಕೈ ಹಾಕುವ ವಿಕ್ಟರ್ ಫ್ರಾಂಕೆನ್‌ಸ್ಟೈನ್ ಆ 'ರಕ್ಕಸ' ದಂಪತಿಗಳ ಸಂತತಿ ಇನ್ನೆಷ್ಟು ಭಯಾನಕವಾಗಿರಬಹುದೆಂದು ಹೆದರಿ ಒಂದು ಸೃಷ್ಟಿ ಕಾರ್ಯದಿಂದಲೇ ಸಾಕಷ್ಟು ಪಾಠ ಕಲಿತಿರುವ ಫ್ರಾಂಕೆನ್‌ಸ್ಟೈನ್ ತನ್ನ ಕಾರ್ಯವನ್ನು ಅರ್ಧಕ್ಕೇ ನಿಲ್ಲಿಸುತ್ತಾನೆ. ಅದರಿಂದ ರೋಸಿದ 'ರಕ್ಕಸ' ವಿಕ್ಟರ್ ಫ್ರಾಂಕೆನ್‌ಸ್ಟೈನ್‌ನ ಪತ್ನಿಯಾದ ಎಲಿಜಬೆತ್‌ಳನ್ನು ಅವರು ಮದುವೆಯಾದ ಮೊದಲ ರಾತ್ರಿಯೇ ಕೊಲ್ಲುತ್ತಾನೆ. ತನ್ನನ್ನು ಸೃಷ್ಟಿಸಿ ತನ್ನ ಬದುಕು ದುಸ್ತರ ಹಾಗೂ ಹೀನಾಯವಾಗುವಂತೆ ಮಾಡಿದ ಫ್ರಾಂಕೆನ್‌ಸ್ಟೈನ್ ಮೇಲೆ ಸೇಡು ತೀರಿಸಿಕೊಳ್ಳಲು ಹಾಗೂ ಅವನ ಬದುಕನ್ನೂ ಸಹ ಅದೇ ರೀತಿ ದುಸ್ತರ ಮಾಡುತ್ತೇನೆಂದು ತೀರ್ಮಾನಿಸುವ 'ರಕ್ಕಸ' ವಿಕ್ಟರ್ ಫ್ರಾಂಕೆನ್‌ಸ್ಟೈನ್‌ನ ಗೆಳೆಯನನ್ನು ಕೊಲೆಮಾಡುತ್ತಾನೆ. ತನ್ನ ಸೃಷ್ಟಿಯೇ ತನ್ನ ಮೇಲೆ ತಿರುಗಿಬಿದ್ದು ತನ್ನ ಬದುಕನ್ನೇ ಅತ್ಯಂತ ಯಾತನಾಮಯವನ್ನಾಗಿ ಮಾಡಿದ ಆ 'ರಕ್ಕಸ ಸೃಷ್ಟಿ'ಯನ್ನು ನಾಶಮಾಡಲು ಫ್ರಾಂಕೆನ್‌ಸ್ಟೈನ್ ಅದನ್ನರಸಿ ಹೋಗುತ್ತಾನೆ. ಆ ಸಮಯದಲ್ಲಿಯೇ ಆತ ರಾಬರ್ಟ್ ವಾಲ್ಟನ್‌ನಿಗೆ ಉತ್ತರ ಧ್ರುವದ ಹಿಮಭರಿತ ಸ್ಥಳದಲ್ಲಿ ದೊರಕುವುದು. ಕೊನೆಗೆ ವಿಕ್ಟರ್ ಫ್ರಾಂಕೆನ್‌ಸ್ಟೈನ್ ತನ್ನ ಸೃಷ್ಟಿಗೆ ತಾನೇ ಬಲಿಯಾಗುತ್ತಾನೆ.

ಮೇರಿ ಶೆಲ್ಲಿಯ ಫ್ರಾಂಕೆನ್‌ಸ್ಟೈನ್ ಕೃತಿ ಇಂದಿಗೂ ನಮ್ಮ 'ವೈಜ್ಞಾನಿಕ ಸಂಸ್ಕೃತಿ'ಯ ಭಾಗವಾಗಿ ಉಳಿದುಕೊಂಡುಬಂದಿದೆ. ಆ ಕೃತಿ ರಚಿಸಿ ೧೯೭ ವರ್ಷಗಳೇ ಆಗಿದ್ದರೂ ಆ ಕೃತಿಯ ಶೀರ್ಷಿಕೆ ನಮ್ಮ ನುಡಿಗಟ್ಟಿನ ಭಾಗವಾಗಿಹೋಗಿದೆ. ಆ ಕೃತಿಯನ್ನು ಆಧರಿಸಿ ಹಲವಾರು ಚಲನಚಿತ್ರಗಳು ಬಂದಿವೆ. ಆದರೆ ಅವು ಆ ಕೃತಿಯ ಮೂಲತತ್ವವನ್ನು ಅರಿಯಲಾಗದೆ ಕೇವಲ 'ಹಾರರ್' ಸಿನೆಮಾಗಳಾಗಿವೆ. ಫ್ರಾಂಕೆನ್‌ಸ್ಟೈನ್ ಕೃತಿ ಇಂದು ವಿಜ್ಞಾನ ಜಗತ್ತಿನಲ್ಲಿ ಮಾನವನ ಸ್ಥಾನವನ್ನು ಪುನಃ ಪುನಃ ನೆನಪಿಸುವ ಸಾಧನವಾಗಿದೆ. ನಿರಂತರವಾಗಿ ವಿಸ್ತರಿತವಾಗುತ್ತಿರುವ ನಮ್ಮ ವೈಜ್ಞಾನಿಕ ಶಕ್ತಿಯನ್ನು ನಾವು ಹೇಗೆ ಬಳಸಿಕೊಳ್ಳಬೇಕು? ಸಾವು ಮತ್ತು ಬದುಕಿನ ಮೂಲ ಕೀಲಿ ನಮ್ಮ ಕೈಗೆ ದೊರಕಿದ ತಕ್ಷಣ ನಾವು ಅದನ್ನು ಹೇಗೆ ಬಳಸಿಕೊಳ್ಳಬೇಕು? ಹೊಸ ವೈಜ್ಞಾನಿಕ ಸಂಶೋಧನೆಗಳಿಗೆ, ವಿಶೇಷವಾಗಿ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಫ್ರಾಂಕೆನ್‌ಸ್ಟೈನ್ ಪದದ ಬಳಕೆ ಎಂಥದೋ ಮುನ್ನೆಚ್ಚರಿಕೆ ನೀಡುವಂತೆ ಬಳಸಲಾಗುತ್ತಿದೆ. ಜೈವಿಕ ತಂತ್ರಜ್ಞಾನವನ್ನು ಫ್ರಾಂಕೆನ್‌ಸ್ಟೈನ್ ವಿಜ್ಞಾನವೆಂದೂ ಕರೆಯುವವರಿದ್ದಾರೆ. ಒಂದು ಸಸ್ಯದ ಅಥವಾ ಪ್ರಾಣಿಯ ವಂಶವಾಹಿಯನ್ನು (ಜಿಜಟಿಜ) ಮತ್ತೊಂದು ಸಸ್ಯ ಅಥವಾ ಪ್ರಾಣಿಗೆ ವರ್ಗಾಯಿಸಿ 'ಹೊಸ ಜೀವ'ದ ಸೃಷ್ಟಿಗೆ ಕಾರಣವಾಗುವುದನ್ನು ಫ್ರಾಂಕೆನ್‌ಸ್ಟೈನ್ ಜೀವ ಸೃಷ್ಟಿಯೆನ್ನುತ್ತಿದ್ದಾರೆ. ಆ ಹೊಸಜೀವಗಳು ಪರಿಸರದಲ್ಲಿ ಪ್ರತಿಕೂಲ ಪರಿಣಾಮ ಉಂಟುಮಾಡಿ 'ಸೃಷ್ಟಿಕರ್ತ'ನಿಗೇ ಕೆಡುಕಾಗುತ್ತದೆನ್ನುವವರೂ ಇದ್ದಾರೆ. ಆನುವಂಶಿಕವಾಗಿ ಮಾರ್ಪಡಿಸಿದ ಬೆಳೆಗಳ (GM Crops- Genetically modified crops) ಫಸಲನ್ನು ಅಥವಾ ಆಹಾರವನ್ನು 'ಫ್ರಾಂಕೆನ್‌ಸ್ಟೈನ್ ಆಹಾರ'ವೆಂದು ಪರಿಸರವಾದಿಗಳು ಕರೆಯುತ್ತಿದ್ದಾರೆ. ಶರವೇಗದಲ್ಲಿ ವಿಜ್ಞಾನದ ಪ್ರಗತಿ ದಾಪುಗಾಲು ಹಾಕುತ್ತಿರುವ ಈ ವೈಜ್ಞಾನಿಕ ಯುಗದಲ್ಲಿ ಮೇರಿ ಶೆಲ್ಲಿಯ ಫ್ರಾಂಕೆನ್‌ಸ್ಟೈನ್ ಕೃತಿಯನ್ನು ಆಧಾರವಾಗಿರಿಸಿಕೊಂಡಿರುವ, 'ನೈತಿಕತೆ'ಯ ಪ್ರತಿಪಾದಕರಾಗಿರುವವರು ಹಲವಾರು ಪ್ರಶ್ನೆಗಳನ್ನು ಎದುರಿಗಿಡುತ್ತಿದ್ದಾರೆ: ವಿಜ್ಞಾನ ಮತ್ತು ತಂತ್ರಜ್ಞಾನದ ಅಪಾಯಗಳು ನಿಜವಲ್ಲವೆ? ವಿಜ್ಞಾನದ ಪ್ರಗತಿಗೆ ಮಿತಿಯೆಂಬುದಿರಬೇಕಲ್ಲವೆ? ಸ್ಟೆಮ್ ಸೆಲ್ ಸಂಶೋಧನೆ, ಮಾನವ ಕ್ಲೋನಿಂಗ್‌ಗಳನ್ನು ಮಾಡಬೇಕೆ? ಕೃಷಿಯಲ್ಲಿ ಪ್ರಗತಿ ಸಾಧಿಸಲು ಮತ್ತು ಬೆಳೆಗಳ ಇಳುವರಿ ಹೆಚ್ಚಿಸಲು ಅವುಗಳನ್ನು ಆನುವಂಶಿಕವಾಗಿ ಬದಲಾವಣೆ ಮಾಡುವುದು ಸರಿಯೆ? ಲಕ್ಷಾಂತರ ವರ್ಷಗಳ ಜೀವ ವಿಕಾಸದ ಪ್ರತಿಫಲವಾಗಿರುವ ಜೀವರಾಶಿಯಲ್ಲಿ ಮಾನವ ತತ್‌ಕ್ಷಣ ಬದಲಾವಣೆಗಳನ್ನು ತರುವುದು ಅಪಾಯಕ್ಕೆ ಆಹ್ವಾನ ನೀಡಿದಂತಲ್ಲವೆ? ಇವೇ ಮುಂತಾದವು.

ಜೈವಿಕ ತಂತ್ರಜ್ಞಾನದ ಕಿಂಚಿತ್ತೂ ಅರಿವಿಲ್ಲದ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಮೇರಿ ಶೆಲ್ಲಿ ಈ ಕೃತಿ ರಚಿಸಿದಾಗ ಅದು ಈಗ ಉಂಟುಮಾಡುತ್ತಿರುವ ಪರಿಣಾಮವನ್ನು ಆಕೆ ಊಹಿಸಿರಲೂ ಸಾಧ್ಯವಿಲ್ಲ. ಆಕೆ ತನ್ನ ಕಾದಂಬರಿಯಲ್ಲಿ ವಿಕ್ಟರ್ ಫ್ರಾಂಕೆನ್‌ಸ್ಟೈನ್‌ನನ್ನು ಎರಡು ಕಾರಣಗಳಿಗೆ ಶಿಕ್ಷಿಸಿರುವಂತೆ ತೋರುತ್ತದೆ. ಮೊದಲನೆಯದು ಅವನು ದುರಹಂಕಾರಿ ಎಂಬ ಕಾರಣಕ್ಕಾಗಿ. ಆತ ತಾನೇ ಸೃಷ್ಟಿಕರ್ತ, ತನ್ನಿಂದ ಎಲ್ಲವೂ ಸಾಧ್ಯ ಎಂಬ ದುರಹಂಕಾರ ಹೊಂದಿರುವುದರಿಂದ. ಎರಡನೆಯದು, ಅವನಲ್ಲಿ ಅನುಕಂಪ, ಪ್ರೀತಿ ಇಲ್ಲದಿರುವುದರಿಂದ. ಆತ ತನ್ನದೇ ಸೃಷ್ಟಿಯನ್ನು ಪ್ರೀತಿಸದೆ ಅದನ್ನು ಕಂಡು ಹೇಸಿಗೆ ಪಡುವುದರಿಂದ. ಇದು ಅತ್ಯಂತ ಪ್ರಬಲ ಮನೋವೈಜ್ಞಾನಿಕ ಅಂಶವಾಗಿದೆ. 'ಸೃಷ್ಟಿಸಿದ ನೀನೇ ನನ್ನನ್ನು ಪ್ರೀತಿಸದೆ ದೂರ ತಳ್ಳಿದರೆ, ಇತರರು ಹೇಗೆ ನನ್ನನ್ನು ಸ್ವೀಕರಿಸುವರು?' ಎಂದು ಆ 'ರಕ್ಕಸ' ಫ್ರಾಂಕೆನ್‌ಸ್ಟೈನ್‌ನನ್ನು ಕೇಳಿಕೊಳ್ಳುತ್ತಾನೆ. ಪ್ರೀತಿಯ ನಿರಾಕರಣೆ ಆ 'ರಕ್ಕಸ'ನನ್ನು ಹಿಂಸೆಯೆಡೆಗೆ ದೂಡುತ್ತದೆ. ಪ್ರೀತಿ, ಅನುಕಂಪ ನೀಡದೆ ತಿರಸ್ಕರಿದ ವ್ಯಕ್ತಿ ಹಾಗೂ ಸಮಾಜಕ್ಕೆ ತಕ್ಕ ಪಾಠ ಕಲಿಸಲು ಮುಂದಾಗುತ್ತಾನೆ. ಇಂದಿನ ಮನೋವಿಜ್ಞಾನ ಹೇಳುವುದೂ ಅದನ್ನೇ ಅಲ್ಲವೆ? ಮೇರಿ ಶೆಲ್ಲಿ ತನ್ನ ಕೃತಿಯಲ್ಲಿ 'ರಕ್ಕಸ'ನ ಪಾತ್ರವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾಳೆ. ಆ ರಕ್ಕಸ ವಿಕ್ಟರ್ ಫ್ರಾಂಕೆನ್‌ಸ್ಟೈನ್ ಭೇಟಿಯಾದಾಗ ತನ್ನ ಗೋಳನ್ನು ಹೇಳಿಕೊಳ್ಳುತ್ತದೆ, ತನ್ನ ಒಂಟಿತನವನ್ನು ಹೇಳಿಕೊಂಡು ಕಣ್ಣೀರು ಹಾಕುತ್ತದೆ. 'ನಾನೂ

ಸಾಯುತ್ತೇನೆ, ಈ ಯಾತನೆ ಹಾಗೂ ಗೋಳಿನಿಂದ ಪಾರಾಗಲು' ಎನ್ನುತ್ತಾನೆ. ತನ್ನನ್ನು ತಿರಸ್ಕರಿಸಿರುವ ಈ ಜಗತ್ತಿಗೆ ನನ್ನನ್ನು ಸೃಷ್ಟಿಸಿ ಕರೆತಂದದ್ದಾರೂ ಏಕೆ ಎಂದು ಕೇಳಿ ಕೃತಿಯ ಓದುಗರ ಸಹಜ ಅನುಕಂಪಕ್ಕೆ ಪಾತ್ರವಾಗುತ್ತಾನೆ. ಓದಿ ಮುಗಿಸಿದ ನಂತರ ಕಾದಂಬರಿಯಲ್ಲಿನ ಖಳನಾಯಕ ಯಾರು– 'ಸೃಷ್ಟಿಕರ್ತ' ವಿಕ್ಟರ್ ಫ್ರಾಂಕೆನ್‌ಸ್ಟೈನನೇ ಅಥವಾ ಅವನು ಸೃಷ್ಟಿಸಿದ 'ರಕ್ಕಸ'ನೆ? ಎನ್ನುವ ಪ್ರಶ್ನೆ ಓದುಗನನ್ನು ಕಾಡದೇ ಇರದು.





ಮೇರಿ ವೊಲ್‌ಸ್ಟೋನ್‌ಕ್ರಾಫ್ಟ್ ಶೆಲ್ಲಿ ವಿಕ್ಟರ್ ಫ್ರಾಂಕೆನ್‌ಸ್ಟೈನ್‌ನ ಸೃಷ್ಟಿ 'ರಕ್ಕಸ'– ಕಲಾವಿದನೊಬ್ಬನ ಕಲ್ಪನೆ


FRANKENSTEIN;
OR,
THE MODERN PROMETHEUS.
IN THREE VOLUMES.
VOL. I.



ಫ್ರಾಂಕೆನ್‌ಸ್ಟೈನ್ ೧೮೧೮ರ ಪ್ರಕಟಣೆಯ ಕೃತಿ ಫ್ರಾಂಕೆನ್‌ಸ್ಟೈನ್ ಇತ್ತೀಚಿನ ಪ್ರಕಟಣೆಯ ಕೃತಿ

'ಫ್ರಾಂಕೆನ್‌ಸ್ಟೈನ್ ಆರ್ ದ ಮಾಡರ್ನ್ ಪ್ರೊಮೆಥೆಯೆಸ್' ಕಾದಂಬರಿಯ ಆಯ್ದ ಭಾಗಗಳು:

ಅಂತಹ ಅತ್ಯದ್ಭುತ ಶಕ್ತಿ ನನ್ನ ಕೈಲಿದೆಯೆಂಬುದು ನನಗೆ ಅರಿವಾದಾಗ, ಅದನ್ನು ಹೇಗೆ ಬಳಸಬೇಕೆಂಬುದರ ಬಗೆಗೆ ಬಹಳಷ್ಟು ಆಲೋಚಿಸಿದೆ. ಜೀವ ಸೃಷ್ಟಿಸುವ ಸಾಮರ್ಥ್ಯ ನನ್ನ ಮಿತಿಯೊಳಗೇ ಇದ್ದರೂ ಅದನ್ನು ಸ್ವೀಕರಿಸುವಂತಹ ಆಕೃತಿಯೊಂದನ್ನು ರಚಿಸಬೇಕು. ಆ ರಚನೆಯಲ್ಲಿ ಅತ್ಯಂತ ಸೂಕ್ಷ್ಮ ನರಗಳು, ಸ್ನಾಯುಗಳು ಮತ್ತು ರಕ್ತನಾಳಗಳನ್ನು ಜೋಡಿಸುವಂತಹ ಕಾರ್ಯ ಊಹಿಸಿಕೊಳ್ಳಲೂ ಸಾಧ್ಯವಾಗದಷ್ಟು ಕಷ್ಟವಾದುದು ಹಾಗೂ ಶ್ರಮದಾಯಕವಾದುದು. ನಾನು ನನ್ನ ಪ್ರತಿರೂಪದಂತಹುದನ್ನೇ ಸೃಷ್ಟಿಸಲೇ ಅಥವಾ ಇನ್ನೂ ಸರಳವಾದ ಜೀವಿಯೊಂದನ್ನು ಸೃಷ್ಟಿಸಲೇ ಎಂದು ಬಹಳಷ್ಟು ಆಲೋಚಿಸಿದೆ. ಆದರೆ ನನ್ನ ಉತ್ಸಾಹ ಮತ್ತು ಕಲ್ಪನೆ ಮನುಷ್ಯನಂತಹ ಸಂಕೀರ್ಣ ಮತ್ತು ಅತ್ಯದ್ಭುತ ಪ್ರಾಣಿಯ ಸೃಷ್ಟಿಗೇ ಕೈ ಹಾಕುವಂತೆ ಪ್ರೇರೇಪಿಸಿತು. ಆ ಕಾರ್ಯಕ್ಕಾಗಿ ನನ್ನ ಬಳಿಯಿದ್ದ ವಸ್ತು ಸಲಕರಣೆಗಳು ಸಾಕಾಗದಿದ್ದರೂ ನಾನು ಇದರಲ್ಲಿ ಯಶಸ್ವಿಯಾಗಲೇಬೇಕೆಂದು ನಿರ್ಧರಿಸಿದೆ. ಅದಕ್ಕಾಗಿ ಹಲವಾರು ಹಿನ್ನಡೆಗಳನ್ನು ಎದುರಿಸಬೇಕಾಗಬಹುದು, ನನ್ನ ಕಾರ್ಯದಿಂದ ಇತರರು ಗಾಬರಿಯಾಗಬಹುದು ಮತ್ತು ಕೊನೆಯದಾಗಿ ನನ್ನ ಕಾರ್ಯ ಅಪರಿಪೂರ್ಣವಾಗಿರಬಹುದು: ಆದರೂ ವಿಜ್ಞಾನ ಮತ್ತು ಯಂತ್ರ ಜಗತ್ತಿನ ಸುಧಾರಣೆಗೆ ನನ್ನ ಕೊಡುಗೆ ಕಡಿಮೆಯೇನಿರುವುದಿಲ್ಲ. ಭವಿಷ್ಯದ ಯಶಸ್ಸಿಗೆ ನನ್ನ ಈಗಿನ ಪ್ರಯತ್ನಗಳು

ಬುನಾದಿಯಾದರೂ ಆಗಬಹುದು– ಈ ಭಾವನೆಗಳೊಂದಿಗೆ ಮಾನವ ಜೀವಿಯ ಸೃಷ್ಟಿಯ ಕಾರ್ಯವನ್ನು ಪ್ರಾರಂಭಿಸಿದೆ. ನನ್ನ ಮೊದಲ ಉದ್ದೇಶವನ್ನು ಕೊಂಚ ಬದಲಾಯಿಸಿ ಒಂದು ದೈತ್ಯ ಮಾನವನನ್ನೇ ಸೃಷ್ಟಿಸಲು ನಿರ್ಧರಿಸಿದೆ– ಅಂದರೆ ಸುಮಾರು ಎಂಟು ಅಡಿ ಎತ್ತರ ಹಾಗೂ ಎತ್ತರಕ್ಕೆ ತಕ್ಕಂತೆ ದೇಹದ ರಚನೆ. ಈ ನಿರ್ಧಾರದಿಂದ ಸೃಷ್ಟಿಗೆ ಬೇಕಾಗುವ ವಸ್ತು ಸಲಕರಣೆಗಳ ಸಂಗ್ರಹ ಪ್ರಾರಂಭಿಸಿದೆ.

ಮೊದಲ ಯಶಸ್ಸಿನ ಕನಸಿನ ಉತ್ಸಾಹದ ಸಾಗರದಲ್ಲಿ ತೇಲುತ್ತಿದ್ದ ನನ್ನಲ್ಲಿ ಉಂಟಾಗುತ್ತಿದ್ದ ಭಾವನೆಗಳ ಮಹಾಪೂರವನ್ನು ವರ್ಣಿಸಲು ಸಾಧ್ಯವೇ ಇಲ್ಲ. ಹುಟ್ಟು ಮತ್ತು ಸಾವಿನ ಗಡಿಯನ್ನು ಛಿದ್ರಗೊಳಿಸಿ ನಮ್ಮ ಅಂಧಕಾರ ಜಗತ್ತಿನಲ್ಲಿ ಬೆಳಕನ್ನು ಹರಿಸುವ ಆತುರದಲ್ಲಿದ್ದೆ ನಾನು. ನನ್ನ ಸೃಷ್ಟಿಯ ಹೊಸ ಪ್ರಭೇದ ನಾನು ಅದರ ಸೃಷ್ಟಿಕಾರನಾಗಿರುವುದರಿಂದ ಅದರ ಮೂಲ ದೈವವೆಂಬಂತೆ ಅದು ನನ್ನನ್ನು ಹರಸುತ್ತದೆ; ಹಲವಾರು ಸಂತೃಪ್ತ ಮತ್ತು ಉತ್ಕೃಷ್ಟ ಜೀವಿಗಳು ನನ್ನಿಂದಲೇ ಅವು ಅಸ್ತಿತ್ವದಲ್ಲಿವೆ ಎಂಬುದನ್ನು ಮನಗಂಡು ನನಗೆ ಆಭಾರಿಯಾಗಿರುತ್ತವೆ. ಈ ರೀತಿಯ ತನ್ನ ಸಂತಾನದ ಕೃತಜ್ಞತೆಯನ್ನು ಯಾವ ತಂದೆಯೂ ಅನುಭವಿಸಿರಲಾರ. ನಾನು ನಿರ್ಜೀವ ವಸ್ತುವಿನಲ್ಲಿ ಜೀವದ ಬೆಳಕನ್ನು ತರಲು ಸಾಧ್ಯವಾದಲ್ಲಿ, ಕ್ರಮೇಣ ದೇಹವನ್ನು ಶಿಥಿಲಗೊಳಿಸುವ ಸಾವಿನ ಸ್ಥಾನದಲ್ಲಿ ಜೀವ ಚಿಗುರುವಂತೆ ಮಾಡಬಹುದು ಎಂದು ನನಗನ್ನಿಸಿತು.

****

ಎದುರಿಗೆ ಸ್ವಲ್ಪ ದೂರದಲ್ಲಿ ಒಂದು ಮನುಷ್ಯಾಕೃತಿ ಕಂಡಿತು, ಅದು ನನ್ನೆಡೆಗೆ ಅತಿಮಾನುಷ ವೇಗದಲ್ಲಿ ಮುನ್ನುಗ್ಗುತ್ತಿತ್ತು. ಹಿಮಗಲ್ಲುಗಳನ್ನು ಹಾರಿ ಬರುತ್ತಿದ್ದ ಅದರ ದೇಹದ ಎತ್ತರ ಮತ್ತು ಗಾತ್ರವೂ ಸಾಧಾರಣ ಮನುಷ್ಯನಿಗಿಂದ ಹೆಚ್ಚಿದ್ದಿತು. ನನ್ನಲ್ಲೇನೋ ಆತಂಕ ಮೂಡಿತು, ಕಣ್ಣು ಮಂಜಿಟ್ಟಿತು, ಪ್ರಜ್ಞೆ ತಪ್ಪುವಂತೆ ಭಾಸವಾಯಿತು; ತಕ್ಷಣ ಪರ್ವತಗಳ ಹಿಮಭರಿತ ಬೀಸುಗಾಳಿ ನನ್ನನ್ನು ಬಡಿದೆಚ್ಚರಿಸಿತು. ಆ ಮಾನವಾಕೃತಿ ಹತ್ತಿರ ಹತ್ತಿರ ಬಂದಂತೆ (ಭಯಾನಕ ಹಾಗೂ ಅಸಹ್ಯ ರೂಪ) ಅದು ನಾನೇ ಸೃಷ್ಟಿಸಿದ ಅನಿಷ್ಟ ಜೀವಿ ಎಂಬುದರ ಅರಿವಾಯಿತು. ರೋಷ ಮತ್ತು ಭಯದಿಂದ ಅದು ಹತ್ತಿರ ಬರುವವರೆಗೂ ಕಾದು ನಂತರ ಅದರ ಮೇಲೆ ಮಾರಣಾಂತಿಕ ಹಲ್ಲೆ ಮಾಡಲು ನಿರ್ಧರಿಸಿದೆ. ಅವನು ಹತ್ತಿರ ಹತ್ತಿರ ಬಂದ. ಅವನ ಮುಖದಲ್ಲೂ ಆತಂಕ, ನಿರಾಸೆ ಮತ್ತು ಕೇಡುಭಾವವಿತ್ತು. ಅದರ ಕುರೂಪವಂತೂ ಮಾನವ ಕಣ್ಣುಗಳಿಗೆ ಅತ್ಯಂತ ಭಯಾನಕವಾಗಿತ್ತು. ಆದರೆ ನಾನು ಅವುಗಳನ್ನೆಲ್ಲಾ ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ಅವನ ಬಗೆಗೆ ನನ್ನಲ್ಲಿದ್ದ ಕೋಪ ಮತ್ತು ದ್ವೇಷ ನನ್ನಲ್ಲಿನ ಮಾತನ್ನೆಲ್ಲಾ ಕಿತ್ತುಕೊಂಡಂತೆ ಭಾಸವಾಗುತ್ತಿತ್ತು ಆದರೂ ನನ್ನಲ್ಲಿ ಅವನ ಬಗೆಗಿದ್ದ ಹೇಸಿಗೆ ಮತ್ತು ಅವಹೇಳನವನ್ನು ಅವರ ಮೇಲೆ ಕಾರಿದೆ.

'ದೆವ್ವ!' ನಾನು ಅರಚಿದೆ, 'ನನ್ನ ಬಳಿಗೇ ಬರುವಷ್ಟು ಧೈರ್ಯವೇ ನಿನಗೆ? ನಿನ್ನ ಪಾಪಿ ತಲೆಯ ಮೇಲೆ ನನ್ನ ದ್ವೇಷಭರಿತ ತೋಳಿನ ಹೊಡೆತವನ್ನು ಸಹಿಸಿಕೊಳ್ಳಬಲ್ಲೆಯಾ ನೀನು? ತೊಲಗು ನಿಕೃಷ್ಟ ಹುಳುವೆ! ಇಲ್ಲೇ ಇದ್ದರೆ ನಿನ್ನನ್ನು ತುಳಿದು ನಾಶ ಮಾಡುತ್ತೇನೆ! ಹೋ! ನಿನ್ನನ್ನು ಕೊಂದು ನೀನು ಭಯಾನಕವಾಗಿ ಕೊಂದಿರುವವರನ್ನೆಲ್ಲಾ ಬದುಕಿಸುವಂತಿದ್ದರೆ!'

'ಈ ರೀತಿಯ ಸ್ವಾಗತವನ್ನು ನಾನು ನಿರೀಕ್ಷಿಸಿದ್ದೆ,' ಹೇಳಿದ ಆ ರಕ್ಕಸ. 'ಈ ನತದೃಷ್ಟನನ್ನು ಎಲ್ಲ ಜನರೂ ದ್ವೇಷಿಸುತ್ತಾರೆ; ದ್ವೇಷಿಸದೇ ಮತ್ತೇನು ಮಾಡುತ್ತಾರೆ, ಈ ಜೀವ ಜಗತ್ತಿನಲ್ಲಿ ಅತ್ಯಂತ ನಿಕೃಷ್ಟ ನಾನು. ಆದರೆ ನೀನು, ನನ್ನ ಸೃಷ್ಟಿಕರ್ತ– ನೀನೇ ನನ್ನ ಕಂಡರೆ ಅಸಹ್ಯ ಪಡುತ್ತೀಯೆ, ನನ್ನನ್ನು ತಿರಸ್ಕರಿಸಿದ್ದೀಯೆ. ನಾನು ನಿನ್ನದೇ ಜೀವಿ. ನಮ್ಮಿಬ್ಬರ ನಡುವಿನ ಬಂಧನ ಇಬ್ಬರಲ್ಲೊಬ್ಬರ ಸಾವಿನಿಂದಲೇ ಕೊನೆಗಾಣುವಂಥದು. ನೀನು ನನ್ನನ್ನು ಕೊಲ್ಲಲು ಬಯಸಿದ್ದೀಯೆ. ಹಾಗಿರುವಾಗ ಜೀವ ಸೃಷ್ಟಿ ಮಾಡುವ ಹಕ್ಕು ನಿನಗೆಲ್ಲಿದೆ? ನೀನು ನನ್ನ ಬಗೆಗಿನ ಕರ್ತವ್ಯ ನಿಭಾಯಿಸು, ನಾನು ನಿನ್ನ ಬಗೆಗೆ ಹಾಗೂ ಇಡೀ ಮಾನವಕುಲಕ್ಕೆ ನನ್ನ ಕರ್ತವ್ಯವನ್ನು ನಿಭಾಯಿಸುತ್ತೇನೆ. ನೀನು ನನ್ನ ಷರತ್ತುಗಳಿಗೆ ಒಪ್ಪಿದಲ್ಲಿ ನಾನು ಅವರನ್ನು ಮತ್ತು ನಿನ್ನನ್ನು ಶಾಂತಿಯಿಂದ ಇರುವಂತೆ ಬಿಡುತ್ತೇನೆ; ಆದರೆ ನೀನು ತಿರಸ್ಕರಿಸಿದಲ್ಲಿ, ಸಾವಿನ ರುದ್ರ ನೃತ್ಯ ತೋರಿಸುತ್ತೇನೆ ಹಾಗೂ ಆ ರೌದ್ರತೆ ಶಮನವಾಗುವುದು ನಿನ್ನ ಉಳಿದ ಗೆಳೆಯರ ರಕ್ತದಿಂದಲೇ!

ಹೋ ಫ್ರಾಂಕೆನ್‌ಸ್ಟೈನ್, ಶಾಂತನಾಗಿರು. ನನ್ನ ಮೇಲೆ ನಿನ್ನ ದ್ವೇಷದ ಹಗೆ ತೀರಿಸುವ ಮೊದಲು ನನ್ನ ಮಾತು ಕೇಳು. ನಾನು ಬದುಕಲ್ಲಿ ಬಹಳಷ್ಟು ಅನುಭವಿಸಿದ್ದೇನೆ. ನನ್ನ ಬದುಕು ಆತಂಕ, ಹಿಂಸೆಯಿಂದಲೇ ಕೂಡಿದ್ದರೂ ಸಹ ನನ್ನ ಜೀವ ನನಗೆ ಪ್ರಿಯವಾದುದು; ನಾನದನ್ನು ರಕ್ಷಿಸಿಕೊಳ್ಳುತ್ತೇನೆ. ನೆನಪಿರಲಿ, ನೀನು ನನ್ನನ್ನು ನಿನಗಿಂತ ಹೆಚ್ಚು ಎತ್ತರದವನಾಗಿ, ಶಕ್ತಿವಂತನಾಗಿ ಮಾಡಿದ್ದೀಯೆ. ನೀನು ನನ್ನ ಸೃಷ್ಟಿಕರ್ತ; ನನ್ನ ಸಹಜ ಪ್ರಭು ಮತ್ತು ದೊರೆಯಾಗಿರುವ ನಿನಗೆ ನಾನು ವಿಧೇಯತೆಯನ್ನು ತೋರುತ್ತೇನೆ. ಎಲ್ಲರಿಗೂ ಒಳ್ಳೆಯವನಾಗಿ ನೀನು ನನ್ನನ್ನೇಕೆ ತಿರಸ್ಕರಿಸಿದ್ದೀಯ? ನನಗೆ ನಿನ್ನ ನ್ಯಾಯದ, ದಯೆಯ ಮತ್ತು ಪ್ರೀತಿಯ ಅವಶ್ಯಕತೆಯಿದೆ. ಅದು ನಿನ್ನ ಕರ್ತವ್ಯವೂ

ಹೌದು. ಎಲ್ಲೆಲ್ಲೂ ಸುಖ ಶಾಂತಿಯನ್ನು ಕಾಣುತ್ತಿದ್ದೇನೆ, ಆದರೆ ನಾನು ಮಾತ್ರ ಅದರಲ್ಲಿ ಭಾಗಿಯಾಗದಂತೆ, ಒಬ್ಬಂಟಿಯಾಗಿರುವಂತೆ ನೀನು ಮಾಡಿದ್ದೀಯೆ. ನಾನೂ ಒಳ್ಳೆಯವನಾಗಿದ್ದೆ, ಪರರ ಹಿತಬಯಸುವವನಾಗಿದ್ದೆ, ಆದರೆ ನನ್ನ ಯಾತನೆ ನಾನೊಬ್ಬ ರಕ್ಕಸನಾಗುವಂತೆ ಮಾಡಿದೆ. ನನ್ನನ್ನು ಸಂತೋಷಗೊಳಿಸು, ನಾನು ಪುನಃ ಒಳ್ಳೆಯವನಾಗುತ್ತೇನೆ.'

****

'ಇವನೂ ಸಹ ನನಗೆ ಬಲಿಯಾದ!' ರಕ್ಕಸ ಉದ್ಗರಿಸಿದ. ಹೋ ಫ್ರಾಂಕೆನ್‌ಸ್ಟೈನ್! ನಿನ್ನ ಕ್ಷಮೆಯನ್ನು ನಾನು ಹೇಗೆ ಕೇಳಲಿ? ನೀನು ಪ್ರೀತಿಸುವವರನ್ನೆಲ್ಲಾ ನಾಶ ಮಾಡಿ ನಿನ್ನನ್ನೂ ನಾಶ ಮಾಡಿದೆ. ಅಯ್ಯೋ! ಆತ ಉತ್ತರಿಸಲಾರ.. ಆತನ ಉಸಿರು ನಿಂತುಹೋಗಿದೆ. ನನ್ನ ಹೃದಯ ಪ್ರೀತಿ, ಕರುಣೆಗೆ ಪ್ರತಿಸ್ಪಂದಿಸುವಂತೆ ನಿರ್ಮಿಸಲಾಗಿತ್ತು. ಆದರೆ ಅದಕ್ಕೆ ದೊರಕಿದ್ದೇನು! ದ್ವೇಷ ಮತ್ತು ತಾತ್ಸಾರ! ನಾನು ಅನುಭವಿಸಿದ ಯಾತನೆ ಮತ್ತು ಹಿಂಸೆಯನ್ನು ನೀನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

'ನಿಜ, ನಾನೊಬ್ಬ ಕ್ರೂರಿ. ಅಸಹಾಯಕರನ್ನು ಮತ್ತು ಸುಂದರವಾಗಿದ್ದವರ ಕೊಲೆ ಮಾಡಿದ್ದೇನೆ; ನನಗಾಗಲಿ ಇತರರಿಗಾಗಲಿ ಎಂದೂ ಕೇಡು ಮಾಡದ ಮುಗ್ಧ ಹಸುಳೆಗಳು ನಿದ್ರಿಸುವಾಗ ಅವರ ಕತ್ತು ಹಿಸುಕಿ ಕೊಂದಿದ್ದೇನೆ. ನನ್ನ ಸೃಷ್ಟಿಕರ್ತನ ಬದುಕು ನರಕವಾಗುವಂತೆ ಮಾಡಿದ್ದೇನೆ... ಈಗ ಆತ ಅಲ್ಲಿ ಬಿದ್ದಿದ್ದಾನೆ, ಬಿಳಿಚಿಕೊಂಡು, ಸಾವಿನ ಶೈತ್ಯದಲ್ಲಿ ಹೆಪ್ಪುಗಟ್ಟಿ. ನೀನು ನನ್ನನ್ನು ದ್ವೇಷಿಸಿದೆ, ಆದರೆ ನಿನ್ನ ಅಸಹ್ಯ ನನ್ನ ಬಗೆಗಿನ ನನ್ನದೇ ಪಾಪಪ್ರಜ್ಞೆಯನ್ನು ಮೀರಿಸುವಂಥದಲ್ಲ.. ಹೆದರಿಕೋಬೇಡ.. ನಾನಿನ್ನು ಸೂರ್ಯನ ಬೆಳಕನ್ನಾಗಲೀ, ನಕ್ಷತ್ರಗಳನ್ನಾಗಲೀ ನೋಡುವುದಿಲ್ಲ; ತಂಗಾಳಿ ನನ್ನ ಕೆನ್ನೆಗಳ ಮೇಲೆ ಸುಳಿದಾಡಲು ಬಿಡುವುದಿಲ್ಲ. ಎಲ್ಲ ಭಾವನೆ ಮತ್ತು ಸಂವೇದನೆಗಳು ನನ್ನಿಂದ ದೂರವಾಗುತ್ತವೆ. ಕೆಲವರ್ಷಗಳ ಹಿಂದೆ ಮೊಟ್ಟಮೊದಲ ಬಾರಿಗೆ ನಾನು ಕಣ್ಣುಬಿಟ್ಟಾಗ ಬೆಚ್ಚನೆಯ ಬೇಸಿಗೆ, ಎಲೆಗಳ ಸದ್ದು, ಪಕ್ಷಿಗಳ ಚಿಲಿಪಿಲಿ ಗಾನ ನನ್ನಲ್ಲಿ ಎಂತಹ ಸಂತೋಷ ತಂದಿತ್ತು. ಅಷ್ಟೇ ನಾನು ನನ್ನ ಬದುಕಲ್ಲಿ ಕಂಡ ಸುಖ. ಆಗಲೇ ನಾನು ಕಣ್ಣೀರಿಟ್ಟು ಸತ್ತುಹೋಗಬೇಕಿತ್ತು. ಈಗ ನಾನು ನನ್ನ ಸುಖ ಸಂತೋಷವನ್ನು ಸಾವಿನಲ್ಲಲ್ಲದೆ ಮತ್ತೆಲ್ಲಿ ಕಂಡುಕೊಳ್ಳಲಿ?.. ವಿದಾಯ ಒಡೆಯ.'

ಇಷ್ಟು ಹೇಳಿದ ಆ 'ರಕ್ಕಸ' ಕ್ಯಾಬಿನ್ನಿನ ಕಿಟಕಿಯಿಂದ ಹಾರಿ ಹಡಗಿನ ಪಕ್ಕದಲ್ಲೇ ಇದ್ದ ತನ್ನ ಹಿಮದ ದೋಣಿಯೇರಿದ. ನೋಡ ನೋಡುತ್ತಿದ್ದಂತೆಯೇ ಆ ದೋಣಿ ದೈತ್ಯ ಅಲೆಗಳ ನಡುವೆ, ಕತ್ತಲಲ್ಲಿ ಮರೆಯಾಯಿತು.

ಅನುವಾದ: ಡಾ.ಜೆ.ಬಾಲಕೃಷ್ಣ

ಪ್ರಾಚೀನ ವಿಜ್ಞಾನ ವೈದ್ಯಶಾಸ್ತ್ರ
(ವಿಶೇಷವಾಗಿ ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ')

ಡಾ. ಪದ್ಮಿನಿ ನಾಗರಾಜು
ಲೇಖಕಿ, ಪ್ರಾಧ್ಯಾಪಕಿ, ಗೌರವ ಕಾರ್ಯದರ್ಶಿ,
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶಾಸ್ತ್ರಜ್ಞಾನವೆಂಬುವುದು ಪ್ರಾಚೀನ ಭಾರತೀಯರ ಬದುಕಿನಲ್ಲಿ ಹಾಸುಹೊಕ್ಕಾಗಿತ್ತು. ಇದರ ಪರಿಣಾಮವಾಗಿ ಎಲ್ಲಾ ಭಾಷೆಗಳಲ್ಲಿಯೂ ಕೃತಿಗಳು ಹೊರಬಂದವು. ಪ್ರಾಚೀನ ಭಾರತವು ಮೊದಲು ಶ್ರುತ ಪರಂಪರೆಯನ್ನು ಅನುಸರಿಸುತ್ತಿತ್ತು. ಹಾಗಾಗಿ ಅನೇಕ ಮನೆತನಗಳಲ್ಲೇ ಉಳಿದುಹೋಗಿದ್ದ ಈ ಶಾಸ್ತ್ರವು ನಂತರದ ಕಾಲದಲ್ಲಿ ಗ್ರಂಥಸ್ಥವಾಯಿತು. ಇವುಗಳು ಗ್ರಂಥಸ್ಥವಾಗಲು ಪ್ರಮುಖ ಕಾರಣ ಸರ್ವಜನಕ್ಕೆ ಉಪಕಾರವಾಗಲಿ ಎಂಬುದಷ್ಟೇ ಆಗಿತ್ತು. ಹೀಗೆ ಶಾಸ್ತ್ರಗ್ರಂಥಗಳನ್ನು ಲಿಪಿಬದ್ಧಗೊಳಿಸುವ ಆಶಯವನ್ನು ಕನ್ನಡದ ಶಾಸ್ತ್ರಕಾರರಲ್ಲಿಯೂ ಕಾಣಬಹುದು. ಶಾಸ್ತ್ರ ಕೃತಿಗಳನ್ನು ಲೌಕಿಕ ಮತ್ತು ಆಗಮಿಕ ಎಂಬುದಾಗಿ ವರ್ಗಿಕರಿಸಿದರು. ವ್ಯಾಕರಣ, ಛಂದಸ್ಸು, ಭಾಷಾಶಾಸ್ತ್ರ ಮುಂತಾದವುಗಳನ್ನಷ್ಟೇ ಅಲ್ಲದೆ ಲೋಕಕ್ಕೆ ಉಪಕಾರವಾಗುವಂತಹ ಸ್ಥಳೀಯ ದೇಸೀ ಉಪಚಾರಗಳನ್ನು ಕುರಿತು ಕೃತಿಗಳನ್ನು ಬರೆದರು. ಅವುಗಳಲ್ಲಿ ಮನುಷ್ಯರಿಗೆ ಉಪಯುಕ್ತವಾದ ವೈದ್ಯಶಾಸ್ತ್ರ, ವಾಸ್ತು, ಜೋತಿಷ್ಯ, ಕಾಮಶಾಸ್ತ್ರಗಳಲ್ಲದೆ ಪ್ರಾಣಿಗಳ ಆರೋಗ್ಯದ ಬಗ್ಗೆ ಕಾಳಜಿವಹಿಸಿ ಗಜಶಾಸ್ತ್ರ, ಅಶ್ವಶಾಸ್ತ್ರ, ಮತ್ತು ಪಶುವೈದ್ಯಶಾಸ್ತ್ರ ಮುಂತಾದ ಕೃತಿಗಳು ಅನೇಕ ಭಾಷೆಗಳಲ್ಲಿ ರಚನೆಗೊಂಡಿವೆ.

ಆಧುನಿಕತೆ ಬೆಳೆದಂತೆಲ್ಲಾ ನಮ್ಮ ಇಂತಹ ಶಾಸ್ತ್ರಗಳ ಬಗ್ಗೆ ನಿರ್ಲಕ್ಷ್ಯವಹಿಸಿದ್ದನ್ನು ಕಾಣುತ್ತಿದ್ದೇವೆ. ಜಾಗತೀಕರಣದ ಪ್ರಭಾವದಿಂದ ಸ್ಥಳೀಯತೆಗಿಂತ ನಮಗೆ ದೂರದ್ದು ಹತ್ತಿರವಾಗುತ್ತಿದೆ. ಆದರೆ ಇತ್ತೀಚೆಗೆ ನಮ್ಮದೇ ಆಯುರ್ವೇದ ಮತ್ತೆ ಜನಪ್ರಿಯಗೊಳ್ಳುತ್ತಿರುವುದು ಸಂತಸದ ವಿಷಯ. ಜ್ಞಾನದ ಭಂಡಾರವಾದ ಇಂತಹ ಕೃತಿಗಳನ್ನು ನಾವು ಅಲಕ್ಷಿಸಿದ್ದೇವೆ. ಅವುಗಳಲ್ಲಿ ಏನಿದೆ ಎಂಬ ಕುತೂಹಲವೂ ನಮಗಿಲ್ಲ. ಇಂತಹ ಅನೇಕ ಹಸ್ತಪ್ರತಿಗಳು ದೇವರಮುಂದೆ ಕಡ್ಡಿಹಚ್ಚಿ ನಾಶವಾಗಿಯೂ ಇವೆ. ಇನ್ನು ಕೆಲವು ಸಂರಕ್ಷಿತಗೊಂಡಿದ್ದರೂ ಅವುಗಳನ್ನು ಓದುವ ತಜ್ಞರು ಇಲ್ಲವಾಗಿದ್ದಾರೆ. ಹೊಸ ಪೀಳಿಗೆಗೆ ಅಷ್ಟು ವ್ಯವದಾನವೂ ಇಲ್ಲವಾಗಿರುವ ಕಾಲಘಟ್ಟವಿದು. ನಾನಿಲ್ಲಿ ಕೇವಲ ಒಂದು ವೈದ್ಯಶಾಸ್ತ್ರದ ಪರಿಚಯ ಮಾಡಿಕೊಡಲು ಪ್ರಯತ್ನಿಸಿದ್ದೇನೆ. ಜಗದ್ದಳ ಸೋಮನಾಥನ ಕರ್ಣಾಟಕ ಕಲ್ಯಾಣಕಾರಕದ ಬೆಳಕು ಚೆಲ್ಲುವ ಲೇಖನವಿದು.

ಸಾಹಿತ್ಯ ಹೊಸತನ್ನು ಸದಾ ಹೇಳಲು ತವಕಿಸುತ್ತಿರುತ್ತದೆ. ಹೊಸತನದ ಹುಡುಕಾಟದಲ್ಲಿ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಮೂರು ಗಣಿಗಳೆಂದು ಅಜ್ಞಾತಶಾಸ್ತ್ರ, ಅನುಪಲಬ್ಧ ಸಾಹಿತ್ಯ ಹಾಗೂ ಅಲಕ್ಷಿತ ಸಾಹಿತ್ಯ ಎಂದು ಪರಿಗಣಿಸುತ್ತಾರೆ. ಈ ವಿಷಯದಲ್ಲಿ ಕೆಲವರು ಗಣ್ಯವಿದ್ವಾಂಸರು ಸ್ವಲ್ಪ ಕೆಲಸ ಮಾಡಿದ್ದಾರೆ. ಆ ಕೆಲಸ ಮುಂದುವರಿಯಬೇಕು ಎಂಬುದು ಅವರ ಆಶಯ.

ಅಜ್ಞಾತ ಸಾಹಿತ್ಯ: 'ಕವಿರಾಜಮಾರ್ಗ'ದಲ್ಲಿ ಶೋಧಿಸತಕ್ಕ ಇನ್ನೂ ಹಲವು ವಿಷಯಗಳಿವೆ. ಸಾಹಿತ್ಯ ಪ್ರಕಾರಗಳಾದ ಚತ್ತಾಣ ಬೆದಂಡೆ ಗದ್ಯಕಥೆಗಳ ಸ್ವರೂಪ ಮಾದರಿಗಳು ಅವುಗಳಲ್ಲಿ ಒಂದು. ಹಾಗೆಯೇ 'ಕಾವ್ಯವಲೋಕನ'ದಲ್ಲಿ ಉಕ್ತವಾಗಿರುವ ಇಡುಕುಂಬಗ್ಗಚವಚ (ಮುಕ್ತಕ) ಪದ. ಮೆಲ್ವಾಡು, ಬೆದಂಡೆಗಬ್ಬ, ಬಾಜನೆಗಬ್ಬ ಎಂದಿರುವ ಸಾಹಿತ್ಯಪ್ರಕಾರಗಳ ರೂಪ ಮತ್ತು ಪ್ರಯೋಗಗಳ ಸಂಬಂಧವಾಗಿ

ಈ ಶೋಧ ಮುನ್ನಡೆದು ಮಾದರಿಗಳನ್ನು ಗುರುತಿಸಬಹುದೇ ಅಥವಾ ಸಣ್ಣ ಪ್ರಮಾಣದವು ಪ್ರಬಂಧಗಳ ಮೈಯಲ್ಲಿ ಅಡಗಿಕೊಂಡಿವೆಯೇ ಕಂಡುಹಿಡಿಯಬೇಕಾಗಿದೆ ಎಂದಿದ್ದಾರೆ.

ಅನುಪಲಬ್ಧ ಸಾಹಿತ್ಯ: 'ಕವಿರಾಜಮಾರ್ಗ', ಜಯಕೀರ್ತಿಯ 'ಛಂದೋನುಶಾಸನ' ಮೊದಲಾದ ಶಾಸ್ತ್ರಕೃತಿಗಳಲ್ಲಿಯೂ ಪೊನ್ನ, ರನ್ನ ಮೊದಲಾದವರ ಕಾವ್ಯಗಳಲ್ಲಿಯೂ ದೊರೆಯುವ ಹಾಗೂ ಅನ್ಯ ಸಾಕ್ಷ್ಯಾಧಾರಗಳಿಂದ ತಿಳಿಯುವ ಸಾಹಿತ್ಯ ಕೃತಿಗಳು ಯಾವುವು ಎಷ್ಟು ಇವುಗಳನ್ನು ಗೊತ್ತುಮಾಡಿ ಕ್ಷೇತ್ರಕಾರ್ಯದಲ್ಲಿ ಆಸಕ್ತರಾದವರು ತಮ್ಮ ಕೆಲಸಗಳನ್ನು ಇನ್ನಷ್ಟು ತೀವ್ರಗೊಳಿಸಬೇಕಾಗಿದೆ. ಈಗ ಕನ್ನಡದಲ್ಲಿ ರಚಿತವಾಗಿರುವ ಪ್ರಾಚೀನ ಕನ್ನಡ ಸಾಹಿತ್ಯದ ಸುಮಾರು ಅರ್ಧಭಾಗದಷ್ಟನ್ನು ಕಳೆದುಕೊಂಡಿದ್ದೇವೆ ಎಂದು ತೋರುತ್ತದೆ. ಇನ್ನು ನಡುಗನ್ನಡ ಕಾಲದ ಸಾಹಿತ್ಯ ಕೃತಿಗಳಿಗೆ ಬೇರೆಯೇ ಲೆಕ್ಕಾಚಾರದ ಅಂದಾಜು ಬೇಕಾಗುತ್ತದೆ. ಆಕಸ್ಮಿಕವಾಗಿ ನಾಗವರ್ಮನ ಹನ್ನೊಂದನೆಯ ಶತಮಾನದ 'ವೀರವರ್ಧಮಾನ ಪುರಾಣ' ದೊರೆತು ಪ್ರಕಟವಾದ ಹಾಗೆ, ಅಜ್ಞಾತಕರ್ತೃವಾದ ಸುಮಾರು ೧೭೦೦ರ 'ಧರ್ಮಗುಪ್ತ ಚರಿತೆ' ದೊರೆತು ಪ್ರಕಟನೆಯ ಸಿದ್ಧತೆಯಲ್ಲಿರುವ ಹಾಗೆ ಹುಡುಕಲು ಹೊರಡುವವರಿಗೆ ಗಣಿಯೊಳಗಿನ ರತ್ನಗಳು ಕಣ್ಣಿಗೆ ಬೀಳಬಹುದಾಗಿದೆ. ಶ್ರವಣಬೆಳಗೊಳ ಶ್ರೀಮಠ ಅಂಥ ಕೆಲವನ್ನು ಪ್ರಕಟಿಸಿದೆ.

ಅಲಕ್ಷಿತ ಸಾಹಿತ್ಯ: ಇದು ವಿಶೇಷವಾಗಿ ಗಮನಿಸಬೇಕಾದ್ದು. ಸಾಹಿತ್ಯ ಲಭ್ಯವಿದೆ, ಹಸ್ತಪ್ರತಿಗಳ ರೂಪದಲ್ಲಿಯೋ ಮುದ್ರಣಗೊಂಡು ಪ್ರಕಟವಾಗಿಯೋ ಪರಾಮರ್ಶೆಗೆ ಸಿಕ್ಕುತ್ತದೆ. ಆದರೆ ಸಾಹಿತ್ಯಾಸಕ್ತರಿಂದಲೂ, ಸಂಶೋಧಕರಿಂದಲೂ ಅದು ಅಲಕ್ಷ್ಯಕ್ಕೆ ಒಳಗಾಗಿರುವ ಹಾಗೆ ತೋರುತ್ತದೆ. ಅದರ ಪ್ರಾಶಸ್ತ್ಯ ಮಹತ್ವಗಳ ಬಗೆಗೆ ಉದಾಸೀನವಿದ್ದು, ಹೆಚ್ಚಿನ ಹಸ್ತಪ್ರತಿಗಳು ಕತ್ತಲೆಕೋಣೆಯ ಕಪಾಟುಗಳಲ್ಲಿ ನಿದ್ರಿಸಿವೆ. ಪ್ರಕಟವಾಗಿದ್ದ ಪಕ್ಷದಲ್ಲಿ ತಿರಸ್ಕಾರಭಾವವಿದೆ, ಅಸಹಾಯಕತೆಯೂ ಇದೆ. ಎಂದು ಅಭಿಪ್ರಾಯಿಸುತ್ತಾರೆ.

ವೆಂಕಟಚಲಶಾಸ್ತ್ರಿಗಳು ಮುಂದುವರೆದು "ಇಲ್ಲಿ ನಾನು ಮಾತಾಡುತ್ತಿರುವುದು ಲೌಕಿಕಶಾಸ್ತ್ರ ಕೃತಿಗಳನ್ನು ಕುರಿತು. ಇಮ್ಮಡಿ ಚಾವುಂಡರಾಯನ (೧೦೨೫) 'ಲೋಕೋಪಕಾರ' ಒಂದು ಸರ್ವಸಂಗ್ರಾಹಕ ಶಾಸ್ತ್ರಕೃತಿ. ಹಳಗನ್ನಡ ಬಲ್ಲವರ ಸಹಾಯ ಪಡೆದು ವಿಜ್ಞಾನಿಗಳೂ, ಕೈಗಾರಿಕೋದ್ಯಮಿಗಳೂ ಈ ಕೃತಿಯ ಪ್ರಯೋಗಸಾಧ್ಯತೆ, ಪ್ರಯೋಜನಗಳ ಮೌಲ್ಯವನ್ನು ಕಂಡುಕೊಳ್ಳಬೇಕಾಗಿದೆ. ಅಧ್ಯಯನಕ್ಕೆ 'ಮಾನಸೋಲ್ಲಾಸ', 'ಶಿವತತ್ತ್ವರತ್ನಾಕರ'ಗಳ ನೆರವು ಕೂಡ ಪಡೆಯಬಹುದು. ತೌಲನಿಕವಾಗಿ ವಿಮರ್ಶಿಸಬಹುದು. ತೋಟಗಾರಿಕೆ, ಅಗರಬತ್ತಿ ತಯಾರಿಕೆ, ಅಂತರ್ಜಲ ಶೋಧನೆ ಇಂತಹ ಕೆಲವು ವಿಷಯಗಳಲ್ಲಿ ಆಸಕ್ತರ ಹೊಸ ಶೋಧಗಳಿಗೆ ಈ ಕೃತಿಯಲ್ಲಿ ಅವಕಾಶವಿದೆ.

ವಿವಿಧ ಪ್ರಾಯೋಗಿಕ ವಿದ್ಯೆಗಳಾದ ಯೋಗ, ನಾಡೀಶಾಸ್ತ್ರ, ಪಾಕಶಾಸ್ತ್ರ, ಧನುರ್ವಿದ್ಯೆ, ಮಲ್ಲವಿದ್ಯೆ, ಖಡ್ಗವಿದ್ಯೆ, ಬಾಣಗಾರಿಕೆ, ವೃಕ್ಷಾಯುರ್ವೇದ, ಸ್ತ್ರೀ–ಅಶ್ವ–ಗಜ–ಗೋ ಸಾಮಾನ್ಯ ಬಾಲವೈದ್ಯ ಶಾಖೆಗಳು, ಚತುರಂಗ, ನೆತ್ತ ಮೊದಲಾದ ಕ್ರೀಡೆಗಳು, ಅಶ್ವಶಾಸ್ತ್ರ, ಗಜಶಾಸ್ತ್ರ ಮೊದಲಾದ ಪ್ರಾಣಿಶಾಸ್ತ್ರಗಳು; ಕಲಾಪ್ರಕಾರಗಳಾದ ಗೀತ–ನೃತ್ಯ–ಚಿತ್ರ–ಶಿಲ್ಪ ಮತ್ತು ವಾಸ್ತುಕಲೆಗಳು, ಗಣಿತವಿಜ್ಞಾನದ ಸಾಮಾನ್ಯ–ಜ್ಯಾಮಿತೀಯ–ಬೀಜಗಣಿಯ ವಿಜ್ಞಾನಗಳು ಹೀಗೆ ಇವುಗಳ ವ್ಯಾಪ್ತಿ ಕಾರ್ಯಕಾರಣ ಸಂಬಂಧವನ್ನು ವಿಜ್ಞಾನದ ಹಾಗೆ ಸ್ಪಷ್ಟವಾಗಿ ಸಾಧಿಸಲು ಸಾಧ್ಯವಿಲ್ಲದೆ ಶ್ರದ್ಧೆ ಅನೂಚಾನವಾದ ಆಚರಣೆ ಅತೀತ ಲೋಕಜ್ಞತೆ ಅನುಭವ ಪ್ರಾಮಾಣ್ಯ ಇವನ್ನು ಆಶ್ರಯಿಸಿದ ಶಾಸ್ತ್ರ ಪ್ರಪಂಚವೊಂದುಂಟು. ಇಲ್ಲಿ ದೇಶೀಯ ಅನುಭವ ಆಚರಣೆಗಳದ್ದೇ ಮುಖ್ಯಪಾತ್ರ.

ಜೋತಿಷ್ಯಶಾಸ್ತ್ರದ ಶಕುನ – ಪ್ರಶ್ನಫಲ – ಸ್ವಪ್ನಫಲ – ಸಾಮುದ್ರಿಕ – ನರಪಿಂಗಲಿ – ನಾಡೀಶಾಸ್ತ್ರ – ಜಲಶಿಲ್ಪಿ – ಹಲ್ಲಿಶಕುನ ಇತ್ಯಾದಿ ಶಾಖೆಗಳು ಧಾತುವಾದ–ರಸವಿದ್ಯೆ–ವೃಷ್ಟಿಶಾಸ್ತ್ರಗಳು ಇತ್ಯಾದಿ. ಇಂಥವನ್ನು ತಳ್ಳಿಹಾಕುವುದು, ಬುರುಡೆಯೆಂದು ಅಪಹಾಸ್ಯ ಮಾಡುವುದು ಸುಲಭ. ಆದರೆ ಪ್ರತ್ಯಕ್ಷದರ್ಶಿಗಳ ಹಾಗೂ ಪರಿಣಿತರ ಅನುಭವ ಮತ್ತು ವ್ಯವಹಾರಗಳನ್ನು ಜೊತೆಗಿಟ್ಟುಕೊಂಡು ಶಾಸ್ತ್ರ ಶೋಧನೆಯ ನಿಕಷಕ್ಕೆ ತಿಕ್ಕಿ ವೈಜ್ಞಾನಿಕ ಸತ್ಯ ಸಂಭಾವ್ಯತೆ ಹೇಗೆ–ಈ ನಂಬಿಕೆಗಳ ಉಗಮ ಹಿನ್ನೆಲೆ ಏನು ಇವನ್ನು ತಿಳಿಯುವುದರಲ್ಲಿ ತಪ್ಪೇನಿಲ್ಲ" ಎಂದು ಮೂಡುಬಿದರೆಯಲ್ಲಿ ನಡೆದ ಅಳ್ವಾಸ ನುಡಿಸಿರಿಯ ಅಧ್ಯಕ್ಷರ ಭಾಷಣದಲ್ಲಿ ಅಭಿಪ್ರಾಯಪಡುತ್ತಾರೆ.

ನಿಜಗುಣ ಶಿವಯೋಗಿಗಳು 'ವಿವೇಕ ಚಿಂತಾಮಣಿ'ಯಲ್ಲಿ ಲೌಕಿಕಶಾಸ್ತ್ರವನ್ನು 'ಲೌಕಿಕವೇ ಧನ್ವಂತರ್ಯಾದಿಗಳಿಂದುಕ್ತಮಾದ ಆಯುರ್ವೇದ, ದಂಡನೀತಿ ಮೊದಲಾದ ದೃಷ್ಟ ಫಲಂಗಳಂ ನಿರ್ಧರಿಸುತ್ತಿರ್ಕುಂ' ಎಂಬ ವಿವರಣೆಯಿಂದ ಲಕ್ಷಣಿಸಿದ್ದಾರೆ. ಅರ್ಥ, ಕಾಮ–ಈ ಫಲಸಿದ್ಧಿಗಳನ್ನು ಕೊಡತಕ್ಕವು ಲೌಕಿಕಶಾಸ್ತ್ರಗಳೆಂದು ಪ್ರಾಚೀನರ ದೃಷ್ಟಿಯಿಂದ ನಾವು ವಿವರಿಸಬಹುದು ಎಂಬುದಾಗಿ ಪ್ರೊ.ಎಂ.ವಿ.ಸೀತಾರಾಮಯ್ಯನವರು ವಿವರಿಸುತ್ತಾರೆ. (ಕೃತಿ: ಗ್ರಂಥಸಂಪಾದನೆ–ಹಸ್ತಪ್ರತಿಶಾಸ್ತ್ರ ಮತ್ತು ಶಾಸ್ತ್ರಸಾಹಿತ್ಯ ಸಂಪುಟ, ಸಂಪುಟ–೬)

ಆಯುರ್ವೇದ, ಜ್ಯೋತಿಷ್ಯ, ಕಾಮಶಾಸ್ತ್ರ ಇತ್ಯಾದಿ ಪ್ರಾಚೀನ ಶಾಸ್ತ್ರ ಗ್ರಂಥಗಳಲ್ಲಿ ಕಾವ್ಯಾಂಶವನ್ನು ಹುಡುಕುವುದೆಂದರೆ, 'ಮೊರಡಿಯೊಳೆ ಮಾದುಪಳಮನರಸಿದಂತೆಯೆ' (ಗುಡ್ಡದ ಮೇಲೆ ಮಾದಳ ಹಣ್ಣನ್ನು ಹುಡುಕಿಕೊಂಡು ಹೋದಂತೆಯೇ) ಸರಿ. ಪ್ರಯೋಜನ ದೃಷ್ಟಿಯಿಂದ ನೋಡುವುದಾದರೆ, ವೈದ್ಯಶಾಸ್ತ್ರ ಗ್ರಂಥಗಳಿಂದ ಬಹುಶಃ ಇಂದೂ ಪ್ರಯೋಜನ ಪಡೆಯಬಹುದೇನೋ. ವೈದ್ಯ ವಿಶಾರದರು ಇವುಗಳನ್ನು ಸಂಶೋಧನ ದೃಷ್ಟಿಯಿಂದ ಪರಾಮರ್ಶೆ ಮಾಡುವುದು ಅಗತ್ಯ ಎಂಬುದು ಅವರ ಅಭಿಪ್ರಾಯ.

ಮುಂದುವರೆದು ವೈದ್ಯಶಾಸ್ತ್ರದಲ್ಲಿ ಸುಮಾರು ಮುವ್ವತ್ತು ಗ್ರಂಥಗಳು ಹುಟ್ಟಿರುವುದು ಅದರ ಸರ್ವಜನೋಪಯುಕ್ತತೆಯನ್ನು ಸಾರಿ ಹೇಳುತ್ತದೆ. ಸಾಮಾನ್ಯ ವೈದ್ಯ ವರ್ಗದಲ್ಲಿಯೇ ಸುಮಾರು ಹದಿನೈದು ಗ್ರಂಥಗಳು ಗೋಚರಕ್ಕೆ ಬರುತ್ತವೆ. ಇವುಗಳಲ್ಲಿ ಕೀರ್ತಿವರ್ಮನ 'ಗೋವೈದ್ಯ'ವನ್ನು (೧೧೦೦) ಬಿಟ್ಟರೆ, ಜಗದ್ದಳ ಸೋಮನಾಥನ (ಸು.೧೧೭೫) 'ಕಲ್ಯಾಣಕಾರ'ವೇ ಅತ್ಯಂತ ಪ್ರಾಚೀನವಾದದ್ದು. ಇದು ಪೂಜ್ಯಪಾದರ ಸಂಸ್ಕೃತ ಮೂಲಗ್ರಂಥದ ಅನುವಾದ. ದೊರಕಿರುವ ಅಸಮಗ್ರ ಹಸ್ತಪ್ರತಿಯಲ್ಲಿ ಪೀಠಿಕಾ ಪ್ರಕರಣ, ಪರಿಭಾಷಾ ಪ್ರಕರಣ ಮತ್ತು ರಕ್ತಪಿತ್ತ, ಷೋಡಶಜ್ವರ, ಅತಿಸಾರಗ್ರಹಣೀ, ಉದರರೋಗ, ಕ್ಷಯ, ಗುಲ್ಮರೋಗ ಈ ರೋಗಗಳ ನಿದಾನ ಮತ್ತು ಚಿಕಿತ್ಸಾಕ್ರಮಗಳನ್ನು ವಿವರಿಸುವ ಎಂಟು ಅಧ್ಯಾಯಗಳಿವೆ. 'ಬಾಹಟ, ಸಿದ್ಧಸಾರ, ಚರಕ ಎಂಬ ವೈದ್ಯಗ್ರಂಥಗಳಿಗಿಂತ ಪೂಜ್ಯಪಾದನ 'ಕಲ್ಯಾಣಕಾರ'ವು ಉತ್ಕೃಷ್ಟವಾದುದೆಂದೂ ಅದರಲ್ಲಿ ಹೇಳಿರುವ ಚಿಕಿತ್ಸೆ ಮಧ್ಯ ಮಾಂಸ ಮಧು ವರ್ಜಿತವೆಂದೂ' ಗ್ರಂಥಕಾರನು ತಿಳಿಸಿದ್ದಾನೆ. ಪೂಜ್ಯಪಾದರು ಜೈನರಾದ್ದರಿಂದ ಪ್ರಾಣಿಹಿಂಸೆಗೆ ಅವಕಾಶಕೊಡುವ ಮಾಂಸ ಮಧು ಇವುಗಳ ಸೇವನೆಯನ್ನು ನಿಷೇಧಿಸಿರುವುದು ಗಮನಾರ್ಹ. ಮಧ್ಯಪಾನ ಜೈನಧರ್ಮದಲ್ಲಿಯೇ ನಿಷಿದ್ಧ. ಜ್ವರದ ಚಿಕಿತ್ಸಾ ಕ್ರಮವನ್ನು ಹೀಗೆ ತಿಳಿಸಿದೆ: 'ಜ್ವರದ ಆದಿಯೊಳ್ ಉಪವಾಸಂ; ಜ್ವರ ಮಧ್ಯಮದಲ್ಲಿ ಗಂಜಿ, ಪೇಳ್ವ ಕಷಾಯಂ; ಜ್ವರಪಾಕದೊಳ್ ಅಸ್ತಮಿತ ಜ್ವರದೊಳ್, ಮಲಹರಣಂ; ಇನಿತು ಇವು ಆರೋಗ್ಯಕರಂ'. ಇವರಲ್ಲದೆ ಶ್ರೀಧರದೇವ (ಸು.೧೫೦೦), ರತ್ನಾಕರ ಸಾಳ್ವ ಈ ಇಬ್ಬರು ಜೈನ ಕವಿಗಳೂ ವೈದ್ಯಗ್ರಂಥಗಳನ್ನು ಬರೆದಿದ್ದಾರೆ. ಶ್ರೀಧರದೇವನ 'ವೈದ್ಯಾಮೃತ' ಚಂಪೂ ರೂಪದಲ್ಲಿರುವುದು ಗಮನಾರ್ಹ. ಸಾಳ್ವನ ಗ್ರಂಥ ಸಾಂಗತ್ಯದಲ್ಲಿದೆ ಎಂದು ಪ್ರೊ. ಎಂ.ವಿ.ಸಿ ಗುರುತಿಸಿದ್ದಾರೆ.

ಕೇವಲ ಲಕ್ಷಣಗ್ರಂಥಗಳು ಮಾತ್ರವಲ್ಲದೆ ಜ್ಯೋತಿಷ್ಯ, ವೈದ್ಯ, ಛಂದಸ್ಸು, ಕಾಮಶಾಸ್ತ್ರ ಇತ್ಯಾದಿ ಬೇರೆ ಬೇರೆ ಶಾಸ್ತ್ರಗಳಲ್ಲಿಯೂ ಉಚ್ಚಮಟ್ಟದ ಗ್ರಂಥಗಳು ರಚಿತವಾದದ್ದು ಈ ಕಾಲದ (ಕ್ರಿ.ಶ.೮೫೦–೧೧೫೦) ವೈಶಿಷ್ಟ್ಯವಾಗಿದೆ ಎಂಬುದಾಗಿ ಡಾ.ಕೆ.ಕೃಷ್ಣಮೂರ್ತಿ (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ–ಸಂಪುಟ–೨) ಗುರುತಿಸಿದ್ದಾರೆ. ಈ ಬೇರೆ ಬೇರೆ ಶಾಸ್ತ್ರ ರಚನೆಗಳು ಕೂಡ ಕಾವ್ಯಶೈಲಿಯ ಚೆಲುವನ್ನು ಒಳಗೊಂಡಿರುವುದು ಇನ್ನೂ ಮಹತ್ವದ್ದಾಗಿದೆ. ಶಾಸ್ತ್ರವಿಚಾರಗಳು ಕೂಡ ಜನರಂಜಕವಾಗಲು ಕಾವ್ಯದ ಸರಸ ಶೈಲಿ ಅಗತ್ಯವೆಂಬುದನ್ನು ಕನ್ನಡಿಗರು ಅಷ್ಟು ಹಿಂದೆಯೇ ಮನಗಂಡಿದ್ದರೆಂಬುವನ್ನು ಇದು ತೋರಿಸುತ್ತದೆ ಎಂದು ಅಭಿಪ್ರಾಯಿಸುತ್ತಾರೆ.

ಮೈಸೂರು ವಿಶ್ವವಿದ್ಯಾಲಯ ವಿಶ್ವಕೋಶದಲ್ಲಿ ಕರ್ಣಾಟಕದಲ್ಲಿ ವೈದ್ಯ ಎಂಬ ಅಧ್ಯಾಯದಲ್ಲಿ ಕರ್ಣಾಟಕದಲ್ಲಿ ವೈದ್ಯಕೀಯ ಎಂದರೆ ಅದು ಆಯುರ್ವೇದ ಎಂದು ಅಭಿಪ್ರಾಯಿಸುತ್ತಾರೆ. ಈ ಇತಿಹಾಸವನ್ನು ಅವರು ಆದಿಯುಗ (ಕ್ರಿ.ಪೂ.೨೬೦–ಕ್ರಿ.ಶ.೧೩೦೦), ಮಧ್ಯಯುಗ (೧೩೦೦–೧೮೦೦), ಆಧುನಿಕ ಯುಗ (೧೮೦೦ ರ ನಂತರ) ಎಂಬುದಾಗಿ ವಿಭಾಗಿಸಿದ್ದಾರೆ.

ಆದಿಯುಗ: ಉತ್ತರಭಾಗ ಅಶೋಕನ ರಾಜ್ಯದಲ್ಲಿದ್ದುದರಿಂದ ಆತ ಸ್ಥಾಪಿಸಿದ್ದ ಮನುಷ್ಯರ ಹಾಗೂ ಪ್ರಾಣಿಗಳ ಔಷಧಾಲಯಗಳು ಈ ಪ್ರದೇಶದಲ್ಲಿ ಇದ್ದಿರಬಹುದು ಎಂದು ಊಹಿಸಿ ಕರ್ಣಾಟಕದ ವೈದ್ಯ ಇತಿಹಾಸವನ್ನು ಕ್ರಿ.ಪೂ.೨೬೦ರಿಂದ ಪ್ರಾರಂಭಿಸಬಹುದು. ರಸಾಯನ ಮತ್ತು ಲೋಹಶಾಸ್ತ್ರಗಳ ಪಿತನೆಂಬ ಗೌರವಕ್ಕೆ ಪಾತ್ರನಾಗಿದ್ದ ಸಾತವಾಹನನರ ಕಾಲದ ಬೌದ್ಧಬಿಕ್ಷು ನಾಗಾರ್ಜುನ ಶ್ರೀಶೈಲ ಪರ್ವತದಲ್ಲಿ ವಾಸವಾಗಿದ್ದು ರಸಾಯನ ಪ್ರಯೋಗಗಳಲ್ಲಿ ತೊಡಗಿದ್ದ. ರಸರತ್ನಾಕರ, ಲೋಹಶಾಸ್ತ್ರ ಮುಂತಾದ ವೈದ್ಯಗ್ರಂಥಗಳನ್ನು ಬರೆದ ಈತನನ್ನು ಕರ್ಣಾಟಕದ ಪ್ರಥಮ ವೈದ್ಯವ್ಯಕ್ತಿ ಎನ್ನಬಹುದಾಗಿದೆ. ಸಾತವಾಹನರ ನಂತರ ರಾಜ್ಯಕಟ್ಟಿದ ಗಂಗರು ಜೈನ ಮತಾವಲಂಬಿಗಳಾಗಿದ್ದರು. ಗಂಗರಸ ದುರ್ವಿನೀತನ (೬೦೫–೬೫೦) ಗುರುವಾಗಿದ್ದ. ಇವನು ಬರೆದ 'ಕಲ್ಯಾಣಕಾರಕ' ಎಂಬ ಸಂಸ್ಕೃತ ವೈದ್ಯಗ್ರಂಥವನ್ನು ಮುಂದಿನ ಎಲ್ಲಾ ವಿದ್ವಾಂಸರೂ ಗುರುತಿಸಿದ್ದಾರೆ. ಈತನ ಸೋದರಳಿಯ ಸಿದ್ಧ ನಾಗಾರ್ಜುನ (೬೯೦) ರಸಾಯನ ಮತ್ತು ಲೋಹ ವಿದ್ಯೆಗಳಲ್ಲಿ ಖ್ಯಾತಿಯನ್ನು ಪಡೆದಿದ್ದ. ಇವನು 'ರಸೇಂದ್ರ ಮಂಗಳ', 'ಕಕ್ಷಪುಟತಂತ್ರ', 'ನಾಗಾರ್ಜುನತಂತ್ರ' ಮುಂತಾದ ಕೃತಿಗಳನ್ನು ರಚಿಸಿದ. ಗಂಗರಾಜ ಶ್ರೀಪುರುಷ (೭೭೫) 'ಗಜಶಾಸ್ತ್ರ'ವನ್ನೂ ಆತನ ಮಗನಾದ ಸೈಗೊಟ್ಟ ಶಿವಮಾರ 'ಗಜಾಷ್ಟಕ'ವನ್ನೂ (೮೦೦) ಬರೆದಿದ್ದಾರೆ. ಶಿವಮಾರನ 'ಗಜಾಷ್ಟಕ' ಕನ್ನಡಭಾಷೆಯ ಪ್ರಥಮ ಶಾಸ್ತ್ರಗ್ರಂಥ. ರಾಷ್ಟ್ರಕೂಟ ರಾಜ ನೃಪತುಂಗನ (೮೧೫–೮೭೧) ಆಸ್ಥಾನದಲ್ಲಿದ್ದ ಉಗ್ರಾದಿತ್ಯನೆಂಬ 'ಜೈನವೈದ್ಯ ಕಲ್ಯಾಣಕಾರಕ' ಎಂಬ ಗ್ರಂಥವನ್ನು ಬರೆದಿದ್ದಾನೆ. ಚಾವುಂಡರಾಯ (೧೦೧೫–೧೦೪೨) ತನ್ನ ಕನ್ನಡ ಗ್ರಂಥವಾದ 'ಲೋಕೋಪಕಾರ'ದಲ್ಲಿ ಆಯುರ್ವೇದಶಾಸ್ತ್ರವನ್ನು ವಿಸ್ತಾರವಾಗಿ ವಿವರಿಸಿದ್ದಾನೆ.

ಚಂದ್ರರಾಜನ (೧೦೭೯) 'ಮದನತಿಲಕ', ಕೀರ್ತಿವರ್ಮನ (೧೧೨೫) 'ಗೋವೈದ್ಯ', ಚಾಳುಕ್ಯ ಚಕ್ರವರ್ತಿ ಸೋಮೇಶ್ವರನ (೧೧೨೬–೩೮) 'ಮಾನಸೋಲ್ಲಾಸ'ದಲ್ಲಿನ ಆಯುರ್ವೇದದ ವಿವರಣೆ ಮತ್ತು ಜೈನವೈದ್ಯ ಜಗದ್ಧಳ ಸೋಮನಾಥನ (೧೧೫೦)'ಕರ್ಣಾಟಕ ಕಲ್ಯಾಣಕಾರಕ', ದೇವೇಂದ್ರಮುನಿಯ (೧೨೦೦) 'ಬಾಲಗ್ರಹ ಚಿಕಿತ್ಸೆ', ಕೇಶವ ಪಂಡಿತನ (೧೨೪೦) 'ಸಿದ್ಧಮಂತ್ರ ಪ್ರಕಾಶ', 'ವೈದ್ಯಶತಕ',

'ಹೃದಯದೀಪಿಕ ನಿಘಂಟು', ಯಾದವರಾಜ ಮಹಾದೇವನ ಮುಖ್ಯಮಂತ್ರಿಯಾಗಿದ್ದ ಹೇಮಾದ್ರಿಯ (೧೨೬೦–೧೩೦೯) 'ಆಯುರ್ವೇದ ರಸಾಯನ'ವೆಂಬ ಅಷ್ಟಾಂಗ ಹೃದಯದ ಮೇಲಿನ ವ್ಯಾಖ್ಯಾನ, ಅಮೃತನಂದಿಯ 'ಅಕಾರಾದಿ ನಿಘಂಟು'–ಇವು ಈ ಯುಗದ ಕೆಲವು ಮುಖ್ಯ ವೈದ್ಯಗ್ರಂಥಗಳು.

ಮಧ್ಯಯುಗ: ವಿಜಯನಗರದ ಅಧಿರಾಜನಾಗಿದ್ದ ಮುಗಳೀಪುರದ ಅರಸ ಮಂಗರಾಜ (೧೩೬೦) ವಿಷಚಿಕಿತ್ಸೆಯಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ. ಈತನ 'ಖಗೇಂದ್ರಮಣಿದರ್ಪಣ' ಕನ್ನಡ ಶಾಸ್ತ್ರ ಸಾಹಿತ್ಯದಲ್ಲಿ ಶ್ರೇಷ್ಠಗ್ರಂಥ. ಒಂದನೆಯ ಬುಕ್ಕರಾಯನ (೧೩೫೬–೭೬) ಆಸ್ಥಾನವೈದ್ಯ ವಿಷ್ಣುದೇವನ 'ರಸರಾಜಲಕ್ಷ್ಮಿ', ಇಮ್ಮಡಿ ಬುಕ್ಕರಾಯನ (೧೪೦೪–೧೪೨೪) ಆಸ್ಥಾನವೈದ್ಯ ಲಕ್ಷ್ಮಣಪಂಡಿತನ 'ವೈದ್ಯರಾಜವಲ್ಲಭ', ಅಭಿನವಚಂದ್ರನ (೧೪೦೦) 'ಅಶ್ವಶಾಸ್ತ್ರ', ವಲ್ಲಭೇಂದ್ರನ(೧೪೩೫) ವೈದ್ಯ ಚಿಂತಾಮಣಿ, ಕಲ್ಲರಸನ (೧೪೫೦) ಜನವಶ್ಯವೆಂಬ ಕಾಮಶಾಸ್ತ್ರ, ಕವಿಲಿಂಗನ (೧೪೯೦) 'ಕಾಮಶಾಸ್ತ್ರದ ಪದಗಳು', ದಾಮೋದರ ಪಂಡಿತನ 'ಆರೋಗ್ಯತಿ ಚಿಂತಾಮಣಿ', ಭಟ್ಟನರಹರಿಯ 'ವಾಗ್ಭಟಮಂಡನ', ಶ್ರೀಧರದೇವನ (೧೫೦೦) 'ವೈದ್ಯಾಮೃತ', ಬಾಚರಸನ (೧೫೦೦) 'ಅಶ್ವವೈದ್ಯ', ಮೂರನೆಯ ಮಂಗರಸನ (೧೫೦೮) 'ಸೂಪಶಾಸ್ತ್ರ', ಸಾಳ್ವನ (೧೫೫೦) 'ವೈದ್ಯಸಾಂಗತ್ಯ', ರಘುನಾಥಸೂರಿಯ 'ಭೋಜನ ಕುತೂಹಲ', ಯಳಂದೂರು ಚನ್ನರಾಜನ (೧೫೭೦) 'ವೈದ್ಯಸಾರ ಸಂಗ್ರಹ', ವೀರಭದ್ರರಾಜನ (೧೬೦೦) 'ಹಸ್ತಾಯುರ್ವೇದ ಟೀಕೆ', ರಾಮಚಂದ್ರಪಂಡಿತನ (೧೬೨೫) 'ಅಶ್ವಶಾಸ್ತ್ರ', ಪದ್ಮಣ ಪಂಡಿತನ (೧೬೨೭) 'ಹಯಸಾರ ಸಮುಚ್ಚಯ', ಬಿಜಾಪುರದ ಸುಲ್ತಾನ್ ಇಮ್ಮಡಿ ಆದಿಲ್‌ಷಹನ (೧೬೨೬–೫೬)ಆಸ್ಥಾನದಲ್ಲಿದ್ದ ಲೋಲಂಬರಾಜನ 'ಸದ್ವೈದ್ಯಜೀವನ' ಮತ್ತು 'ವೈದ್ಯಾವತಂಸ'ಗಳು, ಕೊಟ್ಟೂರು ಬಸವರಾಜನ (೧೬೭೦) 'ಶಿವತತ್ತ್ವರತ್ನಾಕರ'ದಲ್ಲಿ ಆಯುರ್ವೇದದ ವಿವರಣೆ, ಶ್ರೀಕಂಠನಂದಿಯ 'ಪರ್ಯಾಯ ಮಂಜರಿ', ಶ್ರೀಕಂಠ ಪಂಡಿತನ 'ವೈದ್ಯಸಾರ ಸಂಗ್ರಹ', ಶ್ರೀಪಂಡಿತನ 'ಯೋಗಶತಕ', ಕೃಷ್ಣಾರ್ಯನ 'ಸಿದ್ಧಯೋಗ ಸಮುಚ್ಛಯ', ಸಲಾದು ಮಾಧವಾಚಾರ್ಯನ 'ಚಿಕಿತ್ಸಾಸಾರ ಸಂಗ್ರಹ', ಗಂಗಾಧರನ 'ಭೇಷಜ ಕಲ್ಪ', ಕಳಲೆಯ ವೀರರಾಜನ (೧೭೨೦) 'ಸಕಲವೈದ್ಯ ಸಂಹಿತಾ ಸಾರಾರ್ಣವ', ನಂಜರಾಜನ (೧೭೪೦) 'ವೈದ್ಯಸಾರಸಂಗ್ರಹ', ತಿಮ್ಮರಾಜಗೌಡನ (೧೭೫೦) 'ಸ್ತ್ರೀವೈದ್ಯ', ಇಮ್ಮಡಿ ಕೃಷ್ಣರಾಜ ಒಡೆಯನ (೧೭೫೯) 'ಬಾಹಟ ಟೀಕೆ', ಲಕ್ಷ್ಮಣಪಂಡಿತನ (೧೭೭೫) 'ಅಕಾರಾದಿ ನಿಘಂಟು' –ಈ ಯುಗದ ಮುಖ್ಯ ವೈದ್ಯಗ್ರಂಥಗಳು.

ಹದಿನೈದನೆಯ ಶತಮಾನದವರೆಗೆ ದಕ್ಷಿಣಭಾರತದಲ್ಲಿ ಏಕೈಕ ವೈದ್ಯ ಪದ್ಧತಿಯಾಗಿದದ್ದು ಆಯುರ್ವೇದ. ನಂತರ ಯುನಾನಿ ಪದ್ಧತಿ, ಐರೋಪ್ಯ ಪದ್ಧತಿ ಕ್ರಮೇಣ ನೆಲೆಯೂರಿದವು. ಈ ಅಂಶಗಳನ್ನು ಗಮನಿಸಿದಾಗ ವೈದ್ಯಶಾಸ್ತ್ರ ಗ್ರಂಥಗಳು ಆಯಾ ಕಾಲಘಟ್ಟದಲ್ಲಿ ಕಂಡಂತಹ ಕಾಯಿಲೆಗಳನ್ನು ಉದಾಹರಿಸಿ ಪರಿಹಾರವನ್ನು ಸೂಚಿಸಿರುವುದನ್ನು ಕಾಣಬಹುದು. ರಾಷ್ಟ್ರಕೂಟ ರಾಜ ನೃಪತುಂಗನ (೮೧೫–೮೭೧) ಆಸ್ಥಾನದಲ್ಲಿದ್ದ ಉಗ್ರಾದಿತ್ಯನೆಂಬ ಜೈನ ವೈದ್ಯ 'ಕಲ್ಯಾಣಕಾರಕ' ಎಂಬ ಗ್ರಂಥ ಬರೆದಿದ್ದಾನೆ. ಕನ್ನಡದಲ್ಲಿ ಪಶ್ಚಿಮ ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲ ಸೋಮೇಶ್ವರನ (ಸು.೧೦೪೨–೧೦೬೮) ಮಗನೂ ಮೂರನೆಯ ಜಯಸಿಂಹನ ಸಹೋದರನೂ ಆಗಿದ್ದ ಕೀರ್ತಿವರ್ಮನು ವೈದ್ಯರತ್ನನೆನಿಸಿದ್ದನು. ಇವನ 'ಗೋವೈದ್ಯ' ಗ್ರಂಥವು ಕನ್ನಡ ವೈದ್ಯಶಾಸ್ತ್ರಕ್ಕಷ್ಟೇ ಅಲ್ಲ, ಭಾರತೀಯ ವೈದ್ಯಶಾಸ್ತ್ರಕ್ಕೂ ಒಂದು ವಿಶಿಷ್ಟ ರೀತಿಯ ಕೊಡುಗೆಯೆನ್ನಬಹುದು. ಏಕೆಂದರೆ ಭಾರತೀಯ ವೈದ್ಯಶಾಸ್ತ್ರದ ವಿಭಾಗಗಳಲ್ಲಿ ಆಯರ್ವೇದದ ಅಂಗವಾಗಿ ಮನುಷ್ಯರ ಚಿಕಿತ್ಸೆಯೂ, ಅಶ್ವಶಾಸ್ತ್ರ, ಗಜಶಾಸ್ತ್ರಗಳ ಅಂಗವಾಗಿ ಆಯಾ ಪ್ರಾಣಿ ರೋಗಗಳ ಚಿಕಿತ್ಸೆಯೂ ಪ್ರತಿಪಾದಿತವಾಗುತ್ತಿದ್ದವೇ ಹೊರತು ಪ್ರತ್ಯೇಕವಾಗಿ ಗೋವೈದ್ಯವನ್ನೇ ಕುರಿತ ಸ್ವತಂತ್ರ ಗ್ರಂಥ ಸಂಸ್ಕೃತದಲ್ಲಿ ಕೂಡ ಅಲ್ಲಿಯವರೆಗೆ ದೊರೆತಿಲ್ಲ ಎಂಬುದನ್ನು ವಿದ್ವಾಂಸರುಗಳು ಗುರುತಿಸುತ್ತಾರೆ.

ಚಾವುಂಡರಾಯ: ಇವನು ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರಸ್ವಾಮಿಯನ್ನು ಮಾಡಿಸಿದ ಚಾವುಂಡರಾಯನಲ್ಲ. ಈತನು ಪಶ್ಚಿಮ ಚಾಲುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹನ (ಕ್ರಿ.ಶ.೧೦೧೫–೧೦೪೨) ಆಸ್ಥಾನದಲ್ಲಿ ಮನ್ನಣೆ ಪಡೆದ ಮಹಾನ್ ಕವಿ. ಇವನು ಲೋಕಕ್ಕೆ ಉಪಕಾರವಾಗುವಂತಹ ಶಾಸ್ತ್ರಗಳನ್ನೆಲ್ಲಾ ಒಂದೆಡೆ ಸೇರಿಸಿ ಸಂಗ್ರಹರೂಪದಲ್ಲಿ 'ಲೋಕೋಪಕಾರ' ಎಂಬ ಕೃತಿಯನ್ನು ರಚನೆ ಮಾಡಿದ.

ಈ ಕೃತಿಕಾರನು ತಾನು ಮುದ್ಗಲ್ ಗ್ರಾಮದವನೆಂದೂ, ಬ್ರಾಹ್ಮಣವಂಶದ ಕಾಶ್ಯಪಗೋತ್ರದ ಪಂಗೌಡಭಟ್ಟ ಮತ್ತು ಮಲ್ಲಿಕಬ್ಬೆಯರ ಮಗನೆಂದು ಹೇಳಿಕೊಂಡಿದ್ದಾನೆ. ಈತನ ಕಾಲ ಕ್ರಿ.ಶ.೧೦೨೫. ಇವನಿಗೆ 'ಅಚಲಿತ ಶಿಷ್ಯ ಕಲ್ಪದ್ರುಮ', 'ಕಾವ್ಯವಿಲಾಸ', 'ದಾನವಿನೋದ', ಮತ್ತು 'ವಾಗ್ವಧೂಮಂಡನ ಮುಖತಿಲಕ' ಇತ್ಯಾದಿ ಬಿರುದುಗಳಿದ್ದವು.

ಲೋಕೋಪಕಾರ: ಈ ಕೃತಿ ಕಂದವೃತ್ತಗಳ ಶೈಲಿಯಲ್ಲಿದೆ. ಇದರಲ್ಲಿ ಒಟ್ಟು ಹನ್ನೆರೆಡು ಅಧ್ಯಾಯಗಳಿವೆ. ಒಂದೊಂದೂ ಒಂದು ನಿತ್ಯೋಪಯೋಗಿ ವಿಷಯವನ್ನು ಒಳಗೊಂಡಿದೆ.

ಕರದಿಂ ಪಂಚಾಂಗನಿರ್ಣಯಂ ನವಪಟಲಸ್ಥಿತಿ ವಾಸ್ತು ಉತ್ಪಾತಶಾಂತಿ
ವರಜಲಾರ್ಗಳಂ ವೃಕ್ಷಾಯುರ್ವೇದ ರುಗಂಧಯುಕ್ತ ಕ್ರಮಂ ಸೂಪಶಾಸ್ತ್ರಂ

ನರಗಜಾಶ್ವ ಗೋವೈದ್ಯ ವಿಷತತ್ವಲಕ್ಷಣಂ ಶಕುನಮೆಂಬಧಿಕಾರಂಗಳಂ
ಧರಣಿಯ ಬಣ್ಣಿಸೆ ಲೋಕೋಪಕಾರಮಂ ಕಾವ್ಯವಿಳಾಸದಿಂದಾಗಿ ಪೇಳ್ದಂ

ಪಂಚಾಂಗಫಲ, ಅಧಿದೇವತೆಗಳು, ಸಾಧಕ ಬಾಧಕ ನಕ್ಷತ್ರಗಳು, ವಿದ್ಯಾರ್ಜನೆ, ವಸ್ತ್ರಧಾರಣೆ, ಔಷಧ ಸೇವನೆ ಇತ್ಯಾದಿಗಳಿಗೆ ಯೋಗ್ಯ ಕಾಲ, ಗ್ರಹಗತಿ ಮುಂತಾದವುಗಳನ್ನು ಮೊದಲ ಅಧ್ಯಾಯದಲ್ಲಿಯೂ, ವರ್ಣಾಶ್ರಮ ಧರ್ಮಗಳಿಗೆ ಅವಶ್ಯಕವಿರುವ ಸಂಸ್ಕಾರಗಳ ಕಾಲ ವಿವೇಚನೆಯನ್ನು ಎರಡರಲ್ಲಿಯೂ, ವಾಸ್ತುವಿದ್ಯ ಹಾಗೂ ಗೃಹ ನಿರ್ಮಾಣ ಮೂರರಲ್ಲಿ, ದೇಶ ಹಾಗೂ ಜನರ ಪ್ರಕೃತಿ ನಾಲ್ಕರಲ್ಲಿ, ಭೂಗರ್ಭದಲ್ಲಿ ನೀರುಳ್ಳ ಸ್ಥಳಗಳ ಬಗ್ಗೆ ಐದರಲ್ಲಿ, ವೃಕ್ಷಾಯುರ್ವೇದ ಆರರಲ್ಲಿ, ಗಂಧಯುಕ್ತಿಕ್ರಮ ಏಳರಲ್ಲಿ, ಸೂಪಶಾಸ್ತ್ರ ಎಂಟರಲ್ಲಿ, ನರವೈದ್ಯ ಒಂಬತ್ತರಲ್ಲಿದೆ. ಈ ಭಾಗ ಅತ್ಯಂತ ದೀರ್ಘವಾಗಿದ್ದು ವಿವರಣೆಗಳನ್ನು ನೀಡಲಾಗಿದೆ. ವಿಷವೈದ್ಯ ಹತ್ತರಲ್ಲಿದೆ. ಹನ್ನೊಂದರಲ್ಲಿ ಆನೆ, ಕುದುರೆ, ಮುಂತಾದ ಪ್ರಾಣಿಗಳ ಶುಭಾಶುಭ ಲಕ್ಷಣಗಳು, ಪ್ರಾಣಿ ಹಾಗೂ ಪ್ರಕೃತಿಯ ಶಕುನಗಳು ಹನ್ನೆರಡರಲ್ಲಿವೆ. ಹೀಗೆ ಇದರಲ್ಲಿ ಶಿಲ್ಪಶಾಸ್ತ್ರ, ವ್ಯವಸಾಯ, ವೈದ್ಯ, ವನಸ್ಪತಿ ಮುಂತಾದ ನಾನಾ ಲೌಕಿಕ ವಿಷಯಗಳು ಸೇರಿವೆ. ಸಂಸ್ಕೃತದಲ್ಲಿ ಬಂದ 'ಮಾನಸೋಲ್ಲಾಸ' ಅಥವಾ 'ಅಭಿಲಕ್ಷಿತಾರ್ಥ ಚಿಂತಾಮಣಿ'ಯ ಕೆಲವು ಅಧ್ಯಾಯಗಳೊಡನೆ ಮಾತ್ರ ಈ ಗ್ರಂಥವನ್ನು ಹೋಲಿಸಬಹುದಾಗಿದೆ. ಅಂದಿನವರ ವಿಜ್ಞಾನ, ಕಲೆ, ಸಂಸ್ಕೃತಿ, ಆಚಾರ, ವ್ಯವಹಾರನ್ನು ತಿಳಿಯಲು ಈ ಗ್ರಂಥ ಉಪಯುಕ್ತವಾಗಿದೆ.

ಜಗದ್ದಳ ಸೋಮನಾಥ: ಇವನಿಗೆ ವಿಚಿತ್ರಕವಿ ಎಂಬ ಬಿರುದಿತ್ತು. ಇವನು ಜೈನಕವಿ. ಇವನ ಕಾಲ ಸರಿಯಾಗಿ ತಿಳಿಯದು. ಇವನು 'ಕರ್ಣಾಟಕ ಕಲ್ಯಾಣಕಾರಕ' ಎಂಬ ಕೃತಿ ರಚಿಸಿದ್ದಾನೆ. ಸು.೧೧೭೭ರಲ್ಲಿ ಜೀವಿಸಿದ್ದ ಕವಿ ಸುಮನೋಬಾಣ ಹಾಗೂ ಅಭಯಸಿದ್ಧಾಂತಿಯೂ ಇವನ ಗ್ರಂಥವನ್ನು ತಿದ್ದಿರುವರು ಎಂದು

ಸುಮನೋಬಾಣಕವೀಂದ್ರ
ಪ್ರಮುಖಂಬೆರಸಭಯಚಂದ್ರ ಸಿದ್ಧಾಂತಿಗಳು ।
ತ್ತಮಮಾಗೆ ತಿರ್ದಿದೀಕೃತಿ ।
ಗಮರ್ದುದು ಸೌಭಾಗ್ಯಮೊಂದಿದಾಯುಂ ಶ್ರೀಯುಂ।

ಪದ್ಯದಲ್ಲಿ ಹೇಳಿರುವುದರಿಂದ ಕವಿ ಸುಮನೋಬಾಣನ ಕಾಲಘಟ್ಟದವನಿರಬೇಕೆಂದು ಊಹಿಸಬಹುದಾಗಿದೆ.

ಕರ್ಣಾಟಕ ಕಲ್ಯಾಣಕಾರಕ: ಈ ಕೃತಿ ಪೂಜ್ಯಪಾದರು ರಚಿಸಿದ್ದ 'ಕಲ್ಯಾಣಕಾರಕ' ಎಂಬ ಸಂಸ್ಕೃತ ಕೃತಿಯ ಭಾಷಾಂತರವಾಗಿದೆ. ಗಂಗರಸ ದುರ್ವಿನೀತನ (ಕ್ರಿ.ಶ.೬೦೫–೬೫೦) ಗುರುವಾಗಿದ್ದ ದಿಗಂಬರ ಜೈನಯತಿ ಪೂಜ್ಯಪಾದ ವೈದ್ಯಶಾಸ್ತ್ರದಲ್ಲಿಯೂ ಪಂಡಿತನಾಗಿದ್ದ. ಇವನು ಬರೆದ 'ಕಲ್ಯಾಣಕಾರಕ' ಎಂಬ ಸಂಸ್ಕೃತ ವೈದ್ಯಗ್ರಂಥವನ್ನು ಮುಂದಿನ ಎಲ್ಲಾ ವಿದ್ವಾಂಸರೂ ಗೌರವದಿಂದ ಸ್ಮರಿಸಿದ್ದಾರೆ. ಈ ಕೃತಿ ಸಮಗ್ರವಾಗಿ ಸಿಕ್ಕಿಲ್ಲ. ಸಿಕ್ಕಿರುವುದರಲ್ಲಿ ಕೆಲವು ಭಾಗ ಹೀಗಿವೆ, ಪೀಠಿಕಾಪ್ರಕರಣ, ಪರಿಭಾಷಾ ಪ್ರಕರಣ, ಷೋಡಶಜ್ವರನಿದಾನಚಿಕಿತ್ಸಾನಿರೂಪಣ, ಅತಿಸಾರಗ್ರಹಣೀ ನಿದಾನ ಚಿಕಿತ್ಸಾನಿರೂಪಣ, ರಕ್ತಪಿತ್ತನಿದಾನಚಿಕಿತ್ಸಾ ನಿರೂಪಣ, ಕ್ಷಯನಿದಾನ ಚಿಕಿತ್ಸಾ ನಿರೂಪಣ, ಉದರರೋಗ ನಿದಾನ ಚಿಕಿತ್ಸಾನಿರೂಪಣ, ಗುಲ್ಮನಿದಾನಚಿಕಿತ್ಸಾನಿರೂಪಣ ಎಂಬ ಎಂಟು ಅಧ್ಯಾಯಗಳು ಮಾತ್ರ ಇವೆ. 'ಬಾಹಟ', 'ಸಿದ್ಧಸಾರ' ಮತ್ತು 'ಚರಕ' ಎಂಬ ವೈದ್ಯಗ್ರಂಥಗಳಿಗಿಂತ ಪೂಜ್ಯಪಾದರ 'ಕಲ್ಯಾಣಕಾರಕ'ವು ಉತ್ಕೃಷ್ಟವಾದುದೆಂದೂ ಅದರಲ್ಲಿ ಹೇಳಿರುವ ಚಿಕಿತ್ಸೆ, ಮದ್ಯಮಾಂಸ ಮಧು ವರ್ಜಿತವೆಂದೂ ಕೆಳಗಿನ ಪದ್ಯದಲ್ಲಿ ಹೀಗೆ ಹೇಳುತ್ತಾನೆ;

ಸುಕರಂ ತಾನನ ಪೂಜ್ಯಪಾದಮುನಿಗಳ್ ಮುಂ ಪೀಳ್ದ ಕಲ್ಯಾಣಕಾ ।
ರಕಮಂ ಬಾಹಟಸಿದ್ಧಸಾರಚರಕಾದ್ಯುತ್ಕೃಷ್ಟಮಂ ಸದ್ಗುಣಾ ॥
ಧಿಕಮಂ ವರ್ಜಿತಮದ್ಯಮಾಂಸಮಧುವಂ ಕರ್ಣಾಟದಿಂ ಲೋಕರ ।
ಕ್ಷಕಮಂ ಚಿತ್ರಮದಾಗೆ ಚಿತ್ರಕವಿ ಸೋಮಂ ಪೀಳ್ದಿನಿಂತಳ್ತೆಯಿಂ ॥

ಗ್ರಂಥದ ಪ್ರಾರಂಭದಲ್ಲಿ ಚಂದ್ರನಾಥ ತೀರ್ಥಂಕರನನ್ನು ಸ್ತುತಿಸಿದ್ದಾನೆ. ನಂತರ ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳನ್ನು ಸ್ತುತಿಸಲಾಗಿದೆ. ಸರಸ್ವತಿ, ಮಾಧವೇಂದು, ಸೈದ್ಧಾಂತಿಚಕ್ರವರ್ತಿ ಅಭಯಚಂದ್ರ, ಕನಕಚಂದ್ರ ಪಂಡಿತದೇವ ಇವರುಗಳನ್ನು ಹೋಗಳಿದ್ದಾನೆ. ಅಂತ್ಯದಲ್ಲಿ 'ಇದು ವಿಚಿತ್ರಕವಿ ಜಗದ್ದಳಸೋಮನಾಥ ವಿರಚಿತಮಪ್ಪ ಕರ್ಣಾಟಕಕಲ್ಯಾಣಕಾರದೊಳ್' ಎಂದಿದೆ.

ಎಲ್ಲ ಕಲೆಗಳಲ್ಲಿಯೂ ಲೋಕಕ್ಕೆ ಉಪಕಾರಿಯಾದ ವೈದ್ಯಕಲೆಯೇ ಮುಖ್ಯವಾದದ್ದು ಎಂದು ಕವಿ ಅಭಿಪ್ರಾಯಿಸುತ್ತಾನೆ.

ಅವಾವ ಕಲಾವಿದ್ಯೆಗಳೇವುವೋ ।
ಲೋಕೋಪಕಾರಿ ವೈದ್ಯಮೆ ಸಾಲ್ಗುಂ ಭಾವಿಸೆ ॥
ಷಡ್ದಂವ್ಯದೊಳಂ ಜೀವದ್ರವ್ಯಮೆ ಜಗಕ್ಕೆ ।
ದೈವಮೆಂಬರ್॥

ಎಂದು ಹೇಳಿ, ವೈದ್ಯಶಾಸ್ತ್ರವೇ ಪ್ರಮುಖವಾದದ್ದು ಎಂದಿದ್ದಾನೆ. ಮುಂದುವರೆದು ಯಾರನ್ನು ವೈದ್ಯರನ್ನು ಮಾಡಬಾರದು, ವೈದ್ಯವೃತ್ತಿಗೆ ಯಾರೆಲ್ಲಾ ಅರ್ಹರಲ್ಲ ಎಂದು ತಿಳಿಸುತ್ತಾ,

ಕ್ರೂರಾಳಾಪಂಗೆ ದುರಾಚಾರಿಗೆ ।
ಮಾತ್ಸರ್ಯಸಂಯುತಂಗಮಹಂ ಕಾರಿಗೆ ॥
ಮಿಥ್ಯಾದೃಷ್ಟಿಗೆ ಪಾರಕೆಯ್ತವಂಗೆ ಮಾಡಲಾಗದು ।

ಮರ್ದಂ॥ ಎಂದಿದೆ. 'ಕಲ್ಯಾಣಕಾರಕ'ದ ಪ್ರತಿಪ್ರಕರಣದಲ್ಲೂ ವ್ಯಾದಿಗಳ ವಿವರಗಳನ್ನು ನೀಡಲಾಗಿದೆ. ಲಕ್ಷಣಗಳು, ಗಿಡಮೂಲಿಕೆಗಳನ್ನು ಸಂಗ್ರಹಿಸುವ ಕಾಲ, ಋತಗಳು, ಆಹಾರ ಪದ್ಧತಿ, ಮುಂತಾದವುಗಳನ್ನು ವಿವರಿಸಿದ್ದಾನೆ.

ಹದಿನಾರು ರೀತಿಯ ಜ್ವರಗಳ ವಿಧಾನ, ಅದಕ್ಕೆ ನೀಡಬೇಕಾದ ಚಿಕಿತ್ಸಾವಿಧಾನ ಕುತೂಹಲಕರವಾಗಿದೆ. ಭೂತಜ್ವರ, ಕಾಮಜ್ವರ, ವಾತಜ್ವರ, ವಾತಪಿತ್ತಶ್ಲೇಷಜ್ವರ, ವಾತಶ್ಲೇಷಜ್ವರ, ತ್ರಿದೋಷಜ್ವರ, ಸನ್ನಿಪಾತಜ್ವರ, ಅಭಿಚಾರ ಕೃತ್ರಿಮ ಅಮಜ್ವರ, ಶೀತಜ್ವರ, ಅಹಿಕಜ್ವರ ಹೀಗೆ ಅನೇಕ ಜ್ವರಗಳ ಹೆಸರು, ಲಕ್ಷಣಗಳನ್ನು ಹೇಳವುದರೊಂದಿಗೆ ಆಯಾ ಜ್ವರಗಳಿಗೆ ಮಾಡಬೇಕಾದ ಪಥ್ಯಕ್ರಮ, ಗಂಜಿಯ ಗುಣ, ಕಷಾಯ, ಮುಂತಾದ ಆಹಾರಕ್ರಮಗಳನ್ನು ನೀಡಲಾಗಿದೆ.

ಇಲ್ಲಿ ಜ್ವರಗಳಿಗೆ ಹೇಳಿರುವ ನಿದಾನಕ್ರಮ ಸುಲಭವೂ ಪರಿಣಾಮಕಾರಿಯೂ ಆಗಿರುವಂತೆ ತೋರುತ್ತದೆ. ಉದಾಹರಣೆಗೆ ಜ್ವರೋತ್ಪತ್ತಿ ಮತ್ತು ಅದರ ಚಿಕಿತ್ಸಾವಿಧಾನಗಳನ್ನು ನೋಡಬಹುದು;

ಜ್ವರೋತ್ಪತ್ತಿಗೆ: ಮಲಸಂಗ್ರಹದಿಂದುದರಾ ।
ನಲನಲಿವಿಂದಾಮಚಲನೆಯಿಂ ಜ್ವರಮೊಗೆಗುಂ ॥
ಕೆಲರಾ ತ್ರಪುರಧ್ವಂಸಿಯ ।
ಲಲಾಟಲೋಚನದಿಮೊಗೆದುದೆಂಬರ್ ಜ್ವರಮಂ ॥
ಚಿಕಿತ್ಸೆ: ಜ್ವರದಾದಿಯೋಳುಪವಾಸಂ।
ಜ್ವರಮಧ್ಯಮದಲ್ಲಿ ಗಂಜಿ ಪೇಳ್ವ ಕಷಾಯಂ ॥
ಜ್ವರಪಾಕದೊಳಸ್ತಮಿತ ।
ಜ್ವರದೊಳ್ ಮಲಹರಣಮಿನಿತಿವಾರೋಗ್ಯಕರಂ ॥

ಎಂದು ಲಕ್ಷಣ ತಿಳಿಸಿ ಜೊತೆಗೆ ಅದಕ್ಕೆ ಪರಿಹಾರವನ್ನೂ ನೀಡಲಾಗಿದೆ. ಸೋಮನಾಥ ಪಿತ್ತಜ್ವರಕ್ಕೆ ಕಲ್ಕವನ್ನು ಹೀಗೆ ತಿಳಿಸಿಕೊಡುತ್ತಾನೆ,

ಸಿರಿಕಂಡಂ ಬಾಳಂ ಶ ।
ರ್ಕರೆ ಬೇವಿನಕಡ್ಡಿ ಭದ್ರಮುಸ್ತೆ ದ್ರಾಕ್ಷಂ ॥
ಬೆರಸರೆದು ಕುಡಿಯಲೆರೆದೊಡೆ ।
ಪರಿಹರಿಸುಗುಮೆಯ್ದೆ ಪಿತ್ತಜನಿತಜ್ವರಮಂ ॥

ವಿಷಮಜ್ವರಕ್ಕೆ ನಸ್ಯವನ್ನು ತಿಳಿಸುತ್ತಾ,

ಪೊಸಚಿಕ್ಕಣಿಕೆಯ ಪುಲ್ಲಂ ।
ಪೊಸಬೆಳ್ಳುಳ್ಳಿಯ ರಸಂಗಳಂ ತಳದಿಂದಂ ॥
ಪೊಸೆದಾಗಳೆ ನಸ್ಯಂಗೆಯೆ ।
ಬಸವಲ್ಲೆನಿಪಾ ಜ್ವರಂಗಳಂ ಮಸುಳಿಸುಗುಂ ॥

ಮನೆಯಲ್ಲಿ ಸುಲಭವಾಗಿ ಮಾಡಿಕೊಳ್ಳುವ ಇಂತಹ ನಸ್ಯ ವಿಷಮಶೀತಜ್ವರವನ್ನು ದೂರವಿಡುವ ಸುಲಭೋಪಾಯವಿದು. ಈ ವಿಷಯಗಳ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ. ಜ್ವರ ಹೆಚ್ಚಾಗಿ ಮಾತನಾಡಲಾಗದೆ ಇರುವಾಗ ನಾಲಿಗೆ ಬಿದ್ದು ಹೋದಾಗ ಯಾವ ರೀತಿಯ ಚಿಕಿತ್ಸೆ ಮಾಡಬೇಕೆಂಬುದನ್ನು ಕೆಳಗಿನ ಪದ್ಯ ತಿಳಿಸುತ್ತದೆ,

ಪರಕಾಲದ ಪುಣಿಸೆಯ ಪ ।
ಣ್ಣ ಲೇಹ್ಯಮಂ ಮಾಡೆ ಸನ್ನಿಪಾತಜ್ವರದಿಂ ॥
ಸಲೆ ಪೊರಳದಿರ್ದ ನಾಲಗೆ ।
ಗೆ ಲೇಸನೀಗುಂ ಜ್ವರಂಗಳಂ ಪಿಂಗಿಸುಗುಂ ॥
ಪಿತ್ತದಿಂದ ಅತಿಸಾರವಾದಾಗ ಮಾಡಬೇಕಾದ ಚಿಕಿತ್ಸೆ ಹೀಗಿದೆ,
ಪರಿವತಿಸಾರಂ ಪಿರಿದಾ ।
ಗಿರೆ ಹೂಲಿಯಬೇರ ತಿಗುನೆಮ್ಮೆಯ ಮೊಸರೊಳ್ ॥
ಬೆರಸಿಟ್ಟು ಸೈಂಧವಂ ಕೂ ।
ಡಿರೆ ಮೆಲ್ವುದು ದಿವ್ಯಯೋಗಮಿದು ಪರಿಹರಿಕುಂ ॥

ಇಲ್ಲಿ ತಿಳಿಸಿರುವ ಹೂಲಿಯಬೇರು ಅದೇ ಹೆಸರಿನಲ್ಲಿದೆಯೇ? ಅಥವಾ ಬೇರೆ ಹೆಸರಿದೆಯೇ ಎಂಬುದನ್ನು ಪರೀಕ್ಷಿಸಬೇಕು, ಹಾಗೂ ಇವೆಲ್ಲವು ಅತ್ಯಂತ ಸರಳವಾಗಿ ಮನೆಯಲ್ಲಿಯೇ ಮಾಡಿಕೊಳ್ಳಬಹುದಾದ ಮನೆಮದ್ದುಗಳಾಗಿವೆ. ಇದೇ ರೀತಿ ರಕ್ತಪಿತ್ತಕ್ಕೆ ಪರಿಹಾರವನ್ನು,

ಬೆರಸುವುದುರಿ ಘೃತಮಂ ಶ ।
ರ್ಕರೆಯಂ ನೆಲ್ಲಿಯುಮನಮರ್ದುವಳ್ಳಿಯ ಪುಡಿಯಂ ॥
ಪಿರಿದೆನಿಪ ರಕ್ತಪಿತ್ತದ ।
ಭರಮಂ ಪರಿಹರಿಕುಮರಿಗಿದಮೃತಾಮಳಕಂ ॥

ಹೀಗೆ ಆ ಕಾಲದ ಅನೇಕ ಬೇನೆಗಳಿಗೆ ಮನೆಮದ್ದುಗಳನ್ನು ಹೇಳುವುದರ ಮೂಲಕ ಜನಸಾಮಾನ್ಯರಿಗೆ ರೋಗರುಜಿನಕ್ಕೆ ಪರಿಹಾರವನ್ನು ತಿಳಿಸುವ ಈ ಗ್ರಂಥ ಕೇವಲ ಅಂದಿಗಷ್ಟೇ ಅಲ್ಲದೆ ಇಂದಿಗೂ ಮುಖ್ಯವೆನಿಸುತ್ತದೆ. ಕಣ್ಣಿನ ನೋವಿಗೆ 'ನೇರಲ ಬೀಜಮಂ ಮೊಲೆವಾಲಿನಲ್ಲಿ ತೇದು ಕಣ್ಗೆ ಎಚ್ಚೆ ಕಣ್ಣಬೇನೆ ಮಾಣ್ಗುಂ' ಎಂದೂ, 'ಅರುಳಿಮೊಗರು ಅರಗು ಇವನರೆದು ಹುಳಿಮಜ್ಜಿಗೆಯಲ್ಲಿ ಕದಡಿ ಕುಡಿಯೆ ಸೂತಕಂ ನಿಲ್ಲುವುದು' ಎಂದು ವಿವರಿಸುವ ಈ ಗ್ರಂಥಗಳ ಮಹತ್ವವನ್ನು ನಾವಿಂದು ಅರಿಯಬೇಕಿದೆ.

ಹದಿಮೂರನೇ ಶತಮಾನದಲ್ಲಿದ್ದ ಮಂಗರಾಜ–೧ ಇವನು 'ಖಗೇಂದ್ರಮಣಿದರ್ಪಣ' ಬರೆದಿದ್ದಾನೆ. ಇದೊಂದು ವಿಷವೈದ್ಯಗ್ರಂಥ. ಇವನು ಜೈನಕವಿ. ಇವನ ಗುರು ಪೂಜ್ಯಪಾದಮುನಿ. ಇವನಿಗೆ ಸುಲಲಿತಕವಿಪಿಕವಸಂತ, ಕವಿಪದ್ಮಭಾಸ್ಕರ, ಬುಧಮಿತ್ರ ಮುಂತಾದ ಬಿರುದುಗಳಿದ್ದವು. ವಿಷಗಳ ರೀತಿ, ಲಕ್ಷಣಗಳು, ಅವುಗಳಿಗೆ ಚಿಕಿತ್ಸೆಯನ್ನು ಇವನು ಹೇಳಿದ್ದಾನೆ. ಇವನು ಹೊಯ್ಸಳ ರಾಜ್ಯದಲ್ಲಿಯ ದೇವಳಿಗೆಯೆಂಬ ನಾಡಿನ ಮುಖ್ಯಪಟ್ಟಣವಾದ ಮುಗುಳಿಪುರದ ವಿಭು. ಈ ವಿಷವೈದ್ಯ ಕೃತಿಯನ್ನು ವಿಶ್ಲೇಷಿಸುವ ಉದ್ದೇಶ ನನಗಿಲ್ಲ. ಏಕೆಂದರೆ ಇದು ಆ ಕಾಲದ ಅತ್ಯಂತ ಮಹತ್ವದ ಕೃತಿ. ಇಲ್ಲಿ ಚರ್ಚಿಸಲ್ಪಟ್ಟಿರುವ ವಿಷಯದ ವ್ಯಾಪ್ತಿ ಬಹು ವಿಶಾಲವಾದದ್ದು. ವೈದ್ಯಶಾಸ್ತ್ರಗಳನ್ನು ಗಮನಿಸುವಾಗ ಮಂಗರಾಜನ ಈ ಕೃತಿಯನ್ನೂ ಗಮನಿಸುವುದು ಅತ್ಯವಶ್ಯ.

ವಿಷವೈದ್ಯ ಗ್ರಂಥವನ್ನು ಗಮನಿಸಿದರೆ ಕೃತಿಗಳ ಕೆಲವು ಪದ್ಯಗಳನ್ನು ಆಸ್ಥಾನದಲ್ಲಿದ್ದ ವೈದ್ಯ ಪಂಡಿತರೇ ರಚಿಸಿ ಅವನ್ನು ರಾಜನ ಹೆಸರಿಗೆ ಲಗತ್ತಿಸಿದಂತೆ ಸ್ಪಷ್ಟವಾಗಿ ಊಹಿಸಬಹುದಾಗಿದೆ ಎಂದು ಕೃಷ್ಣಮೂರ್ತಿ ಹನೂರರು ಅಭಿಪ್ರಾಯ ಪಡುತ್ತಾರೆ. ಎಲ್ಲ ವೈದ್ಯಗ್ರಂಥಗಳಲ್ಲೂ ಧರ್ಮಕರ್ಮ, ಪಾಪಪುಣ್ಯದ ಸಂಗತಿಗಳಿಗೆ ರೋಗಗಳನ್ನು ಅಂಟಿಸಲಾಗಿದ್ದು ಜನಗಳು ಆಳುವ ಮಹಾಪ್ರಭುಗಳಿಗೆ ನಿಷ್ಠರಾಗಿ ಇರಬೇಕೆಂದೂ ಹೇಳಲಾಗಿರುತ್ತದೆ. ರಾಜರುಗಳೇ ಯಾಕೆ ಈ ಬಗೆಯ ವೈದ್ಯಗ್ರಂಥ ರಚನೆಗೆ ಪ್ರೋತ್ಸಾಹ ಕೊಟ್ಟರೆಂಬುದು ಮತ್ತೊಂದು ಕುತೂಹಲದ ವಿಷಯ. ಕವಿಗಳು ಚಂದ್ರ, ಸೂರ್ಯ, ರಾತ್ರಿ–ಹಗಲು, ಸೂಳೆಯರು, ವಿಟರ ಕಥೆಗಳನ್ನು ಹೇಳುತ್ತಾರೆ. ನಾವಾದರೋ ಜನಸಮೂಹಕ್ಕೆ ಉಪಕಾರವಾಗುವಂಥ ವಿವಿಧ ರೋಗಸಂಬಂಧಿ ವೈದ್ಯಗ್ರಂಥವನ್ನು ರಚಿಸಿದ್ದೇವೆ ಎಂದುಕೊಂಡಿದ್ದಾರೆ. ಹದಿಮೂರನೇ ಶತಮಾನದ ಮಂಗರಸನೂ ಹಾವು, ಚೇಳು ಕಚ್ಚಿದರೂ ಅದೂ ಕೂಡ ಪೂರ್ವಜನ್ಮದ ಪಾಪವೆಂದು ತೀರ್ಮಾನಿಸಿ ಅದಕ್ಕೆ ವನಸ್ಪತಿ ಔಷಧವನ್ನು ಹೇಳುತ್ತಾನೆ. ಕ್ರೂರ ಸರ್ಪ ಕಚ್ಚಿತು, ವ್ಯಕ್ತಿ ಇನ್ನೇನು ಉಳಿಯಲಾರ ಎನ್ನುವಲ್ಲಿ ಅವನು ಬಿದ್ದಿರುವ ಸ್ಥಳದಿಂದ ದಕ್ಷಿಣ ಭಾಗದಲ್ಲಿ ಹಕ್ಕಿಯೊಂದು ಉತ್ಸಾಹದಿಂದ ದನಿ ಮಾಡಿದರೆ ಸರ್ಪ ಕಡಿದವನು ಬದುಕುತ್ತಾನೆಂದಿದ್ದಾನೆ. ಇದರೊಂದಿಗೆ ಇನ್ನೂ ಒಂದು ನಂಬಿಕೆಯ

ಪರಿಹಾರ ನೀಡುತ್ತಾನೆ. ಕೊಕ್ಕರೆಯೊಂದು ಹಾವು ಕಚ್ಚಿ ಬಿದ್ದವನ ಎಡಭಾಗದಲ್ಲಿ ಸದ್ದು ಮಾಡಿದರೆ ಇಲ್ಲ ಗೂಬೆಯು ಮರದ ಮೇಲೆ ಕುಳಿತಿರುವದನ್ನು ಕಂಡರೆ ವಿಷವು ಇಳಿಯುವುದೆಂದು ಹೇಳುತ್ತಾನೆ. ಮೇಲೆ ಹೇಳಿದ ವಿಷಯಗಳೊಂದಿಗೆ ಯಾವ ಪಂಡಿತ, ರಾಜ ಅಥವಾ ವೈದ್ಯಕವಿ ತಾನು ಯಾವ ಧರ್ಮವನ್ನು ಅನುಸರಿಸಿರುವನೋ ಆ ಧರ್ಮ ಪ್ರಚಾರ ಮಾಡುವುದಕ್ಕೆ ಮನುಷ್ಯನಿಗೆ ಬಂದರೆಗುವ ಕಾಯಿಲೆ, ಕಸಾಲೆಗಳನ್ನು ಬಳಸಿಕೊಂಡಿರುವುದು ವೈದ್ಯಗ್ರಂಥಗಳ ತುಂಬ ಕಂಡುಬರುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ಆದರೆ ಈ ವೈದ್ಯಗ್ರಂಥಗಳು ವಾತ, ಪಿತ್ತ, ಕಫದ ಹಿನ್ನಲೆಯಲ್ಲಿ ರೋಗಗಳಿಗೆ ನೀಡುವ ವನಸ್ಪತಿ ವೈದ್ಯ ವಿವರಗಳು ಮಾತ್ರ ಓದುಗನಲ್ಲಿ ಆಶ್ಚರ್ಯ, ದಿಗ್ಭ್ರಮೆ ಹುಟ್ಟಿಸುವಂತಿದೆ. ಬಹುಶಃ ಈ ನೆಲದಲ್ಲಿ ಅದೆಷ್ಟು ಬಗೆಯ ಗಿಡಮೂಲಿಕೆಗಳು ಇರುವವೋ ಅದೆಲ್ಲವನ್ನು ಬಿಡದೆ ಶೋಧಿಸಿ ಔಷಧೋಪಯೋಗಿಯನ್ನಾಗಿಸಿರುವ ಕ್ರಮವನ್ನು ಈ ಹೊತ್ತಿನ ಆಯುರ್ವೇದ ವೈದ್ಯ ವಿಜ್ಞಾನ ಸರಿಯಾಗಿ, ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕಾಗಿದೆ ಎಂಬುದು ಅವರ ಅಭಿಪ್ರಾಯ.

ಪ್ರಾಚೀನ ಕನ್ನಡ ಕೃತಿಗಳಲ್ಲಿ ಕುಷ್ಟ, ತೊನ್ನು, ಜ್ವರ, ಅತಿಸಾರ ಮುಂತಾದ ರೋಗಗಳ ವಿವರಣೆಯಿದೆ. ಆದರೆ ಆ ಕಾಲದ ಸಾಂಕ್ರಾಮಿಕ ರೋಗವೆನಿಸಿದ್ದ ಪ್ಲೇಗು, ಕಾಲರಾ ರೋಗಗಳನ್ನು ಪ್ರಸ್ತಾಪಿಸಿಲ್ಲ ಎಂಬುದನ್ನು ಅವರು ಗಮನಿಸಿದ್ದಾರೆ. ತಮ್ಮ ಲೇಖನ 'ಪ್ರಾಚೀನ ಕನ್ನಡ ವೈದ್ಯಗ್ರಂಥಗಳು ಪ್ರಸ್ತಾಪಿಸದ ಸಾಂಕ್ರಾಮಿಕ ರೋಗಗಳು' ದಲ್ಲಿ ಇಂತಹ ಮೂಲಭೂತ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ಜನಪದ ಪರಂಪರೆಯಲ್ಲಿ ರೋಗದ ಭಯಕ್ಕಿಂತ ಮಳೆಯ ಆಗಮನ, ಅನಾಗಮನ ಬಗ್ಗೆಯೇ ಜನಕ್ಕೆ ಹೆಚ್ಚು ಆತಂಕ. ಗ್ರಾಮೀಣರ ಬದುಕಿನ ಏಳುಬೀಳು ನಿರ್ಧಾರವಾಗುವುದು ಯುಗಾದಿಯ ನಂತರ ಬರುವ ಮಳೆಯಿಂದಲೇ ಎಂದು ಅವರು ವಿವರಿಸುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಲೇಖನದ ಉದ್ದೇಶ ವೈದ್ಯಶಾಸ್ತ್ರದ ಬಗ್ಗೆ ಗಮನಹರಿಸುವುದಷ್ಟೇ ಆಗಿದೆ. ಆದರೆ ಕನ್ನಡದ ಎಲ್ಲಾ ವೈದ್ಯಶಾಸ್ತ್ರಗಳನ್ನು ವಿವರಿಸುವುದು ಕಡಲಿನಷ್ಟೇ ವಿಸ್ತಾರವಾದದ್ದು. ಇಲ್ಲಿ ಮುಖ್ಯವಾಗಿ ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ'ವನ್ನು ವಿಶೇಷವಾಗಿ ಗಮನಿಸಲಾಗಿದೆ. ಸಮಗ್ರವಾಗಿ ಕೃತಿ ದೊರಕಿಲ್ಲದಿದ್ದರೂ ಆಯುರ್ವೇದದ ಚಿಕಿತ್ಸೆಯ ಪರಿಣಾಮಗಳನ್ನು ಅರಿಯಲು ಇದೊಂದು ಕೈಪಿಡಿಯಾಗಿದೆ.

ಹಿಂದೆಂದಿಗಿಂತಲೂ ಆಯುರ್ವೇದ ವೈದ್ಯ ಪದ್ಧತಿ ಇಂದು ಮತ್ತೆ ಜನರ ಗಮನಸೆಳೆಯುತ್ತಿದೆ. 'ಹಿತ್ತಲ ಗಿಡ ಮದ್ದಲ್ಲ' ಎಂದು ದೂರಸರಿದು ಲಕ್ಷಾಂತರ ರೂಪಾಯಿಗಳನ್ನು ರೋಗ ಪತ್ತೆಗೆ ಖರ್ಚು ಮಾಡುವ, ಕಾರ್ಪೋರೇಟ್ ಆಸ್ಪತ್ರೆಗಳ ಹಿಡಿತಕ್ಕೆ ಸಿಕ್ಕು ನಲುಗುತ್ತಿರುವ ಜನಕ್ಕೆ ಮತ್ತೆ ಆಯುರ್ವೇದ ಸಂಜೀವಿನಿಯಂತೆ ಕಂಡಿದ್ದರೆ ಆಶ್ಚರ್ಯವಿಲ್ಲ. ಕೋವಿಡ್–೧೯ರ ಸಂದರ್ಭದಲ್ಲಿಯಂತೂ ಕಷಾಯಗಳ ತಯಾರಿ, ಸೇವನೆ ಬಹುಬೇಗ ಜಾಲ್ತಿಗೆ ಬಂದದ್ದನ್ನು ಗಮನಿಸಿದ್ದೇವೆ. ನಮ್ಮ ಆಹಾರ ಪದ್ಧತಿಯಲ್ಲಿಯೇ ಅದು ರೂಢಿಗತವಾಗಿದೆ. ಆದರೆ ಅದು ನಮಗೆ ಗೊತ್ತಿಲ್ಲದಂತೆ ಅನೇಕ ರೋಗಗಳಿಗೆ ಮದ್ದಾಗಿದೆ ಎಂಬುದನ್ನು ನಾವು ಮರೆತಿದ್ದೇವೆ. ಭಾರತೀಯ ಅಡುಗೆ ಮನೆಯಲ್ಲಿ ಬಳಸುವ ಸಾಂಬಾರ್ ಪದಾರ್ಥಗಳು ಇಂದು ಪ್ರಪಂಚದ ಗಮನ ಸೆಳೆದಿವೆ. ಮಿತ, ಹಿತ ಆಹಾರದಲ್ಲಿಯೇ ಅನೇಕ ರೋಗಗಳನ್ನು ದೂರವಿಡುವ ನಮ್ಮ ಪೂರ್ವಿಕರ ಮನೆವೈದ್ಯ ಮತ್ತೊಮ್ಮೆ ನಮ್ಮ ಬದುಕಿಗೆ ಅಹ್ವಾನಿಸಿಕೊಳ್ಳಬೇಕಿದೆ. ಕನ್ನಡ ನಾಡಿನಲ್ಲಿಯೇ ಪ್ರತಿ ಭೌಗೋಳಿಕ ಲಕ್ಷಣವೂ ವಿಶೇಷ. ಹಾಗೆಯೇ ಆಹಾರ ಪದ್ಧತಿ ಕೂಡ. ಇದನ್ನು ಮನಗಾಣಲು ರೋಗ ಬಂದ ಮೇಲಿನ ಸಂಕಟಕ್ಕಿಂತ ರೋಗ ಬರದಂತೆ ತಡೆಯುವುದೇ ಅತೀ ಮುಖ್ಯ ಎಂಬುದನ್ನು ಮನಗಾಣಬೇಕಿದೆ.

ಇಂತಹ ವೈದ್ಯಶಾಸ್ತ್ರಗಳನ್ನು ಮತ್ತೊಮ್ಮೆ ಅಧ್ಯಯನ ನಡೆಸುವ, ಅವುಗಳ ಸತ್ಯಾಸತ್ಯತೆಯನ್ನು ಅರಿಯಲು ತಜ್ಞರು ಸಂಶೋಧನೆ ನಡೆಸಬೇಕಾದ ಘಟ್ಟದಲ್ಲಿ ನಾವಿದ್ದೇವೆ. ಹಾಗಾದಾಗ ಮಾತ್ರ ಲೋಕಕ್ಕೆ ಉಪಕಾರವಾಗುವ, ಕಲ್ಯಾಣಕರವಾಗುವ ಇಂತಹ ಗ್ರಂಥಗಳ ಮಹತ್ತು ಪ್ರಪಂಚದ ಅರಿವಿಗೆ ಬರಲು ಸಾಧ್ಯ.

ಪರಾಮರ್ಶನ ಗ್ರಂಥಗಳು :

೧. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–೨

೨. ಕರ್ನಾಟಕ ಕವಿಚರಿತೆ, ಪ್ರಥಮ, ದ್ವಿತೀಯ, ತೃತೀಯ ಸಂಪುಟ–ಆರ್.ನರಸಿಂಹಾಚಾರ್ಯರು, ಪ್ರಕಾಶನ– ಕ.ಸಾ.ಪ, ಬೆಂಗಳೂರು

೩. ಗ್ರಂಥ ಸಂಪಾದನೆ–ಹಸ್ತಪ್ರತಿಶಾಸ್ತ್ರ ಮತ್ತು ಶಾಸ್ತ್ರಸಾಹಿತ್ಯ ಸಂಪುಟ: ಪ್ರೊ.ಎಂ.ವಿ.ಸೀತಾರಾಯಮಯ್ಯ ಸಮಗ್ರ ಸಾಹಿತ್ಯ ಸಂಪುಟ

೬. ಪ್ರಕಾಶನ–ಬಿಎಂಶ್ರೀ ಪ್ರತಿಷ್ಠಾನ.

೪. ಕರ್ನಾಟಕದ ಪರಂಪರೆ ಸಂಪುಟ–೧,೨, ಪ್ರಕಾಶನ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೫. ಲೇಖನ 'ಪ್ರಾಚೀನ ಕನ್ನಡ ವೈದ್ಯಗ್ರಂಥಗಳು ಪ್ರಸ್ತಾಪಿಸದ ಸಾಂಕ್ರಾಮಿಕ ರೋಗಗಳು' –ಕೃಷ್ಣಮೂರ್ತಿ ಹನೂರು

ವೈದ್ಯಕೀಯ ಶಾಸ್ತ್ರ ಮತ್ತು ಸಾಹಿತ್ಯ.

ಗುರುಪ್ರಸಾದ ಕಾಗಿನೆಲೆ
ವೈದ್ಯರು ಮತ್ತು ಲೇಖಕರು

ಒಂದು ಘಟನೆಯೊಂದಿಗೆ ಈ ಲೇಖನವನ್ನು ಆರಂಭಿಸೋಣ,

ಭಾನುವಾರ ಬೆಳಿಗ್ಗೆ. ತುಂಬಾ ಬಿಡುವಾಗಿಯೂ ಇಲ್ಲ, ತೀರ ಗಿಜಿಗಿಜಿಯೂ ಇಲ್ಲ. ಹಿಮ ಬಿದ್ದಿದ್ದರಿಂದ ಹೊರಗೆ ಚುಮುಚುಮು ಚಳಿ. ಆದಷ್ಟು ರೋಗಿಗಳನ್ನು ಆಸ್ಪತ್ರೆಯ ಎಮೆರ್ಜೆನ್ಸಿ ರೂಮಿನಿಂದ ಹೊರಗಿಡಲು ಸಫಲವಾಗಿತ್ತು. ಈ ಭಾನುವಾರ ಬೆಳಿಗ್ಗೆ ಕೆಲಸ ಮಾಡಿಸುವ ಕೆಲಸವನ್ನು ಶಪಿಸುತ್ತಾ ಇಡೀ ಜಗತ್ತಿನಲ್ಲಿ ಎಮೆರ್ಜೆನ್ಸಿ ರೂಮಿನಲ್ಲಿ ಕೆಲಸ ಮಾಡುವ ಡಾಕ್ಟರು, ನರ್ಸುಗಳ ಅದೃಷ್ಟವನ್ನು ಹಳಿದುಕೊಳ್ಳುತ್ತಾ ಕಾಫಡೋನಟ್ಟುಗಳನ್ನು ಹಂಚಿಕೊಳ್ಳುತ್ತಿದ್ದೆವು. ವಾರದಲ್ಲಿ ಮೂರುದಿನ ರಜೆ ಸಿಕ್ಕರೂ ಶನಿವಾರ ಭಾನುವಾರ ಕೆಲಸಮಾಡಬೇಕಾಗುವ ಹಿಂಸೆ ಮಾಡುವವರಿಗೇ ಗೊತ್ತು. ಮ್ಯಾನಿಕ್ಯುರ್ ಮಾಡಲು ಸಮಯವಿಲ್ಲ, ಶಾಪಿಂಗ್ ಮಾಡಲು ಮಜಾ ಬರುವುದಿಲ್ಲ ಇತ್ಯಾದಿ ಸಂಕಟಗಳನ್ನು ಹೇಳಿಕೊಂಡು ಒಂದೇ ಕಣ್ಣಿನಲ್ಲಿ ಅಳುತ್ತಿದ್ದಳು ನನ್ನ ನರ್ಸ್ ಕಾರ್ಲ. ಏನಾದರೂ ಮಾತಾಡಿದರೆ ಅವಳ ಗೋಳಿಗೆ ಕುಮ್ಮಕ್ಕು ಕೊಟ್ಟಂತಾಗುತ್ತದೆ ಎಂದು ಅಲ್ಲಿಂದ ಹೇಗೆ ಜಾಗ ಖಾಲಿ ಮಾಡುವುದೆಂದು ಯೋಚಿಸುತ್ತಿದ್ದೆ. ನನ್ನ ಯೋಚನೆಗೆ ಉತ್ತರ ಸಿಕ್ಕಿದಂತೆ ಬಣ್ಣಬಣ್ಣದ ದೀಪ, ಸೈರನ್ನುಗಳೊಂದಿಗೆ ಪ್ರತ್ಯಕ್ಷವಾಯಿತು ಆಂಬುಲೆನ್ಸ್. ಕಾರ್ಲಳ ಮಾತಿನಿಂದ ಮುಕ್ತಿ ಸಿಕ್ಕಿತೆಂದೆನಿಸಿ ರೋಗಿಯ ಕಡೆ ಹೆಜ್ಜೆ ಹಾಕಿದೆ.

ಗುಬ್ಬಚ್ಚಿಯ ರೀತಿ ಮುದುಡಿ ಮಲಗಿರುವ ಸುಮಾರು ಎಂಭತ್ತರ ಮುದುಕಿ. ಮೂವತ್ತೈದು, ನಲವತ್ತು ಕೆಜಿಗಿಂತ ಹೆಚ್ಚು ತೂಕವಿಲ್ಲ. ಪ್ರಜ್ಞೆಯಿದ್ದ ಹಾಗೆ ಕಾಣಲಿಲ್ಲ. ರೆಪ್ಪೆಗಳೆರಡೂ ಮುಚ್ಚಿದ್ದವು. ಮರುಭೂಮಿಯ ನೆಲದಂತೆ ಮುಖವಿಡಿ ಆಳವಾದ ಸುಕ್ಕುಗಳು. ಪುಟ್ಟದಾದ ಬಾಯಿ, ಆಶ್ಚರ್ಯಬರುವಷ್ಟು ನೀಟಾಗಿ ಒಂದರ ಪಕ್ಕ ಒಂದು ಜೋಡಿಸಿದಂತೆ ಇರುವ ಹಲ್ಲುಗಳು, ಜೋತುಬಿದ್ದ ಕುತ್ತಿಗೆಯ ಚರ್ಮ, ಬಟಾಬಯಲಿನಂತಿರುವ ಎದೆ, ಮುಖದ ಜೊತೆ ಸ್ಪರ್ಧಿಸುತ್ತಿರುವ ದೋಣಿಯಂತಿರುವ ಹೊಟ್ಟೆ, ಅದರ ಮೇಲಿನ ಸುಕ್ಕುಗಳು, ಗಂಟಲಿನಿಂದ ಗೊರಗೊರ ಶಬ್ದ, ಉಸಿರಿಗೊಮ್ಮೆ ಅರಳುತ್ತಿರುವ ಹೊಳ್ಳೆಗಳು, ಮುಖದ ಮೇಲಿರುವ ಆಕ್ಸಿಜನ್ ಮಾಸ್ಕ್–ಸಾಯಲು ಸಿದ್ಧವಾಗಿರುವ ಮುದುಕಿಯಿದು ಎಂದರಿಯಲು ನನ್ನೊಳಗಿನ ವೈದ್ಯನಿಗೆ ತೀರ ಕಷ್ಟವಾಗಲಿಲ್ಲ. ಇವಳ ಈ ಸ್ಥಿತಿ ಇವತ್ತು ನೆನ್ನೆಯದಲ್ಲ ಎಂದು ನೋಡಿದ ತಕ್ಷಣ ಹೇಳಬಹುದಿತ್ತು. ಆದರೆ ಆ ಗಳಿಗೆಯಲ್ಲಿ ನನಗೆ ಆಶ್ಚರ್ಯ ತರುತ್ತಿದ್ದುದು ಆ ಮುದುಕಿಯ ಅಲಂಕಾರ, ದಿರಿಸು. ಒಣಗಿರುವ ಆ ತುಟಿಗಳಿಗೆ ನೀಟಾಗಿ ಹಚ್ಚಿರುವ ಲಿಪ್ಸ್ಟಿಕ್, ಕಣ್ಣಿಗೆ ಕಾಡಿಗೆ, ಕೆನ್ನೆಗೆ ಬಣ್ಣ, ಸಪೂರವಾಗಿ ಕತ್ತರಿಸಿ ಬಣ್ಣ ಹಚ್ಚಿರುವ ಉಗುರುಗಳು, ಮೈಯಿಂದ ಬರುತ್ತಿರುವ ಪರ್ಫ್ಯೂಮಿನ ವಾಸನೆ ಮತ್ತು ಮಲಮೂತ್ರಗಳಿಂದ ಅವಳನ್ನು ರಕ್ಷಿಸಲು ಹಾಕಿರುವ ಡಯಾಪರ್.– ಒಂದಕ್ಕೊಂದು ತಾಳೆ ಹೊಂದಲಿಲ್ಲ. ತನ್ನನ್ನು ತಾನು ಇಷ್ಟು ಚೆನ್ನಾಗಿ ನೋಡಿಕೊಳ್ಳಲು ಸಾಧ್ಯವೇ ಇಲ್ಲ, ಈ ಮುದುಕಿಗೆ ಅನ್ನಿಸಿತು.

"ಹೆಸರೇನು" ಕೇಳಿದೆ, ಪಕ್ಕದಲ್ಲಿದ್ದ ಪ್ಯಾರಮೆಡಿಸನ್‌ಗೆ. "ಸೆಲಿನಾ ಲ್ಯೂಥರ್. ಹೋದವರ್ಷ ಮೆಲನೋಮ ಡಯಗ್ನೋಸ್ ಆಯಿತು. ಅಂದಿನಿಂದ ಇವಳ ಸ್ಥಿತಿ ಉತ್ತಮವಾಗಲೇ ಇಲ್ಲ. ಮನೆಯಲ್ಲಿ ಗಂಡ ಜ್ಯಾಕ್ ನೊಂದಿಗೆ ಇದ್ದಾಳೆ. ಈಗ ಕಳೆದ ಮೂರು ದಿನದಿಂದ ಉಸಿರಾಟಕ್ಕೆ ತೊಂದರೆಯಿತ್ತಂತೆ. ಮನೆಯಲ್ಲೇ ಅವಳ ಗಂಡ ಒಂದಿಷ್ಟು ಡಾಕ್ಟರಿಕೆ ಮಾಡಿದ್ದಾನೆ. ಏನೂ ಉಪಯೋಗವಾಗಲಿಲ್ಲ. ಈಗ ನಮ್ಮನ್ನು ಕರೆದ. ಆತನೂ ಹಿಂದೆ ಬರುತ್ತಿದ್ದಾನೆ" ಹೇಳಿದ. "ಎಲ್ಲಿಯತನಕ ಮುಂದುವರಿಯಬೇಕು, ಇವಳ ಚಿಕಿತ್ಸೆ, ಏನಾದರೂ ಸರಿಯಾಗಿ ಬರೆದಿದೆಯೇ, ಚಾರ್ಟಿನಲ್ಲಿ" ಕೇಳಿದೆ ಕಾರ್ಲಳನ್ನು.

"ಪ್ರತಿಯೊಂದೂ, ನೀನು ಮೆಡಿಕಲ್ ಕಾಲೇಜಿನಲ್ಲಿ ಕಲಿತಿರುವುದೆಲ್ಲಾ. ಅವಳ ಗಂಡನಿಗೆ ಇಷ್ಟು ಬೇಗ ಹೆಂಡತಿಯನ್ನು ಬಿಟ್ಟುಕೊಡಲು ಇಷ್ಟವಿಲ್ಲ. ಆತನಿಗೂ ಇವಳ ವಿಷಯ ಪೂರ ಅರ್ಥವಾಗುತ್ತದೋ ಇಲ್ಲವೋ ನನಗೆ ತಿಳಿದಿಲ್ಲ. ಆದರೆ, ಹೆಂಡತಿ ಸಾಯುತ್ತಿದ್ದಾಳೆಂದು ಒಪ್ಪಲು ಆತ ತಯಾರಿಲ್ಲ. ಅವಳನ್ನು ಬಿಟ್ಟರೆ ಅವನಿಗೆ ಬೇರೆ ಯಾರೂ ಇಲ್ಲ." ಎಂದಳು, ಕಾರ್ಲ. ಸುಮ್ಮನೆ ಕೆಲಸ ಮುಂದುವರಿಸಿದೆ. ಉಬ್ಬಿ ಕಾಣುತ್ತಿರುವ ತೋಳಿನ ರಕ್ತನಾಳವೊಂದಕ್ಕೆ ಸೂಜಿ ಸಿಕ್ಕಿಸಿ, ಆಕ್ಸಿಜನ್ನನ್ನು ಜಾಸ್ತಿ ಮಾಡಿ ನನ್ನ ಮುಖ ನೋಡಿದಳು, ಕಾರ್ಲ. ಮುಂದಿನ ನಿರ್ಣಯ ನನ್ನದು ಎನ್ನುವಂತಿತ್ತು ಅವಳ ನೋಟ.
ಅಷ್ಟರಲ್ಲಿ ಜ್ಯಾಕ್ ಬಂದು ಹಾಸಿಗೆಯ ಬಳಿ ನಿಂತ. ಅಸಹಾಯಕತೆ, ದುಃಖ, ಸುಸ್ತು ಎಲ್ಲವೂ ಕೋಪಕ್ಕೆ ತಿರುಗಿತ್ತು. ಈತ ಅಲ್ಲಿದ್ದರೆ ತೊಂದರೆಯಾಗಬಹುದೆಂದು ಕಾರ್ಲಳಿಗೆ ಅವನನ್ನು ಹೊರಗೆ ಕೂರಿಸಲು ಹೇಳಿ ಬೇಕಾದ ಪರೀಕ್ಷೆಗಳನ್ನು ಮಾಡಲು ಪ್ರಾರಂಭಿಸಿದೆ. ಸ್ವಲ್ಪ ತಡೆದು ಹೊರಗೆ ಹೋಗಿ ಮುದುಕನ ಜತೆ ಮಾತಾಡಲು ಕುಳಿತೆ." ಸೆಲಿನಾಳಿಗೆ ನ್ಯುಮೋನಿಯಾ. ವಯಸ್ಸಾಗಿದೆ. ಬೇರೆ ಕಾಯಿಲೆಗಳಿಂದ ದೇಹ ದಣಿದಿದೆ. ವೆಂಟಿಲೇಟರ್ ಸಹಾಯವಿಲ್ಲದಿದ್ದರೆ ಆಕೆ ಬದುಕುವುದಿಲ್ಲ. ಆಕೆಯ ಪರಿಸ್ಥಿತಿ ಹೇಗಿದೆಯೆಂದರೆ ಕೃತಕವಾಗಿ ಏನು ಮಾಡಿದರೂ ಅದು ತೀರ ತಾತ್ಕಾಲಿಕ. ಇಂದು ಸಾಯುವವಳು ಇನ್ನು ಕೆಲವು ದಿನದ ನಂತರ ಸಾಯಬಹುದು. ಅದಲ್ಲದೆ, ಬದುಕಿನ ಪ್ರತಿಕ್ಷಣವನ್ನು ಅದರ ಗುಣದಿಂದ ಅಳೆಯಬೇಕಾದಲ್ಲಿ ವೆಂಟಿಲೇಟರಿನ ಮೇಲಿನ ಬದುಕು ಅದರಿಂದ ಹೊರಗುಳಿಯುತ್ತದೆ. ಆಕೆ ಈಗ ಯಾವುದೇ ನಿರ್ಣಯ ಮಾಡದೇ ಇರುವ ಪರಿಸ್ಥಿತಿಯಿರುವುದರಿಂದ ಆಕೆಯ ಪವರ್ ಆಫ್ ಅಟಾರ್ನಿ ನಿನ್ನನ್ನು ಕೇಳುತ್ತಿದ್ದೇನೆ. ಹೇಗೆ ಸಾಯಬೇಕೆಂಬುದರ ಬಗ್ಗೆ ಆಕೆ ನಿನ್ನ ಬಳಿ ಏನಾದರೂ ಮಾತಾಡಿದ್ದಳೇ?" ಕೇಳಿದೆ. ನನ್ನ ರೋಗಿಯ ಬಗೆಗಿದ್ದಷ್ಟೆ ಹಿತಾಸಕ್ತಿ ನನಗೆ ಸಂಬಳ ಕೊಡುವ ಆಸ್ಪತ್ರೆ, ಆಸ್ಪತ್ರೆಗೆ ಸೆಲಿನಾಳ ಪರವಾಗಿ ಕೊಡುವ ತೆರಿಗೆದಾರನ ಡಾಲರ್ರಿನ ಮೇಲೆಯೂ ಇರಬೇಕಾದುದರ ಅನಿವಾರ್ಯತೆಯನ್ನು ಯಾವುದೇ ಪೂರ್ವಗ್ರಹವೂ ಇಲ್ಲದೆ ಹೇಳುವ ಪ್ರಯತ್ನ ಮಾಡಿದ್ದೆ. ಸೆಲಿನಾಳ ಆರೋಗ್ಯದ ಸ್ಥಿತಿ ಹಾಗೂ ಆಕೆಗೆ ಉಪಯೋಗವಾಗದೇ ಇರಬಹುದಾದ ದುಬಾರಿ ವೈದ್ಯದ ಮಿತಿಯನ್ನು ಜ್ಯಾಕ್‌ಗೆ ಅರ್ಥವಾಗುವರೀತಿಯಲ್ಲಿ ಆತನ ಈ ಸೂಕ್ಷ್ಮ ಸ್ಥಿತಿಯಲ್ಲಿ ಹೇಳುವುದು ಒಂದು ದೊಡ್ಡ ಹೊಡೆದಾಟ." ನಿನಗೆ ಅದು ಹೇಳುವುದು ಸುಲಭ. ನಿನಗೆ ಆಕೆ ಎಲ್ಲರಂತೆ ಒಬ್ಬ ಪೇಷೆಂಟ್. ನನಗೆ ಆಕೆ ಹೈಸ್ಕೂಲಿನ ಗೆಳತಿ, ಐವತ್ತು ವರ್ಷ ಜೊತೆಗಿದ್ದ ಮುದ್ದು ಹೆಂಡತಿ. ಮೇಲಾಗಿ ಆಕೆಗಾಗಿರುವುದು ನ್ಯುಮೋನಿಯ. ಅದು ಗುಣಪಡಿಸಬಲ್ಲ ಕಾಯಿಲೆ. ಹೀಗಿರುವಾಗ ಅದು ಗುಣವಾಗುವ ತನಕ ಆಕೆಯನ್ನು ವೆಂಟಿಲೇಟರ್ ಮೇಲಿಡುವುದರಲ್ಲಿ ತಪ್ಪೇನು?" ಕೇಳಿದ ಜ್ಯಾಕ್. "ವೆಂಟಿಲೇಟರ್ ಮೇಲೆ ಹೋದ ಮೇಲೆ ಅದರಿಂದ ಹೊರಗೆ ಬರುವುದು ಅನುಮಾನ" ತಡೆದು ಹೇಳಿದ್ದೆ. ನನ್ನ ಮಾತು ಯಾವ ಕಡೆ ವಾಲುತ್ತಿದೆ ಎಂದು ನನಗೆ ಅರಿವಾಗುತ್ತಿತ್ತು.

"ಡಾಕ್ಟರ್, ಹೋದ ವರ್ಷ ಕಾಯಿಲೆ ಇನ್ನೂ ತೀವ್ರವಾಗಿತ್ತು. ಆಗಲೂ ಆಕೆ ವೆಂಟಿಲೇಟರ್ ಮೇಲಿದ್ದಳು. ಹೊರಗೂ ಬಂದಳು. ನಂತರ ಆರು ತಿಂಗಳು ಚೆನ್ನಾಗಿಯೇ ಇದ್ದಳು. ಇಗಲೂ ಹಾಗೆಯೇ ಆಗುತ್ತದೆ." ನಂಬಿಕೆಯಿಂದ ಹೇಳಿದ ಜ್ಯಾಕ್ "ಮತ್ತೊಂದು ಮಾತು, ಡಾಕ್ಟರ್, ನಿನ್ನ ಕುಟುಂಬದವರಿಗ್ಯಾರಿಗಾದರೂ ಹೀಗೆ ಆಗಿದ್ದರೆ ನೀನೇನು ಮಾಡುತ್ತಿದ್ದೆ"

"ವೆಂಟಿಲೇಟರ್ಗೆ ಹಾಕುತ್ತಿರಲಿಲ್ಲ" ಉಗುಳುನುಂಗಿ ಹೇಳಿದೆ. ಅದು ಅರ್ಧಸತ್ಯವಿರಬಹುದೆಂದು ನನ್ನ ನುಂಗಿದ ಉಗುಳಿನ ಪ್ರಾಮಾಣಿಕತೆಯಿಂದ ಅರಿತಂತೆ ಅವ ಖಡಾಖಂಡಿತವಾಗಿ " ನಾನು ಹಾಕುತ್ತೇನೆ" ಅಂದ, ಜ್ಯಾಕ್. ನನ್ನ ನಂಬಿಕೆಗಳ ಮೆಲೆ ಪ್ರಹಾರವಾಗುತ್ತೇನೋ ಅನ್ನಿಸಿತು.

–ಇದು ನಾನೇ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಬರೆದ ಲೇಖನದ ಒಂದು ಭಾಗ. ಇದನ್ನು ಓದಿದಾಗ ಓದುಗನಿಗೆ ಏನನಿಸಬಹುದು. ಇದೊಂದು ಪ್ರಬಂಧವೇ? ಕಥೆಯೇ? ವೃತ್ತಿಜೀವನದ ಅನುಭವವೇ? ಇದನ್ನು ನಾನು ಲೇಖನದಲ್ಲಿ ಬರೆದು ಏನು ಸಾಧಿಸುತ್ತಿದ್ದೇನೆ? ಇದನ್ನು ಸಾಹಿತ್ಯವೆನ್ನಬಹುದೇ?

ಸಾಹಿತ್ಯವನ್ನು ಪಕ್ಕಕ್ಕಿಡೋಣ. ಇಲ್ಲಿ ಮೂವರು ಅಪರಿಚಿತರು ಒಂದು ವಿಷಮಪರಿಸ್ಥಿತಿಯಲ್ಲಿ ಭೇಟಿಯಾಗಿದ್ದೇವೆ. ನಾನು ವೈದ್ಯ, ಸೆಲಿನಾ ನನ್ನ ರೋಗಿ. ಆಕೆ ತನಗೇನಾಗಿದೆ ಎಂದು ಕೂಡ ಹೇಳಿಕೊಳ್ಳಲಾಗದ ಪರಿಸ್ಥಿತಿಯಲ್ಲಿರುವುದರಿಂದ ಗಂಡ ಜ್ಯಾಕ್ ಆಕೆಯ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಿದ್ದಾನೆ. ಸೆಲಿನಾ ಹೆಚ್ಚುದಿನ ಬದುಕುವುದಿಲ್ಲವೆಂದು ನನಗೆ ಗೊತ್ತಿದೆ. ಗಂಡ ಜ್ಯಾಕ್‌ನಿಗೂ ಗೊತ್ತಿದೆ. ಈಕೆ ನನಗೆ ಪರಿಚಿತಳಲ್ಲದಿದ್ದರೂ ನಾನು ಆಕೆಯ ಕೈಹಿಡಿದು ಮೆತ್ತಗೆ ಮಾತಾಡುತ್ತೇನೆ. ನನ್ನ ಧ್ವನಿಯಲ್ಲಿ ನನಗೆ ಗೊತ್ತಿಲ್ಲದೇ ಆರ್ದ್ರತೆ ತುಂಬಿದೆ. ಹತ್ತು ನಿಮಿಷಗಳ ಹಿಂದೆ ಕಾರ್ಲ, ಡೋನಟ್ಟುಗಳ ಬಗ್ಗೆ ಯೋಚಿಸುತ್ತಿದ್ದ ನಾನು ಈಗ ಬೇರೆಯೇ ವ್ಯಕ್ತಿಯಾಗಿದ್ದೇನೆ. ಈಕೆಯ ಕಾಯಿಲೆಯನ್ನು ಆಕೆಯ ನೋವನ್ನು ಕೊಂಚವಾದರೂ ಉಪಶಮನಗೊಳಿಸಬಲ್ಲ ಶಕ್ತಿ ವೈದ್ಯಕೀಯಕ್ಕಿದೆ. ಅದು ನನಗೂ ಗೊತ್ತಿದೆ. ಆದರೆ, ಕೆಲವೇ ತಿಂಗಳುಗಳ ಹೆಚ್ಚುವರಿ ಬದುಕನ್ನು ಈಕೆಗೆ ಕೊಡುವುದರಿಂದ ಆಸ್ಪತ್ರೆ, ವಿಮಾಕಂಪೆನಿ ಹಾಗೂ ಸರಕಾರ ಎಂಬ ವ್ಯವಸ್ಥೆಗೆ ಆಗುವ ಖರ್ಚಿನಲ್ಲಿ ಇನ್ನೂ ಎಷ್ಟು ಈಕೆಗಿಂತಲೂ ನೊಂದಿರುವ ಅರ್ಹ ಜೀವಗಳನ್ನು ಉಳಿಸಬಹುದು ಎಂಬ ಸಾಮಾಜಿಕ ಕಾಳಜಿಯೂ ನನ್ನ ಮೇಲಿದೆ.

ಇಲ್ಲಿ ಎರಡು ರೀತಿ ಕತೆ ಹೇಳುವ ಕ್ರಿಯೆ ನಡೆದಿದೆ. ಸೆಲಿನಾಳ ಕಥೆಯನ್ನು ಆಕೆಯ ಗಂಡ ಜ್ಯಾಕ್ ನನಗೆ ಹೇಳುತ್ತಿದ್ದಾನೆ. ಈ ಕತೆಯನ್ನು ಅಂತರ್ಗತಿಸಿಕೊಂಡು ನಾನು ನನ್ನ ಕತೆಯನ್ನು ಓದುಗರಿಗೆ ಹೇಳುತ್ತಿದ್ದೇನೆ. ಒಂದೇ ಕತೆಗೆ ಓದುಗ ಹಾಗೂ ಲೇಖಕ ಆಗುವ ವಿಸ್ಮಯಕ್ಕೆ ನಾನು ಸಾಕ್ಷಿಯಾಗಿದ್ದೇನೆ.

ಇಲ್ಲಿ ನಾನು ಸೆಲಿನಾ, ಮತ್ತು ಜ್ಯಾಕ್ ಇಬ್ಬರೂ ಅನುಭವಿಸುತ್ತಿರುವ ನೋವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಜ್ಯಾಕ್ ನನ್ನನ್ನು ನೇರವಾಗಿ 'ನಿನ್ನ ಕುಟುಂಬದಲ್ಲಿ ಈ ರೀತಿ ಯಾರಿಗಾದರೂ ಆಗಿದ್ದರೆ ನೀನು ಏನು ಮಾಡುತ್ತಿದ್ದೆ?' ಎಂದು ನೇರವಾಗಿ ಕೇಳಿ ಕತೆಗಾರನಾದ ನನ್ನನ್ನು ಅವನ ಕತೆಯ ಇನ್ನೊಂದು ಪಾತ್ರದ ಜತೆಗೆ ಸಮೀಕರಿಸಿಕೊಂಡು ನಾನು ಹೇಗೆ ವರ್ತಿಸುತ್ತೇನೆ, ನಿಭಾಯಿಸುತ್ತೇನೆ ಎಂದು ಸವಾಲು ಎಸೆಯುತ್ತಾನೆ. ಕತೆಗಾರ ಎಲ್ಲ ಪಾತ್ರಗಳಿಂದ ಒಂದೇ ದೂರವನ್ನು ಕಾಪಾಡಿಕೊಳ್ಳಬೇಕು, ಆತ ಕೇವಲ ಸಾಕ್ಷಿಪ್ರಜ್ಞೆಯಿಂದ ನಿರ್ಮಮವಾಗಿ ಪಾತ್ರಗಳನ್ನು ಬೆಳೆಯಲು ಬಿಡಬೇಕು ಎಂದೆಲ್ಲ ಹೇಳುವ ಕಥಾಸೂತ್ರಗಳಿಗೆ ಹೇಗೆ ಬದ್ದನಾಗಿರಲಿ? ಕತೆಯ ಪಾತ್ರವನ್ನು ನಾನೇ ಏಕ್‌ದಂ ನಿಭಾಯಿಸಬೇಕಾದಾಗ?

ಇದನ್ನು ಕತೆ ಅಥವಾ ಪ್ರಬಂಧ ಎಂದು ಲಗತ್ತು ಹತ್ತಿಸದೆ ಒಬ್ಬ ವೈದ್ಯ ರೋಗಿಯ ಜತೆ ನಡೆಸುತ್ತಿರುವ ಮಾತುಕತೆ ಎಂದಷ್ಟೇ ನೋಡೋಣ. ಇಲ್ಲಿ ನಾನು ಜ್ಯಾಕ್ ಹೇಳುತ್ತಿರುವುದನ್ನೆಲ್ಲಾ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದೇನೆ. ಆತನನ್ನು ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದೇನೆ ಎಂದರೆ ಆತನ ಧ್ವನಿಯ ಏರು–ತಗ್ಗು, ನಿಟ್ಟುಸಿರು, ಕಣ್ಣೀರು, ಮೌನ, ಹತಾಶೆ ಎಲ್ಲವನ್ನೂ ಅರಗಿಸಿಕೊಳ್ಳುವ ತಾಳ್ಮೆ ನನ್ನಲ್ಲಿದೆ. ಇಲ್ಲವಾದರೆ ನಾನು ಒಳ್ಳೆಯ ವೈದ್ಯನಾಗಲಾರೆ. ಅಷ್ಟೇ ಅಲ್ಲ. ಇಲ್ಲಿ ಜ್ಯಾಕ್ ಸೆಲಿನಾಳ ಕತೆಯನ್ನು ಹೇಳುತ್ತಿರುವುದರಿಂದ ಸೆಲಿನಾಳ ಬದುಕನ್ನು ಜ್ಯಾಕ್‌ನ ಕಣ್ಣಿನಿಂದ ನೋಡಬಲ್ಲ 'ಇನ್ನೊಂದು ಆಯಾಮ'ವೂ ನನಗೆ ದೊರಕಿದೆ. ಆತ ಮಾತಿನಲ್ಲಿ ಹೇಳಲಾಗದ್ದನ್ನು ಅರಿತುಕೊಳ್ಳಬಲ್ಲ ಅವಕಾಶವೂ ನನಗೆ ದೊರಕಿದೆ.

ನನ್ನ ಕೆಲಸ ನಾನು ಸರಿಯಾಗಿ ಮಾಡಬೇಕಾದರೆ ಕತೆ ಹೇಳುವುದು ಮತ್ತು ಕೇಳುವುದು ಎರಡೂ ಚೆನ್ನಾಗಿ ಬರಬೇಕು. ನಾನು ಉತ್ತಮ ವೈದ್ಯ ಹೌದೋ ಅಲ್ಲವೋ ಎಂಬುದನ್ನು ನಿರ್ಧರಿಸುವುದು ನನ್ನ ಸಂವಹನ ಕಲೆ. ನಾನು ಒಂದು ವೇಳೆ ನನ್ನ ಕೆಲಸದಲ್ಲಿ ತಪ್ಪು ಮಾಡಿ ರೋಗಿಗೆ ತೊಂದರೆಯಾದರೂ ನನ್ನನ್ನು ಒಳ್ಳೆಯ ವೈದ್ಯ ಎಂದು ಆ ರೋಗಿ ನಂಬಿದ್ದರೆ ನನ್ನ ತಪ್ಪನ್ನು ಕ್ಷಮಿಸಿಬಿಡುವ ಸಂಭವವಿದೆ.
ಇದು ಅಚ್ಚರಿ ತರುವ ವಿಷಯವೇನಲ್ಲ. ರೋಗಿ ಮತ್ತು ವೈದ್ಯನ ನಡುವೆ ಸಂಬಂಧ ಚೆನ್ನಾಗಿದ್ದಲ್ಲಿ ಆ ರೋಗಿ ವೈದ್ಯ ತಪ್ಪು ಮಾಡಿದ್ದರೂ ಆತನ/ಆಕೆಯ ಮೇಲೆ ಕಾನೂನು ಕ್ರಮವನ್ನು ಕೈಗೊಳ್ಳುವ ಅವಕಾಶ ಕಮ್ಮಿ. ವೈದ್ಯ ಮಾಡುವ ಎಷ್ಟೋ ಕೆಲಸಗಳು ರೋಗಿಗೆ ಅರ್ಥವಾಗುವುದು ಕಷ್ಟ. ರೋಗಿಗೆ ಅರ್ಥವಾಗುವುದು ಆ ವೈದ್ಯ ಹೇಳಿದಷ್ಟು. ಯಾವ ವೈದ್ಯ ರೋಗಿಗೆ ಅರ್ಥವಾಗುವ ಹಾಗೆ ವಿವರಿಸುತ್ತಾನೋ ಆ ವೈದ್ಯ ರೋಗಿಗೆ ಇಷ್ಟವಾಗುತ್ತಾನೆ. ಅಂದರೆ, ಚೆನ್ನಾಗಿ ಕತೆ ಹೇಳುವ ವೈದ್ಯ ರೋಗಿಗೆ ಪ್ರಿಯನಾಗುವುದರಲ್ಲಿ ಆಶ್ಚರ್ಯವಿಲ್ಲ.

ವೈದ್ಯಕೀಯ ಶಾಸ್ತ್ರ ಮತ್ತು ಸಾಹಿತ್ಯದ ನಡುವಿನ ನಂಟು ಹೊಸದೇನಲ್ಲ. ವಿಲಿಯಂ ಆಸ್ಲರನಂತಹ ವೈದ್ಯ ಮೆಡಿಕಲ್ ಕಾಲೇಜಿನಲ್ಲಿ ಶಾಸ್ತ್ರೀಯವಾಗಿ ಸಾಹಿತ್ಯವನ್ನೂ ಬೋಧಿಸಬೇಕು ಎಂದು ಬಹಳ ಹಿಂದೆಯೇ ಹೇಳಿದ್ದ. ಸಿಗ್ಮಂಡ್ ಫ್ರಾಯ್ಡ್ ತನ್ನ ರೋಗಿಗಳ ಬಗ್ಗೆ ಮಾಡಿಟ್ಟ ಟಿಪ್ಪಣಿಗಳೆಲ್ಲವೂ ಒಂದೊಂದು ಸಣ್ಣಕತೆಗಳಾಗುತ್ತವೆ ಎಂದು ಹೇಳಿದ್ದ. ಕ್ಲಾಸಿಕ್ ಕೃತಿಗಳಾದ ಕಿಂಗ್ ಲಿಯರ್, ಡಿವೈನ್ ಕಾಮಿಡಿ, ಸೌಂಡ್ ಆಫ್ ಫ್ಯುರಿ, ಸಂಸ್ಕಾರ, ತಬರನ ಕಥೆ, ಓಂ ಣಮೋ ಮುಂತಾದ ಕೃತಿಗಳು, ಕಾಯಿಲೆ, ಸಾವು, ಮತ್ತು ಮಾನವತೆಯ ನಡುವಿನ ಸಂಬಂಧವನ್ನು ಕಲಾತ್ಮಕತೆಯನ್ನು ಬಿಟ್ಟುಕೊಡದೇ ಹೇಳುತ್ತವೆ. ಜಾನ್ ಕೀಟ್ಸ್, ಆಂಟಾನ್ ಚೆಕಾಫ್, ಅಬ್ರಹಾಂ ವರ್ಗೀಸ್, ರಾಶಿ, ನಾಗಲೋತಿಮಠ, ಬೆಸಗರಹಳ್ಳಿ ರಾಮಣ್ಣ ಮುಂತಾದ ವೈದ್ಯ ಬರಹಗಾರರ ಬರವಣಿಗೆಯಲ್ಲಿ ಬರವಣಿಗೆ ಮತ್ತು ವೈದ್ಯವೃತ್ತಿಯ ನಡುವೆ ಇರುವ ಅಧ್ಯಾಸವನ್ನು ಸೂಕ್ಷ್ಮವಾಗಿ ಗಮನಿಸಬಹುದು.

ವೈದ್ಯ ಹಾಗೂ ಬರಹಗಾರ ತನ್ನ ರೋಗಿ (ಅಥವಾ ಕಾಯಿಲೆ) ಅಥವಾ ಪಾತ್ರದ ಹುಟ್ಟು, ಬೆಳವಣಿಗೆ ಮತ್ತು ಗಮ್ಯದ ಬಗ್ಗೆ ಯಾವಾಗಲೂ ಗಮನವಿಟ್ಟಿರುತ್ತಾರೆ. ಒಳ್ಳೆಯ ಬರಹಗಾರ ಮತ್ತು ಒಳ್ಳೆಯ ವೈದ್ಯ ತಾನು ಸದ್ಯ ಬರೆಯುತ್ತಿರುವ ಕೃತಿ ಅಥವಾ ಸದ್ಯ ನೋಡುತ್ತಿರುವ ರೋಗಿಯನ್ನು ಮೀರಿ ನಮ್ಮ ಮೂಲಭೂತ ಅಸ್ತಿತ್ವವಾದಿ ಪ್ರಶ್ನೆಗಳಾದ 'ನಾನು ಯಾರು?' ಎಲ್ಲಿಂದ ಬಂದಿರುವೆ' 'ಎಲ್ಲಿಗೆ ಹೋಗುತ್ತಿರುವೆ' ಇಂಥದೇ ಹಲವಾರು ಪ್ರಶ್ನೆಗಳ ಉತ್ತರಗಳನ್ನು ಯಾವಾಗಲೂ ಹುಡುಕುತ್ತಿರುತ್ತಾರೆ.

ವೈದ್ಯ ಉತ್ತಮ ಸಾಹಿತ್ಯವನ್ನು ಓದುವುದರಿಂದ ರೋಗಿಯನ್ನು ಇನ್ನೂ ಆಳವಾಗಿ ಅರಿಯಲು ಸಾಧ್ಯವಾಗುತ್ತದೆ. ರೋಗಿಯ ಕಾಯಿಲೆಯ ಹಿಂದೆ ಬರೇ ಬ್ಯಾಕ್ಟೀರಿಯಾಗಳು, ಸಿಗರೇಟಿನ ಹೊಗೆ, ಆಲ್ಕೋಹಾಲಿನ ನಶೆ ಮಾತ್ರ ಇರದೇ ಈ ರೋಗಿಯೊಬ್ಬನ ಈ

ದುರ್ಬಲ ನಡವಳಿಕೆಗೆ ಕಾರಣ, ಇಂಥ ನಡವಳಿಕೆಯಿಂದ ಸಿಗಬಹುದಾದ ಅಲ್ಪತೃಪ್ತಿ ಮುಂತಾದವನ್ನು ಅರಿಯುವ ಅವಕಾಶವನ್ನು ವೈದ್ಯನಿಗೆ ಕೊಡುತ್ತದೆ. ನಾವು ಯಾವುದೇ ಪಠ್ಯವನ್ನು ಓದುವಾಗ, ಅದು ಭಗವದ್ಗೀತೆಯಾಗಿರಲೀ, ಅಥವಾ ವರ್ತಮಾನ ಪತ್ರಿಕೆಯ ಒಂದು ಸುದ್ದಿಯಿರಲಿ, ಅಥವಾ ರೋಗಿಯ ಚಾರ್ಟ್ ಆಗಲಿ– ಅದನ್ನು ನಾವು ಎಷ್ಟು ಆಸಕ್ತಿಯಿಂದ ಓದುತ್ತೇವೆ ಎನ್ನುವುದು, ಅದು ಎಷ್ಟು ಚೆನ್ನಾಗಿ ಬರೆಯಲ್ಪಟ್ಟಿದೆ ಎನ್ನುವುದರ ಮೇಲೆ ನಿಂತಿದೆ. ವರ್ಷಗಟ್ಟಲೆ ಆಲ್ಕೋಹಾಲು ಕುಡಿದು ಯಕೃತ್ತಿನ ಕಾಯಿಲೆಯಿಂದ ನರಳುತ್ತಿದ್ದ ಒಬ್ಬ ರೋಗಿಯನ್ನು ನಾನು ಬರೇ ಆತನ ದೈಹಿಕ ಕಾಯಿಲೆಯನ್ನು ಗುಣಪಡಿಸಲೆಂದು ಆತನನ್ನು ನೋಡಿದಲ್ಲಿ ಅದಕ್ಕೆ ವೈದ್ಯನೇ ಬೇಕಿಲ್ಲ. ಒಂದು ಕಂಪ್ಯೂಟರ್ ಪ್ರೋಗ್ರಾಮ್ ಮಾಡಿಟ್ಟರೆ ಸಾಕು. ಆತನ ರಕ್ತದ ಪರೀಕ್ಷೆಯ ರಿಪೋರ್ಟು, ಸ್ಕ್ಯಾನ್ ಮತ್ತಿತರವನ್ನೆಲ್ಲ ನೋಡಿ ಲೆಕ್ಕ ಹಾಕಿ ಇಂತಿಂತ ಮಾತ್ರೆ, ಔಷಧಿಗಳು ಬೇಕು ಎಂದು ಹೇಳಿಬಿಡಬಹುದು. ಆದರೆ ಒಬ್ಬ ರೋಗಿಯ ಕಾಯಿಲೆಯ ಹಿಂದಿರುವ ಆತನ ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಕಾರಣಗಳನ್ನು ಅರಿಯುವುದು ಸಾಹಿತ್ಯಿಕ ಸಂವೇದನೆ. ಎಲ್ಲ ರೋಗಿಗಳ ಕೇಸ್ ಹಿಸ್ಟರಿಗಳು ಟಾಲ್‌ಸ್ಟಾಯನ 'ಇವಾನ್ ಇಲಿಯನ ಸಾವು' ಅಥವಾ ಪಾಲ್ ಕಳಾನಿಧಿಯ 'ವೆನ್ ಬ್ರೆತ್ ಬಿಕಮ್ಸ್ ಏರ್' ರೀತಿ ಇದ್ದಲ್ಲಿ ಅದನ್ನು ಓದುವ ಓದುಗ ಅಷ್ಟೇ ಸೂಕ್ಷ್ಮ ಸಂವೇದನೆಯುಳ್ಳ ಇನ್ನೊಬ್ಬ ವೈದ್ಯನೋ ನರ್ಸೋ ಆಗಿದ್ದಲ್ಲಿ ಆತನ/ಆಕೆಯ ಮೇಲೆ ಇಂತ ಒಂದು ಸಾಹಿತ್ಯಿಕ ಪಠ್ಯ ಬೀರುವ ಪರಿಣಾಮವನ್ನು ಊಹಿಸಿಕೊಳ್ಳುವುದೇ ಒಂದು ಮೈ ಜುಮ್ಮೆನ್ನುವ ಸಂಗತಿ. ಮಾನಸಿಕ ರೋಗ ವಿಭಾಗದಲ್ಲಿ ನನ್ನ ರೊಟೇಶನ್ ಮಾಡುತ್ತಿದ್ದಾಗ ಓದಿದ ಕೆಲ ಕೇಸ್ ಹಿಸ್ಟರಿಗಳು ಹೀಗಿದ್ದವು.

ಸಾಹಿತ್ಯಿಕ ತಂತ್ರಗಳು ಸಲಕರಣೆಗಳು ಮತ್ತು ಶಿಸ್ತು, ವೈದ್ಯನಿಗೆ ಬಹಳ ರೀತಿಯಲ್ಲಿ ಸಹಕಾರಿಯಾಗುತ್ತದೆ. ಒಂದು ಕತೆಯನ್ನೋ, ಒಂದು ಕವಿತೆಯನ್ನೋ ಓದುತ್ತಿರುವಾಗ ಓದುಗನೊಬ್ಬ ಈ ಪಠ್ಯವನ್ನು ಅಂತರ್ಗತ ಮಾಡಿಕೊಳ್ಳದಿದ್ದರೆ ಅಂಥ ಓದು ದಂಡ. ಈ ಕವಿತೆಯಲ್ಲಿ ಈ ಕವಿ ಏನನ್ನು ಹೇಳುತ್ತಿದ್ದಾನೆ? ಅದು ನನಗೆ ಹೇಗೆ ತಟ್ಟುತ್ತಿದೆ? ಇಂಥ ಅನುಭವ ನನಗೆ ಈ ಮುಂಚೆ ಎಲ್ಲಾದರೂ ಆಗಿದೆಯೇ? ಇಂಥ ಕತೆ, ಕವಿತೆಯನ್ನು ನಾನು ಈ ಮುಂಚೆ ಎಲ್ಲಾದರೂ ಓದಿದ್ದೇನೇ? ಇದು ನನಗೆ ಈಗ ಯಾಕೆ ಹೆಚ್ಚು ಪ್ರಸ್ತುತವಾಗಬೇಕು? ಇತರೇ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಿರುತ್ತಾನೆ. ಕೇಳಿಕೊಳ್ಳುತ್ತಿರುತ್ತಾನೆ ಎಂದರೆ ಓದುವ ಮೊದಲು ಒಂದಿಷ್ಟು ಪ್ರಶ್ನೆಗಳನ್ನು ಹಾಕಿಕೊಂಡು ಅದಕ್ಕೆ ಉತ್ತರವನ್ನು ಪಠ್ಯದಲ್ಲಿ ಹುಡುಕುತ್ತಾನೆ ಎಂದಲ್ಲ. ಓದುವ ಕ್ರಿಯೆಯಲ್ಲಿಯೇ ಈ ಪ್ರಶ್ನೋತ್ತರ ಕ್ರಿಯೆಯೋ ಅಂತರ್ಗತವಾಗಿದೆ. ಒಂದು ತೃಪ್ತಿಕರ ಓದೆಂದರೆ ಅಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ ಎಂದೇ ಅರ್ಥ.

ಒಬ್ಬ ಒಳ್ಳೆಯ ವೈದ್ಯ ತನ್ನ ಅನುಭವಕ್ಕೆ ಸಿಕ್ಕಿದ ರೋಗಿಯ 'ಸ್ಟೋರಿ' ಯ ನಿರೂಪಿಸುವ ಕ್ರಿಯೆ ಒಬ್ಬ ಕತೆಗಾರ ಆತನ ಅನುಭವವನ್ನು ಮರುನಿರೂಪಿಸುವ ಕ್ರಿಯೆಗಿಂತ ಬೇರೆಯಲ್ಲ. ರೋಗಿಯ ಹಾವಭಾವಗಳು, ಧ್ವನಿಯ ಏರಿಳಿತ, ಘಟನೆಗಳ ಕಾಲಾನುಕ್ರಮಣಿಕೆ, ಎಲ್ಲವನ್ನೂ ಒಟ್ಟುಗೂಡಿಸಿ ಒಮ್ಮೆ ಇನ್ನೊಬ್ಬರು ಅದನ್ನು ಓದಿದಲ್ಲಿ ರೋಗಿಯ ಕಾಯಿಲೆಯ ಬಗ್ಗೆ ಸಂಪೂರ್ಣ ಅರಿವು ಬರುವಂತೆ ಒಕ್ಕಣಿಸುವುದು ಸುಲಭವಲ್ಲ. ಇದು ಕತೆಯನ್ನು ಹೇಳಿದಂತೆ. ಹಿರಿಯ ವೈದ್ಯರು ಕಿರಿಯ ವೈದ್ಯರುಗಳನ್ನು ರೋಗಿಗಳ ಬಗ್ಗೆ ವಿಚಾರಿಸಬೇಕಾದರೆ ಅದಕ್ಕೇ ಏನೋ 'ವಾಟ್ ಈಸ್ ಹಿಸ್ ಸ್ಟೋರಿ?' 'ಅವನ ಕತೆ ಏನು?' ಎಂದು ಕೇಳುವುದು ಕೇವಲ ಕಾಕತಾಳೀಯವಲ್ಲ.

ಇಲ್ಲಿ ಇನ್ನೊಂದಾಗುತ್ತದೆ. ರೋಗಿಯ ಕತೆಯನ್ನು ಯಾರು ಯಾರಿಗೆ ಹೇಳುತ್ತಿದ್ದಾರೆ ಮತ್ತು ಆ ವ್ಯಕ್ತಿಗೆ ತನ್ನ ಪೂರ್ವಗ್ರಹಗಳನ್ನು ರೋಗಿಯ ಕತೆಯ ಮೇಲೆ ಆರೋಪಿಸದೇ ನಿರ್ಮಮವಾಗಿ ಕತೆಯನ್ನು ಹೇಳಲಾಗುತ್ತದಾ ಎಂಬುದು ರೋಗನಿದಾನ ಕ್ರಮದ ಅತಿ ದೊಡ್ಡ ಘಟ್ಟ. ಒಬ್ಬಾಕೆ ಸುಮಾರು ೮೦ ವರ್ಷದವಳು ಮನೆಯಲ್ಲಿ ಒಬ್ಬಳೇ ಇದ್ದಾಳೆ. ಹೆಸರು ಬೆಟ್ಟಿ ಎಂದಿಟ್ಟುಕೊಳ್ಳೋಣ. ಒಬ್ಬಳೇ ಮಗಳು ಯಾವುದೋ ದೂರದ ಊರಿನಲ್ಲಿದ್ದಾಳೆ. ಆಕೆಯ ಹೆಸರು ಜ್ಯಾಕಿ ಎಂದಿಟ್ಟುಕೊಳ್ಳೋಣ. ಕ್ರಿಸ್‌ಮಸ್‌ಗೆ ಅಮ್ಮನನ್ನು ನೋಡೋಣ ಎಂದು ಅಮ್ಮನ ಮನೆಗೆ ಮಗಳು ಬಂದಿದ್ದಾಳೆ. ಅಮ್ಮ, ಮಗಳು ಇಬ್ಬರೂ ಸೇರಿ ಮನೆಯನ್ನು ಕ್ರಿಸ್‌ಮಸ್‌ಗೆಂದು ಅಲಂಕರಿಸುತ್ತಿದ್ದಾರೆ. ಅಮ್ಮನಿಗೆ ಎಂಬತ್ತಾದರೂ ಮಗಳು ಬಂದಿದ್ದಾಳೆ ಎಂದು ಅತಿ ಉತ್ಸಾಹದಿಂದ ಮನೆಗೆ ಕ್ರಿಸ್‌ಮಸ್ ದೀಪಾಲಂಕಾರ ಮಾಡುತ್ತಿದ್ದಾಳೆ. ಒಂದು ಸಣ್ಣ ಸ್ಟೂಲಿನ ಮೇಲೆ ನಿಂತು ದೀಪದ ಸರವನ್ನು ಜೋಡಿಸುತ್ತಿದ್ದಾಗ ಆಕೆ ಆಕಸ್ಮಿಕವಾಗಿ ಕೆಳಗೆ ಬಿದ್ದಿದ್ದಾಳೆ. ಬಿದ್ದುಮುಂಗೈ ಊದಿದೆ. ಅಷ್ಟೇ ಅಲ್ಲ. ಬಿದ್ದಾಗ ಆಕೆಯ ತಲೆಗೆ ಪೆಟ್ಟಾಗಿದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಬಿದ್ದ ತಕ್ಷಣ ಸುಮಾರು ಹತ್ತರಿಂದ ಹದಿನೈದು ಸೆಕೆಂಡು ಆಕೆಗೆ ಪ್ರಜ್ಞೆ ತಪ್ಪಿದೆ. ಜ್ಯಾಕಿ ಹೆದರಿ ಆಂಬುಲೆನ್ಸನ್ನು ಕರೆದಿದ್ದಾಳೆ. ಆಂಬುಲನ್ಸಿನ ಪ್ಯಾರ ಮೆಡಿಕ್ಕುಗಳು ಬಂದು ಆಕೆಯನ್ನು ಪರೀಕ್ಷಿಸಿ, ಆಕೆಯ ರಕ್ತದೊತ್ತಡ, ಹೃದಯದ ಬಡಿತ, ರಕ್ತದಲ್ಲಿನ ಆಮ್ಲಜನಕದ ಮಟ್ಟ ಎಲ್ಲವೂ ಸರಿಯಾಗಿಯೇ ಇದೆ. ಆಕೆಗೆ ಪ್ರಾಯಶಃ ಮುಂಗೈ ಉಳುಕಿರಬಹುದು, ಇಲ್ಲವೇ ಸಣ್ಣದಾಗಿ ಮುರಿದಿರಬಹುದು. ನಾವು ಒಂದು ಸಣ್ಣದಾಗಿ ಸ್ಲಿಂಟ್ ಹಾಕಿರುತ್ತೇವೆ. ಆಂಬುಲೆನ್ಸಿನ ಅವಶ್ಯಕತೆ ಏನೂ ಬೇಡ. ನೀವೇ ಬೇಕಿದ್ದರೆ ಎಮೆರ್ಜೆನ್ಸಿ ಡಿಪಾರ್ಟ್‌ಮೆಂಟಿಗೆ ಹೋಗಬಹುದು. ಅಲ್ಲಿ ಒಂದು ಎಕ್ಸ್–ರೇ ತೆಗೆದರೆ ಮುಂಗೈಗೆ ಏನಾಗಿದೆ ಎಂದು ಗೊತ್ತಾಗುತ್ತದೆ. ಎಂದು ತಮ್ಮ ವೃತ್ತಿಪರ ಅಭಿಪ್ರಾಯವನ್ನು ಕೊಟ್ಟಿದ್ದರು.
'ಬರೇ ಮುಂಗೈ ಬಗ್ಗೆ ಮಾತ್ರ ನಿಮ್ಮ ಗಮನವಿದೆಯಲ್ಲ. ಅಮ್ಮನಿಗೆ ತಲೆಗೆ ಹೊಡೆತ ಬಿದ್ದಿರಬಹುದಲ್ಲವೇ? ಆಕೆಗೆ ಸ್ವಲ್ಪ ಹೊತ್ತು ಪ್ರಜ್ಞೆ ತಪ್ಪಿತ್ತು.' ಜ್ಯಾಕಿ ಕೇಳಿದಳು.

'ನಾವು ಪರೀಕ್ಷಿಸಿದ್ದೇವೆ. ಆಕೆಯ ತಲೆಗೆ ಹೊಡೆತಬಿದ್ದ ಬೇರೆ ಯಾವುದೇ ಚಿಹ್ನೆಗಳಿಲ್ಲ. ಕೆಲವೊಮ್ಮೆ ಬೇರೆಕಡೆ ನೋವಾದರೂ ಪ್ರಜ್ಞೆ ತಪ್ಪಿದ ಹಾಗಾಗಬಹುದು'

'ಪ್ರಜ್ಞೆ ತಪ್ಪಿದ ಹಾಗಾಗಬಹುದು ಅಂದರೆ ಏನ್ರೀ? ನಾನು ಅಮ್ಮನ ಜತೆಗೇ ಇದ್ದೆ. ಆಕೆಗೆ ಪ್ರಜ್ಞೆ ತಪ್ಪಿದ್ದನ್ನು ನಾನೇ ಕಣ್ಣಾರೆ ನೋಡಿದ್ದೇನೆ' ಜ್ಯಾಕಿಗೆ ಈಗ ಸ್ವಲ್ಪ ಸಿಟ್ಟು ಬಂತು.

'ಸರಿ, ಪ್ರಜ್ಞೆ ತಪ್ಪಿತು ಎಂದೇ ಇಟ್ಟುಕೊಳ್ಳೋಣ. ಈಗ ಆರಾಮಿದ್ದಾರಲ್ಲ. ಆಸ್ಪತ್ರೆಗೆ ಕರಕೊಂಡು ಹೋಗಿ ತೋರಿಸಿಕೊಂಡು ಬನ್ನಿ. ಬೇಡ ಅಂದವರ್ಯಾರು? ಆಂಬುಲೆನ್ಸಿನ ಅವಶ್ಯಕತೆಯಿಲ್ಲ ಎಂದೆ ಅಷ್ಟೇ' ಆ ಪ್ಯಾರ ಮೆಡಿಕ್ ಈಗ ಕೊಂಚ ಗರಂ ಆದ.
'ನೀವು ಗ್ಯಾರಂಟಿ ಕೊಡುತ್ತೀರ, ನಮ್ಮಮ್ಮ ಆಸ್ಪತ್ರೆಗೆ ಹೋಗುವತನಕ ಆರಾಮಾಗಿರುತ್ತಾರೆ ಎಂದು. ನಿಮ್ಮ ಕೆಲಸ ಆಂಬುಲೆನ್ಸಿನಲ್ಲಿ ರೋಗಿಗಳನ್ನು ಕರಕೊಂಡು ಹೋಗುವುದು. ಆ ಕೆಲಸವನ್ನು ನೀವು ಮಾಡಿದಲ್ಲಿ ಇಷ್ಟು ಹೊತ್ತಿಗೆ ನಮ್ಮಮ್ಮ ಆಸ್ಪತ್ರೆಯಲ್ಲಿರುತ್ತಿದ್ದರು' ಈಗ ಜ್ಯಾಕಿ ಜಗಳವಾಡಲೇಬೇಕು ಎನ್ನುವ ಮೂಡಿನಲ್ಲಿದ್ದಳು.

ಆತ 'ನೋಡಿ ಮೇಡಂ. ಹಾಗೆ ಈ ಜೀವನದಲ್ಲಿ ಯಾವುದಕ್ಕೂ ಗ್ಯಾರಂಟಿ ಕೊಡಲಾಗುವುದಿಲ್ಲ. ಇಷ್ಟರಮೇಲೆ ನಿಮಗೆ ಕಸಿವಿಸಿಯಾಗುವ ಯಾವ ಕೆಲಸವನ್ನೂ ಮಾಡಿ ಎಂದು ನಾನು ಹೇಳುವುದಿಲ್ಲ. ಆದರೆ, ಅವಶ್ಯಕತೆಯಿಲ್ಲದಾಗಲೂ ಆಂಬುಲೆನ್ಸಿನಲ್ಲಿ ಆಸ್ಪತ್ರೆಗೆ ಹೋದಲ್ಲಿ ನಿಮ್ಮ ವಿಮಾಕಂಪೆನಿಯವರು ಆ ಖರ್ಚನ್ನು ಭರಿಸದೇ ಇರುವ ಸಾಧ್ಯತೆಯಿದೆ. ಮತ್ತು ನೀವು ಈ ಆಂಬುಲೆನ್ಸನ್ನು ಉಪಯೋಗಿಸುತ್ತಿರುವಷ್ಟೂ ಹೊತ್ತು ಈ ಆಂಬುಲೆನ್ಸು ಬೇರೆ ಯಾರಿಗೂ ಲಭಿಸದೇ ಇರುವ ಸಾಧ್ಯತೆಯೂ ಇದೆ. ಇನ್ನೊಬ್ಬ ತೀರ ಅಪಾಯದಲ್ಲಿರುವ ವ್ಯಕ್ತಿಗೆ ಆಂಬುಲೆನ್ಸು ಸಿಗದೇ ತೊಂದರೆಯಾಗಬಹುದು' ಎಂದ.

ಆಗ ಜ್ಯಾಕಿ 'ಅದು ನನ್ನ ಜವಾಬ್ದಾರಿಯಲ್ಲ. ನೀನು ಆಂಬುಲೆನ್ಸಿನಲ್ಲಿ ಅಮ್ಮನನ್ನು ಆಸ್ಪತ್ರೆಗೆ ಕರಕೊಂಡು ಹೋಗಲೇಬೇಕು' ಎಂದು ಹಠ ಹಿಡಿದು ಕೂತಳು. ಆತ ಒಂದು ವೇಳೆ ಆಂಬುಲೆನ್ಸಿನ ಖರ್ಚನ್ನು ವಿಮಾಕಂಪೆನಿಯವರು ಭರಿಸದಿದ್ದಲ್ಲಿ ಅದಕ್ಕೆ ನೀವೇ ಜವಾಬ್ದಾರಿ' ಎಂದು ಬರೆದು ಸಹಿ ಹಾಕಿಸಿಕೊಂಡು ಆಸ್ಪತ್ರೆಗೆ ಕರಕೊಂಡು ಹೋದ.

ಆಸ್ಪತ್ರೆಗೆ ಬೆಟ್ಟಿ ಆಂಬುಲೆನ್ಸಿನಲ್ಲಿ ಹೋಗಿದ್ದರಿಂದ ಜ್ಯಾಕಿಗಿಂತಲೂ ಮೊದಲು ತಲುಪಿದ್ದಳು. ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಸಿಕ್ಕಾಪಟ್ಟೆ ಜನಜಂಗುಳಿ. ಬೆಟ್ಟಿಯ ಆರಂಭಿಕ ಪರೀಕ್ಷೆ ಮಾಡಿದ ನರ್ಸು ಆಕೆಯ ಕೇಸ್ ಪೇಪರಿನಲ್ಲಿ ಬರೆದಳು. '೮೦ ವರ್ಷದ ಆರೋಗ್ಯವಂತ ಮಹಿಳೆ ಮಗಳ ಜತೆಯಲ್ಲಿ ಕ್ರಿಸ್‌ಮಸ್ ಮರಕ್ಕೆ ಅಲಂಕಾರ ಮಾಡುತ್ತಿದ್ದಾಗ ಆಯತಪ್ಪಿ ಕೆಳಗೆ ಬಿದ್ದಿದ್ದಾಳೆ. ಕೇವಲ ಹತ್ತು ಸೆಕೆಂಡುಗಳ ಕಾಲ ಪ್ರಜ್ಞೆ ತಪ್ಪಿದ್ದಿರಬಹುದು ಎಂದು ರೋಗಿಯ ಮಗಳು ಹೇಳಿದ್ದಾಳೆ. ಆದರೆ ಈಗ ರೋಗಿಗೆ ತನ್ನ ಮುಂಗೈ ನೋವು ಬಿಟ್ಟರೆ ಬೇರೆ ಏನೂ ತೊಂದರೆಯಿಲ್ಲ. ತುರ್ತು ಚಿಕಿತ್ಸಾ ವಿಭಾಗದಲ್ಲಿ ಈಕೆಯನ್ನು ಮಲಗಿರಿಸಲು ಜಾಗವಿಲ್ಲದೇ ಇರುವ ಕಾರಣ ಈಕೆಯನ್ನು ಹೊರಗಡೆ ನಿರೀಕ್ಷಣಾ ಕೊಠಡಿಯಲ್ಲಿ ಕೂರಿಸಲಾಗುವುದು. ಈಕೆ ಮುಂಗೈಯ ಎಕ್ಸ್–ರೇ ಯನ್ನು ನಿರೀಕ್ಷಣಾ ಕೊಠಡಿಯಿಂದಲೇ ಮಾಡಬಹುದು. ಈಕೆಗೆ ಕೈ ಮುರಿದಿದ್ದರೆ ಎಲುಬು ಮತ್ತು ಕೀಲು ರೋಗದ ಪರಿಣಿತರನ್ನು ಕರೆಸಬಹುದು. ಮುರಿಯದೇ ಇದ್ದಲ್ಲಿ ಈಕೆಯನ್ನು ನೇರವಾಗಿ ಮನೆಗೆ ಕಳಿಸಬಹುದು' ಎಂದು ಬರೆಯಲಾಗಿತ್ತು.
ಜ್ಯಾಕಿ ಅಲ್ಲಿಗೆ ಬಂದಳು. ಬಂದವಳೇ ಅಮ್ಮನನ್ನು ಹೊರಗಡೆ ನಿರೀಕ್ಷಣಾ ಕೊಠಡಿಯಲ್ಲಿ ಕೂರಿಸಿದ್ದು ನೋಡಿ ಸಿಕ್ಕಾಪಟ್ಟೆ ಕೋಪ ಮಾಡಿಕೊಂಡವಳೇ ಅಮ್ಮನನ್ನು ಹೊರಗೆ ಕೂರಿಸಿದ್ದು ಪ್ಯಾರಮೆಡಿಕ್ ಅಮ್ಮನಿಗೆ ಏನಾಗಿದೆ ಎಂದು ಸರಿಯಾಗಿ ಹೇಳದೇ ಇದ್ದ ಕಾರಣ ಎಂದು ಜೋರಾಗಿ ಜಗಳ ಕಾದಳು.

ಆಗ ನಾನು ನಿರೀಕ್ಷಣಾ ಕೊಠಡಿಗೆ ಹೋಗಿ ರೋಗಿಯ ಬಳಿ ನೇರವಾಗಿ ಮಾತಾಡಿ ಆಕೆಯ 'ಕತೆ'ಯನ್ನು ಆಕೆಯಿಂದಲೇ ಹೇಳಿಸಿದಾಗ ಸತ್ಯ ಪ್ಯಾರಮೆಡಿಕ್ ಮತ್ತು ಜ್ಯಾಕಿ ಇಬ್ಬರ ಕತೆಯ ನಡುವೆ ಎಲ್ಲೋ ಇದೆ ಎಂದು ಅರ್ಥವಾಗಿ ಎಲ್ಲರನ್ನೂ ಸಮಾಧಾನ ಮಾಡಲಾಯಿತು.

ಇಲ್ಲಿ ಆದದ್ದು ಏನೆಂದರೆ ಕತೆ ಬೆಟ್ಟಿಯದಾದರೂ ಅದರ ನಿರೂಪಕರಿಬ್ಬರೂ ತಮ್ಮ ಅಭಿಪ್ರಾಯವನ್ನು ಕತೆಯಲ್ಲಿ ಬೆಟ್ಟಿ ಏಕೆ ಬಿದ್ದಿರಬಹುದು ಎಂಬುದರ ಬಗ್ಗೆ ಬರೇ ನಿರೂಪಿಸದೇ ತಮ್ಮ ಅಭಿಪ್ರಾಯವನ್ನು ಕೂಡ ಸೇರಿಸಿ ಹೇಳಿದ್ದರು. ಬೆಟ್ಟಿಯ ಮಗಳಾದ ಜ್ಯಾಕಿಗೆ ಅಮ್ಮ ತನ್ನ ಕಣ್ಣಮುಂದೆ ಬಿದ್ದಿದ್ದು, ಹತ್ತೋ ಹದಿನೈದೋ ಸೆಕೆಂಡು ಪ್ರಜ್ಞೆ ತಪ್ಪಿದ್ದು ಬಹಳ ದೊಡ್ಡ ವಿಷಯ. ಅದಕ್ಕೆ ವೈದ್ಯರು ಏನು ಮಾಡಬೇಕು ಎಂದು ಆಕೆಗೆ ಒಂದು ನಿರೀಕ್ಷೆಯಿದೆ. ಮುಂಗೈಯ ಎಕ್ಸ್‌ರೇ ಜತೆಗೆ ತಲೆಗೆ ಏಟು ಬಿದ್ದಿದೆಯೋ ಇಲ್ಲವೋ ಎಂದು

ತಲೆಯ ಸ್ಕ್ಯಾನ್ ಒಂದು ಮಾಡಲಿ ಎಂದು ಆಕೆ ನಿರೀಕ್ಷಿಸಿದ್ದಾಳೆ. ಆದರೆ ದಿನವಿಡೀ ಇದೇ ಕೆಲಸ ಮಾಡುವ ಪ್ಯಾರ ಮೆಡಿಕ್‌ಗೆ ಮುಂಗೈಗೆ ಹೊಡೆತ ಬಿದ್ದರೆ ಶಾಕ್‌ನಿಂದ ಕೂಡ ಕೆಲವು ಗಳಿಗೆ ಪ್ರಜ್ಞೆ ತಪ್ಪಬಹುದು ಎಂದು ಅನಿಸಿದೆ. ಅಷ್ಟೇ ಅಲ್ಲ ಜ್ಯಾಕಿ ಮತ್ತು ಈ ಪ್ಯಾರಮೆಡಿಕ್ ಇಬ್ಬರಿಗೂ ಬೆಟ್ಟಿಗೆ ಏನು ಮಾಡಿದರೆ ಉತ್ತಮ ಎಂಬುದನ್ನು ನಿರ್ಧರಿಸುವಲ್ಲಿ ಮಾತಿನ ಚಕಮಕಿ ನಡೆದಿದೆ. ಅದು ಪ್ಯಾರ ಮೆಡಿಕ್ಕಿನ ಸ್ವಾಭಿಮಾನವನ್ನು ಕೆಣಕಿದೆ. ಎಮೆರ್ಜೆನ್ಸಿ ಡಿಪಾರ್ಟ್‌ಮೆಂಟಿನ ಜನಜಂಗುಳಿ ಹೆಚ್ಚಿದ್ದುದು ಹೊರಗೆ ಕೂಡಿಸಬಹುದಾ ಎಂದು ಕೇಳಿದ್ದಕ್ಕೆ ಈತನಿಗೆ ರೋಗಿ ಬಯಸಿದ ಹಾಲುಅನ್ನ ಸಿಕ್ಕ ಹಾಗಿದೆ.

ಒಟ್ಟು ಕತೆಯ ನಿರೂಪಕರು ಪೂರ್ವಗ್ರಹಪೀಡಿತರಾಗಿದ್ದಲ್ಲಿ ಕತೆಯ ಪಾತ್ರಕ್ಕೆ ಹೇಗೆ ಅನ್ಯಾಯವಾಗುತ್ತದೆ ಎಂಬುದಕ್ಕೆ ಇದು ಉದಾಹರಣೆ.

ಇದನ್ನೆಲ್ಲ ಗಮನಿಸಿದ ಪರಿಣಿತರು ವೈದ್ಯರು ಸಾಹಿತ್ಯವನ್ನು ಓದುವುದರಿಂದ ಅವರ ವಿಷಯ ನಿರೂಪಣಾ ಶೈಲಿ, ವೈದ್ಯಕೀಯ ಪತ್ಯದ ಅರ್ಥೈಸುವಿಕೆ, ಸಹಾನುಭೂತಿ, ಪೂರ್ವಗ್ರಹವಿಲ್ಲದೆ ಸಂಶೋಧನೆಯನ್ನು ಓದುವ ಕ್ರಮ ಇತರೇ ಎಲ್ಲದರಲ್ಲಿಯೂ ಪರಿಣಿತಿಯನ್ನು ಹೆಚ್ಚು ಮಾಡುತ್ತದೆ.

ಹಾಗಾಗಿ ಒಂದು ವಿಷಯವನ್ನು ಪ್ರಮಾಣೀಕರಿಸಿ ಹೇಳಬಹುದೆಂದರೆ, ಒಳ್ಳೆಯ ಸಾಹಿತ್ಯ ಓದಿದವ ಒಳ್ಳೆಯ ವೈದ್ಯನಾಗುತ್ತಾನೋ ಇಲ್ಲವೋ ಒಳ್ಳೆಯ ಮನುಷ್ಯನಂತೂ ಆಗುವವ. ಅಷ್ಟಿದ್ದಲ್ಲಿ ಸಾಕೆನಿಸುತ್ತದೆ. ಮುಂದೊಂದು ದಿನ ಒಳ್ಳೆಯ ವೈದ್ಯನೂ ಆಗುವನೆಂದು ಆಶಿಸುವ.

ವಿಜ್ಞಾನ ಮತ್ತು ಮಾನವ ಪ್ರಪಂಚ

ಡಾ. ಹಿಮಾನ್ಂಶು ಅಕ್ಕಮಹಾದೇವಿ
ಲೇಖಕರು ಮತ್ತು ಸಂಶೋಧನಾ ಮುಖ್ಯಸ್ಥರು
(ಡಾಕ್ಟರ್ಸ್ ವಿಥೌಟ್ ಬಾರ್ಡರ್ಸ್, ಭಾರತ)

ವಿಜ್ಞಾನವು ಮಾನವ ವಿಕಾಸದ ಅವಿಭಾಜ್ಯ ಅಂಗವಾಗಿದ್ದು, ಮಾನವ ನಾಗರಿಕತೆಯ ಜನನ ಹಾಗು ವಿಕಾಸಕ್ಕೆ ಕಾರಣವಾಗಿದೆ. ಜಾರ್ಜ್ ಆರ್ವೆಲ್ ತಮ್ಮ ಪ್ರಖ್ಯಾತ ಪ್ರಬಂಧ–'ವಾಟ್ ಈಸ್ ಸೈನ್ಸ್' (ದಿ ಟ್ರಿಬ್ಯೂನ್, ಲಂಡನ್, ೧೯೪೫) ನಲ್ಲಿ ವಿಜ್ಞಾನ, ತರ್ಕಬದ್ಧತೆ ಹಾಗು ವಿಮರ್ಶಾತ್ಮಕತೆಯ ಮೂಲಕ ಜೀವನವನ್ನ ಉದ್ದೇಶಿಸುವ 'ಚಿಂತನೆಯ ಕ್ರಮ' ಎಂದು ವಾದಿಸಿದರು. ಅಂದರೆ, ವಿಜ್ಞಾನವು ಕೇವಲ ಒಂದು ಜ್ಞಾನದ ವಿಷಯವಲ್ಲದೆ, ನಾಗರಿಕತೆಯನ್ನು ಉಳಿಸಿ–ಬೆಳೆಸುವ ಮನೋಭಾವವಾಗಿದೆ. ನಾಗರಿಕತೆಯ ಹಾದಿಯನ್ನು ಬದಲಾಯಿಸಿದ ಆರಂಭಿಕ ಆವಿಷ್ಕಾರಗಳಾದ – ಬೇಟೆಯಾಡುವ ಉಪಕರಣಗಳು, ಚಕ್ರಗಳು, ದೋಣಿ ಇತ್ಯಾದಿಗಳು ಗಣಿತ ಅಥವಾ ಭೌತಶಾಸ್ತ್ರದ ಅನ್ವಯದಿಂದ ಉದ್ಭವಿಸಲಿಲ್ಲ. ಆದರೆ ಅವುಗಳು ಪ್ರಕೃತಿಯ ಪ್ರಕ್ರಿಯೆಗಳ ಅವಲೋಕನ (ಉದಾಹರಣೆಗೆ– ಗೋಳಾಕಾರದ ಬಂಡೆಗಳು ಉರುಳುವುದನ್ನ ಅವಲೋಕಿಸಿ), ಪ್ರಯೋಗಗಳ ಮೂಲಕ ಹಾಗು ವೈಫಲ್ಯಗಳ ವಿಮರ್ಶೆಯ, ತಾರ್ಕಿಕ ಚಿಂತನೆಗಳ ಮೂಲಕ ಹುಟ್ಟಿದೆವು. ಇದಲ್ಲದೆ, ಕೃಷಿ ಸೇರಿದಂತೆ ಹಲವಾರು ಮೂಲಭೂತ ಆವಿಷ್ಕಾರಗಳು ವಿಶ್ವದ ವಿವಿಧ ಭಾಗಗಳಲ್ಲಿ ಏಕಕಾಲದಲ್ಲಿಯೇ ಸಂಭವಿಸಿದವು. ಅಂದರೆ, ತರ್ಕ ಮತ್ತು ತರ್ಕಬದ್ಧ ಚಿಂತನೆಯು ಮಾನವ ಸಮಾಜಗಳ ಮೂಲ ಗುಣವಾಗಿದೆ ಎಂಬುದನ್ನು ಸೂಚಿಸುತ್ತದೆ.

ಮಾನವ ಇತಿಹಾಸದ ಬಹುಪಾಲು ಭಾಗಗಳಲ್ಲಿ, ವೈಜ್ಞಾನಿಕ ಚಿಂತನೆಯು ಕಲೆ ಹಾಗು ಮಾನವಿಕ ವಿಷಯಗಳ ಅವಿಭಾಜ್ಯ ಅಂಗವಾಗಿ ಬೆಳವಣಿಗೆಯಾಯಿತು. ಇತಿಹಾಸದ ಒಂದು ರೀತಿಯ ತಿಳುವಳಿಕೆಯಲ್ಲಿ, ಮಾನವನ ಅಗತ್ಯತೆಗಳು ಮತ್ತು ಚಿಂತನೆಗಳು ಭಾಷಾ ಪ್ರವಚನ, ಕಲೆ, ಸಾಹಿತ್ಯ ಮತ್ತು ಇತರ ಸಾಂಸ್ಕೃತಿಕ ಅಭಿವ್ಯಕ್ತಿಗಳ ಮೂಲಕ ವ್ಯಕ್ತವಾಗಿ ಬಂದಿದೆ. ಹಾಗೂ ಈ ಅಗತ್ಯಗಳಿಗೆ ಪರಿಹಾರಗಳ ತರ್ಕ ಮತ್ತು ಕ್ರಮಶಾಸ್ತ್ರೀಯ ಚಿಂತನೆಯ ಅನ್ವಯದ ಮೂಲಕ ರೂಪಿತಗೊಂಡಿತು. ಮೂಲಭೂತವಾಗಿ, ಭಾವನೆಗಳು, ಆಲೋಚನೆಗಳು ಮತ್ತು ಸಾಂಸ್ಕೃತಿಕ ರೂಢಿಗಳು ವೈಜ್ಞಾನಿಕ ವಿಧಾನದೊಂದಿಗೆ ಹೆಣೆದುಕೊಂಡಿವೆ. ಬೇಟೆಯಾಡುವುದು, ದೋಣಿ ವಿಹಾರ, ಪ್ರಯಾಣ, ಅಡುಗೆ, ಸಂತಾನೋತ್ಪತ್ತಿ, ಪೋಷಣೆ, ನೀರಾವರಿ ಮತ್ತು ಕೃಷಿಗೆ ಸಂಬಂಧಿಸಿದ ಪ್ರಾಚೀನ ಉಪಕರಣಗಳೆಲ್ಲ ವೈಜ್ಞಾನಿಕ ಚಿಂತನೆಯೊಂದಿಗೆ ಹೆಣೆದುಕೊಂಡಿರುವ ಸಂಸ್ಕೃತಿಯನ್ನು ಸೂಚಿಸುತ್ತವೆ. ಆದ್ದರಿಂದ, ವಿಜ್ಞಾನ ಅಥವಾ ವೈಜ್ಞಾನಿಕ ಚಿಂತನೆಯು ನಾಗರಿಕತೆಯ ಅಗತ್ಯಗಳನ್ನು ಪೂರೈಸಲು ಮತ್ತು ಬೆಳವಣಿಗೆಗೆ ಸಹಾಯ ಮಾಡಲು ಉದ್ದೇಶಿಸಿರಬಹುದು. ಆದಾಗ್ಯೂ, ಅಂತಹ ವೈಜ್ಞಾನಿಕ ಚಿಂತನೆಗಳಲ್ಲಿ ದೋಷಗಳೂ ಹಾಗು ಮಿತಿಗಳೂ ಇದ್ದಕಾರಣ, ಅಗಾಧವಾದ ಸಮಸ್ಯೆಗಳೂ ಉಂಟಾದವು ಹಾಗು ಹಲವಾರು ನಾಗರಿಕತೆಗಳು ಕೂಡ ನಾಶವಾದವು.

ನಾಗರಿಕತೆಗಳು ಮತ್ತು ಜ್ಞಾನದ ಬೆಳವಣಿಗೆಯ ನಂತರವೂ, ವಿಜ್ಞಾನವು ಕಲೆ ಮತ್ತು ಮಾನವಿಕತೆಗಳ ಅವಿಭಾಜ್ಯ ಅಂಗವಾಗಿದ್ದು, ೧೭ ಮತ್ತು ೧೮ ನೇ ಶತಮಾನಗಳಲ್ಲಿ ಮಾತ್ರ ಪ್ರತ್ಯೇಕ ಅಧ್ಯಯನ ಹಾಗು ಆಚರಣೆಯಾಗಿ ಬೆಳೆಯಿತು (ಲೋರೆನ್ ಡಾಸ್ಟನ್, ೨೦೧೫). ಕಾಲಾನಂತರದಲ್ಲಿ, ವಿಜ್ಞಾನವನ್ನ ಮಾನವೀಯತೆಗಳಿಗಿಂತ ಮೂಲಭೂತವಾಗಿ ಭಿನ್ನವಾಗಿರುವ – ತರ್ಕ, ಪ್ರಯೋಗ ಮತ್ತು ಪುನರುತ್ಪಾದಕ ಪುರಾವೆಗಳ ಅನ್ವೇಷಣೆಯ ಸಾಧ್ಯತೆಯಿಂದ ವ್ಯಾಖ್ಯಾನಿಸಲಾಯಿತು. ಆದಾಗ್ಯೂ, ಸಾಮಾಜಿಕ ಪ್ರಕ್ರಿಯೆಗಳು ಹಾಗು ಹಾಗುಹೋಗುಗಳು, ವಿಜ್ಞಾನದ ಬೆಳವಣಿಗೆ ಹಾಗು ಆಚರಣೆಗೆ ಕಾರಣವಾಗಿಯೇ ಬಂದಿತು. ವಾಸ್ತವವಾಗಿ, ೧೮ನೇ–೨೦ನೇ ಶತಮಾನದ

ಪ್ರಮುಖ ಸಮಸ್ಯೆಗಳಾದ 'ಕಾಲರಾ', 'ಮಲೇರಿಯಾ' ಮತ್ತು 'ಕ್ಷಯರೋಗಗಳ' ತಿಳುವಳಿಕೆ, ಅವಲೋಕನಗಳಿಗೆ ತರ್ಕವನ್ನು ಅನ್ವಯಿಸುವ ಮೂಲಕ ಪ್ರಾರಂಭವಾಯಿತು. ಈ ಅವಧಿಯು ಯುರೋಪಿಯನ್ ವಸಾಹತೀಕರಣ ಕಾಲಘಟ್ಟಕ್ಕೆ ಹೊಂದಿಕೆಯಾಯಿತು. ವಸಾಹತೀಕರಣವು ಯೂರೋಪಿಗೆ ಸಂಪನ್ಮೂಲಗಳನ್ನ ತುಂಬುತಿದ್ದಂತೇ, ವಿಜ್ಞಾನವು ಒಂದು ಜ್ಞಾನದ ಪದ್ಧತಿಯಾಗಿ ಬೆಳೆಯಿತು. ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಮತ್ತು ಜೀವಶಾಸ್ತ್ರಗಳಲ್ಲಿರುವಂತೆ ವಿಜ್ಞಾನವು ಅನ್ವೇಷಣೆ, ಯುದ್ಧ, ಮೂಲಸೌಕರ್ಯ, ನಗರಗಳ ನಿರ್ಮಾಣ, ಔಷಧದ ಆವಿಷ್ಕಾರ ಮತ್ತು ಜೀವಿತಾವಧಿಯನ್ನು ಹೆಚ್ಚಿಸಲು ಸಾಧನಗಳನ್ನು ತಯಾರಿಸಿತು. 'ವಿಜ್ಞಾನಿಗಳು',– ವಿಜ್ಞಾನವನ್ನು ಒಂದು ಕ್ರಮಶಾಸ್ತ್ರೀಯ ವಿಭಾಗವಾಗಿ ಅಧ್ಯಯನ ಮಾಡುವ ಹೊಸ ಜನರ ತಳಿಯಾಗಿ ಹೊರಹೊಮ್ಮಿದರು. ವಿಜ್ಞಾನಿಗಳು ನಾಗರಿಕತೆಯನ್ನು ಮತ್ತಷ್ಟು ಹೆಚ್ಚಿಸಬಲ್ಲ ಉಪಕರಣಗಳು ಮತ್ತು ತಂತ್ರಗಳನ್ನು ಉತ್ಪಾದಿಸಲು ಉದ್ದೇಶಿಸಿದ್ದರು. ವಸಾಹತುಶಾಹಿಗಳು ವಸಾಹತುಗೊಳಿಸಲಾದ ಜನಾಂಗಗಳಿಗಿಂತ ಉತ್ತಮ ಸಾಧನಗಳನ್ನು ಹೊಂದಿದ್ದರಿಂದ ವಿಜ್ಞಾನದ ಉತ್ಪನ್ನವು ವಸಾಹತುಶಾಹಿಗಳಿಗೆ ಮತ್ತಷ್ಟು ಸಹಾಯ ಮಾಡಿತು. ಇದು ವಸಾಹತುಗೊಳಿಸಲಾದ ಜನಾಂಗಗಳ ವೈಜ್ಞಾನಿಕ ಚಿಂತನೆಯನ್ನು ನಿಗ್ರಹಿಸಲು ಮತ್ತು ದುರ್ಬಲಗೊಳಿಸಲು ಸಹಾಯವಾಯಿತು. ವಿಜ್ಞಾನವು ವಸಾಹತೀಕರಣದ ಸಾಧನವಾಯಿತು. ಮತ್ತು ಮಾನವ ಇತಿಹಾಸದಲ್ಲಿ ಮೊದಲ ಬಾರಿಗೆ, ರಾಜಕೀಯ ಉದ್ದೇಶಗಳನ್ನು ಪೂರೈಸಲು ವಿಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಯಿತು ಎಂದು ವಾದಿಸಬಹುದು. ಈ ಪ್ರವೃತ್ತಿಯು ೧೯ನೇ ಮತ್ತು ೨೦ನೇ ಶತಮಾನದಲ್ಲಿ ರಾಷ್ಟ್ರ–ರಾಜ್ಯಗಳ ಜನನದೊಂದಿಗೆ ಹೆಚ್ಚು ಸ್ಪಷ್ಟವಾಯಿತು.

ಮುಂದುವರಿಯದಂತೆ, ಎರಡು ವಿಶ್ವ ಯುದ್ಧಗಳ ಅವಧಿಯಲ್ಲಿ ವೈದ್ಯಕೀಯ ಸೇರಿದಂತೆ ಎಲ್ಲಾ ವಿಜ್ಞಾನ ವಿಭಾಗಗಳಲ್ಲಿ ಹೆಚ್ಚಿನ ಬೆಳವಣಿಗಳು ಕಂಡಿತು. ಇದೇ ಕಾಲ ಘಟ್ಟದಲ್ಲಿ ವಿಜ್ಞಾನವು ತಂತ್ರಜ್ಞಾನಕ್ಕೆ ಜನ್ಮ ನೀಡಿತು. ಆದಾಗ್ಯೂ, ಈ ಎಲ್ಲಾ ಬೆಳವಣಿಗೆಯನ್ನು ಯುದ್ಧ ಮತ್ತು ಪ್ರಾಬಲ್ಯದ ಉದ್ದೇಶಕ್ಕಾಗಿ ರಾಜ್ಯಗಳು ಹೆಚ್ಚಾಗಿ ನಿರ್ದೇಶಿಸುತ್ತಿದ್ದವು. ಈ ಅವಧಿಯಲ್ಲಿ, ರಾಷ್ಟ್ರ–ರಾಜ್ಯಗಳು ತಮ್ಮದೇ ಆದ ವಿಜ್ಞಾನಿಗಳನ್ನು ಬೆಳೆಸಿದವು. ಯುದ್ಧಭೂಮಿಯಲ್ಲಿ ಪ್ರಾಬಲ್ಯ ಸಾಧಿಸಲು ಮತ್ತು ತಮ್ಮದೇ ಜನರ ಜೀವನ ಮಟ್ಟವನ್ನು ಅಭಿವೃದ್ಧಿಪಡಿಸಲು ಸಾಧನಗಳನ್ನು ಕಂಡುಹಿಡಿಯುವ ಕಾರ್ಯವನ್ನು ಅವರಿಗೆ ವಹಿಸಿದವು. ವಿಜ್ಞಾನದ ಕಲಿಕೆ, ಅಭ್ಯಾಸ ಮತ್ತು ಅನ್ವಯವು ಹೆಚ್ಚಾಗಿ ರಾಜಕೀಯ ಅಗತ್ಯಗಳಿಂದ ನಿರ್ದೇಶಿಸಲ್ಪಟ್ಟಿತು. ಮತ್ತು ಈ ಪ್ರಕ್ರಿಯೆಯು ದೇಶದಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸಿತ್ತು. ಇದರ ಪರಿಣಾಮವಾಗಿ, ಇತರ ಕ್ಷೇತ್ರಗಳಂತೆಯೇ ಪುರುಷರು ಬಹುಪಾಲು ವಿಜ್ಞಾನ ಕ್ಷೇತ್ರವನ್ನ ರಚಿಸಿದರು. ಮಹಿಳೆಯರ ಪಾತ್ರ ಕೇವಲ ಮನೆಕೆಲಸಕ್ಕೆ ಅಥವಾ ಮೃದು ಕಾರ್ಮಿಕ ಕೆಲಸಕ್ಕೆ ಸೀಮಿತವಾಗಿತ್ತು.

ಒಟ್ಟಾರೆ, ಪ್ರಾಚೀನ ಕಾಲದಲ್ಲಿ ಸಂಸ್ಕೃತಿ ಮತ್ತು ಅವಲೋಕನೆಗಳಿಂದ ರೂಪಿತಗೊಂಡ ವಿಜ್ಞಾನದ ಮಾರ್ಗ, ಈ ಕಾಲದಲ್ಲಿ ಸಾಮಾಜಿಕ ರಚನೆಗಳು ಹಾಗು ರಾಜಕೀಯ ಗುರಿಗಳು ವಿಜ್ಞಾನದ ಸ್ವರೂಪವನ್ನು ನಿರ್ಧರಿಸಿದವು. ಸಂಸ್ಕರಿಸಿದ ಮತ್ತು ಪ್ಯಾಕ್ ಮಾಡಲಾದ ಆಹಾರ, ಬಟ್ಟೆ, ಬಿಲ್ಡಿಂಗ್‌ಗಳು, ಮೋಟಾರು ವಾಹನಗಳು, ವಿದ್ಯುತ್, ರೈಲ್ವೆ, ವಾಯುಯಾನ, ಹಡಗು, ಔಷಧಿಗಳು ಮತ್ತು ವೈದ್ಯಕೀಯ ವಿಜ್ಞಾನದ ಅಭಿವೃದ್ಧಿ ಮತ್ತು ತಂತ್ರಜ್ಞಾನದ ಆಧುನಿಕ ಉತ್ಪನ್ನಗಳ ಅಡಿಪಾಯವು ವಿಶ್ವ ಯುದ್ಧಗಳ ಅವಧಿಯಲ್ಲಿ ನೆಲೆಗೊಂಡವು. ಈ ಅವಧಿಯಲ್ಲಿ ಹೊರಹೊಮ್ಮಿದ ವಿಜ್ಞಾನದ ಸಿದ್ಧಾಂತಗಳು ಸಹ ಸಾಮಾಜಿಕ ಮತ್ತು ರಾಜಕೀಯ ಚಿಂತನೆಯಿಂದ ಪ್ರಭಾವಿತವಾಗಿದ್ದವು. ವಿಶ್ವ ರಾಜಕೀಯದಲ್ಲಿ ಪ್ರಾಬಲ್ಯ ಸಾಧಿಸಲು ದೇಶಗಳು ವಿಜ್ಞಾನವನ್ನು ಬಳಸಿಕೊಂಡವು. ಈ ಪ್ರವೃತ್ತಿಯು ಶೀತಲ ಸಮರದವರೆಗೆ ಮುಂದುವರೆಯಿತು. ಇದರ ಪರಿಣಾಮವಾಗಿ, ವಿಜ್ಞಾನದ ಪ್ರಕ್ರಿಯೆಯು ರಾಜಕೀಯದಿಂದ ನಿರ್ದೇಶಿಸಲ್ಪಟ್ಟಿತು. ಇದು ಮಾನವ ಸಮಾಜಗಳಲ್ಲಿ ಸಾಮಾಜಿಕ ಅಸಮಾನತೆಗೂ ಕಾರಣವಾಯಿತು. ಪಾಶ್ಚಿಮಾತ್ಯ ದೇಶಗಳು ಮತ್ತು ಹಿಂದಿನ ವಸಾಹತುಶಾಹಿಗಳು ವಿಜ್ಞಾನದ ಅತಿ ಹೆಚ್ಚು ಫಲಾನುಭವಿಗಳಾದ್ದರಿಂದ, ಈ ದೇಶಗಳಲ್ಲಿ ಹೆಚ್ಚಿನ ಜೀವಿತಾವಧಿ, ಕಡಿಮೆ ರೋಗ ಮತ್ತು ಉನ್ನತ ಜೀವನ ಮಟ್ಟಗಳು ಕಂಡುಬಂದವು. ಜ್ಞಾನ ಅಥವಾ ವಿಜ್ಞಾನದ ಬಳಕೆಯ ಮೇಲೆ ಯಾವುದೇ ನಿಯಂತ್ರಣವಿಲ್ಲದ ಇತರೆ ರಾಷ್ಟ್ರಗಳು ಅಪೌಷ್ಟಿಕತೆ, ಹಸಿವು ಮತ್ತು ಕಳಪೆ ಆರ್ಥಿಕ ಸ್ಥಿತಿಯಿಂದ ಬಳಲುತ್ತಲೇ ಇದ್ದವು.

ಆದಾಗ್ಯೂ, ವಿಜ್ಞಾನದ ರಾಜಕೀಯ ನಿಯಂತ್ರಣವು ಪಾಶ್ಚಿಮಾತ್ಯ ಜಗತ್ತಿನಲ್ಲಿ ಪ್ರತಿರೋಧವಿಲ್ಲದೆ ಇರಲಿಲ್ಲ. ವಿಜ್ಞಾನಿಗಳ ಹಲವಾರು ಗುಂಪುಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ಸಮಾಜದ ಉದ್ದೇಶಗಳನ್ನು ಪೂರೈಸಲು ಮಾನವ ಕೇಂದ್ರಿತ ವಿಜ್ಞಾನವನ್ನು ಅನುಸರಿಸಿದವು. ಹಲವಾರು ಪರಮಾಣು ಭೌತವಿಜ್ಞಾನಿಗಳು ಪರಮಾಣು ಬಾಂಬಿನ ಅಭಿವೃದ್ಧಿಯಲ್ಲಿ ಭಾಗವಹಿಸಲು ನಿರಾಕರಿಸಿದಲ್ಲದೆ, ಬ್ರಹ್ಮಾಂಡವನ್ನು ಅರ್ಥಮಾಡಿಕೊಳ್ಳಲು ಪರಮಾಣು ಭೌತಶಾಸ್ತ್ರವನ್ನು ಅನುಸರಿಸಿದರು. ಪೋಲಿಯೊ ವಿರುದ್ಧ ಲಸಿಕೆಗಳನ್ನು ವಿನ್ಯಾಸಗೊಳಿಸಿದ ವಿಜ್ಞಾನಿಗಳು ಮತ್ತು ಇನ್ಸುಲಿನ್ ಅನ್ನು ಕಂಡುಹಿಡಿದವರು ತಮ್ಮ ಉತ್ಪನ್ನಕ್ಕೆ ಪೇಟೆಂಟ್ ಪಡೆಯಲು ನಿರಾಕರಿಸಿದರು. ಅಲ್ಲದೇ, ಲಸಿಕೆಗಳು ಮತ್ತು ಔಷಧಿಗಳ ಸಾರ್ವತ್ರಿಕ ಬಳಕೆಗೆ ಅನುವು ಮಾಡಿಕೊಟ್ಟರು. ಕೆಲವು ಶೈಕ್ಷಣಿಕ ಗುಂಪುಗಳು, (ಮಲೇರಿಯಾವನ್ನು ಉಂಟುಮಾಡುವ ಏಜೆಂಟ್ಗಳನ್ನು ಕಂಡುಹಿಡಿದವರು ಮತ್ತು ಮಲೇರಿಯಾಗೆ ಚಿಕಿತ್ಸೆಯನ್ನು ವಿನ್ಯಾಸಗೊಳಿಸಿದವರು) ಬಡ ರಾಷ್ಟ್ರಗಳಲ್ಲಿ ತಮ್ಮ ಸಂಶೋಧನೆಯೊಂದಿಗೆ ಸಹಕರಿಸಿದ ದೇಶೀಯ ವಿಜ್ಞಾನಿಗಳನ್ನ ಸಬಲೀಕರಿಸಿದರು. ೧೯೦೯ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾದ

ಭಾರತೀಯ ವಿಜ್ಞಾನ ಸಂಸ್ಥೆಯು ವಿಜ್ಞಾನದ ಅನ್ವೇಷಣೆಗಾಗಿ ಭಾರತದಲ್ಲಿ ವಸಾಹತುಶಾಹಿ ಹೂಡಿಕೆಗೆ ಒಂದು ಉದಾಹರಣೆಯಾಗಿದೆ. ಕೈಗಾರಿಕೀಕರಣವನ್ನು ಸಕ್ರಿಯಗೊಳಿಸಲು, ಕೃಷಿಯನ್ನು ಸುಲಭಗೊಳಿಸಲು, ಉತ್ತಮ ಸಾರ್ವಜನಿಕ ಆರೋಗ್ಯ ಮತ್ತು ಬಡತನವನ್ನು ಕಡಿಮೆ ಮಾಡಲು ಹೊಸ ಸಾಧನಗಳನ್ನು ಕಂಡುಹಿಡಿಯಲು ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದೆ ಕಾಲ ಘಟ್ಟಲ್ಲಿಯೇ ಹಲವಾರು ಭಾರತೀಯರು ಮಾನವ ಪ್ರಯೋಜನಗಳಿಗಾಗಿ ವಿಜ್ಞಾನದ ಅನ್ವೇಷಣೆಗೆ ಕೊಡುಗೆ ನೀಡಿದ್ದರು. ಡಾ.ಸಿ.ವಿ.ರಾಮನ್, 'ರಾಮನ್ ಎಫೆಕ್ಟ್' ಅವಿಷ್ಕಾರಕ್ಕೆ ನೋಬೆಲ್ ಪ್ರಶಸ್ತಿ ಪಡೆದರು. ಜಗದೀಶ ಚಂದ್ರ ಬೋಸ್ (ರೇಡಿಯೋ ವಿಜ್ಞಾನ) ಶಾಂತಿ ಸ್ವರೂಪ್ ಭಟ್ನಾಗರ್ (ರಸಾಯನಶಾಸ್ತ್ರ) ಜಾನಕಿ ಅಮ್ಮಾಳ್ (ಸಸ್ಯಶಾಸ್ತ್ರ) ಹೋಮಿ ಬಾಬಾ (ಪರಮಾಣು ಭೌತಶಾಸ್ತ್ರ) ಆ ಕಾಲದ ಗಮನಾರ್ಹ ವಿಜ್ಞಾನಿಗಳಾಗಿದ್ದರು.

ಎರಡನೆ ವಿಶ್ವ ಯುದ್ಧದ ನಂತರದ ಕಾಲವು ಹೊಸ ವಿಮೋಚಿತ ರಾಷ್ಟ್ರಗಳ ರಚನೆಯನ್ನು ಕಂಡಿತು. ಪಾಶ್ಚಿಮಾತ್ಯ ರಾಷ್ಟ್ರಗಳು ಸೇರಿದಂತೆ ಬಹುಪಾಲು ರಾಷ್ಟ್ರಗಳು ಬಡತನವನ್ನು ಎದುರಿಸುತ್ತಿದ್ದವು. ೧೯೪೦ರ ದಶಕದಲ್ಲಿ ವಿಶ್ವಸಂಸ್ಥೆ ಮತ್ತು 'ನಾನ್ ಅಲೈಡ್' ಚಳವಳಿಯ ಸ್ಥಾಪನೆಯೊಂದಿಗೆ, 'ಮಾನವ ಅಭಿವೃದ್ಧಿ' ಭೌಗೋಳಿಕ–ರಾಜಕೀಯದ ಕೇಂದ್ರಬಿಂದುವಾಯಿತು. ವಿಜ್ಞಾನ ಮತ್ತು ತಂತ್ರಜ್ಞಾನವು ಬಡತನ ನಿರ್ಮೂಲನೆ, ಸಂಪತ್ತಿನ ಉತ್ಪಾದನೆ ಮತ್ತು ಮಾನವ ಅಭಿವೃದ್ಧಿಯ ಪ್ರಮುಖ ಸಾಧನವಾಯಿತು. ಸ್ವತಂತ್ರ ಭಾರತವು ತನ್ನ ಶೈಕ್ಷಣಿಕ ಮತ್ತು ವೈಜ್ಞಾನಿಕ ಸಂಪನ್ಮೂಲಗಳನ್ನು ರಾಷ್ಟ್ರೀಯ–ಸಾಮಾಜಿಕ–ಆರ್ಥಿಕ ಗುರಿಗಳಿಗೆ ಹೊಂದಿಸಿತು. ಮುಂದಿನ ದಶಕಗಳಲ್ಲಿ, ಭಾರತೀಯ ಸರ್ಕಾರಗಳು ರಾಷ್ಟ್ರದ ಅಭಿವೃದ್ಧಿಗೆ ಸಹಾಯ ಮಾಡಲು ಹಲವಾರು ಸಂಶೋಧನಾ ಸಂಸ್ಥೆಗಳನ್ನು (ಭಾರತೀಯ ವೈದ್ಯಕೀಯ, ಕೃಷಿ, ಪಶುವೈದ್ಯಕೀಯ ಸಂಶೋಧನೆ, ಕೈಗಾರಿಕಾ ಸಂಶೋಧನೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಹೋಮಿ ಬಾಬಾ ಪರಮಾಣು ಸಂಶೋಧನಾ ಕೇಂದ್ರ, ಭಾರತೀಯ ಪೌಷ್ಟಿಕಾಂಶ ಸಂಸ್ಥೆ ಇತ್ಯಾದಿಗಳು) ಸ್ಥಾಪಿಸಿತು. ಭಾರತ ಹಾಗು ಇತರೆ ಅನೇಕ ರಾಷ್ಟ್ರಗಳಲ್ಲಿ, ವೈಜ್ಞಾನಿಕ ಅನ್ವೇಷಣೆಗೆ ರಾಜ್ಯಗಳೆ ಧನಸಹಾಯ ನೀಡುತ್ತಿದೆವು. ಈ ದನಸಹಾಯ ಸಮಾಜದ ಬೆಳವಣಿಗೆ ಅಗತ್ಯೆಗಳು ಪೂರೈಸುವ ಉದ್ದೇಶವನ್ನು ಹೊಂದಿತ್ತು. ಖಾಸಗಿ ಉದ್ಯಮವು, ವ್ಯಾಪಾರ ಮತ್ತು ಲಾಭಕ್ಕಾಗಿ ಉತ್ಪನ್ನಗಳನ್ನು ಉತ್ಪಾದಿಸಲು ಸಂಶೋಧನೆ ಮತ್ತು ಅಭಿವೃದ್ಧಿಗೆ ಒಂದು ಸಣ್ಣ ಪ್ರಮಾಣವನ್ನು ಹೂಡಿಕೆ ಮಾಡಿತು. (ಉದಾಃ ಆಟೋಮೊಬೈಲ್, ಟೆಲಿವಿಷನ್ ಮತ್ತು ಇತರ ಗ್ರಾಹಕ ಸರಕುಗಳು).

ವಿಜ್ಞಾನದ ಉದ್ದೇಶ ಮಾನವ ಅಭಿವೃದ್ಧಿಯಾಗಿದ್ದರೂ, ಶೀತಲ ಸಮರದಿಂದ ಉಂಟಾದ ಭೌಗೋಳಿಕ–ರಾಜಕೀಯ ಪರಿಸ್ಥಿತಿಯಿಂದಾಗಿ ವಿಜ್ಞಾನ ರಾಷ್ಟ್ರೀಯ ಗಡಿಗಳನ್ನು ದಾಟಿಲ್ಲ. ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ಭದ್ರತೆಯ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸುವ ಸ್ಪರ್ಧೆಯಲ್ಲಿದ್ದವು. ಆದ್ದರಿಂದ, ವಿಜ್ಞಾನದಲ್ಲಿ ಗೌಪ್ಯತೆಯ ಬಲವಾದ ಅಂಶವಿತ್ತು. ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ವಿಜ್ಞಾನಿಗಳ ನಡುವಿನ ಶೈಕ್ಷಣಿಕ ವಿನಿಮಯವನ್ನು ಸಹ ಭಾರತ ಸೇರಿದಂತೆ ಹಲವಾರು ಸರ್ಕಾರಗಳು ನಿಯಂತ್ರಿಸಿದವು. ಅಂತಹ ಗೌಪ್ಯತೆಯು ವಿಜ್ಞಾನದ ಬೆಳವಣಿಗೆಯನ್ನು ಮತ್ತು ಮಾನವ ಅಭಿವೃದ್ಧಿಯನ್ನು ಕುಗ್ಗಿಸಿತು. ರಾಷ್ಟ್ರೀಯತೆಯು ಶಸ್ತ್ರಾಸ್ತ್ರ ಮತ್ತು ಮಿಲಿಟರಿ ತಂತ್ರಜ್ಞಾನದ ಅಭಿವೃದ್ಧಿಗೆ ವಿಜ್ಞಾನವನ್ನು ಬಳಸಿಕೊಂಡಿತು. ಈ ಕಾಲದಲ್ಲಿಯೆ ಸುಧಾರಿತ – ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಪರಮಾಣು ಬಾಂಬುಗಳು ವಿನ್ಯಾಸಗೊಂಡವು. ಇದೇ ಕಾಲ ವಿಜ್ಞಾನವನ್ನು ವಿನಾಶಕಾರಿ ಉದ್ದೇಶಗಳಿಗಾಗಿ ಐತಿಹಾಸಿಕ ಪ್ರಮಾಣದಲ್ಲಿ ಬಳಸುವುದನ್ನು ಕಂಡಿತು.

ಶೀತಲ ಸಮರದ ಅಂತ್ಯವು ರಾಜಕೀಯ ಉದಾರೀಕರಣ, ಗಡಿಗಳನ್ನು ಸರಾಗಗೊಳಿಸುವುದು ಮತ್ತು ಜಾಗತೀಕರಣದ ಮಾರ್ಗವನ್ನು ಸ್ಥಾಪಿಸಿತು. ಈ ಪ್ರಕ್ರಿಯೆಯು ವಿಜ್ಞಾನವನ್ನು ರಾಷ್ಟ್ರೀಯತೆಯ ನಿಯಂತ್ರಣಗಳಿಂದ ಮುಕ್ತಗೊಳಿಸಿತು. ಜಾಗತಿಕ ಮಾನವ ಅಭಿವೃದ್ಧಿಯ ಪರಿಕಲ್ಪನೆಯನ್ನು ವಿಶ್ವಸಂಸ್ಥೆ ಸೇರಿದಂತೆ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳು ಜನಪ್ರಿಯಗೊಳಿಸಿದವು. ವಿಜ್ಞಾನ ಮತ್ತು ಜ್ಞಾನವನ್ನು ಪ್ರಜಾಸತ್ತಾತ್ಮಕಗೊಳಿಸುವ ಚಳುವಳಿಗಳು ಬೆಳೆದವು. ಕಾಲಾನಂತರದಲ್ಲಿ, ಶೈಕ್ಷಣಿಕ ಸಂಸ್ಥೆಗಳು ಮತ್ತು ವೈಜ್ಞಾನಿಕ ಗುಂಪುಗಳು ರಾಷ್ಟ್ರೀಯ ಗುರಿಗಳಿಂದ ಸ್ವತಂತ್ರವಾಗಿ ಯೋಚಿಸಲು ಸ್ವಾಯತ್ತತೆಯನ್ನು ಗಳಿಸಿದವು. ವಿಜ್ಞಾನದಲ್ಲಿ ಸಾರ್ವಜನಿಕ ಹೂಡಿಕೆಯು ಮುಂದುವರಿದರೂ, ವಿಜ್ಞಾನಕ್ಕೆ ಧನಸಹಾಯವನ್ನು ರಾಜಕೀಯ ನಿಯಂತ್ರಣದಿಂದ ಮುಕ್ತಗೊಳಿಸಲಾಯಿತು. ಇದು ವಿಜ್ಞಾನಿಗಳನ್ನು ಮಾನವ ಸಮಸ್ಯೆಗಳನ್ನ ಪರಿಹರಿಸಲು ವಿಜ್ಞಾನವನ್ನು ಮುಂದುವರಿಸಲು ಒತ್ತಾಯಿಸಿತು. ಇದು ಇತಿಹಾಸದಲ್ಲಿ ಮಾನವ ಜೀವನದ ಮೇಲೆ ವಿಜ್ಞಾನವು ಅತಿ ಹೆಚ್ಚು ಪ್ರಭಾವ ಬೀರಿದ ಕಾಲವೂ ಆಗಿತ್ತು. ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ನಂತಹ ಅನ್ವಯಿಕ ವಿಜ್ಞಾನಗಳು ವಿಶ್ವದ ಹೆಚ್ಚಿನ ಸಂಖ್ಯೆಯ ಜನರ ದೈನಂದಿನ ಚಟುವಟಿಕೆಗಳನ್ನು ರೂಪಿಸಿತು. ಈ ದೊಡ್ಡ ಪ್ರಕ್ರಿಯೆಗಳು ಅಂತರಶಿಕ್ಷಣ ಅಧ್ಯಯನಗಳಿಗೆ ಮರುಹುಟ್ಟನ್ನು ನೀಡಿದವು. ಇದು ಮಾನವಿಕತೆಗಳ ಜೊತೆಗೆ ವಿಜ್ಞಾನದ ಸ್ಥಾನಮಾನಕ್ಕೂ ಕಾರಣವಾಯಿತು. ಆದರೆ ಈ ಬಾರಿ, ವಿಜ್ಞಾನವನ್ನು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರದ ಮೂಲ ವಿಜ್ಞಾನಗಳಿಗಿಂತ ತಂತ್ರಜ್ಞಾನದ ಮೂಲಕ ಹೆಚ್ಚು ಅರ್ಥೈಸಲಾಯಿತು.

ಆದರೇ, ಜಾಗತೀಕರಣದ ರಾಜಕೀಯ ಪ್ರಕ್ರಿಯೆಯು ಆರ್ಥಿಕ ಬಂಡವಾಳವನ್ನು ಜಾಗತೀಕರಿಸಿತು ಮತ್ತು ವಿಶ್ವದಾದ್ಯಂತ ಬಂಡವಾಳಶಾಹಿಯನ್ನು ಹೆಚ್ಚಿಸಿತು. ಬಂಡವಾಳಶಾಹಿ ಮತ್ತು ಮುಕ್ತ ಮಾರುಕಟ್ಟೆಯ ವ್ಯವಸ್ಥೆ, ವಿಜ್ಞಾನದ ಸಾಮಾಜಿಕ ನಿಯಂತ್ರಣಕ್ಕೆ ಅಪಾಯವನ್ನುಂಟುಮಾಡಿತು (ಮತ್ತು ಇನ್ನೂ ಇದು ಸಮಸ್ಯೆಯಾಗಿಯೇ ಇದೆ). ಖಾಸಗಿ ಉದ್ಯಮವು ತನ್ನ ಉತ್ಪನ್ನಗಳನ್ನು ಮಾನವ ಚಟುವಟಿಕೆಯಿಂದ ಲಾಭ ಪಡೆಯುವ ಸಾಧನವಾಗಿ ಬಳಸಲು ವಿಜ್ಞಾನದಲ್ಲಿ ಹೂಡಿಕೆ ಮಾಡಲು ಪ್ರಾರಂಭಿಸಿತು. ದೊಡ್ಡ ನಿಗಮಗಳು ಲಾಭದಾಯಕ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಸಂಶೋಧನೆ ಮತ್ತು ಅಭಿವೃದ್ಧಿ (ಆರ್ & ಡಿ ಎಂದು ಕರೆಯಲ್ಪಡುವ) ಉದ್ಯಮಗಳನ್ನು ಸ್ಥಾಪಿಸಿದವು. ಉದಾಹರಣೆಗೆ, ತೈಲ ಕಂಪನಿಗಳು ಹೆಚ್ಚಿನ ದಕ್ಷತೆಯ ತೈಲಗಳನ್ನು ಮಾರಾಟ ಮಾಡಲು ಕೃತಕ ಇಂಧನಗಳ ಬಗ್ಗೆ ಸಂಶೋಧನೆ ಮಾಡಲು ಪ್ರಾರಂಭಿಸಿದವು. ಅಂತೆಯೇ, ಔಷಧೀಯ ಕಂಪನಿಗಳು ಸಾರ್ವಜನಿಕ ಸಮಸ್ಯೆಗಳು ನಿವಾರಿಸಲು ಅಗತ್ಯವಾದ ಔಷಧಿಗಳ ಸಂಶೋಧನೆಯ ಬದಲು ಲಾಭದಾಯಕವಾದ ಔಷಧಿಗಳ ಸಂಶೋಧನೆಯಲ್ಲಿ ಹೂಡಿಕೆ ಮಾಡಿದ್ದವು. ಇದರ ಪರಿಣಾಮವಾಗಿ, ಖಾಸಗಿ ಉದ್ಯಮವು ವಿಜ್ಞಾನದಲ್ಲಿ ಮಾನವ ಸಂಪನ್ಮೂಲವನ್ನು ಮಾನವ ಒಳಿತಿಗಾಗಿ ಕೆಲಸ ಮಾಡುವ ಬದಲು ಖಾಸಗಿ ಲಾಭಕ್ಕಾಗಿ ಬಳಸಿಕೊಂಡಿತು. ಆದರೆ ಪ್ರಜಾಸತ್ತಾತ್ಮಕ ಹೋರಾಟಗಳಿಂದ ಹಾಗು ಖಾಸಗಿ ಉದ್ಯಮದ ಒತ್ತಡಗಳ ಹೊರತಾಗಿಯೂ ರಾಜ್ಯಗಳು ಮಾನವ ಒಳಿತಿಗಾಗಿ ವಿಜ್ಞಾನದಲ್ಲಿ ಹೂಡಿಕೆ ಮುಂದುವರಿಸಿದೆ. ಇದೇ ಕಾಲದಲ್ಲಿ, ಎಚ್ಐವಿ, ಟಿಬಿ ಮತ್ತು ಅಪೌಷ್ಟಿಕತೆಯ ಸಮಸ್ಯೆಗಳಿಗೆ ಸರ್ಕಾರಗಳು ಸಂಶೋಧನೆಯಲ್ಲಿ ಹೂಡಿಕೆ ಮಾಡಿರುವುದು ಉದಾಹರಣೆಯಾಗಿದೆ. ಓಟ್ಟಾರೆ, ವಿಜ್ಞಾನದ ಎರಡು ಸಮಾನಾಂತರ ಜಗತ್ತುಗಳು ಇಂದು ಅಸ್ತಿತ್ವಕ್ಕೆ ಬಂದಿವೆ – ಒಂದು ಮಾನವ ಅಭಿವೃದ್ಧಿ ಕೇಂದ್ರಿತವಾದ ವಿಜ್ಞಾನ ಜಗತು ಮತ್ತು ಇನ್ನೊಂದು ಖಾಸಗಿ ಲಾಭಕ್ಕಾಗಿ ಬೆಳೆಸುವ ವಿಜ್ಞಾನ.

ಇತಿಹಾಸದುದ್ದಕ್ಕೂ, ವಿಜ್ಞಾನವು ಒಂದು ಉದ್ದೇಶದಿಂದ ನಡೆಸಲ್ಪಟ್ಟಿದೆ. ರಾಜಕೀಯ, ಮಾರುಕಟ್ಟೆ ಅಥವಾ ಸಮಾಜಿಕ ಪ್ರಕ್ರಿಯೆಗಳು ಇದನ್ನು ನಿಯಂತ್ರಿಸುತ್ತಾ ಬಂದಿದೆ. ಆರಂಭದಲ್ಲಿ ಸಾಮಾನ್ಯ ಜನರ ಗುಂಪಿನ ತರ್ಕಬದ್ಧ ಚಿಂತನೆಯ ಉತ್ಪನ್ನವಾಗಿದ್ದ ವಿಜ್ಞಾನವು, ಈಗ ತಜ್ಞರ ತೆಕ್ಕೆಯಲ್ಲಿದೆ. ಪ್ರಗತಿಪರ ಮನಸ್ಸುಗಳು ಜನಸಾಮಾನ್ಯರ ಬದುಕು ಮತ್ತು ವಿಜ್ಞಾನದ ಅಂತರ ಹೆಚ್ಚುತ್ತಿದೆ ಎಂಬ ವಾದ ಪ್ರಚಲಿತವಾಗಿದೆ. ಪ್ರಪಂಚದಾದ್ಯಂತ ಮಾನವ ಸಮಾಜವು ಜೀವನೋಪಾಯ, ಹಿಂಸಾಚಾರ, ತಡೆಗಟ್ಟಬಹುದಾದ ರೋಗ ಮತ್ತು ವಿನಾಶದ ಸವಾಲುಗಳನ್ನು ಎದುರಿಸುತ್ತಲೇ ಇದೆ. ಈ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಎಲ್ಲಾ ಮಾನವರಿಗೆ ಜೀವನೋಪಾಯದ ಸಮಾನ ಅವಕಾಶಗಳನ್ನು ಒದಗಿಸಲು ವಿಜ್ಞಾನ ಬಳಕೆಯಾಗಬೇಕಾಗಿದೆ. ಇದು ಸಂಭವಿಸಬೇಕಾದರೆ, ಮಾನವ ಸಮಾಜ ಮತ್ತು ವಿಜ್ಞಾನವು ಪರಸ್ಪರ ಮಾತನಾಡಬೇಕಾಗಿದೆ. ಇದಕ್ಕೆ ಮಾನವಶಾಸ್ತ್ರದ ಅಧ್ಯಯನದ ಜೊತೆಗೆ ವಿಜ್ಞಾನವನ್ನು ಸ್ಥಾಪಿಸಬೇಕಾಗಿದೆ. ಮನುಷ್ಯರು ತಮ್ಮ ಜೀವನ, ಸಮುದಾಯಗಳು ಮತ್ತು ಸಮಾಜಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದಾಗ ಮತ್ತು ಇದಕ್ಕೆ ಉತ್ತರಗಳನ್ನು ಕಂಡುಕೊಳ್ಳಲು ಒಗ್ಗೂಡಿದಾಗ ವಿಜ್ಞಾನದ ಅತ್ಯುತ್ತಮ ಅಭ್ಯಾಸವಾಗುತ್ತದೆ.

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ

ಟಿ. ಜಿ. ಶ್ರೀನಿಧಿ
ಲೇಖಕರು ಮತ್ತು ಸ್ಥಾಪಕ ಸಂಪಾದಕರು
ಇ–ಜ್ಞಾನ ಡಾಟ್ ಕಾಮ್

"...ಉಪನ್ಯಾಸಕ್ಕೆ ನಮ್ಮ ಮಂತ್ರಿವರ್ಯರು ದಯೆಮಾಡಿಸಿ ಬಂದು ನಮ್ಮ ಜನರಿಗೆ ವಿಜ್ಞಾನದ ಅವಶ್ಯಕತೆಯು ಎಷ್ಟು ವಿಶೇಷವಾಗಿರುವುದು ಎಂಬ ಅಂಶವನ್ನು ಕುರಿತು ಉತ್ಸಾಹಗರ್ಭಿತವಾದ ಭಾಷಣವನ್ನು ಕನ್ನಡದಲ್ಲಿ ಮಾಡಿದರು" ಎಂಬ ಸಾಲನ್ನು ಓದಿದರೆ ನಿಮ್ಮ ಪ್ರತಿಕ್ರಿಯೆಏನಿರುತ್ತದೆ? ಭಾಷೆ ಕೊಂಚ ವಿಭಿನ್ನವಾಗಿದೆ ಎನ್ನುವುದನ್ನು ಬಿಟ್ಟರೆ ಸಾಮಾನ್ಯವಾದ ಸುದ್ದಿ ಎಂಬ ಉಪೇಕ್ಷೆಯೋ? ಮಂತ್ರಿಗಳು ವಿಜ್ಞಾನದ ಬಗ್ಗೆ ಮಾತಾಡಿಬಿಟ್ಟಿದ್ದಾರಲ್ಲ ಎಂಬ ಆಶ್ಚರ್ಯವೋ?

ಪ್ರತಿಕ್ರಿಯೆ ಏನಾದರೂ ಇರಲಿ, ವಿಜ್ಞಾನ–ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳು ಕನ್ನಡದಲ್ಲಿ ಹೆಚ್ಚುಹೆಚ್ಚಾಗಿ ಬರಬೇಕೆನ್ನುವ ಬೇಡಿಕೆಯ ಹಿನ್ನೆಲೆಯಲ್ಲಿ ನೋಡಿದರಂತೂ ಈ ವರದಿ ಬಹಳ ಮಹತ್ವದ್ದು. ಏಕೆಂದರೆ, ಈ ವರದಿ ಪ್ರಕಟವಾದದ್ದು ೧೯೧೮ರಲ್ಲಿ, ಇಂದಿಗೆ ನೂರು ವರ್ಷಗಳಿಗೂ ಹಿಂದೆ! ಈ ವರದಿ ಉಲ್ಲೇಖಿಸಿರುವ ಮಂತ್ರಿವರ್ಯ ಭಾರತರತ್ನ ವಿಶ್ವೇಶ್ವರಯ್ಯನವರು!!

"ನಾವು ವಿಜ್ಞಾನವನ್ನು ಮಾತೃಭಾಷೆಯಲ್ಲೇ ಬೋಧಿಸಬೇಕು. ಇಲ್ಲದಿದ್ದರೆ ಅದು ಕೆಲವರಿಗಷ್ಟೇ ಆಸಕ್ತಿಯಿರುವ ಗಂಭೀರ ಚಟುವಟಿಕೆಯಾಗಿ ಉಳಿದುಬಿಡುತ್ತದೆ. ಹಾಗೆ ಆದಾಗ ವಿಜ್ಞಾನಎಲ್ಲರನ್ನೂ ಒಳಗೊಳ್ಳಲು ಸಾಧ್ಯವಾಗುವುದಿಲ್ಲ," ಎಂದುಖ್ಯಾತ ವಿಜ್ಞಾನಿ ಸಿ. ವಿ. ರಾಮನ್ಒಮ್ಮೆ ಹೇಳಿದ್ದರಂತೆ. ಶತಮಾನದ ಹಿಂದೆ ವಿಶ್ವೇಶ್ವರಯ್ಯನವರು ಮಾಡಿದ ಭಾಷಣದ ಆಶಯವೂ ಅದೇ ಆಗಿದ್ದಿರಬೇಕು. ವಿಜ್ಞಾನ–ತಂತ್ರಜ್ಞಾನದ ವಿಷಯಗಳನ್ನು ಕನ್ನಡಕ್ಕೆ ತರುವ ಕುರಿತು ಅಂದಿನ ಕಾಲದಲ್ಲೇ ನಮ್ಮಲ್ಲಿ ಕಾಳಜಿ ಇತ್ತುಎನ್ನುವುದು ಹೆಮ್ಮೆಯ ವಿಷಯವಾದರೂ ಆ ಕೆಲಸ ಹೆಚ್ಚುಹೆಚ್ಚಾಗಿ ನಡೆಯಬೇಕೆನ್ನುವ ವಿಷಯವನ್ನು ಅಂದಿನಿಂದ ಇಂದಿನವರೆಗೂ ಹೇಳುತ್ತಿದ್ದೇವೆ ಎನ್ನುವುದು ಮುಜುಗರದ ವಿಷಯವೂ ಹೌದು.

ಹಾಗೆಂದ ಮಾತ್ರಕ್ಕೆ ಕೆಲಸವೇ ಆಗಿಲ್ಲಎಂದೇನೂ ಹೇಳುವಂತಿಲ್ಲ. ಶಾಲೆ ಕಾಲೇಜುಗಳಲ್ಲಿ ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸುವುದು ಮಾತ್ರವಲ್ಲದೆ ಜನಸಾಮಾನ್ಯರಿಗೆ ವಿಜ್ಞಾನ–ತಂತ್ರಜ್ಞಾನಗಳನ್ನು ಪರಿಚಯಿಸುವ ಪ್ರಯತ್ನಗಳೂ ನಮ್ಮ ಭಾಷೆಯಲ್ಲಿ ನಡೆದಿವೆ. ಅಷ್ಟೇ ಅಲ್ಲ, ಜನಪ್ರಿಯ ವಿಜ್ಞಾನ ಸಾಹಿತ್ಯಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಭಾರತೀಯ ಭಾಷೆಗಳ ಸಾಲಿನಲ್ಲೂ ಕನ್ನಡಕ್ಕೆ ಪ್ರಮುಖ ಸ್ಥಾನವಿದೆ. ಈ ಕ್ಷೇತ್ರದಲ್ಲಿ ನಡೆದಿರುವ ಕೆಲಸಗಳು ಹಾಗೂ ನಮ್ಮ ಮುಂದಿರುವ ಅವಕಾಶಗಳ ಕುರಿತ ಪಕ್ಷಿನೋಟ ಇಲ್ಲಿದೆ.

ಜನಪ್ರಿಯ ವಿಜ್ಞಾನ ಮತ್ತುಕನ್ನಡ

ಜನಸಾಮಾನ್ಯರಿಗೂ ಅರ್ಥವಾಗುವಂತೆ, ಅವರಲ್ಲೂ ಆಸಕ್ತಿ ಹುಟ್ಟಿಸುವಂತೆ ಪ್ರಸ್ತುತಪಡಿಸಲಾದ ವಿಜ್ಞಾನವೇ ಜನಪ್ರಿಯ ವಿಜ್ಞಾನ ಎಂದು ಕೇಂಬ್ರಿಜ್ಡ್ ನಿಘಂಟು ಹೇಳುತ್ತದೆ. ಇಂಗ್ಲಿಷಿನಲ್ಲಿ ಇದನ್ನು ಪಾಪ್ಯುಲರ್ ಸೈನ್ಸ್ ಎಂದು ಕರೆಯುತ್ತಾರೆ. ಸಂಶೋಧನಾ ಪ್ರಬಂಧಗಳಂತೆ ನಿರ್ದಿಷ್ಟ ನಿಯಮಗಳನ್ನು ಪಾಲಿಸಬೇಕಾದ, ಸಮಗ್ರ ವಿಮರ್ಶೆಗೆ ಒಳಪಡಬೇಕಾದ ಕಟ್ಟುಪಾಡುಗಳು ಜನಪ್ರಿಯ

ವಿಜ್ಞಾನಕ್ಕೆ ಇರುವುದಿಲ್ಲ. ನಮ್ಮ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುವ ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಷ್ಟು ಸರಳವಾಗಿ, ಪರಿಣಾಮಕಾರಿಯಾಗಿ ತಲುಪಿಸುವುದು ಜನಪ್ರಿಯ ವಿಜ್ಞಾನದ ಉದ್ದೇಶ.

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಕ್ರಿ.ಶ. ೧೦೨೫ರಲ್ಲಿ ರಚಿಸಲಾದ 'ಲೋಕೋಪಕಾರ' ಎಂಬ ಕೃತಿಯಲ್ಲೇ ತೋಟಗಾರಿಕೆ ಮತ್ತು ವೈದ್ಯವಿಜ್ಞಾನಕ್ಕೆ ಸಂಬಂಧಿಸಿದ ಮಾಹಿತಿಯಿತ್ತು ಎನ್ನುವುದನ್ನು ತಜ್ಞರು ಕಂಡುಕೊಂಡಿದ್ದಾರೆ. ಇದೇ ಸುಮಾರಿಗೆ ಪ್ರಕಟವಾದ ಕೆಲ ಕೃತಿಗಳಲ್ಲಿ ಗಣಿತ ಹಾಗೂ ಪಶುವೈದ್ಯ ವಿಜ್ಞಾನಗಳಂತಹ ವಿಷಯಗಳ ಮಾಹಿತಿಯಿದ್ದದ್ದೂ ಬೆಳಕಿಗೆ ಬಂದಿದೆ.

೧೯ನೇ ಶತಮಾನದಷ್ಟು ಹಿಂದೆಯೇ ಕನ್ನಡದಲ್ಲಿ ಆಧುನಿಕ ವಿಜ್ಞಾನ ಸಂವಹನವೂ ಪ್ರಾರಂಭವಾಗಿತ್ತು. ಆ ಸಂದರ್ಭದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕಂಡುಬಂದ ಕ್ಷಿಪ್ರ ಬೆಳವಣಿಗೆಗಳು ಇದಕ್ಕೆ ಪ್ರೇರಣೆಯಾಗಿದ್ದವು. ಗಣಿತ, ವೈದ್ಯವಿಜ್ಞಾನ, ಕೃಷಿ ಮತ್ತು ಖಗೋಳಶಾಸ್ತ್ರ ಸೇರಿದಂತೆ ವಿವಿಧ ವಿಷಯಗಳನ್ನು ಕುರಿತ ಪುಸ್ತಕಗಳ ಪ್ರಕಟಣೆ ಆ ಸಂದರ್ಭದಲ್ಲಿ ಪ್ರಾರಂಭವಾಯಿತು. ಸರ್ಕಾರ ಮತ್ತು ಪಾಶ್ಚಾತ್ಯ ಮಿಷನರಿಗಳು ಪ್ರಕಟಿಸಿದ ಇಂತಹ ಅನೇಕ ಪುಸ್ತಕಗಳನ್ನು ಪಠ್ಯಪುಸ್ತಕಗಳಾಗಿ ಬಳಸಲಾಗುತ್ತಿತ್ತು.

ಇದರ ಬೆನ್ನಲ್ಲೇ ವಿಜ್ಞಾನವನ್ನು ಜನಸಾಮಾನ್ಯರಿಗೆ ತಲುಪಿಸುವ ಪ್ರಯತ್ನಗಳೂ ಪ್ರಾರಂಭವಾದವು. ಕನ್ನಡದಲ್ಲಿ ಆಧುನಿಕ ವಿಜ್ಞಾನ ಸಂವಹನವನ್ನು ಬೆಳೆಸುವ ಇಂತಹ ಪ್ರಯತ್ನಗಳಿಗೆ ರಾಜರ್ಷಿ ನಾಲ್ವಡಿ ಕೃಷ್ಣರಾಜಒಡೆಯರ್ ಹಾಗೂ ಭಾರತರತ್ನ ವಿಶ್ವೇಶ್ವರಯ್ಯನವರಂತಹ ದಾರ್ಶನಿಕರ ಪ್ರೋತ್ಸಾಹವಿತ್ತು ಎನ್ನುವುದು ಗಮನಾರ್ಹ.

ಅಂದಿನಿಂದಲೂ ಅನೇಕ ವಿಜ್ಞಾನಿಗಳು, ತಂತ್ರಜ್ಞರು, ಅಧ್ಯಾಪಕರು, ಪತ್ರಕರ್ತರು ಹಾಗೂ ಹವ್ಯಾಸಿ ಬರಹಗಾರರು ವಿಜ್ಞಾನ ಹಾಗೂ ತಂತ್ರಜ್ಞಾನದ ವಿಷಯಗಳನ್ನು ಕನ್ನಡಕ್ಕೆ ತಂದಿದ್ದಾರೆ, ತರುತ್ತಲೇಇದ್ದಾರೆ. ಈ ಅವಧಿಯಲ್ಲಿ ಕನ್ನಡದ ವಿಜ್ಞಾನ ಸಂವಹನವು ವಿವಿಧ ಮಾಧ್ಯಮಗಳಿಗೆ ವಿಸ್ತರಿಸಿಕೊಂಡಿದೆ, ಹೊಸ ಪೀಳಿಗೆಗಳಿಗೆ ಸ್ಫೂರ್ತಿಯಾಗಿದೆ ಮತ್ತು ಅನೇಕ ಗೌರವಗಳಿಗೆ ಪಾತ್ರವಾಗಿದೆ. ಜ್ಞಾನಪೀಠದಂತೆಯೇ, ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮತ್ತು ಜನಪ್ರಿಯತೆಗಾಗಿ ರಾಷ್ಟ್ರೀಯ ಪ್ರಶಸ್ತಿಗಳನ್ನು ಅತಿಹೆಚ್ಚು ಬಾರಿ ಪಡೆದಿರುವ ಭಾರತೀಯ ಭಾಷೆಗಳಲ್ಲಿ ಕನ್ನಡವೂ ಒಂದು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಕೆ. ಶಿವರಾಮ ಕಾರಂತರು ಕನ್ನಡದಲ್ಲಿ ವಿಜ್ಞಾನ ಸಂವಹನದ ಬೆಳವಣಿಗೆಗೂ ಕೊಡುಗೆ ನೀಡಿದ್ದಾರೆ ಎನ್ನುವುದು ವಿಶೇಷ. ಡಾ. ಬಿ. ಜಿ. ಎಲ್. ಸ್ವಾಮಿಯವರ ಜನಪ್ರಿಯ ವಿಜ್ಞಾನಕೃತಿ 'ಹಸುರು ಹೊನ್ನು' ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರವಾದದ್ದೂ ಇದೆ.

ಆಧುನಿಕ ವಿಜ್ಞಾನ ಸಂವಹನದ ವಿಕಾಸ

ಕನ್ನಡದಲ್ಲಿ ವಿಜ್ಞಾನ ಸಂವಹನದ ಇತಿಹಾಸದಲ್ಲಿ ಮೈಸೂರಿನ ಒಡೆಯರಿಗೆ ಮಹತ್ವದ ಸ್ಥಾನವಿದೆ. ಮೈಸೂರಿನ ಬಹುಮುಖಿ ಅಭಿವೃದ್ಧಿಗೆ ಕಾರಣಕರ್ತರಾದ ರಾಜರ್ಷಿ ನಾಲ್ವಡಿಯವರು ವಿಜ್ಞಾನ ಸಂವಹನ ಚಟುವಟಿಕೆಗಳನ್ನೂ ಪ್ರೋತ್ಸಾಹಿಸಿದರು. ಅವರ ಆಳ್ವಿಕೆಯಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾಲಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ೨೦ನೇ ಶತಮಾನದ ಮೊದಲಾರ್ಧದಲ್ಲಿ ಅನೇಕ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿದವು. ಅವರ ಸಹೋದರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರು ಕನ್ನಡದಲ್ಲಿ ವಿಜ್ಞಾನ ಪುಸ್ತಕಮಾಲೆಯನ್ನು ಪ್ರಕಟಿಸಲೆಂದು ಕನ್ನಡ ಸಾಹಿತ್ಯ ಪರಿಷತ್ತಿಗೆ ಧನಸಹಾಯ ಮಾಡಿದ್ದರು.

ನಾಲ್ವಡಿಯವರ ಆಳ್ವಿಕೆಯಲ್ಲಿ ಮೈಸೂರಿನ ದಿವಾನರಾಗಿ ಸೇವೆ ಸಲ್ಲಿಸಿದ ಭಾರತರತ್ನ ವಿಶ್ವೇಶ್ವರಯ್ಯನವರು, ವಿಜ್ಞಾನ ಜಗತ್ತಿನ ಬೆಳವಣಿಗೆಗಳು ಜನಸಾಮಾನ್ಯರಿಗೂ ತಿಳಿದಿರಬೇಕು ಎಂದು ನಂಬಿದ್ದರು. ಬೆಳ್ಳಾವೆ ವೆಂಕಟನಾರಣಪ್ಪ ಮತ್ತು ನಂಗಪುರಂ ವೆಂಕಟೇಶ ಅಯ್ಯಂಗಾರರಂತಹ ಮಾರ್ಗಪ್ರವರ್ತಕರು ಕನ್ನಡದಲ್ಲಿ ವಿಜ್ಞಾನ ಸಂವಹನ ಚಟುವಟಿಕೆಗಳಿಗಾಗಿ ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯನ್ನು ಸ್ಥಾಪಿಸಿದ್ದು ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದಲೇ.

ಕನ್ನಡದ ಮೊದಲ ವಿಜ್ಞಾನ ಪತ್ರಿಕೆ 'ವಿಜ್ಞಾನ' ೧೯೧೮ರಲ್ಲಿ ಈ ಸಮಿತಿಯ ಆಶ್ರಯದಲ್ಲಿ ಪ್ರಾರಂಭವಾಯಿತು. ಎರಡು ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಈ ಪತ್ರಿಕೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಷೇತ್ರದ ಬೆಳವಣಿಗೆಗಳ ಕುರಿತು ಲೇಖನಗಳನ್ನು ಪ್ರಕಟಿಸಿತು. ಸುದ್ದಿಗಳು, ವಿಜ್ಞಾನ ವಿಷಯದ ಕಥೆಗಳು, ನಾಟಕಗಳು ಮತ್ತು ಚಿತ್ರಗಳೂ ಅದರಲ್ಲಿ ಕಾಣಿಸಿಕೊಂಡವು. ಇದರ ಜೊತೆಗೆ ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯು ವಿಜ್ಞಾನದ ಕುರಿತು ಸಾರ್ವಜನಿಕ ಉಪನ್ಯಾಸಗಳನ್ನು ಆಯೋಜಿಸಿ, ಆ ಉಪನ್ಯಾಸಗಳ ಪಠ್ಯವನ್ನು ಪುಸ್ತಕ ರೂಪದಲ್ಲಿಯೂ ಪ್ರಕಟಿಸಿತು.

ಸುಮಾರು ಎರಡು ದಶಕಗಳ ನಂತರ, ಮೈಸೂರು ವಿಶ್ವವಿದ್ಯಾನಿಲಯವು ಈ ಅಭ್ಯಾಸವನ್ನು ಮುಂದುವರಿಸಿತು. ವಿವಿಧ ವಿಷಯಗಳ ಕುರಿತು ಉಪನ್ಯಾಸಗಳನ್ನು ಏರ್ಪಡಿಸಿದ ವಿಶ್ವವಿದ್ಯಾನಿಲಯವು, ಅವುಗಳ ಪಠ್ಯರೂಪವನ್ನು 'ಪ್ರಚಾರ ಪುಸ್ತಕ ಮಾಲೆ'ಯಡಿ ಕಿರುಪುಸ್ತಕಗಳಾಗಿ ಪ್ರಕಟಿಸಿತು. ಮೊದಲ ಪುಸ್ತಕವಾದ 'ಖಗೋಳಶಾಸ್ತ್ರ ಪ್ರವೇಶ'ದಿಂದಲೇ (೧೯೩೯) ಪ್ರಾರಂಭಿಸಿ, ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳು ಈ ಮಾಲೆಯಡಿ ಪ್ರಕಟವಾದವು. ಕೇವಲ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪುಸ್ತಕಗಳು ಮಾರಾಟವಾಗಿವೆಯೆಂದು ೧೯೪೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಇ. ಜಿ. ಮೆಕಾಲ್ಫೈನ್ ಹೇಳಿದ್ದು ಪ್ರಚಾರ ಪುಸ್ತಕಮಾಲೆಯ ಜನಪ್ರಿಯತೆಗೆ ಸಾಕ್ಷಿ. ಅಂದಿನ ನಾಲ್ಕು ಆಣೆ – ಇಂದಿನ ಇಪ್ಪತ್ತೈದು ಪೈಸೆ – ಬೆಲೆಗೆ ದೊರಕುತ್ತಿದ್ದ ಪೋಸ್ಟ್‌ಕಾರ್ಡ್‌ಗಾತ್ರದ ಈ ಪುಸ್ತಕಗಳು ಜನಸಾಮಾನ್ಯರಲ್ಲಿ 'ನಾಲ್ಕಾಣೆ ಪುಸ್ತಕ'ಗಳೆಂದೇ ಪ್ರಖ್ಯಾತವಾಗಿದ್ದವು.

ಪ್ರಚಾರ ಪುಸ್ತಕಮಾಲೆಯ ಯಶಸ್ಸಿನಿಂದ ಪ್ರೇರಣೆಗೊಂಡು ರಾಜ್ಯದಇತರ ವಿಶ್ವವಿದ್ಯಾನಿಲಯಗಳೂ ಇಂತಹವೇ ಪ್ರಯತ್ನಗಳನ್ನು ಕೈಗೊಂಡವು. ನಂತರದ ದಿನಗಳಲ್ಲಿ ಪುಸ್ತಕಗಳ ಗಾತ್ರ ಮತ್ತು ವಿಷಯ ವೈವಿಧ್ಯದಲ್ಲೂ ಹೆಚ್ಚಳ ಕಂಡುಬಂತು.

ಗಮನಾರ್ಹ ಪ್ರಯತ್ನಗಳು

ಕನ್ನಡದ ಮೊದಲ ವಿಜ್ಞಾನ ಸಂವಹನಕಾರರಲ್ಲಿ ಬಹುತೇಕರು ಶಿಕ್ಷಕರೇ ಆಗಿದ್ದರು. ನಂತರದ ವರ್ಷಗಳಲ್ಲೂ ಈ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದವರ ಪೈಕಿ ಶಿಕ್ಷಕರ ಸಂಖ್ಯೆಯೇ ಹೆಚ್ಚಿನದು. ಪ್ರೊ. ಆರ್. ಎಲ್. ನರಸಿಂಹಯ್ಯ, ಪ್ರೊ . ಎಂ. ಎ. ಸೇತುರಾವ್, ಪ್ರೊ. ಅಡ್ಯನಡ್ಕಕೃಷ್ಣ ಭಟ್, ಪ್ರೊ. ಜೆ. ಆರ್. ಲಕ್ಷ್ಮಣರಾವ್, ಪ್ರೊ. ಜಿ. ಟಿ. ನಾರಾಯಣರಾವ್, ಪ್ರೊ. ಡಿ. ಆರ್. ಬಳೂರಗಿ ಮತ್ತು ಪ್ರೊ. ಎಂ. ಆರ್. ನಾಗರಾಜುಅವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದು. ಡಾ. ಎಚ್. ನರಸಿಂಹಯ್ಯ ಅವರಂತಹ ಶಿಕ್ಷಣ ತಜ್ಞರು, ಪ್ರೊ. ಜಿ. ವೆಂಕಟಸುಬ್ಬಯ್ಯನವರಂತಹ ಭಾಷಾ ವಿದ್ವಾಂಸರೂ ವಿಜ್ಞಾನ ಸಂವಹನ ಚಟುವಟಿಕೆಗಳನ್ನು ಸಕ್ರಿಯವಾಗಿ ಪ್ರೋತ್ಸಾಹಿಸಿದರು.

ಮೂಲತಃ ವಿಜ್ಞಾನದ ಹಿನ್ನೆಲೆಯವರಲ್ಲದಿದ್ದರೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಕೆ. ಶಿವರಾಮ ಕಾರಂತರು ೧೯೩೦ರ ದಶಕದಲ್ಲಿ 'ಬಾಲಪ್ರಪಂಚ' ಮಕ್ಕಳ ವಿಶ್ವಕೋಶ ಹಾಗೂ ೧೯೬೦ರ ಸುಮಾರಿಗೆ 'ವಿಜ್ಞಾನ ಪ್ರಪಂಚ' ವಿಜ್ಞಾನ ವಿಶ್ವಕೋಶಗಳನ್ನು ಪ್ರಕಟಿಸುವ ಮೂಲಕ ವಿಜ್ಞಾನ ಸಂವಹನಕ್ಕೆ ಅಪಾರ ಕೊಡುಗೆ ನೀಡಿದರು. ಖ್ಯಾತ ಲೇಖಕ–ಕವಿ ಶ್ರೀ ಪಂಜೆ ಮಂಗೇಶರಾಯರು ಪ್ರಾಣಿಶಾಸ್ತ್ರದ ಕುರಿತಾದ ಪುಸ್ತಕವೊಂದನ್ನು ಕನ್ನಡಕ್ಕೆ ಅನುವಾದಿಸಿದರು.

೧೯೫೦ರ ದಶಕದಲ್ಲಿ, ವಿಜ್ಞಾನ ಇತಿಹಾಸಕಾರ ಡಾ. ಬಿ. ವಿ. ಸುಬ್ಬರಾಯಪ್ಪನವರ ಸಂಪಾದಕತ್ವದ 'ವಿಜ್ಞಾನಯುಗ' ನಿಯತಕಾಲಿಕದ ಪ್ರಕಟಣೆಯನ್ನು ಪ್ರೊ. ಜಿ. ವೆಂಕಟಸುಬ್ಬಯ್ಯನವರು ಸಕ್ರಿಯವಾಗಿ ಬೆಂಬಲಿಸಿದರು. ಡಾ. ಸುಬ್ಬರಾಯಪ್ಪನವರು ಅನುವಾದಿಸಿದ 'ಮಿಸ್ಟರ್ ಟಾಂಪ್‌ಕಿನ್ಸ್‌ಇನ್ ವಂಡರ್‌ಲ್ಯಾಂಡ್'ನ ಕನ್ನಡಾನುವಾದ 'ವಿಚಿತ್ರ ಲೋಕದಲ್ಲಿ ವಿದ್ಯಾಲಂಕಾರ' ಕೃತಿಯನ್ನೂ ಪ್ರೊ. ವೆಂಕಟಸುಬ್ಬಯ್ಯನವರು ಪ್ರಕಟಿಸಿದರು. ಇಂಗ್ಲಿಷ್ ಮೂಲದ ಲೇಖಕ ಜಾರ್ಜ್‌ಗ್ಯಾಮೋ ಕನ್ನಡದಲ್ಲಿ ಬರೆದ ಕೈಬರಹದ ಸಂದೇಶವೂ ಈ ಪುಸ್ತಕದಲ್ಲಿ ಪ್ರಕಟವಾಗಿತ್ತು.

೧೯೬೬ರಲ್ಲಿ, ಮಂಗಳೂರಿನ ಶ್ರೀನಿವಾಸನಗರದ ಉತ್ಸಾಹಿಗಳ ಗುಂಪೊಂದು 'ವಿಜ್ಞಾನ ಲೋಕ' ಎಂಬ ಮಾಸಪತ್ರಿಕೆಯೊಂದನ್ನು ಪ್ರಾರಂಭಿಸಿತು. ಪ್ರೊ. ಅಡ್ಯನಡ್ಕಕೃಷ್ಣ ಭಟ್ ಅವರು ಅದರ ಮೊದಲ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಈ ಪತ್ರಿಕೆ ಒಂದು ದಶಕಕ್ಕೂ ಹೆಚ್ಚು ಕಾಲ ಪ್ರಕಟವಾಯಿತು.

೧೯೭೦ರ ದಶಕದಲ್ಲಿ ಪ್ರಕಟವಾದ 'ಜ್ಞಾನಗಂಗೋತ್ರಿ' ಮಕ್ಕಳ ವಿಶ್ವಕೋಶ ಕನ್ನಡ ವಿಜ್ಞಾನ ಸಂವಹನ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲು. ವಿಜ್ಞಾನ–ತಂತ್ರಜ್ಞಾನಗಳಿಗೆ ಮೀಸಲಾದ ಮೂರು ಸಂಪುಟಗಳೂ ಸೇರಿದಂತೆ ಈ ವಿಶ್ವಕೋಶದ ಒಟ್ಟು ಏಳು ಸಂಪುಟಗಳನ್ನು ಸಂವಹನಕಾರರ ತಂಡವೊಂದು ಕರ್ನಾಟಕ ಸರ್ಕಾರದ ಬೆಂಬಲದೊಂದಿಗೆ ಸುಮಾರು ೫ ವರ್ಷಗಳಲ್ಲಿ ಹೊರತಂದಿತು. ಕಾದಂಬರಿಕಾರ ನಿರಂಜನ ಈ ತಂಡದ ನೇತೃತ್ವ ವಹಿಸಿದ್ದರು. ಪ್ರೊ. ಅಡ್ಯನಡ್ಕಕೃಷ್ಣ ಭಟ್ ಮತ್ತು ಶ್ರೀಮತಿ ಹರಿಪ್ರಸಾದ್ ಅವರು ಈ ತಂಡದಲ್ಲಿ ವಿಜ್ಞಾನ ಸಂವಹನಕಾರರಾಗಿ ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಶ್ವಕೋಶ ಪ್ರಕಟಣೆ ಕೂಡ ಈ ಸಮಯದಲ್ಲಿ ಪ್ರಾರಂಭವಾಯಿತು, ಮತ್ತು ಅದರಲ್ಲೂ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಬಹಳಷ್ಟು ಲೇಖನಗಳಿದ್ದವು.

೧೯೭೭ರಲ್ಲಿ ಕರ್ನಾಟಕರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ವಿಜ್ಞಾನವನ್ನು ಜನಪ್ರಿಯಗೊಳಿಸುವ ಯೋಜನೆಯೊಂದನ್ನು ಪ್ರಾರಂಭಿಸಿತು. ಈ ಯೋಜನೆಯ ಅಂಗವಾಗಿ 'ವಿಜ್ಞಾನ' ಎಂಬ ಮಾಸಪತ್ರಿಕೆಯನ್ನು ನವೆಂಬರ್ ೧೯೭೮ರಲ್ಲಿ

ಪ್ರಾರಂಭಿಸಲಾಯಿತು. ನಂತರ 'ಬಾಲವಿಜ್ಞಾನ'ವೆಂದು ಹೆಸರಾದ ಈ ಪತ್ರಿಕೆ ಕನ್ನಡದ ಅತ್ಯಂತ ಜನಪ್ರಿಯ ವಿಜ್ಞಾನ ಪತ್ರಿಕೆಗಳಲ್ಲೊಂದಾಗಿ ಬೆಳೆಯಿತು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ (ಕರಾವಿಪ) ಅನ್ನು ೧೯೮೦ರಲ್ಲಿ ಸ್ಥಾಪಿಸಲಾಯಿತು. ಇದು 'ಬಾಲವಿಜ್ಞಾನ' ಪ್ರಕಟಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿತು. ವಿಜ್ಞಾನ ಸಂವಹನಕ್ಕೆ ಸಂಬಂಧಪಟ್ಟ ಇನ್ನೂ ಅನೇಕ ಚಟುವಟಿಕೆಗಳನ್ನು ಕರಾವಿಪ ಪ್ರಾರಂಭಿಸಿತು, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಅತ್ಯುತ್ತಮ ಸಾಂಸ್ಥಿಕ ಪ್ರಯತ್ನಗಳಿಗಾಗಿ ಎನ್‌ಸಿಎಸ್‌ಟಿಸಿಯ ಮೊದಲ ರಾಷ್ಟ್ರಪ್ರಶಸ್ತಿಯನ್ನೂ ಪಡೆಯಿತು.

ಇದೇ ಸಂದರ್ಭದಲ್ಲಿ ಕನ್ನಡ ವಿಜ್ಞಾನ ಪರಿಷತ್ ಎಂಬ ಹೆಸರಿನ ಮತ್ತೊಂದು ಸಂಘಟನೆಯೂ ಸಕ್ರಿಯವಾಗಿತ್ತು. ಸೂ. ಸುಬ್ರಹ್ಮಣ್ಯಂ ಅವರು ಮುಂಚೂಣಿಯಲ್ಲಿದ್ದ ಈ ಸಂಸ್ಥೆ ಕನ್ನಡದಲ್ಲಿ ಅನೇಕ ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿತು.

ಆಯಾ ಕಾಲಘಟ್ಟದ ಬದಲಾವಣೆಗಳ ಬಗ್ಗೆ ಆಗಲೇ ಮಾಹಿತಿ ನೀಡುತ್ತ ಬಂದಿರುವುದು ಕನ್ನಡದ ಜನಪ್ರಿಯ ವಿಜ್ಞಾನ ಸಾಹಿತ್ಯ ಕ್ಷೇತ್ರದ ಹೆಗ್ಗಳಿಕೆ. ಜಪಾನಿನ ಮೇಲೆ ಪರಮಾಣು ಬಾಂಬ್ ದಾಳಿ ನಡೆದ ಸಂದರ್ಭದಲ್ಲಿ ಜಗತ್ತಿನೆಲ್ಲೆಡೆ ಪರಮಾಣು ಶಕ್ತಿಯ ಬಗ್ಗೆ ಕುತೂಹಲ ಮೂಡಿತ್ತು. ಜೆ. ಆರ್. ಲಕ್ಷ್ಮಣರಾಯರು ಆ ಸಂದರ್ಭದಲ್ಲಿ 'ಪರಮಾಣುಚರಿತ್ರೆ' ಎಂಬ ಕೃತಿ ರಚಿಸಿದ್ದರು. ಮನುಷ್ಯ ಮೊದಲ ಬಾರಿಗೆ ಬಾಹ್ಯಾಕಾಶಯಾನ ಕೈಗೊಂಡ ಸಮಯದಲ್ಲಿ ಅಡ್ಯನಡ್ಕ ಕೃಷ್ಣಭಟ್ಟರ 'ಗಗನ ಯುಗ' ಪ್ರಕಟವಾಯಿತು. ೧೯೬೦ರ ದಶಕದಲ್ಲಿ, ಕಂಪ್ಯೂಟರ್ ವಿಜ್ಞಾನ ಆಗಷ್ಟೇ ಬೆಳೆಯುತ್ತಿದ್ದ ಸಂದರ್ಭದಲ್ಲೇ ಶಿವರಾಮ ಕಾರಂತರು, ಜಿ. ಟಿ. ನಾರಾಯಣರಾಯರು ಕನ್ನಡದಲ್ಲಿ ಆ ಕುರಿತು ಬರೆದಿದ್ದರು!

ವೈವಿಧ್ಯಮಯ ಹಿನ್ನೆಲೆಗಳು, ಬಹುಮುಖಿ ಕೊಡುಗೆಗಳು

ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕೆ ವಿಜ್ಞಾನ ಮತ್ತುತಂತ್ರಜ್ಞಾನಕ್ಷೇತ್ರದ ವೃತ್ತಿಪರರಕೊಡುಗೆ ದೀರ್ಘಕಾಲೀನವಾದದ್ದು. ಅನೇಕ ಪುಸ್ತಕಗಳು, ಲೇಖನಗಳು ಹಾಗೂ ಅಂಕಣಬರಹಗಳ ಮೂಲಕ ಅವರು ಈ ಕ್ಷೇತ್ರಕ್ಕೆ ಮಹತ್ವದಕೊಡುಗೆ ನೀಡಿದ್ದಾರೆ.

ವಿಶ್ವಪ್ರಸಿದ್ಧ ಸಸ್ಯವಿಜ್ಞಾನಿ ಡಾ. ಬಿ. ಜಿ. ಎಲ್.ಸ್ವಾಮಿಯವರು ಕನ್ನಡದಲ್ಲಿ ಅನೇಕ ಪುಸ್ತಕಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ. ಸಸ್ಯಜಗತ್ತನ್ನು ಕುರಿತ ಅವರ 'ಹಸುರು ಹೊನ್ನು' ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿತ್ತು. ಅವರ ತಂದೆ ಡಿ. ವಿ. ಗುಂಡಪ್ಪನವರೂ ಇದೇ ಪ್ರಶಸ್ತಿಗೆ ಭಾಜನರಾಗಿದ್ದರು ಎನ್ನುವುದು ವಿಶೇಷ. ಡಾ. ಕೆ. ಶಿವರಾಮ ಕಾರಂತರಂತೆ ಅವರ ಪುತ್ರ – ವನ್ಯಜೀವಿ ವಿಜ್ಞಾನಿ ಡಾ. ಕೆ. ಉಲ್ಲಾಸ್‌ಕಾರಂತರೂ ಕನ್ನಡದಲ್ಲಿ ವಿಜ್ಞಾನ ಸಂವಹನ ಕೈಗೊಂಡಿದ್ದಾರೆ. ಪ್ರಸಿದ್ಧ ಬರಹಗಾರ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು ತಮ್ಮ ತಂದೆ ಕುವೆಂಪುರವರಂತೆಯೇ ಕನ್ನಡದಲ್ಲಿ ವಿಜ್ಞಾನ ಸಂವಹನ ಚಟುವಟಿಕೆಗಳನ್ನು ಬೆಂಬಲಿಸಿದರು.

ಮದುವೆ, ತಾಯ್ತನ ಮತ್ತು ಮಕ್ಕಳ ಆರೈಕೆಯಕುರಿತು ಸ್ತ್ರೀರೋಗತಜ್ಞೆ ಡಾ. ಅನುಪಮಾ ನಿರಂಜನ ಬರೆದ ಪುಸ್ತಕಗಳು ಎಷ್ಟು ಜನಪ್ರಿಯವೆಂದರೆ, ೧೯೬೦ರ ದಶಕದಲ್ಲಿ ಮೊದಲ ಬಾರಿಗೆ ಪ್ರಕಟವಾದಾಗಿನಿಂದ ಅವುಗಳ ಹತ್ತಾರು ಸಾವಿರ ಪ್ರತಿಗಳು ಮಾರಾಟವಾಗಿವೆ. 'ರಾ.ಶಿ.' ಎಂದೇ ಜನಪ್ರಿಯರಾದ 'ಕೊರವಂಜಿ'ಯ ಸ್ಥಾಪಕ ಡಾ. ಆರ್. ಶಿವರಾಂ, ಮಾನಸಿಕ ಆರೋಗ್ಯದ ಬಗ್ಗೆ ಮಹತ್ವದ ಪುಸ್ತಕಗಳನ್ನು ಬರೆದಿದ್ದಾರೆ. ಡಾ.ಡಿ.ಎಸ್.ಶಿವಪ್ಪನವರು ಕನ್ನಡದಲ್ಲಿ ವೈದ್ಯಕೀಯ ಪದಗಳ ನಿಘಂಟನ್ನು ರಚಿಸಿದ್ದಾರೆ. ಡಾ.ಸ.ಜ. ನಾಗಲೋಟಿಮಠ, ಡಾ.ಸಿ.ಆರ್. ಚಂದ್ರಶೇಖರ್, ಡಾ.ಪಿ. ಎಸ್. ಶಂಕರ್, ಡಾ. ಹೆಚ್. ಗಿರಿಜಮ್ಮ, ಡಾ. ಲೀಲಾವತಿದೇವದಾಸ್, ಡಾ.ನಾ. ಸೋಮೇಶ್ವರ, ಡಾ.ವಿ.ಎಸ್. ಕಿರಣ್ ಮುಂತಾದವರು ಈ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಹಿಂದಿನ ಮತ್ತು ಇಂದಿನ ಸಂವಹನಕಾರರಲ್ಲಿ ಪ್ರಮುಖರು.

ಭಾರತೀಯ ಭೂವೈಜ್ಞಾನಿಕ ಸಮೀಕ್ಷೆಯಲ್ಲಿ ಸೇವೆ ಸಲ್ಲಿಸಿದ ಟಿ.ಆರ್.ಅನಂತರಾಮು, ಕೇಂದ್ರೀಯ ಆಹಾರತಾಂತ್ರಿಕ ಸಂಶೋಧನಾಲಯದ ಕೊಳ್ಳೇಗಾಲ ಶರ್ಮ ಮತ್ತು ಡಿಆರ್‌ಡಿಒದ ಮಾಜಿ ವಿಜ್ಞಾನಿ ಹಾಲ್ದೊಡ್ಡೇರಿ ಸುಧೀಂದ್ರ ಇವರು ಕನ್ನಡದ ಪ್ರಮುಖ ವಿಜ್ಞಾನ ಸಂವಹನಕಾರರಾಗಿದ್ದಾರೆ.ಭಾರತೀಯ ಖಭೌತವಿಜ್ಞಾನ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಡಾ. ಪಿ.ಆರ್.ವಿಶ್ವನಾಥ್ ಮತ್ತು ಜವಾಹರಲಾಲ್ ನೆಹರು ತಾರಾಲಯದಲ್ಲಿದ್ದ ಡಾ. ಬಿ.ಎಸ್.ಶೈಲಜಾ ಅವರು ಖಗೋಳವಿಜ್ಞಾನ ಕ್ಷೇತ್ರದಲ್ಲಿ ಸಾಹಿತ್ಯ ಕೃಷಿ ನಡೆಸಿದ್ದಾರೆ.

ಇಸ್ರೋ ಆರಂಭದ ದಿನಗಳ ಮಾತು ಬಂದಾಗ ರಾಕೆಟ್ಟಿನ ಮೂತಿಯನ್ನು ಸೈಕಲ್ ಮೇಲಿಟ್ಟುಕೊಂಡು ನಡೆಯುತ್ತಿರುವವರ ಚಿತ್ರವೂ ಸಾಮಾನ್ಯವಾಗಿ ಪ್ರಸ್ತಾಪವಾಗುತ್ತದೆ. ಆ ಚಿತ್ರದಲ್ಲಿರುವ ವಿಜ್ಞಾನಿ ಕನ್ನಡದವರೇ ಆದ ಸಿ. ಆರ್. ಸತ್ಯ. ಅವರ 'ತ್ರಿಮುಖಿ'

ಕೃತಿಯಲ್ಲಿ ಭಾರತೀಯ ಬಾಹ್ಯಾಕಾಶ ಕ್ಷೇತ್ರ ಪ್ರಾರಂಭಿಕ ವರ್ಷಗಳಲ್ಲಿ ಬೆಳೆದದ್ದು ಹೇಗೆನ್ನುವ ಕುರಿತು ಆಪ್ತವಾದ ಬರಹವಿದೆ. ಅವರ ಇನ್ನೊಂದು ಕೃತಿ 'ಅಳಿವಿಲ್ಲದ ಸ್ಥಾವರ', ಸತ್ಯ ಅವರು ತಿರುವನಂತಪುರದಲ್ಲಿದ್ದಾಗ ಅಲ್ಲಿನ ಅನಂತಪದ್ಮನಾಭ ದೇವಸ್ಥಾನದ ರಚನೆಯ ಬಗ್ಗೆ ನಡೆಸಿದ ಅಧ್ಯಯನದ ಕತೆ. ಅಲ್ಲಿರುವ ಮಂಟಪದ ಏಕಶಿಲಾ ವೇದಿಕೆ – 'ಒತ್ತಕ್ಕಲ್' – ಸೇರಿದಂತೆ ದೇಗುಲ ನಿರ್ಮಾಣದಲ್ಲಿ ಬಳಕೆಯಾಗಿರುವ ಕಲ್ಲುಗಳನ್ನು ಯಾರು ಎಲ್ಲಿಂದ ಹೇಗೆ ತಂದಿಟ್ಟಿರಬಹುದೆಂದು ಹುಡುಕಿದ್ದರ ಅನುಭವಗಳನ್ನು ಈ ಕೃತಿ ದಾಖಲಿಸಿದೆ. ಇತಿಹಾಸ, ಶಿಲ್ಪಕಲೆಗಳ ಜೊತೆಯಲ್ಲೇ ಕಲ್ಲುಗಳ ವಿಜ್ಞಾನವನ್ನೂ ನವಿರಾಗಿ ತಲುಪಿಸಿರುವುದು ಇದರ ಹೆಗ್ಗಳಿಕೆ. ವಿಜ್ಞಾನಿಯೊಬ್ಬರು ಯಾವುದೇ ವಿಷಯದ ಬೆನ್ನತ್ತಿದರೆ ಅವರ ಅಧ್ಯಯನ ಹೇಗೆಲ್ಲ ಸಾಗುತ್ತದೆ ಎನ್ನುವುದಕ್ಕೂ ಇದೊಂದು ಉತ್ತಮ ಉದಾಹರಣೆ.

೧೯೬೪ರಲ್ಲಿ ಪ್ರಕಟವಾದ ಡಾ. ಕೆ. ಶಿವರಾಮ ಕಾರಂತರ 'ವಿಜ್ಞಾನ ಪ್ರಪಂಚ'ದ ಕೊನೆಯ ಸಂಪುಟದಲ್ಲಿ ಕಂಪ್ಯೂಟರುಗಳ ಬಗ್ಗೆ ಒಂದು ಅಧ್ಯಾಯ ಪ್ರಕಟವಾಗಿತ್ತು. ಖ್ಯಾತ ಕಂಪ್ಯೂಟರ್ ವಿಜ್ಞಾನಿ ಡಾ. ನಳಿನಿ ಮೂರ್ತಿ ಮತ್ತು ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಯ ಮಾಜಿ ಸಹಾಯಕ ನಿರ್ದೇಶಕರಾದ ಚಿ. ವಿ. ಶ್ರೀನಾಥ ಶಾಸ್ತ್ರಿಯವರು ೧೯೮೦ರ ದಶಕದಲ್ಲಿ ಕಂಪ್ಯೂಟರುಗಳ ಬಗ್ಗೆ ಕನ್ನಡ ಪುಸ್ತಕಗಳನ್ನು ಪ್ರಕಟಿಸಿದ್ದರು. ಸುಧಾ ಮೂರ್ತಿ, ಡಾ. ಯು.ಬಿ. ಪವನಜ, ಡಾ. ಸಿ.ಪಿ. ರವಿಕುಮಾರ್, ಉದಯಶಂಕರ ಪುರಾಣಿಕ ಮತ್ತು ಟಿ. ಜಿ. ಶ್ರೀನಿಧಿ ಅವರು ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನದ ಬಗ್ಗೆ ಬರೆದ–ಬರೆಯುತ್ತಿರುವ ಸಂವಹನಕಾರರಾಗಿದ್ದಾರೆ.

ಪಾ. ವೆಂ. ಆಚಾರ್ಯರಂತಹ ಹಿರಿಯ ಪತ್ರಕರ್ತರು ಕನ್ನಡದಲ್ಲಿ ವಿಜ್ಞಾನ ಸಂವಹನವನ್ನು ಬೆಂಬಲಿಸಿದ್ದರು. ಪತ್ರಕರ್ತರಾಗಿ ಬದಲಾದ ವಿಜ್ಞಾನಿ ನಾಗೇಶ ಹೆಗಡೆಯವರು ಹಲವು ದಶಕಗಳಿಂದ ಕನ್ನಡದಲ್ಲಿ ವಿಜ್ಞಾನ ಸಂವಹನ ಮತ್ತು ವಿಜ್ಞಾನ ಪತ್ರಿಕೋದ್ಯಮ ಕ್ಷೇತ್ರದ ಸಕ್ರಿಯಧ್ವನಿಯಾಗಿದ್ದಾರೆ. ಪರಿಸರ ಜಾಗೃತಿ ಮೂಡಿಸುವಲ್ಲಿ ಅವರ ಬರಹಗಳ ಪ್ರಭಾವ 'ಅದ್ಭುತವಾದದ್ದು.

ಪರಿಸರ ಚಳುವಳಿಗಳಲ್ಲಿ ಕರ್ನಾಟಕವು ಮೊದಲಿನಿಂದಲೂ ಮುಂಚೂಣಿಯಲ್ಲಿದೆ. ನಾಗೇಶ ಹೆಗಡೆ ಮತ್ತು ಶಿವಾನಂದ ಕಳವೆಯವರಂತಹ ವಿಜ್ಞಾನ ಸಂವಹನಕಾರರು ಸಾರ್ವಜನಿಕರಿಗೆ ಮತ್ತು ಆಡಳಿತಗಾರರಿಗೆ ವಿವಿಧ ವಿಷಯಗಳನ್ನು ಕುರಿತ ಮಾಹಿತಿಯನ್ನುತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರಸಿದ್ಧ ಛಾಯಾಗ್ರಾಹಕರಾದ ಕೃಪಾಕರ–ಸೇನಾನಿ ಮತ್ತು ಲೇಖಕ ಟಿ. ಎಸ್. ಗೋಪಾಲ್ ವನ್ಯಜೀವನದ ಕ್ಷೇತ್ರದಲ್ಲಿ ಗಮನಾರ್ಹ ಸಂವಹನಕಾರರಾಗಿದ್ದಾರೆ. ಡಾ. ಎಸ್ .ವಿ. ನರಸಿಂಹನ್ ಅವರು ಕೈಯಲ್ಲಿ ಬರೆದ ಸಾವಿರಾರು ಅಂಚೆ ಕಾರ್ಡುಗಳ ಮೂಲಕ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವ ಪ್ರಯತ್ನದಿಂದ ಹೆಸರುವಾಸಿಯಾಗಿದ್ದಾರೆ.

'ಅಡಿಕೆ ಪತ್ರಿಕೆ'ಯ ಸ್ಥಾಪಕ ಸಂಪಾದಕ ಶ್ರೀ ಪಡ್ರೆಯವರು ಕೃಷಿ ಕ್ಷೇತ್ರದ ಪ್ರಮುಖ ಸಂವಹನಕಾರರಲ್ಲಿ ಒಬ್ಬರು. ಡಾ. ವಸಂತಕುಮಾರ್ ತಿಮಕಾಪುರ, ಡಾ. ಶರಣಬಸವೇಶ್ವರ ಅಂಗಡಿ, ಡಾ. ಬಿ. ಎಸ್. ಸೋಮಶೇಖರ, ಡಾ. ಟಿ. ಎಸ್. ಚನ್ನೇಶ್, ಎ. ಪಿ. ಚಂದ್ರಶೇಖರ, ಶಿವರಾಂ ಪೈಲೂರು ಹಾಗೂ ನರೇಂದ್ರರೈದೇರ್ಲ ಅವರದ್ದು ಕೃಷಿ ಸಂವಹನ ಕ್ಷೇತ್ರದಇನ್ನಿತರ ಪ್ರಮುಖ ಹೆಸರುಗಳು.

ಆಕಾಶವಾಣಿಯ ಡಾ. ಎಚ್. ಆರ್. ಕೃಷ್ಣಮೂರ್ತಿ ಮತ್ತು ಸುಮಂಗಲ ಮುಮ್ಮಿಗಟ್ಟಿಯವರು ಬಾನುಲಿಯಲ್ಲಿ ಜನಪ್ರಿಯ ವಿಜ್ಞಾನ ಮತ್ತು ವಿಜ್ಞಾನ ಸಂವಹನಕ್ಕೆ ನೀಡಿದ ಕೊಡುಗೆಗಳಿಗೆ ಹೆಸರುವಾಸಿಯಾಗಿದ್ದಾರೆ. ಡಾ. ಎಸ್. ಬಾಲಚಂದ್ರರಾವ್ ಮತ್ತು ವಿ. ಎಸ್. ಎಸ್. ಶಾಸ್ತ್ರಿಯವರದ್ದು ಕನ್ನಡದಲ್ಲಿ ಗಣಿತ ಸಂವಹನದ ಕ್ಷೇತ್ರದಲ್ಲಿ ಪ್ರಮುಖ ಹೆಸರುಗಳು.

ಭೌತವಿಜ್ಞಾನದ ಶಿಕ್ಷಕ ರಾಜಶೇಖರ ಭೂಸನೂರುಮಠರಿಂದ ಪ್ರಾರಂಭಿಸಿ ಹಿರಿಯ ಐಪಿಎಸ್ ಅಧಿಕಾರಿ ಸವಿತಾ ಶ್ರೀನಿವಾಸರವರೆಗೆ ಅನೇಕ ಕನ್ನಡ ಲೇಖಕರು ವೈಜ್ಞಾನಿಕ ಕತೆ–ಕಾದಂಬರಿಗಳ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಪ್ರಸಿದ್ಧ ಕೀಟವಿಜ್ಞಾನಿ ಪ್ರೊ. ಕೆ. ಎನ್. ಗಣೇಶಯ್ಯನವರು ವಿಜ್ಞಾನವನ್ನು ಆಧರಿಸಿದ ಕನ್ನಡ ಕಾದಂಬರಿಗಳು ಮತ್ತು ಸಣ್ಣಕತೆಗಳಿಗಾಗಿ ಪ್ರಸಿದ್ಧರು. ಸಾಫ್ಟ್‌ವೇರ್ ವೃತ್ತಿಪರರಾದ ಶಶಿಧರ ಡೋಂಗ್ರೆಯವರು ಕನ್ನಡ ವಿಜ್ಞಾನ ರಂಗಭೂಮಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಸಂಸ್ಥೆಗಳ ಪಾತ್ರ

ಕರ್ನಾಟಕವನ್ನು ನೆಲೆಯಾಗಿಸಿಕೊಂಡಿರುವ ಅನೇಕ ಸಂಸ್ಥೆಗಳು ಕನ್ನಡದಲ್ಲಿ ವಿಜ್ಞಾನ ಸಂವಹನವನ್ನು ಒಂದಲ್ಲ ಒಂದು ರೀತಿಯಲ್ಲಿ ಬೆಂಬಲಿಸುತ್ತ ಬಂದಿವೆ.

ಇಂತಹ ಸಂಸ್ಥೆಗಳ ಪೈಕಿ ಆಕಾಶವಾಣಿಗೆ ಪ್ರಮುಖ ಸ್ಥಾನವಿದೆ. ಅನೇಕ ಕಾರ್ಯಕ್ರಮ ಸರಣಿಗಳು, ಸಂದರ್ಶನಗಳು ಮತ್ತು ಇತರ ಕಾರ್ಯಕ್ರಮಗಳೊಂದಿಗೆ, ಆಕಾಶವಾಣಿಯು ಜನಸಾಮಾನ್ಯರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಜಾಗೃತಿಯನ್ನು ಹೆಚ್ಚಿಸಿರುವುದರ ಜೊತೆಗೆ ವಿಜ್ಞಾನ ಸಂವಹನಕಾರರನ್ನೂ ಪೋಷಿಸಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಪರಿಕಲ್ಪನೆಗಳನ್ನು ಐದು ನಿಮಿಷಗಳೊಳಗೆ ಪರಿಚಯಿಸುವ 'ನಿತ್ಯವಿಜ್ಞಾನ'ದಂತಹ ಕಾರ್ಯಕ್ರಮಗಳೊಂದಿಗೆ, ದೀರ್ಘ ಕಾರ್ಯಕ್ರಮಗಳನ್ನು ಇಷ್ಟಪಡದ ಇಂದಿನ ಪ್ರೇಕ್ಷಕರನ್ನೂ ನಾವು ಹೇಗೆ ತಲುಪಬಹುದೆನ್ನುವುದನ್ನು ಆಕಾಶವಾಣಿ ತೋರಿಸಿಕೊಟ್ಟಿದೆ. ಮತ್ತೊಂದೆಡೆ, ಕರ್ನಾಟಕದಲ್ಲಿ ಅನೇಕ ಖಾಸಗಿ ರೇಡಿಯೋ ವಾಹಿನಿಗಳಿದ್ದರೂ, ಕನ್ನಡದಲ್ಲಿ ವಿಜ್ಞಾನ ಸಂವಹನದ ವಿಷಯದಲ್ಲಿ ಅವು ಹೆಚ್ಚೇನೂ ಕೆಲಸ ಮಾಡಿದಂತಿಲ್ಲ.

ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯವು (ಸಿಎಫ್‌ಟಿಆರ್‌ಐ) ೧೯೫೦ರ ದಶಕದಲ್ಲಿ 'ಆಹಾರ ವಿಜ್ಞಾನ' ಎಂಬ ವಿಶೇಷ ವಿಜ್ಞಾನ ಪತ್ರಿಕೆಯನ್ನು ಕನ್ನಡದಲ್ಲಿ ಪ್ರಾರಂಭಿಸಿತು ಮತ್ತು ಸುಮಾರು ಮೂರು ದಶಕಗಳ ಕಾಲ ಅದನ್ನು ಪ್ರಕಟಿಸಿತು. ಈ ಸಂಸ್ಥೆಯ ಮಾಹಿತಿ ಮತ್ತು ಪ್ರಚಾರ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಶ್ರೀಮತಿ ಹರಿಪ್ರಸಾದ್ ಮತ್ತು ಕೊಳ್ಳೇಗಾಲ ಶರ್ಮ ಇಬ್ಬರೂ ಕನ್ನಡದ ಪ್ರಮುಖ ವಿಜ್ಞಾನ ಸಂವಹನಕಾರರ ಪೈಕಿ ಗುರುತಿಸಿಕೊಂಡಿದ್ದಾರೆ.

ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಯ (ಎನ್‌ಎಎಲ್) ಕನ್ನಡ ಸಾಂಸ್ಕೃತಿಕ ಸಂಘ ೧೯೭೫ರಲ್ಲಿ ಸ್ಥಾಪನೆಯಾಯಿತು. ಅಂದಿನಿಂದಲೂ ಅದು 'ಕಣಾದ' ವಾರ್ಷಿಕ ವಿಜ್ಞಾನ ಪತ್ರಿಕೆಯನ್ನು ಪ್ರಕಟಿಸುತ್ತ ಬಂದಿದೆ. ಭಾರತೀಯ ವಿಜ್ಞಾನ ಮಂದಿರ ೧೯೮೦ರ ದಶಕದಲ್ಲಿ ರಾಜ್ಯಾದ್ಯಂತ ಕನ್ನಡದಲ್ಲಿ ವಿಸ್ತರಣ ಉಪನ್ಯಾಸಗಳನ್ನು ಆಯೋಜಿಸುತ್ತಿತ್ತು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಕೂಡಕನ್ನಡದಲ್ಲಿ ವಿಜ್ಞಾನ ಸಂವಹನ ಚಟುವಟಿಕೆಗಳನ್ನು ಬೆಂಬಲಿಸಿದೆ. ಬೆಂಗಳೂರಿನ ಯುಆರ್‌ರಾವ್ ಉಪಗ್ರಹಕೇಂದ್ರ ಮಕ್ಕಳಿಗಾಗಿ ಪ್ರಕಟಿಸಿರುವ ಬಾಹ್ಯಾಕಾಶ ಪುಸ್ತಕ ಮಾಲೆ ಇಂತಹ ಚಟುವಟಿಕೆಗಳಿಗೊಂದು ಉತ್ತಮ ಉದಾಹರಣೆಯಾಗಿದೆ. ನ್ಯಾಷನಲ್ ಬುಕ್‌ಟ್ರಸ್ಟ್, ಅಖಿಲಭಖ–ಓಖಭಖಛಿಕಖ ನಂತಹ ಸಂಸ್ಥೆಗಳೂ ಕನ್ನಡದಲ್ಲಿ ವಿಜ್ಞಾನ ಪುಸ್ತಕಗಳನ್ನು ಹೊರತಂದಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್), ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕೆಎಸ್‌ಟಿಎ) ಮುಂತಾದ ಕರ್ನಾಟಕ ಸರಕಾರದ ಸಂಸ್ಥೆಗಳೂ ವಿಜ್ಞಾನ ಸಂವಹನದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ನಾಡೋಜ ಡಾ. ಪಿ. ಎಸ್. ಶಂಕರ್ ಸಂಪಾದಕತ್ವದ 'ವಿಜ್ಞಾನ ಲೋಕ' ನಿಯತಕಾಲಿಕವನ್ನು ಕೆಎಸ್‌ಟಿಎ ೨೦೦೭ರಿಂದ ಪ್ರಕಟಿಸುತ್ತಿದೆ. ವಿಜ್ಞಾನ್ ಪ್ರಸಾರ್ ಸಂಸ್ಥೆಯ ವಿಜ್ಞಾನ ಸಂವಹನ, ಜನಪ್ರಿಯಕರಣ ಹಾಗೂ ವಿಸ್ತರಣೆ (ಸ್ಕೋಪ್) ಕಾರ್ಯಕ್ರಮವನ್ನು ಕೆಎಸ್‌ಟಿಎ ಸಹಯೋಗದೊಂದಿಗೆ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕೆಲಸ ಮಾಡುತ್ತಿರುವ ಕುವೆಂಪು ಭಾಷಾಭಾರತಿ ಪ್ರಾಧಿಕಾರವು ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂತಹ ಗಮನಾರ್ಹ ಕೃತಿಗಳ ಕನ್ನಡ ಅನುವಾದಗಳನ್ನು ಪ್ರಕಟಿಸಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪರಿಸರಕ್ಕೆ ಸಂಬಂಧಿಸಿದ ಕನ್ನಡ ನಿಯತಕಾಲಿಕಗಳು, ಪುಸ್ತಕಗಳು ಮತ್ತು ವರದಿಗಳನ್ನು ಪ್ರಕಟಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಮೇಲ್ಪಂಕ್ತಿಯನ್ನು ಅನುಸರಿಸಿ, ರಾಜ್ಯದ ಇತರ ವಿಶ್ವವಿದ್ಯಾನಿಲಯಗಳೂ ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕೆ ಕೊಡುಗೆ ನೀಡಿವೆ. ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕನ್ನಡ ವಿಶ್ವವಿದ್ಯಾಲಯಗಳನ್ನು ಇಲ್ಲಿ ಪ್ರಮುಖವಾಗಿ ಹೆಸರಿಸಬಹುದು. ಈ ಎಲ್ಲ ವಿಶ್ವವಿದ್ಯಾನಿಲಯಗಳೂ ಒಂದಲ್ಲ ಒಂದು ಸಮಯದಲ್ಲಿ ತಮ್ಮದೇ ಆದ ವಿಜ್ಞಾನ ನಿಯತಕಾಲಿಕೆಗಳನ್ನು ಪ್ರಕಟಿಸಿದವು. ಈ ಹಿಂದೆ, ಮದ್ರಾಸ್ ವಿಶ್ವವಿದ್ಯಾನಿಲಯವೂ ಕನ್ನಡದಲ್ಲಿ ವಿಜ್ಞಾನ ಪುಸ್ತಕಗಳ ಪ್ರಕಟಣೆಯನ್ನು ಪ್ರೋತ್ಸಾಹಿಸಿತ್ತಂತೆ.

ಈ ನಿಟ್ಟಿನಲ್ಲಿ ಸ್ವಯಂಸೇವಾ ಸಂಸ್ಥೆಗಳ ಕೊಡುಗೆಯೂ ಮಹತ್ವದ್ದು. ಬೆಂಗಳೂರು ಸೈನ್ಸ್ ಫೋರಂ ಮತ್ತು ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್‌ಎಜುಕೇಶನ್‌ನಂತಹ ಸಂಸ್ಥೆಗಳು ಕನ್ನಡ ಕಾರ್ಯಕ್ರಮಗಳನ್ನೂ ತಮ್ಮ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿವೆ. ಮತ್ತೊಂದೆಡೆ, ಭಾರತಜ್ಞಾನ ವಿಜ್ಞಾನ ಸಮಿತಿ – ಕರ್ನಾಟಕ (ಬಿಜಿವಿಎಸ್), ಡಾ. ಪಿ. ಎಸ್. ಶಂಕರ್ ಪ್ರತಿಷ್ಠಾನ, ಉದಯಭಾನು ಕಲಾಸಂಘ, ಇಜ್ಞಾನಟ್ರಸ್ಟ್, ಸೆಂಟರ್ ಫಾರ್ ಪಬ್ಲಿಕ್ ಅಂಡರ್‌ಸ್ಟಾಂಡಿಂಗ್ ಆಫ್ ಸೈನ್ಸ್, ಹಾಗೂ ಡಾ. ಟಿ. ಆರ್. ಅನಂತರಾಮು ವಿಜ್ಞಾನ ಪ್ರತಿಷ್ಠಾನದಂತಹ ಸಂಸ್ಥೆಗಳು ಕನ್ನಡದಲ್ಲೇ ವಿಜ್ಞಾನ ಸಂವಹನ ಚಟುವಟಿಕೆಗಳನ್ನು ನಡೆಸಿವೆ, ನಡೆಸುತ್ತಿವೆ.

ಖಾಸಗಿ ಸಂಸ್ಥೆಗಳು ಕೂಡ ತಮ್ಮ ಪಾತ್ರವನ್ನು ನಿರ್ವಹಿಸಿವೆ. ಬೆಂಗಳೂರಿನ ನವಕರ್ನಾಟಕ ಪ್ರಕಾಶನವು ಮಾನಸಿಕ ಆರೋಗ್ಯದಿಂದ ಖಗೋಳವಿಜ್ಞಾನದವರೆಗೆ, ವನ್ಯಜೀವಿಗಳಿಂದ ಕಂಪ್ಯೂಟರ್ ವಿಜ್ಞಾನದವರೆಗೆ ವಿವಿಧ ವಿಷಯಗಳನ್ನು ಕುರಿತ ನೂರಾರು ಕನ್ನಡ ಪುಸ್ತಕಗಳನ್ನು ಪ್ರಕಟಿಸಿದೆ. ಸುಮಾರು ೯೦೦ ಪುಟಗಳ ವಿಜ್ಞಾನ–ತಂತ್ರಜ್ಞಾನ ಪದಸಂಪದ ಹಾಗೂ ಹಿಂದಿನ ಸೋವಿಯತ್‌ರಷ್ಯಾದಲ್ಲಿ ಪ್ರಕಟವಾದ ವಿಜ್ಞಾನ ಪುಸ್ತಕಗಳ ಅನುವಾದಗಳು ನವಕರ್ನಾಟಕದ ಇತರ ಗಮನಾರ್ಹ ಕೊಡುಗೆಗಳಾಗಿವೆ.

ರಾಜ್ಯದ ಬಹುತೇಕ ಪ್ರಮುಖ ಪತ್ರಿಕೆಗಳು ಕನ್ನಡದಲ್ಲಿ ವಿಜ್ಞಾನ ಸಂವಹನವನ್ನು ಬೆಂಬಲಿಸಿವೆ. ೧೯೮೦ರಷ್ಟು ಹಿಂದೆಯೇ ಪೂರ್ಣಕಾಲಿಕ ವಿಜ್ಞಾನ ಮತ್ತು ಅಭಿವೃದ್ಧಿ ವರದಿಗಾರರನ್ನು ನೇಮಿಸಿಕೊಂಡಿದ್ದು 'ಪ್ರಜಾವಾಣಿ'ಯ ಹೆಗ್ಗಳಿಕೆ. 'ವಿಜಯಕರ್ನಾಟಕ', 'ಉದಯವಾಣಿ', ಮತ್ತು 'ಕನ್ನಡ ಪ್ರಭ'ದಂತಹ ಇತರ ಪತ್ರಿಕೆಗಳೂ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಪುರವಣಿಗಳು, ಲೇಖನಗಳು ಮತ್ತು ಅಂಕಣಗಳನ್ನು ಪ್ರಕಟಿಸುವ ಮೂಲಕ ಕನ್ನಡದಲ್ಲಿ ವಿಜ್ಞಾನ ಸಂವಹನವನ್ನು ಪ್ರೋತ್ಸಾಹಿಸಿವೆ.

'ವಿಜ್ಞಾನ ವಿಜಯ'ವೆಂಬ ಪ್ರತ್ಯೇಕ ಪುಟವನ್ನೇ ಮೀಸಲಾಗಿಟ್ಟಿದ್ದ ವಿಜಯಕರ್ನಾಟಕ, 'ಸಮೀಕರಣ'ವೆಂಬ ಪುಟ ಪ್ರಕಟಿಸುತ್ತಿದ್ದ ವಿಜಯವಾಣಿ ಹಾಗೂ 'ತಂತ್ರಜ್ಞಾನ' ಪುಟವನ್ನು ಈಗಲೂ (೨೦೨೫) ಪ್ರಕಟಿಸುತ್ತಿರುವ ಪ್ರಜಾವಾಣಿಯ ಪ್ರಯತ್ನಗಳು ಉಲ್ಲೇಖನೀಯ. ಇದೇ ರೀತಿ ಅಂಕಣ ಬರಹಗಳೂ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿವೆ. ಪ್ರಜಾವಾಣಿಯಲ್ಲಿ ಎಂಬತ್ತರ ದಶಕದಿಂದಲೂ ಪ್ರಕಟವಾಗುತ್ತಿರುವ ನಾಗೇಶ ಹೆಗಡೆಯವರ 'ವಿಜ್ಞಾನ ವಿಶೇಷ' ಈ ಪೈಕಿ ಅಗ್ರಗಣ್ಯವಾದದ್ದು. ವಿಜಯಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಹಾಲ್ದೊಡ್ಡೇರಿ ಸುಧೀಂದ್ರರ 'ನೆಟ್ ನೋಟ' ಕೂಡ ಅಪಾರಜನಪ್ರಿಯತೆ ಗಳಿಸಿತ್ತು. ಕೊಳ್ಳೇಗಾಲ ಶರ್ಮರ ಅಂಕಣ ಬರಹಗಳೂ ಇದೇ ಸಾಲಿಗೆ ಸೇರುತ್ತವೆ.

ಡಿಜಿಟಲ್‌ಯುಗದಲ್ಲಿ ವಿಜ್ಞಾನ ಸಂವಹನ

ಕನ್ನಡದಲ್ಲಿ ವಿಜ್ಞಾನ ಸಂವಹನವು ಹೊಸ ಸಾಧ್ಯತೆಗಳಿಗೆ ತನ್ನನ್ನು ತೆರೆದುಕೊಳ್ಳುತ್ತಲೇ ಬಂದಿದೆ. ಈ ಶತಮಾನದ ಪ್ರಾರಂಭದಲ್ಲಿ ಅಂತರಜಾಲದ ವ್ಯಾಪ್ತಿಯು ವಿಸ್ತಾರಗೊಳ್ಳುತ್ತಿದ್ದಾಗ, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮೀಸಲಾದ ಅನೇಕ ಬ್ಲಾಗುಗಳು ಮತ್ತು ಜಾಲತಾಣಗಳು ಪ್ರಾರಂಭವಾದವು. ಅವುಗಳ ಪೈಕಿ 'ಇಜ್ಞಾನ' ಕೂಡಒಂದು. ೨೦೦೭ರಲ್ಲಿ ಬ್ಲಾಗ್‌ರೂಪದಲ್ಲಿ ಪ್ರಾರಂಭವಾದ ಇಜ್ಞಾನ, ೨೦೧೭ರ ಇಂಡಿಯನ್ ಬ್ಲಾಗರ್ ಅವಾರ್ಡ್ಸ್‌ನಲ್ಲಿ ಅತ್ಯುತ್ತಮ ಕನ್ನಡ ಬ್ಲಾಗ್ ಎಂಬ ಗೌರವಕ್ಕೆ ಪಾತ್ರವಾಯಿತು. ಡಿಜಿಟಲ್‌ಯುಗದಲ್ಲಿ ಕನ್ನಡದ ಪ್ರಮುಖ ವಿಜ್ಞಾನ ಪ್ರಕಟಣೆಗಳಲ್ಲೊಂದಾಗಿ ಇಜ್ಞಾನ ಗುರುತಿಸಿಕೊಂಡಿದೆ.

ಕನ್ನಡದ ಆನ್‌ಲೈನ್ ಪತ್ರಿಕೆಗಳಿಂದಲೂ ಜನಪ್ರಿಯ ವಿಜ್ಞಾನಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆತಿದೆ.ಇದರ ಜೊತೆಗೆ ಸಾಮಾಜಿಕ ಮಾಧ್ಯಮಗಳನ್ನೂ ವಿಜ್ಞಾನ ಸಂವಹನಕ್ಕಾಗಿ ಬಳಸಲಾಗುತ್ತಿದೆ. ಬೇರೆಡೆ ಪ್ರಕಟವಾದ ಬರಹಗಳನ್ನು ಹಂಚಿಕೊಳ್ಳುವುದರ ಜೊತೆಗೆ, ಅನೇಕ ವಿಜ್ಞಾನ ಸಂವಹನಕಾರರು ಸಾಮಾಜಿಕ ಮಾಧ್ಯಮಗಳ ಮೂಲಕ ತಮ್ಮ ಓದುಗರ ಜೊತೆಗೆ ಸಂಪರ್ಕದಲ್ಲಿದ್ದಾರೆ. ವಾಟ್ಸಾಪ್‌ನಂತಹ ಮೆಸೇಜಿಂಗ್ ಸವಲತ್ತುಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯವನ್ನು ಹಂಚಿಕೊಳ್ಳುವುದಕ್ಕೂ ಬಳಸಲಾಗುತ್ತಿದೆ. ಪುಸ್ತಕ–ಪತ್ರಿಕೆಗಳಂತಹ ಸಾಂಪ್ರದಾಯಿಕ ಮಾಧ್ಯಮಗಳನ್ನು ಬಳಸದ ಓದುಗರನ್ನು ತಲುಪಲು ಇದು ಸಂವಹನಕಾರರಿಗೆ ನೆರವಾಗುತ್ತಿದೆ.

ಡಿಜಿಟಲ್ ಪ್ರಕಾಶನದ ವಿಕಾಸದೊಂದಿಗೆ, ಕನ್ನಡದ ಇ–ಪುಸ್ತಕಗಳು ಮತ್ತು ಆಡಿಯೊ ಪುಸ್ತಕಗಳೂ ಜನಪ್ರಿಯವಾಗುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳನ್ನು ಈ ಹೊಸ ರೂಪಗಳಲ್ಲಿಯೂ ಪ್ರಕಟಿಸಲಾಗಿದೆ. ನೂರಾರು ಹಳೆಯ ಪುಸ್ತಕಗಳನ್ನು ಡಿಜಿಟಲೀಕರಿಸಿ ಇಂಟರ್ನೆಟ್ ಆರ್ಕೈವ್‌ನಂತಹ ವೇದಿಕೆಗಳ ಮೂಲಕ ಲಭ್ಯವಾಗಿಸಲಾಗಿದೆ. ಮುದ್ರಿತ ಪತ್ರಿಕೆಗಳಂತೆಯೇ ಕೆಲ ಡಿಜಿಟಲ್ ನಿಯತಕಾಲಿಕಗಳೂ ಇವೆ. ಸರಕಾರದ ಬೆಂಬಲದೊಡನೆ ಪ್ರಾರಂಭವಾಗಿ, ಸದ್ಯ (೨೦೨೫) ಸ್ವತಂತ್ರವಾಗಿ ಮುಂದುವರಿದಿರುವ 'ಕುತೂಹಲಿ' ಮಾಸಿಕ ಇಂತಹ ಪತ್ರಿಕೆಗಳಿಗೊಂದು ಉದಾಹರಣೆ.

ವಿಕಿಪೀಡಿಯದ ಕನ್ನಡ ಆವೃತ್ತಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಹಲವು ಲೇಖನಗಳಿವೆ. ಭಾರತ ಸರ್ಕಾರದ 'ಭಾರತವಾಣಿ' ಮತ್ತು ಕರ್ನಾಟಕ ಸರ್ಕಾರದ 'ಕಣಜ' ಆನ್‌ಲೈನ್ ಜ್ಞಾನಕೋಶಗಳಲ್ಲೂ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಲೇಖನಗಳು – ಪುಸ್ತಕಗಳು ಪ್ರಕಟವಾಗಿವೆ.

ಆನ್‌ಲೈನ್ ನಿಘಂಟುಗಳು ಮತ್ತು ಇತರ ಅನುವಾದ ಸಾಧನಗಳು ಕೂಡ ವಿಜ್ಞಾನ ಸಂವಹನಕಾರರಿಗೆ ನೆರವಾಗುತ್ತಿವೆ. ಅನೇಕ ನಿಘಂಟುಗಳು ಮತ್ತು ಪದಕೋಶಗಳನ್ನು ಒಂದೇ ವೇದಿಕೆಯಲ್ಲಿ ಒದಗಿಸುವ ಕರ್ನಾಟಕ ಸರ್ಕಾರದ 'ಪದಕಣಜ', ತಂತ್ರಜ್ಞಾನವು ಸಂವಹನಕಾರರಿಗೆ ಹೇಗೆ ಸಹಾಯ ಮಾಡಬಲ್ಲದು ಎನ್ನುವುದಕ್ಕೆ ಉತ್ತಮ ಉದಾಹರಣೆಯಾಗಿದೆ.

ವಿಜ್ಞಾನದ ಪಾಡ್‌ಕಾಸ್ಟ್‌ಗಳಲ್ಲಿಯೂ ಕನ್ನಡ ಮುಂಚೂಣಿಯಲ್ಲಿದೆ. ಕೊಳ್ಳೇಗಾಲ ಶರ್ಮ ರೂಪಿಸಿದ 'ಜಾಣಸುದ್ದಿ' ಪಾಡ್‌ಕಾಸ್ಟ್ ೨೦೧೭ರಿಂದ ಪ್ರಕಟವಾಗುತ್ತಿದ್ದು, ಸಾವಿರಾರು ಕೇಳುಗರನ್ನು ತಲುಪುತ್ತಿದೆ. ಇದು ಅನೇಕ ಸಮುದಾಯ ರೇಡಿಯೋಗಳಲ್ಲಿಯೂ ಪ್ರಸಾರವಾಗುತ್ತಿದ್ದು, ಆಧುನಿಕ ಮತ್ತು ಸಾಂಪ್ರದಾಯಿಕ ಮಾಧ್ಯಮಗಳು ಹೇಗೆ ಒಟ್ಟಾಗಿ ಕೆಲಸ ಮಾಡಬಹುದು ಎನ್ನುವುದಕ್ಕೆ ನಿದರ್ಶನದಂತಿದೆ.

ಮೊದಲಿನಿಂದಲೂ, ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನದ ಕುರಿತು ದೃಶ್ಯಮಾಧ್ಯಮದಲ್ಲಿ ಹೆಚ್ಚಿನ ಕೆಲಸ ನಡೆದಿಲ್ಲ. ಟೀವಿ ವಾಹಿನಿಗಳಲ್ಲಿ ವಿಜ್ಞಾನದ ವ್ಯಾಪ್ತಿ ಬಹುಪಾಲು ಪ್ರಮುಖ ಘಟನೆಗಳ ಸಮಯದಲ್ಲಿ ನಡೆಯುವ ಸಂವಾದಗಳಿಗಷ್ಟೇ ಸೀಮಿತವಾಗಿದೆ. ಇತ್ತೀಚಿನ ವರ್ಷಗಳಲ್ಲಿ, ಡಿಜಿಟಲ್ ಮಾಧ್ಯಮವನ್ನು ಬಳಸಿಕೊಂಡು ಈ ಕೊರತೆಯನ್ನು ನಿವಾರಿಸುವ ಕೆಲವು ಪ್ರಯತ್ನಗಳು ನಡೆದಿವೆ.

ಮುಂದಿನ ಹಾದಿ

ಪ್ರಾರಂಭದ ದಿನಗಳಿಂದಲೂ, ಮುದ್ರಣ ಮಾಧ್ಯಮವು ಕನ್ನಡದಲ್ಲಿ ವಿಜ್ಞಾನ ಸಂವಹನದ ಆಧಾರಸ್ತಂಭವಾಗಿದೆ. ಮುಖ್ಯವಾಹಿನಿಯ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಿಂದ ಹಿಡಿದು ವಿಜ್ಞಾನಕ್ಕೇ ಮೀಸಲಾದ ಪತ್ರಿಕೆಗಳವರೆಗೆ, ಸಂವಹನಕಾರರು ತಮ್ಮ ಓದುಗರನ್ನು ತಲುಪಲು ಈ ಮಾಧ್ಯಮವನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಆದಾಗ್ಯೂ, ಇತ್ತೀಚಿನ ವರ್ಷಗಳಲ್ಲಿ ಈ ಪ್ರವೃತ್ತಿಗೆ ಕೆಲವು ಸವಾಲುಗಳು ಎದುರಾಗಿವೆ. ಮುಖ್ಯವಾಹಿನಿ ಪತ್ರಿಕೆಗಳಲ್ಲಿ ವಿಜ್ಞಾನಕ್ಕೆ ಲಭ್ಯವಿರುವ ಸ್ಥಳಾವಕಾಶ ಕಡಿಮೆಯಾಗಿದೆ ಹಾಗೂ ಹೆಚ್ಚಿನ ವಿಜ್ಞಾನ ಪತ್ರಿಕೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಕಷ್ಟವಾಗುತ್ತಿದೆ. ಹೀಗಾಗಿ, ಮುದ್ರಣ ಮಾಧ್ಯಮದಲ್ಲಿ ವಿಜ್ಞಾನ ಮತ್ತುತಂತ್ರಜ್ಞಾನದ ಸಂವಹನವು ಕೆಲವೇ ಅಂಕಣ–ಲೇಖನಗಳಿಗೆ, ಹಾಗೂ ಉಳಿದಿರುವ ವಿಜ್ಞಾನ ಪತ್ರಿಕೆಗಳಿಗೆ ಮಾತ್ರವೇ ಸೀಮಿತವಾಗುತ್ತಿದೆ.

ಕನ್ನಡದಲ್ಲಿ ಪ್ರತಿವರ್ಷವೂ ಗಣನೀಯ ಸಂಖ್ಯೆಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಪ್ರಕಟವಾಗುತ್ತಿವೆ. ಆದರೆ, ಇವುಗಳಲ್ಲಿ ಬಹುಪಾಲು ಬೇರೆಡೆ ಪ್ರಕಟವಾದ ಲೇಖನಗಳ ಸಂಕಲನಗಳು ಅಥವಾ ಅನ್ಯ ಆಕರಗಳಿಂದ ಅನುವಾದಿಸಲಾದ ವಿಷಯಗಳನ್ನು ಒಳಗೊಂಡಿರುವುದೇ ಹೆಚ್ಚು. ಶಾಲಾ ಮಟ್ಟವನ್ನು ಮೀರಿ ಕನ್ನಡದಲ್ಲಿ ವಿಜ್ಞಾನ ಪಠ್ಯಪುಸ್ತಕಗಳು ಮತ್ತು ಆಕರಗ್ರಂಥಗಳ ಗಣನೀಯ ಅಗತ್ಯವಿದ್ದು, ಅದನ್ನು ಪೂರೈಸುವ ನಿಟ್ಟಿನಲ್ಲೂ ಕೆಲಸ ಸಾಗಬೇಕಿದೆ.

ಕನ್ನಡದ ವಿಶ್ವಕೋಶಗಳನ್ನು ಹಲವು ವರ್ಷಗಳಿಂದ ನವೀಕರಿಸಲಾಗಿಲ್ಲ ಎನ್ನುವುದು ಒಂದು ಸಮಸ್ಯೆಯಾದರೆ, ವಿಜ್ಞಾನ–ತಂತ್ರಜ್ಞಾನದ ಕುರಿತು ಹೆಚ್ಚಿನ ಮಾಹಿತಿಯನ್ನು ಒದಗಿಸುವಲ್ಲಿ ಆನ್‌ಲೈನ್ ವಿಶ್ವಕೋಶಗಳೂ ಸವಾಲುಗಳನ್ನು ಎದುರಿಸುತ್ತಿವೆ ಎನ್ನುವುದು ಇನ್ನೊಂದು ಸಮಸ್ಯೆಯಾಗಿದೆ. ಮತ್ತೊಂದೆಡೆ, ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ನಿಘಂಟು ಮತ್ತು ಪದಕೋಶಗಳ ಲಭ್ಯತೆಯ ಪರಿಸ್ಥಿತಿ (ಮುದ್ರಣ ಮತ್ತು ಆನ್‌ಲೈನ್ ಎರಡೂ ಸೇರಿದಂತೆ) ತುಲನಾತ್ಮಕವಾಗಿ ಉತ್ತಮವಾಗಿದೆ ಎನ್ನಬಹುದು.

ಡಿಜಿಟಲ್ ಮಾಧ್ಯಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ರೂಪಿಸುವ ನಿಟ್ಟಿನಲ್ಲಿ ವ್ಯಕ್ತಿಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಸಕ್ರಿಯರಾಗಿದ್ದರೂ, 'ಕಣಜ'ದಂತಹ ದೊಡ್ಡ ಉಪಕ್ರಮಗಳಿಗೆ ಹೆಚ್ಚಿನದನ್ನು ಸಾಧಿಸಲು ಸಾಧ್ಯವಾಗಿಲ್ಲ (೨೦೨೫ರ ಪ್ರಾರಂಭದಲ್ಲಿದ್ದಂತೆ). ದೊಡ್ಡ ಪ್ರಮಾಣದ ಯೋಜನೆಗಳನ್ನು ರೂಪಿಸುವಲ್ಲಿ, ಬಹುಮಾಧ್ಯಮ ಮಾಹಿತಿಯನ್ನು ರಚಿಸುವಲ್ಲಿ ಹಾಗೂ ಪ್ರಯತ್ನಗಳನ್ನು ದೀರ್ಘಾವಧಿಯವರೆಗೆ ಉಳಿಸಿಕೊಳ್ಳುವಲ್ಲಿ ಇದು ಹಲವು ಸವಾಲುಗಳನ್ನು ಸೃಷ್ಟಿಸಿದೆ. ೫೦ ವರ್ಷಗಳ ಹಿಂದೆ ಅತ್ಯಂತ ದಕ್ಷತೆಯಿಂದ ಕಾರ್ಯಗತಗೊಳಿಸಲಾಗಿದ್ದ 'ಜ್ಞಾನಗಂಗೋತ್ರಿ'ಯಂತಹ ಯೋಜನೆಗಳು ಈ ಪರಿಸ್ಥಿತಿಯನ್ನು ಬದಲಾಯಿಸಲು ನಮ್ಮ ಉದಾಹರಣೆಗಳಾಗಬೇಕಿದೆ.

ಕಳೆದ ಶತಮಾನದಲ್ಲಿ ಗಮನಾರ್ಹ ಮೈಲಿಗಲ್ಲುಗಳನ್ನು ಸಾಧಿಸಲಾಗಿದ್ದರೂ, ಕನ್ನಡದಲ್ಲಿ ಹೆಚ್ಚಿನ ವಿಜ್ಞಾನ ಸಂವಹನ ಚಟುವಟಿಕೆಗಳು ಇನ್ನೂ ಸರ್ಕಾರ ಅಥವಾ ದಾನಿಗಳ ಬೆಂಬಲವನ್ನು ಅವಲಂಬಿಸಿವೆ. ಹಿಂದಿನ ಉದಾಹರಣೆಗಳಲ್ಲಿ ನೋಡಿದಂತೆ, ಅಂತಹ ಚಟುವಟಿಕೆಗಳನ್ನು ಉಳಿಸಿಕೊಳ್ಳುವ ಮತ್ತು ಹೊಸ ಸಂವಹನಕಾರರಿಗೆ ಅವಕಾಶಗಳನ್ನು ಸೃಷ್ಟಿಸುವ ದೃಷ್ಟಿಯಿಂದ ಈ ಪರಿಸ್ಥಿತಿಯು ಅಷ್ಟೇನೂ ಪೂರಕವಾದುದಲ್ಲ. ಇದರಿಂದಾಗಿ, ವಿಜ್ಞಾನ ಸಂವಹನದತ್ತ ಬರುತ್ತಿರುವ ಹೊಸಬರ ಸಂಖ್ಯೆಯೂ ಕಡಿಮೆಯಾಗಿದೆ. ಮತ್ತೊಂದೆಡೆ, ವಿಜ್ಞಾನ ಸಂವಹನಕಾರರಿಗೆ ತರಬೇತಿಯೂ ಸೇರಿದಂತೆ ಅಗತ್ಯವಾದ ಹೆಚ್ಚಿನ ಸಂಪನ್ಮೂಲಗಳೂ ಲಭ್ಯವಿಲ್ಲ. ಮಾಧ್ಯಮಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಾಗಿ ಲಭ್ಯವಿರುವ ಸ್ಥಳಾವಕಾಶ ಸೀಮಿತವಾಗಿರುವುದರಿಂದ, ವಿಜ್ಞಾನ ಪತ್ರಿಕೋದ್ಯಮದ ಬೆಳವಣಿಗೆಯೂ ಕುಂಠಿತವಾಗಿದೆ.

ಎಲ್ಲರಲ್ಲೂ ವೈಜ್ಞಾನಿಕ ಉತ್ಕೃಷ್ಟತೆಯನ್ನು ಉತ್ತೇಜಿಸಲು ಭಾರತ ಸರ್ಕಾರವು ವೈಜ್ಞಾನಿಕ ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಪಾದಿಸುತ್ತಿದೆ. ಭಾರತದಲ್ಲಿ ಹೆಚ್ಚಿನ ಜನರು ಕನ್ನಡದಂತಹ ಪ್ರಾದೇಶಿಕ ಭಾಷೆಗಳನ್ನೇ ಮಾತನಾಡುತ್ತಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು, ವಿಜ್ಞಾನ ಸಂವಹನವನ್ನು ಹೆಚ್ಚು ಸಮರ್ಥ ಹಾಗೂ ಜನಪರವನ್ನಾಗಿಸುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರೋತ್ಸಾಹ ಇಂದಿನ ಅಗತ್ಯವಾಗಿದೆ.

ಸೃಷ್ಟಿಯ ಕುರಿತು ವಚನ ವಿಜ್ಞಾನ

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ
ಬೆಂಗಳೂರು

ವಿಜ್ಞಾನವೆಂಬುದು ನಿತ್ಯ ನೂತನ. ನಮ್ಮ ಬದುಕಿನ ಎಲ್ಲಾ ವಿಚಾರಗಳಲ್ಲೂ ವೈಜ್ಞಾನಿಕ ಪ್ರಯೋಗಗಳನ್ನು ಅನುಸರಿಸುತ್ತೇವೆ. ಕಲೆ ಮತ್ತು ವಿಜ್ಞಾನ ಬೇರೆ ಬೇರೆಯಾಗುವುದಿಲ್ಲ. ಬದುಕಿನ ಆನಂದವನ್ನು ನೋವಿನೊಳಗೆ ಗೆದ್ದು ಪಡೆಯಲು ಕಲೆಯು ಸಹಾಯಕವಾದರೆ, ಆ ಬದುಕು ಯಾವ ರೀತಿಯಲ್ಲಿ ತೊಡಗಬೇಕು ಎಂಬುದನ್ನು ವಿಜ್ಞಾನ ಹೇಳಿಕೊಡುತ್ತದೆ. ನಮ್ಮ ಹಿರಿಯವರು ಜಾನಪದ ಬೇರಿನ ಮೂಲಕ ಎಲ್ಲಾ ವಿಚಾರಗಳನ್ನು ವೈಜ್ಞಾನಿಕವಾಗಿಯೇ ತಿಳಿಸಿದರು. ಅದನ್ನು ಸೂಕ್ಷ್ಮವಾಗಿ ಅರಿಯಲಾಗದ ಅನಕ್ಷರಸ್ಥ ಸಮುದಾಯಕ್ಕೆ ಅರ್ಥವಾಗುವಂತೆ ಹೇಳುವ ಕಾರ್ಯವನ್ನು ಕಲೆಯ ಹಲವು ವಿಧಾನಗಳ ಮೂಲಕ ತಿಳಿಸಲಾಗಿದೆ. ಈ ಪ್ರಯೋಗಗಳನ್ನು ನಮ್ಮ ಸಾಹಿತ್ಯದ ಯಾವುದೇ ಪರಿಕಲ್ಪನೆಗಳೊಳಗೆ ಅತ್ಯಂತ ವಿಶಾಲವಾಗಿ ಅಧ್ಯಯನ ಮಾಡಬಹುದು. ಈ ಲೇಖನದಲ್ಲಿ ೧೨ನೇ ಶತಮಾನದ ಜನಸಾಮಾನ್ಯರ ಸಾಹಿತ್ಯವೆಂದು ಕರೆಯಬಹುದಾದ ವಚನ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿರುವ ವೈಜ್ಞಾನಿಕ ಅಂಶಗಳನ್ನು ಸಂಶೋಧಿಸಬಹುದು. ಪ್ರಬಂಧದ ಉದ್ದೇಶದಿಂದ ಒಂದು ವಚನವನ್ನು ಇಲ್ಲಿ ವಿಶಾಲವಾಗಿ ಚರ್ಚಿಸಲಾಗಿದೆ.

ವಚನಕಾರರಲ್ಲಿ ಬಾಲಸಂಗಯ್ಯ ಎಂಬ ಹೆಸರಿನ ವಚನಕಾರನು ವಿಭಿನ್ನವಾಗಿ ಕಂಡುಬರುತ್ತಾನೆ. ಈತನ ಕುರಿತು ಸರಿಯಾದ ಚರಿತ್ರೆ ಇಲ್ಲದಿದ್ದರೂ ಎಂ.ಎಂ ಕಲಬುರ್ಗಿವರೆಗೂ ಸಾಕಷ್ಟು ವಿದ್ವಾಂಸರು ಹಲವು ಮಾದರಿಗಳ ಚರಿತ್ರೆಗಳನ್ನು ತೆರೆದಿಟ್ಟಿದ್ದಾರೆ. ಈತನ ಹೆಸರಿನಲ್ಲಿ ಲಭ್ಯವಿರುವ ೫೦೦ಕ್ಕೂ ಹೆಚ್ಚು ವಚನಗಳು ಇಡೀ ವಚನ ಸಾಹಿತ್ಯದಲ್ಲಿ ಹೊಸ ಮಾದರಿಯ ಸ್ವರೂಪದಲ್ಲಿವೆ. ವೈಜ್ಞಾನಿಕ ತಳಹದಿಯ ಮೇಲೆ ಮನುಷ್ಯನ ನಂಬಿಕೆಗಳನ್ನು ಪುರಾಣದ ಚಿಂತನೆಗಳನ್ನು ಸುದೀರ್ಘವಾಗಿ, ಏಕಮುಖಿಯವಾಗಿ ಚರ್ಚಿಸಿದ ಮತ್ತೊಬ್ಬ ವಚನಕಾರರನ್ನು ನೋಡಲು ಸಾಧ್ಯವಿಲ್ಲ. ಅತ್ಯಂತ ಕಿರಿದಾಗಿಯೂ, ಸಾವಿರಾರು ಪದಗಳಿಂದ ಕೂಡಿದ ಅತ್ಯಂತ ಹಿರಿದಾದ ವಚನಗಳನ್ನು ರಚಿಸಿರುವ ಬಗೆಯನ್ನು ಗಮನಿಸಿದರೆ, ಜ್ಞಾನದ ವಿಸ್ತಾರ, ವಿಚಾರದ ಸಾಕ್ಷಾತ್ಕಾರದ ತೀಕ್ಷ್ಣತೆ ತಿಳಿಯುತ್ತದೆ. ಸಂಸ್ಕೃತ ಸಾಹಿತ್ಯ, ಜಾನಪದ ಭಂಡಾರವನ್ನು ಚೆನ್ನಾಗಿ ತಿಳಿದ ವಿದ್ವಾಂಸನಾದ ಈತ, ವೈಜ್ಞಾನಿಕ ಮನೋಧರ್ಮಗಳನ್ನು ಎಲ್ಲಾ ವಚನಗಳಲ್ಲೂ ಭಿತ್ತರಿಸಿದ್ದಾನೆ. ಸೃಷ್ಟಿಯ ಕುತೂಹಲಗಳನ್ನು ಭೂಮಿಯ ರಚನೆಯನ್ನು ಆಧರಿಸಿ ಚರ್ಚಿಸಿದ ಖಗೋಳ ತಜ್ಞನೀತ. ಈ ಹಿನ್ನಲೆಯಲ್ಲಿ ಒಂದು ಸುದೀರ್ಘ ವಚನವನ್ನು ಅಧ್ಯಯನಮಾಡುವ ಕೆಲವು ಸಾಧ್ಯತೆಗಳನ್ನು ಈ ಪ್ರಬಂಧವು ವಿವರಿಸುತ್ತದೆ.

ಈ ಕೆಳಕಂಡ ವಚನವು ಸೃಷ್ಟಿಯ ಕುರಿತು ವೈಜ್ಞಾನಿಕವಾಗಿ ಅವಲೋಕಿಸುತ್ತದೆ.
ಇನ್ನು ಬ್ರಹ್ಮಾಂಡಕಪಾಲದೊಳಗಣ ಸೃಷ್ಟಿಯ ವಿಸ್ತೀರ್ಣವದೆಂತೆಂದಡೆ :
ಆ ಭುವನಂಗಳು ಇಹ ಕ್ರಮವೆಂತೆಂದಡೆ :
ಬ್ರಹ್ಮಾಂಡಕಪಾಲ ಸಹಸ್ರಕೋಟಿ ಯೋಜನ ಪ್ರಮಾಣು.

ಈ ಭೂಮಿಯ ಸೃಷ್ಟಿ ಕುರಿತು ಈ ವಚನವು ಪ್ರಾರಂಭವಾಗಿದೆ. ಬ್ರಹ್ಮಾಂಡವೆಂಬುದು ವೈಜ್ಞಾನಿಕವಾಗಿ ನೀಹಾರಿಕೆ/ ಗ್ಯಾಲಾಕ್ಸಿ, ಆಕಾಶಗಂಗೆ(ಮಿಲ್ಕಿವೇ) ಈ ಮೊದಲಾದ ಹೆಸರಿನಿಂದ ಅನ್ವೇಷಣೆಗೊಂಡಿದೆ. ಈ ಬ್ರಹ್ಮಾಂಡದಲ್ಲಿ ಈ ಭೂಮಿಯು ಒಂದು. ಇಂತಹ

ಬ್ರಹ್ಮಾಂಡವು ನಮ್ಮ ತಲೆಯ ಬುರುಡೆಯಂತಿರುವ ಕಪಾಲದೊಳಗೆ ಸೃಷ್ಟಿಕ್ರಿಯೆಗಳು ನಡೆದಿರುವುದು ಸಹಜ. ಇಂತಹ ಸೃಷ್ಟಿಗೆ ಕಾರಣವಾದ ಭೂಮಿಯಂತಹ ಹಲವು ಕಾಯಗಳ ವಿಸ್ತೀರ್ಣವು ಸಹಸ್ರ ಕೋಟಿ ಯೋಜನವೆಂದಿದ್ದಾರೆ. ಇಂತಹ ಹಲವು ವಿಚಾರಗಳು ಇಂದಿಗೂ ನಮ್ಮ ವಿಜ್ಞಾನದ ಅನ್ವೇಷಣೆಯಾಗಿದೆ. ಈ ವಿಚಾರವು ೧೨ನೇ ಶತಮಾನದಲ್ಲಿಯೇ ಗೋಚರಿಸಿದೆ.

ಅದರೊಳಗಾಗಿ ಅತಳಲೋಕ ಇಪ್ಪತ್ತೊಂದುಕೋಟಿ ಯೋಜನದಲ್ಲಿ
ಶಿವನ ಆಜ್ಞಾಶಕ್ತಿಯಿಂದ ಆಧಾರಶಕ್ತಿ ಇಹಳು.
ಆ ಆಧಾರಶಕ್ತಿಯ ಉದ್ದ ಗಾತ್ರದೊಳಗಾಗಿ
ಐದು ಸಾವಿರಕೋಟಿ ಯೋಜನದಲ್ಲಿ ವಿತಳಲೋಕವಿಹುದು.
ಆ ವಿತಳಲೋಕ ಆರುಸಾವಿರಕೋಟಿ ಯೋಜನಪ್ರಮಾಣು.
ಆ ವಿತಳಲೋಕದ ಮೇಲೆ ಐದುಸಾವಿರಕೋಟಿ ಯೋಜನದಲ್ಲಿ
ಸುತಳಲೋಕವಿಹುದು.

ನಮ್ಮ ಪುರಾಣಗಳಲ್ಲಿ ಹಾಗೂ ಅಥರ್ವವೇದದಲ್ಲೂ ತಿಳಿಸಿರುವಂತೆ ಏಳು ಮೇಲಿನ ಲೋಕಗಳು ಹಾಗೂ ಏಳು ಕೆಳಗಿನ ಲೋಕಗಳು ಕಂಡುಬರುತ್ತವೆ. ಈ ಮೇಲಿನ ವಚನ ಚಿಂತನೆಯಲ್ಲಿ ಕೆಳಗಿನ ಲೋಕಗಳಾದ ಅಂದರೆ ಪಾತಾಳಗಳಾದ ಅತಳ ಮತ್ತು ವಿತಳ ಕುರಿತು ಇಲ್ಲಿ ಚರ್ಚಿಸಲಾಗಿದೆ. ಸುಮಾರು ಹನ್ನೆರಡು ಮೈಲಿಗೆ ಒಂದು ಯೋಜನವೆನ್ನಲಾಗುವುದು. ಇಂತಹ ಇಪ್ಪತ್ತೊಂದುಕೋಟಿ ಯೋಜನ ದೂರದಲ್ಲಿ ಶಿವನ ಆಜ್ಞೆಯಂತೆ, ನಮ್ಮೆಲ್ಲರ ಆಧಾರ ಶಕ್ತಿ ಇರುವುದು. ಅದರ ಉದ್ದ ಗಾತ್ರಗಳೇ ಐದು ಸಾವಿರ ಕೋಟಿ ಎನ್ನಲಾಗಿದೆ. ಅದರ ವಿಸ್ತೀರ್ಣವನ್ನು ಆರು ಸಾವಿರಕೋಟಿ, ಈ ವಿತಳ ಲೋಕದ ಮೇಲೆ ಐದು ಸಾವಿರ ಕೋಟಿ ಯೋಜನದಲ್ಲಿ ಸುತಳ ಲೋಕ ಎಂದು ಹೇಳುವ ಅಂದಾಜು ಸತ್ಯಗಳನ್ನು ಬೇಧಿಸಲು ಇನ್ನೂ ಅದೆಷ್ಟು ವೈಜ್ಞಾನಿಕ ಅನ್ವೇಷಣೆಗಳ ಅಗತ್ಯವಿದೆಯೊ ಎನಿಸುತ್ತದೆ. ಈ ಪಾತಾಳ ಲೋಕದ ಆಳ, ವಿಸ್ತೀರ್ಣ ಅಳತೆಗಳನ್ನು ತಿಳಿಸುತ್ತಲೇ ಅವುಗಳ ಸ್ವರೂಪವನ್ನು ಈ ರೀತಿಯಲ್ಲಿ ವಿವರಿಸಿದ್ದಾರೆ.

ಸುತಳ ಲೋಕ – ಅಗ್ನಿ ಜ್ವಾಲೆ – ಕಾಲಾಗ್ನಿ ರುದ್ರರು
ಆ ಸುತಳಲೋಕ ಅಗ್ನಿ ಜ್ವಾಲೆಯಾಗಿಹುದು.
ಆ ಸುತಳಲೋಕದೊಳು ಕಾಲಾಗ್ನಿ ರುದ್ರರಿಹರು.
ಆ ಸುತಳಲೋಕದ ಮೇಲೆ ಐದುಸಾವಿರಕೋಟಿಯೋಜನದಲ್ಲಿ
ರಸಾತಳಲೋಕವಿಹುದು.
ಆ ರಸಾತಳಲೋಕ ಬಯಲಾಗಿಹುದು.
ಆ ರಸಾತಳಲೋಕದ ಮೇಲೆ ಐದುಸಾವಿರಕೋಟಿಯೋಜನದಲ್ಲಿ
ತಳಾತಳಲೋಕವಿಹುದು.
ಆ ತಳಾತಳಲೋಕ ಮಹಾಗ್ನಿ ಜ್ವಾಲೆಯಾಗಿಹುದು.
ಆ ತಳಾತಳಲೋಕದ ಮೇಲೆ ಮಹಾತಳಲೋಕವಿಹುದು.
ಆ ಮಹಾತಳಲೋಕದ ಮೇಲೆ ಪಾತಾಳಲೋಕವಿಹುದು.
ಆ ಪಾತಾಳಲೋಕ ಎಂಬತ್ತು ಸಾವಿರ ಕೋಟಿ ಯೋಜನ ಭೂಮಿಯಮೇಲೆ
ಜಲಮಯವಾಗಿಹುದು.

ಈ ಕೆಳಲೋಕಗಳ ಚಿತ್ರಣವು ಇಷ್ಟು ವಿಸ್ತೀರ್ಣವಾದರೆ ನಮ್ಮ ಗ್ಯಾಲಾಕ್ಸಿಯು ಅದೆಷ್ಟು ವ್ಯಾಪ್ತಿಯಲ್ಲಿ ತುಂಬಿರಬಹುದು. ಇಂತಹ ಸೌಂದರ್ಯದಲ್ಲಿ ಭೂಮಿಯು ಒಂದು ನೆಪವಲ್ಲವೆ ಎನಿಸುತ್ತದೆ. ಮುಂದುವರೆದಂತೆ ಕೆಲವು ಈ ವಚನದ ಸಾಲುಗಳನ್ನು ಗದ್ಯದಂತೆ ಓದಿಕೊಳ್ಳಬಹುದು. ಆದರೆ, ವೈಜ್ಞಾನಿಕ ಅನ್ವೇಷಣೆಗೂ ದಕ್ಕದ ಕಲ್ಪಿತ ಕಥೆಯಂತೆ ಮೂಡಿರುವುದಂತೂ ಸಹಜ. ಆದರೆ, ಮುಂದುವರೆದಂತೆ ಭೂಮಿಯ ಸ್ವರೂಪವನ್ನು ವಿಶಾಲವಾಗಿ ಚರ್ಚಿಸಬಹುದು.

"ಆ ಜಲಮಯವಾಗಿಹ ಪಾತಾಳಲೋಕವು ಆಧಾರಶಕ್ತಿಯ ಆಜ್ಞೆಯಿಂದ ಹದಿನಾರು ದಿಕ್ಕುಗಳಲ್ಲಿಯೂ ಹದಿನಾರುಮಹಾಭೂತಂಗಳು ಸುತ್ತಿಹವು. ಹದಿನಾರುಭೂತಗಣಂಗಳ ನಡುವೆ ಕೂರ್ಮಾಂಡನೆಂಬ ಮಹಾಕೂರ್ಮನ ಅಗಲವದೆಂತೆಂದಡೆ :ಐದುಸಾವಿರಕೋಟಿ ವಿಸ್ತೀರ್ಣದಗಲ ನೋಡಾ. ಆ ಕೂರ್ಮಾಂಡನೆಂಬ ಮಹಾಕೂರ್ಮನ ಉದ್ದ ಹದಿನೆಂಟು ಸಾವಿರಕೋಟಿ ಯೋಜನ ಪರಿಪ್ರಮಾಣುದ್ದದ

ಬೆನ್ನ ಮೇಲೆ **ಶತಕೋಟಿಯೋಜನ ಪರಿಪ್ರಮಾಣುದ್ದದ ಭೂಮಿಯ** ಮೇಲೆ ಐನೂರು ಶಿರಸ್ಸನುಳ್ಳ ಶೇಷನು, ನಾಲ್ವತ್ತು ಸಾವಿರ ಶೇಷನು ವಳಯಾಕೃತವಾಗಿ ಸುತ್ತಿರಲು, ಆ ನಾಲ್ವತ್ತುಸಾವಿರ ಶೇಷನ ಒಳಯಾಕೃತದಲ್ಲಿ, ಮಧ್ಯದಲ್ಲಿ **ಶೇಷಾಹಿಯೆಂಬ ಮಹಾನಾಗ** ಇಪ್ಪುದು. ಆ ಶೇಷಾಹಿಯೆಂಬ ಮಹಾನಾಗವು ಎಂಟುಸಾವಿರಕೋಟಿ ಯೋಜನಪ್ರಮಾಣು ನೀಳವು. ಹತ್ತುಸಾವಿರಕೋಟಿ ಸುತ್ತು ವಿಸ್ತೀರ್ಣವು. ಐದು ಸಾವಿರ ಕೋಟಿ ಅಗಲದ ಹೆಡೆಯು. ಸ್ವರ್ಗ ಜ್ಯೋತಿಪ್ರಕಾಶದ ದೇಹವನುಳ್ಳುದಾಗಿ, ಸಹಸ್ರ ಶಿರ, ದ್ವಿಸಹಸ್ರಾಕ್ಷವು. ಆ ಸಹಸ್ರ ಶಿರದಲ್ಲಿ ಮಾಣಿಕ್ಯದ ಬಟ್ಟುಗಳ ಧರಿಸಿಕೊಂಡು ಮಹಾಗ್ನಿಜ್ವಾಲೆಯನುಳ್ಳ **ಮಹಾಶೇಷನಿಹನು**. ಐನೂರು ಶಿರಸ್ಸನುಳ್ಳ ಶೇಷ ನೂರು ನಾಲ್ವತ್ತು ಸಾವಿರ ಶೇಷನ ಸುತ್ತುವಳಯಾಕೃತವಾಗಿ ಅಷ್ಟದಿಗ್ಗಜಂಗಳಿಹವು. ಆ ಅಷ್ಟದಿಗ್ಗಜಂಗಳ ಮೇಲೆ ವಿಸ್ತೀರ್ಣ ಒಂದೊಂದು ಗಜಂಗಳು ನವಕೋಟಿ ಯೋಜನ ಪ್ರಮಾಣದುದ್ದವು, ಸಾವಿರ ಕೋಟಿ ಯೋಜನ ಪ್ರಮಾಣದಗಲವು, ಶತಕೋಟಿ ಸಾವಿರ ಯೋಜನ ಪ್ರಮಾಣದ ನೀಳವನುಳ್ಳುದಾಗಿ ಅಷ್ಟದಿಕ್ಕಹಾಗಜಂಗಳಿಹವು. ಆ ಅಷ್ಟದಿಕ್ಕಹಾಗಜಂಗಳು ಆಧಾರವಾಗಿ ಭೂಲೋಕವಿಹುದು."

ಈ ಮಹಾಶೇಷನ ಕಥೆಯು ನಮ್ಮ ಪುರಾಣಗಳ ಸಾಕಷ್ಟು ಕಥೆಗಳಲ್ಲಿ ವಿವಿಧ ಸ್ವರೂಪದಂತೆ ಕಾಣಿಸುತ್ತದೆ. ಇಲ್ಲಿ ಸೃಷ್ಟಿಯ ವೈಜ್ಞಾನಿಕ ವಿಚಾರಗಳಿಗೆ ಇದು ಅಷ್ಟೇನು ಸೂಕ್ತವಲ್ಲವೆಂದು ಚರ್ಚಿಸದೆ ಮುಂದುವರೆಯೋಣ.

ಆ ಭೂಲೋಕ ಮೊದಲಾಗಿ ಕೆಳಗಿನಂಡಬ್ರಹ್ಮಾಂಡಕಪಾಲ ಕಡೆಯಾಗಿ
ಅರುವತ್ತು ಸಾವಿರ ಕೋಟಿ ಯೋಜನ ಪರಿಪ್ರಮಾಣು.
ಆ ಭುವರ್ಲೋಕವು ಸಾವಿರಕೋಟಿಯೋಜನಪರಿಪ್ರಮಾಣು ಉದ್ದ
ಕಬ್ಬುಣವಾಗಿಹುದು.
ಸಾವಿರ ಕೋಟಿ ಯೋಜನ ಪರಿಪ್ರಮಾಣು ಉದ್ದ ಮಣ್ಣಾಗಿಹುದು.
ಇದು ಮಧ್ಯಭೂಮಿ. ಈ ಮಧ್ಯಭೂಮಿ ಅಜಲಮಯವಾಗಿ
ಉತ್ತರ–ದಕ್ಷಿಣ ಶತ ಸಹಸ್ರ ಕೋಟಿ ಯೋಜನ ಪರಿಪ್ರಮಾಣು.
ಸುತ್ತ ಅಗಲ ಮುನ್ನೂರರುವತ್ತುಕೋಟಿ ಯೋಜನ ಪರಿಪ್ರಮಾಣು.
ದಕ್ಷಿಣ–ಉತ್ತರ ಸಮುದ್ರ ತೊಡಗಿ ಉತ್ತರ ಹಿಮವತ್ಪರ್ವತ.
ಇದಕ್ಕೆ ಹೆಸರು ಭರತವರುಷ.

ಈ ಭೂಮಿಯು ಬ್ರಹ್ಮಾಂಡ ಕಪಾಲದ ಅರುವತ್ತು ಸಾವಿರ ಕೋಟಿ ಯೋಜನದ ವಿಸ್ತೀರ್ಣವನ್ನು ಒಳಗೊಂಡಿದೆ. ಇದರಲ್ಲಿ ಭುವರ್ಲೋಕವು ಸಾವಿರ ಕೋಟಿ ಯೋಜನ ಪ್ರಮಾಣವು ಕಬ್ಬುಣವಾಗಿವುದು ಎಂಬ ಉಲ್ಲೇಖವು ಅತ್ಯಂತ ಆಶ್ಚರ್ಯಕರವಾಗಿದೆ. ಲೋಹ ವಿಜ್ಞಾನವನ್ನು ಅತ್ಯಂತ ಸಹಜವಾಗಿ ವ್ಯಾಖ್ಯಾನಿಸುವ ಈ ವಚನವು ಆ ಕಾಲದ ವಿಭಿನ್ನ ಸಂಶೋಧನೆಗಳನ್ನು ನಿರೂಪಿಸುತ್ತಿದೆ. ಇದರಲ್ಲಿ ಸಾವಿರ ಕೋಟಿ ಯೋಜನ ಪ್ರಮಾಣ ಮಣ್ಣಿನ ಆವೃತ್ತಿಯು ಮಧ್ಯ ಭೂಮಿಯಾಗಿ ಉಳಿದೆಲ್ಲಾ ಜಲಾವೃತವಾಗಿರುವ ಭೂಮಿಯ ರಚನೆಯನ್ನು ಕುರಿತು ಇವರ ಸ್ಪಷ್ಟತೆಯು ವಿಶ್ವದ ವೈಜ್ಞಾನಿಕ ಅನ್ವೇಷಣೆಗಳಿಗೆ ಒಂದು ಬೆರಗಾಗಿದೆ. ನಮ್ಮ ವಚನ ಸಾಹಿತ್ಯವನ್ನು ವೈಜ್ಞಾನಿಕ ಅನ್ವೇಷಣೆಗಳ ಸಂದರ್ಭದಲ್ಲಿ ಸೂಕ್ಷ್ಮವಾಗಿ ಪರಿಗಣಿಸಿದರೆ ಇನ್ನೂ ಸಾಕಷ್ಟು ಹೊಸ ವಿಚಾರಗಳು ಬೆಳಕಿಗೆ ಬರುತ್ತವೆ. ಉತ್ತರ ದಕ್ಷಿಣ, ಸುತ್ತಳತೆ ಹಾಗೂ ಪೂರ್ವ, ಪಶ್ಚಿಮ ದಿಕ್ಕುಗಳು ಇವುಗಳ ಅಳತೆಗಳು, ಸೂರ್ಯೋದಯ, ಚಂದ್ರೋದಯಗಳ ಉಲ್ಲೇಖವು ಈ ವಚನದ ವಿಶೇಷ. ಸೃಷ್ಟಿಯ ಕುರಿತ ಈ ಎಲ್ಲಾ ವಿಚಾರಗಳು ವೈಜ್ಞಾನಿಕವಾಗಿಯೂ, ಸಾಹಿತ್ಯಾತ್ಮಕವಾಗಿಯೂ ವಿಶೇಷ ಸಂಶೋಧನೆಯಾಗಿದೆ.

ಈ ಹಿಮವತ್ಪರ್ವತವು ಉತ್ತರ–ದಕ್ಷಿಣ ಇಪ್ಪತ್ತುಸಾವಿರ ಯೋಜನಪ್ರಮಾಣು.
ಕೆಳಗೆ ಮೇಲೆ ಇಪ್ಪತ್ತುಸಾವಿರ ಯೋಜನಪ್ರಮಾಣು.
ಮೇಲುದ್ದವು ಎಂಬತ್ತೈದುಸಾವಿರ ಯೋಜನಪ್ರಮಾಣು.
ಉತ್ತರ ಸಮುದ್ರಕ್ಕೆ ದಕ್ಷಿಣ–ಉತ್ತರ ಸಾವಿರಕೋಟಿ ಯೋಜನದಲ್ಲಿ
ವಿಂಧ್ಯಪರ್ವತವಿಹುದು.
ಆ ವಿಂಧ್ಯಪರ್ವತದ ಮೇಲುದ್ದವು ತೊಂಬತ್ಮೂರುಸಾವಿರ,
ದಕ್ಷಿಣ ಉತ್ತರ ಮೂವತ್ತುಸಾವಿರ ಯೋಜನಪ್ರಮಾಣು.
ಕೆಳಗು ಮೇಲು ಮೂವತ್ತುಸಾವಿರ ಯೋಜನಪ್ರಮಾಣು.
ಆ ವಿಂಧ್ಯಪರ್ವತದ ಮೇಲುದ್ದವು
ತೊಂಬತ್ತುನೂರುಸಾವಿರಯೋಜನ ಪ್ರಮಾಣು.
ಪಶ್ಚಿಮದೆಸೆಯ ಸಮುದ್ರದಲ್ಲಿಹ ಅಸ್ತಮಾನಪರ್ವತ.

ಆ ಪರ್ವತ ದಕ್ಷಿಣ–ಉತ್ತರ ಮೂವತ್ತೈದುಸಾವಿರ ಯೋಜನಪ್ರಮಾಣು.
ಆ ಪರ್ವತದ ಕೆಳಗು ಮೇಲು ಮೂವತ್ತೈದುಸಾವಿರ ಯೋಜನಪ್ರಮಾಣು.
ಆ ಪರ್ವತದ ಮೇಲುದ್ದವು ತೊಂಬತ್ತುಸಾವಿರ ಯೋಜನಪ್ರಮಾಣು
ಭೂಮಿಗೆ ನಡುವಾಗಿ ಮಹಾಮೇರುಪರ್ವತವಿಹುದು.
ಆ ಮೇರುಪರ್ವತದ ಉತ್ತರ ದಕ್ಷಿಣ ಹದಿನಾರುಸಾವಿರ ಯೋಜನಪ್ರಮಾಣು.
ಆ ಮೇರುಪರ್ವತದ ಮೇಲುದ್ದವು ಸಾವಿರಕೋಟಿಯ ಮೇಲೆ
ನೂರು ಸಾವಿರದ ಎಂಬತ್ತುನಾಲ್ಕುಸಾವಿರ ಯೋಜನಪ್ರಮಾಣು.
ಭೂಮಿಯಲ್ಲಿ ಹೂಳಿಹುದು
ಎಂಬತ್ತು ನಾಲ್ಕುಸಾವಿರಕೋಟಿ ಯೋಜನ ಪ್ರಮಾಣು.

ಈ ಭೂಮಿಯ ಮೇಲಿನ ಈ ಪರ್ವತಗಳ ಸ್ವರೂಪವನ್ನು ಅವುಗಳು ಅಡಗಿರುವ ವಿಶೇಷತೆಗಳನ್ನು ಈ ವಚನದಲ್ಲಿ ಚರ್ಚಿಸಿದ್ದಾರೆ. ಇದನ್ನು ಕೂಡ ಒಂದು ನಕ್ಷೆಯ ಮೂಲಕ ಸುಲಭವಾಗಿ ತಿಳಿಯಬಹುದು.



ಆ ಮಹಾಮೇರುವಿನ ಪೂರ್ವದಿಕ್ಕಿನಲ್ಲಿ ಮಂದರಪರ್ವತವಿಹುದು.
ಅಲ್ಲಿಹ ವೃಕ್ಷ ಕದಂಬವೃಕ್ಷ.
ಆ ಮಹಾಮೇರುವಿನ ದಕ್ಷಿಣದಿಕ್ಕಿನಲ್ಲಿ ಗಂಧಮಾದನಪರ್ವತವಿಹುದು.
ಅಲ್ಲಿಹ ವೃಕ್ಷ ಜಂಬೂವೃಕ್ಷ.
ಆ ಮಹಾಮೇರುವಿನ ನೈಋತ್ಯದಿಕ್ಕಿನಲ್ಲಿ ನೀಲಗಿರಿಪರ್ವತವಿಹುದು.
ಅಲ್ಲಿಹ ವೃಕ್ಷ ಭೂದಳವೃಕ್ಷ.
ಆ ಮಹಾಮೇರುವಿನ ಪಶ್ಚಿಮದಿಕ್ಕಿನಲ್ಲಿ ಕಾಶೀಪರ್ವತವಿಹುದು.
ಅಲ್ಲಿಹ ವೃಕ್ಷ ಬಿಲ್ವದ ವೃಕ್ಷ.
ಆ ಮಹಾಮೇರುವಿನ ವಾಯುವ್ಯದಿಕ್ಕಿನಲ್ಲಿ ನೀಲಪರ್ವತವಿಹುದು.
ಅಲ್ಲಿಹ ವೃಕ್ಷ ಬ್ರಹ್ಮವೃಕ್ಷ.
ಆ ಮಹಾಮೇರುವಿನ ಉತ್ತರದಿಕ್ಕಿನಲ್ಲಿ ಮಧುರಾದ್ರಿಪರ್ವತವಿಹುದು.
ಅಲ್ಲಿಹ ವೃಕ್ಷ ವಟವೃಕ್ಷ.
ಆ ಮಹಾಮೇರುವಿನ ಈಶಾನ್ಯದಿಕ್ಕಿನಲ್ಲಿ ಕಪಿಲ ಮಹಾಪರ್ವತವಿಹುದು.
ಅಲ್ಲಿಹ ವೃಕ್ಷ ಶಾಕಾಫಲವೃಕ್ಷ.

ಈ ಎಲ್ಲಾ ಚಿಂತನೆಗಳು ಮುಂದಿನ ಪುರಾಣದ ಹಲವು ಅಂಶಗಳನ್ನು ಮುಂದುವರೆಸುತ್ತವೆ. ಈ ಭೂಮಿಯ ಮೇಲೆ ರುದ್ರ (ಶಿವ)ನ ಸ್ಥಾನ, ಇತರ ದೇವತೆಗಳ ಚಿತ್ರಣವನ್ನು ಅವುಗಳ ಆವಾಸ ಸ್ಥಾನ ಎಲ್ಲವನ್ನೂ ಇಲ್ಲಿ ವಿವರಿಸಲಾಗಿದೆ. ಇಲ್ಲಿ ಬಳಸುವ ಸಪ್ತ ಸಂಕೇತ(ಏಳು) ಬೆಟ್ಟಗಳ ಸಾಲು, ಲವಣ ಸಮುದ್ರ ಈ ಎಲ್ಲಾ ವೈಜ್ಞಾನಿಕ ಅಂಶಗಳು ಇಡೀ ವಚನವನ್ನು ವ್ಯಾಪಿಸಿವೆ. ಈ ಬಾಲಸಂಗಯ್ಯ ಎಂಬ ಹೆಸರಿನ ಅಥವಾ ಇನ್ನಿತರೆ ಹಲವು ನಾಮಾಂಕಿತ ಶರಣರು ರಚಿಸಿರುವ ಸಕಲಾಗಮ ಶಿಖಾಮಣಿ ಕೃತಿಯು ಒಂದು ವೈಜ್ಞಾನಿಕ ತಳಹದಿಯ ಮೇಲೆ ಕಟ್ಟಿದ ಶಾಸ್ತ್ರಕೃತಿ ಎನ್ನಬಹುದು. ಇದನ್ನು ಕುರಿತು ವೀರಣ್ಣ ರಾಜೂರ ಅವರ ಪ್ರಸ್ತಾವನೆಯ ನುಡಿಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಸಕಲಾಗಮ ಶಿಖಾಮಣಿ ಒಂದು ಶುದ್ಧ ತಾತ್ವಿಕ ಶಾಸ್ತ್ರಕೃತಿ, ಚೆನ್ನಬಸವಾದಿಗಳು ಹೇಳಿದ ವೀರಶೈವ ತತ್ವವನ್ನು ಪ್ರತಿಪಾದಿಸುವುದೇ ಇದರ ಮುಖ್ಯ ಉದ್ದೇಶ. ಆದರೆ ಇಲ್ಲಿ ಭಕ್ತಾದಿ ಐಕ್ಯಾಂತ ಷಟ್‌ಸ್ಥಲಗಳಲ್ಲಿ ವಚನಗಳನ್ನು ವಿಂಗಡಿಸಿ ವಿಷಯ ವಿವೇಚನೆಗೆ ತೊಡಗದೆ, ಒಂದೊಂದು ತಾತ್ವಿಕ ವಿಷಯಗಳನ್ನು ಕ್ರಮವಾಗಿ ಹೇಳುತ್ತ ಸಾಗಲಾಗಿದೆ. ಕೃತಿಯು ಸೃಷ್ಟಿಯ ವಿವರ, ಇನ್ನೂರ ಇಪ್ಪತ್ನಾಲ್ಕು ಭುವನಗಳ ವಿಸ್ತೀರ್ಣ, ಅಖಂಡ ಮಹಾಮೂಲಸ್ವಾಮಿಯ ರೂಪ–ಲಾವಣ್ಯ–ಸೌಂದರ್ಯ–ಅಂಗ–ಪ್ರತ್ಯಂಗ–ಸ್ವರೂಪ–ಸ್ವಭಾವಗಳ ವರ್ಣನೆಗಳಿಂದ ಆರಂಭವಾಗಿ, ಮುಂದೆ ಪಿಂಡೋತ್ಪತ್ತಿ, ಪಿಂಡಜ್ಞಾನ, ಸಂಸಾರಹೇಯ, ಮಾಯಾ ವಿಡಂಬನ, ಗುರುಕರುಣ, ಲಿಂಗಧಾರಣ, ವಿಭೂತಿ, ರುದ್ರಾಕ್ಷಿ, ಲಿಂಗಧಾರಣ ಮಹಾತ್ಮ ಮತ್ತು ಪಂಚಾಕ್ಷರಿಯಸ್ಥಲ ಎಂಬ ಸ್ಥಲಗಳಲ್ಲಿ ನಡೆದು, ಸಕಲ ತತ್ವಗಳ ಉತ್ಪತ್ತಿ–ನೆಲೆ–ಪರಿಣಾಮ–ನಿವೃತ್ತಿಗಳನ್ನು ತಿಳಿಸುತ್ತ ಐಕ್ಯದತ್ತ ಸಾಗುತ್ತದೆ. ಈ ತತ್ವವಿವರಣೆಯನ್ನು ಬೇರೆ ಬೇರೆ ಆಗಮಗಳ ಮೂಲಕ ಶಿವನು ಪಾರ್ವತಿಗೆ ತಿಳಿಸಿದಂತೆಯೂ, ಅದನ್ನೇ ಸದ್ಗುರುಸ್ವಾಮಿ ಶಿಷ್ಯನಿಗೆ ಬೋಧಿಸಿದಂತೆಯೂ ಹೇಳಲಾಗಿದೆ. ಅಲ್ಲಲ್ಲಿ ನಿಂತು ಶಿಷ್ಯ ತನಗರಿಯದ ವಿಷಯವನ್ನು ಕುರಿತು ಪ್ರಶ್ನಿಸುತ್ತಾನೆ, ಗುರು ಅದಕ್ಕೆ ಉತ್ತರ ಹೇಳುತ್ತ ಸಾಗುತ್ತಾನೆ. ಹೀಗೆ ಗುರುವಿನ ಮುಖಾಂತರ ಎಲ್ಲ ತತ್ವಗಳನ್ನು ತಿಳಿದುಕೊಂಡ ಶಿಷ್ಯ ಕೊನೆಗೆ ನಿರ್ವಾಣ ಪದವಿಯನ್ನು ಪಡೆಯುತ್ತಾನೆ. ಇಲ್ಲಿ ಅಳವಟ್ಟ ಒಟ್ಟು ವಿಷಯಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು:

ಇನ್ನೂರ ಇಪ್ಪತ್ನಾಲ್ಕು ಭುವನಂಗಳು–ಭುವನಾಧಿಪತಿಗಳು–ಭುವನಂಗಳ ವಿಸ್ತೀರ್ಣ, ಅಖಂಡ ಮೂಲಸ್ವಾಮಿಯ ರೂಪು–ಲಾವಣ್ಯ–ಸೌಂದಯ್ಯ–ಅಂಗ–ಪ್ರತ್ಯಂಗ ಸ್ವರೂಪ–ಸ್ವಭಾವಗಳ ವರ್ಣನೆ, ನಿರಂಜನಾತೀತಪ್ರಣವ ಮೊದಲಾಗಿ ಬ್ರಹ್ಮಕಡೆಯಾಗಿ ಸೃಷ್ಟಿಮಾರ್ಗದ ವಿವರ, ಲಿಂಗೋತ್ಪತ್ತಿ, ಲಿಂಗಗರ್ಭದಲ್ಲಿ ತತ್ವಂಗಳುತ್ಪತ್ತಿ, ವಿಶ್ವಾಧಿಕ ಮಹಾರುದ್ರನುತ್ಪತ್ತಿ, ಬ್ರಹ್ಮಾಂಡ ಕಪಾಲದೊಳಗಣ ಸೃಷ್ಟಿಯ ವಿಸ್ತೀರ್ಣ, ಪಂಚಭೂತಬ್ರಹ್ಮಾಂಡ ಕಪಾಲದುತ್ಪತ್ತಿ, ಅದರಲ್ಲಿ ಚತುರ್ದಶ ಭುವನ–ಸಪ್ತಸಮುದ್ರ–ಸಪ್ತದ್ವೀಪ–ಸಪ್ತಕುಲಪರ್ವತ–ಸಮಸ್ತ ಗೃಹರಾಶಿ ತಾರಾಪಥಂಗಳಿಹ ಕ್ರಮ, ಪಿಂಡದ ಉತ್ಪತ್ತಿ, ಶಿಶುಗಳ ಭೇದ, ಸ್ವರಭೇದ, ಕಾಲಭೇದ, ವರ್ಣಭೇದ, ಆಯುಷ್ಯಭೇದ, ಪಿಂಡ ನವಮಾಸ ಬೆಳೆಯುವ ಕ್ರಮ, ಪಿಂಡಕ್ಕೆ ಬ್ರಹ್ಮಾಂಡದ ಸಂಬಂಧ. ನಾಡಿಧಾರಣೆ, ವಾಯುಧಾರಣೆ, ಅಗ್ನಿಧಾರಣೆ, ಅಮೃತಧಾರಣೆ, ಆಧಾರಧಾರಣೆ, ನಿರಾಧಾರಧಾರಣೆ, ಗುರುದರ್ಶನ, ಶಿಷ್ಯನ ಪ್ರಲಾಪ, ಗುರುಸ್ತೋತ್ರ, ಶಿಷ್ಯನ ಪೂರ್ವಾಪರ ಸಂಬಂಧ ವಿವರ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಮಾಯಾವಿಡಂಬನಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಲಿಂಗಧಾರಣ ಮಹಾತ್ಮಯ ಸ್ಥಲ, ಪಂಚಾಕ್ಷರಿಯ ಸ್ಥಲ, ಇಷ್ಟ–ಪ್ರಾಣ–ಭಾವಲಿಂಗದ ಭೇದ, ಅಂಗತ್ರಯಭೇದ, ಪೂಜೆಯಕ್ರಮ, ಷಡುಸ್ಥಲ ಬ್ರಹ್ಮಿಗಳು, ಅರ್ಪಿತಾವಧಾನಭೇದ, ಗುರುಲಿಂಗ–ಶಿವಲಿಂಗ–ಜಂಗಮಲಿಂಗದ ಭೇದ, ತ್ರಿವಿಧಲಿಂಗಪೂಜೆಯಕ್ರಮ, – ಅಷ್ಟಾಂಗಯೋಗದ ಭೇದ, ತ್ರಿವಿಧಪ್ರಸಾದ ಭೇದ, ತ್ರಿವಿಧೋದಕ ಕ್ರಮ, ಷಡುಸ್ಥಲಂಗಳ ಭೇದ, ವಿವಿಧ ಪ್ರಣವಂಗಳ ತ್ಯಾಜ್ಯ ಉತ್ಪತ್ತಿ ಭೇದ, ದಶಚಕ್ರದ ಉತ್ಪತ್ತಿ–ನ್ಯಾಸ–ನಿವೃತ್ತಿ, ನವಪದ್ಮದ ಉತ್ಪತ್ತಿ–ನೆಲೆ–ನಿವೃತ್ತಿ: ಅಕಾರ ಉಕಾರ ಮಕಾರದುತ್ಪತ್ತಿ, – ಓಂಕಾರದುತ್ಪತ್ತಿ, ಅತಿಸೂಕ್ಷ್ಮಪಂಚಾಕ್ಷರಿಯ ಉತ್ಪತ್ತಿ–ನೆಲೆ–ನಿವೃತ್ತಿ–ಕಾಂತಿ; ಚಿದಾತ್ಮ ಪರಮಾತ್ಮನುತ್ಪತ್ತಿ–ನೆಲೆ–ನಿವೃತ್ತಿ; ಏಕಾಕ್ಷರ, ತ್ರಯಾಕ್ಷರ, ಸಹಸ್ರಾಕ್ಷರದ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿಧಮುಖಂಗಳ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿದಭೂತ, ಷಡ್ವಿಧಲಿಂಗ, ಷಡ್ವಿಧಕಲೆ, ಷಡ್ವಿಧಸಾದಾಖ್ಯ, ಷಡ್ವಿದ ಹಸ್ತಗಳ ಉತ್ಪತ್ತಿ–ನೆಲೆ–ನಿವೃತ್ತಿ; ನವವಿಧಶಕ್ತಿ, ನವ ಅಧಿದೇವತೆಗಳ ಉತ್ಪತ್ತಿ–ನೆಲೆ–ನಿವೃತ್ತಿ; ಅಷ್ಟನಾದದ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿದ ಭಕ್ತಿ, ಷಡ್ವಿದ ಪರಿಣಾಮದ ಉತ್ಪತ್ತಿ–ನೆಲೆ–ನಿವೃತ್ತಿ; – ಚತುರ್ವೇದದುತ್ಪತ್ತಿ–ನೆಲೆ–ನಿವೃತ್ತಿ; ಆಜಪೆ, ಗಾಯತ್ರಿಯ ಉತ್ಪತಿ–ನೆಲೆ–ನಿವೃತ್ತಿ; ಷಡ್ವಿದ ಚಕ್ರಾರ್ಪಣದ ಭೇದ, ಮಿಶ್ರಾರ್ಪಣ ಷಡುಸ್ಥಲಭೇದ, ಇಷ್ಟ–ಪ್ರಾಣ–ಭಾವಲಿಂಗದ ಭೇದ, ಆತ್ಮನುತ್ಪತ್ತಿ–ನೆಲೆ–ನಿವೃತ್ತಿ: ಪಂಚಭೂತಗಳ ಉತ್ಪತ್ತಿ–ನೆಲೆ–ನಿವೃತ್ತಿ; ಷಡುಸ್ಥಲಗಳ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿದ ಅರ್ಪಿತಾವಧಾನದ ಭೇದ: ನಿರಾಳದಶಚಕ್ರಂಗಳ ಭೇದ, ನಿರಾಮಯ ಷಟ್ ಸ್ಥಲದ ಭೇದ, ನಿರಂಜನ ದಶಚಕ್ರಂಗಳ ಭೇದ, ನಿರಾಮಯಾತೀತ ಷಟ್‌ಸ್ಥಲದ ಭೇದ, ಷಟ್‌ಸ್ಥಲ ಬ್ರಹ್ಮದುತ್ಪತ್ಯ, ಅದರಲ್ಲಿ ಮೂವತ್ತಾರು ತತ್ವಂಗಳುತ್ಪತ್ಯ, ಷಡುಶಕ್ತಿಗಳುತ್ಪತ್ಯ, ಷಡಂಗಗಳುತ್ಪತ್ಯ, ಶಿವಶಕ್ತಿಗಳುತ್ಪತ್ಯ; ದಶ ಅವಸ್ಥೆಗಳ ದರ್ಶನದ ಭೇದ; ಪಂಚಮಲಗಳ ದರ್ಶನ ; ಷಡತ್ವದ ಉತ್ಪತ್ಯ ವರ್ತನ : ತಾಮಸ ನಿರಸನವಮಾಡಿ ನುಡಿದ ವಚನದ ದರ್ಶನ ಭೇದ; ತತ್ತ್ವಮಸಿ ಪದಗಳ ಭೇದ, ಅವು ಓಂಕಾರದಲ್ಲಿ ಅಡಗಿಹ ಭೇದ; ಅವು ಏಕವಾಗಿ ಷಟ್‌ಸ್ಥಲಬ್ರಹ್ಮವಾದ ಈ ಭೇದ: ವಚನಾನುಭಾವದ ಭೇದ – ಇವುಗಳನ್ನು ಇಲ್ಲಿ ಸಕ್ರಮವಾಗಿ ವಿವರಿಸಲಾಗಿದೆ.

ತತ್ವವಿವೇಚನೆಯೇ ಈ ಕೃತಿಯ ಮುಖ್ಯ ಗುರಿಯಾಗಿರುವುದರಿಂದ ಭಾವಾಭಿವ್ಯಕ್ತಿಗಾಗಲಿ, ಕಾವ್ಯಾಂಶಕ್ಕಾಗಲಿ ಇಲ್ಲಿ ಎಡೆಯಿಲ್ಲ. ಪಿಂಡದ ಉತ್ಪತ್ತಿಯನ್ನು ಹೇಳುವಲ್ಲಿ, ಮಗುವಿನ ಜನನಪೂರ್ವದ ಬೆಳವಣಿಗೆಯನ್ನು ತಿಳಿಸುವಲ್ಲಿ, ಅದರ ಬಣ್ಣ, ಆಯುಷ್ಯ ಇತ್ಯಾದಿಗಳನ್ನು ವಿವರಿಸುವಲ್ಲಿ ವೈಜ್ಞಾನಿಕ ದೃಷ್ಟಿ ಒಡೆದು ಕಾಣುತ್ತದೆ.

ಬಾಲಸಂಗಯ್ಯನ ಸಕಲಾಗಮ ಶಿಖಾಮಣಿ ಕೃತಿಯು ವಚನ ಸಾಹಿತ್ಯದಲ್ಲಿ ನಿರೂಪಿಸಿದ ವೈಜ್ಞಾನಿಕ ಚಿಂತನೆಗಳನ್ನು ಈ ಮೇಲ್ಕಂಡ ಹಲವು ಒಳಹುಗಳೊಂದಿಗೆ ಅರಿಯುತ್ತಾ ಸಾಗಬಹುದು. ನಮ್ಮ ವಚನಕಾರರು ಪ್ರಕೃತಿಯನ್ನು ವಿಜ್ಞಾನವೆಂದರು. ಶಾಸ್ತ್ರ ಸಾಹಿತ್ಯವನ್ನು ಚೆನ್ನಾಗಿ ಅರಿತು ಅಗತ್ಯವಿದ್ದಲ್ಲಿ ನಿಯಮದಂತೆಯೇ ನಿರೂಪಿಸಿದರೂ ಕೂಡ ಅದು ಜನಸಾಮಾನ್ಯರಿಗೆ ಹೇಳಿದ ನುಡಿಯಲ್ಲ. ಅಂದಿನ ಪಂಡಿತರಲ್ಲಿ ಶಾಸ್ತ್ರ ಸಾಹಿತ್ಯಗಳು ವೈಜ್ಞಾನಿಕ ತಳಹದಿಯಲ್ಲಿ ಹೇಗೆ ಮೂಡಬೇಕೆಂಬ ಚಿಂತನೆಗಳನ್ನು ಮೂಡಿಸಿದರು ಅದುವೆ

ವಚನ ವಿಜ್ಞಾನ. ಇದೊಂದು ಸರಳ, ನಮ್ಮ ಬದುಕಿನ ಸಾಧ್ಯತೆ. ಈ ವೈಜ್ಞಾನಿಕ ಅಂಶಗಳು ಸೃಷ್ಟಿಯ ಕುರಿತು ಮೂಡಿಸಿದ ಕುತೂಹಲಗಳು ಹಲವು ಬಗೆಗಳಲ್ಲಿವೆ. ಅವುಗಳಲ್ಲಿ ಈ ಭೂಮಿಯ ಸೃಷ್ಟಿ ಕುರಿತ ಜಿಜ್ಞಾಸೆಯೂ ಮುಖ್ಯವಾಗಿದೆ.

ಉಸುರಿನ ಪರಿಮಳಕ್ಕೆ ಹೆಚ್ಚು ಮೌಲ್ಯ ನೀಡಿದ ವಚನಕಾರರು ಜೀವ ಸೃಷ್ಟಿಯ ಜೊತೆಗೆ, ವಿಚಾರಗಳ ಸೃಷ್ಟಿಯನ್ನು ಕೂಡ ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಕಾರಣದಿಂದಲೇ ವಿಶ್ವಪರಿಕಲ್ಪನೆಯನ್ನು ಲಿಂಗಪರಿಕಲ್ಪನೆಯಾಗಿ ನಿರೂಪಿಸಿದರು. ಅದನ್ನು ಕಾಣಲು ಶರಣತನಬೇಕೆಂದು ಸಾರಿದರು. ಈ ಶರಣತನ ಪ್ರಕೃತಿಯಂತೆ ಸಹಜವಾದುದು. ಅದು ಮೌಢ್ಯದಲ್ಲಿ ನಿರ್ಮಿಸಿದ ವಿಚಾರವಲ್ಲ. ವೈಜ್ಞಾನಿಕವಾಗಿ ನಿರೂಪಿಸಿದ ಸರಳ ಪ್ರಕೃತಿಯ ಬಾಳ್ವೆ. ಹೀಗೆ ಪ್ರತಿ ವಚನವೂ ಕೂಡ ಸೃಷ್ಟಿ ಹಾಗೂ ವಿಜ್ಞಾನವನ್ನು ಮೌಲ್ಯಯುತವಾಗಿ ಬೆಸುಗೆಮಾಡಿಕೊಂಡ ನುಡಿಸಾರಗಳು.

ಫಲಿತಗಳು

ವಚನ ಸಾಹಿತ್ಯವು ವೈಜ್ಞಾನಿಕ ತಳಹದಿಯ ಮೇಲೆ ನಿರೂಪಿತವಾಗಿದೆ. ಅಂತಹ ವಚನಗಳಲ್ಲಿ ಬಾಲಸಂಗಯ್ಯನ ವಚನವು ನಿರ್ವಚಿಸುವ ಸೃಷ್ಟಿ ಕುರಿತ ವೈಜ್ಞಾನಿಕ ಚಿಂತನೆಗಳನ್ನು ಗ್ರಹಿಸಲಾಗಿದೆ.

೧. ವಚನಕಾರರು ಜನಪದರು ಹಾಗೂ ಶಾಸ್ತ್ರ ಸಾಹಿತ್ಯವನ್ನು ಅಷ್ಟೇ ಆಳವಾಗಿ ಅಧ್ಯಯನಮಾಡಿದವರು. ಸೃಷ್ಟಿ ಕುರಿತು ವಿಶೇಷ ಆಸಕ್ತಿ ಇದ್ದ ಇವರ ಜ್ಞಾನವು ಭೂಮಿಯನ್ನು ಒಂದು ಗ್ರಹವಾಗಿ ಪರಿಭಾವಿಸಿದವರು.
೨. ಭೂಮಿ ಹಾಗೂ ಇತರ ಕಾಯಗಳನ್ನು ಒಳಗೊಂಡ ಬ್ರಹ್ಮಾಂಡದ ಅಳತೆಯನ್ನೇ ನಿರ್ಧರಿಸಿದ್ದಾರೆ.
೩. ಬಾಲಸಂಗಯ್ಯ ಕುರಿತು ಅಷ್ಟೇನು ವಿವರಗಳು ಲಭ್ಯವಿಲ್ಲದಿದ್ದರೂ, ಆತನ ಹೆಸರಿನಲ್ಲಿ ಅಥವಾ ಇತರ ಹೆಸರುಗಳಲ್ಲಿ ರಚನೆಯಾಗಿರುವ ಎಲ್ಲಾ ವಚನಗಳು ವೈಜ್ಞಾನಿಕ ಚಿಂತನೆಗಳನ್ನೇ ಚರ್ಚಿಸಿರುತ್ತವೆ.
೪. ಭೂಮಿಯ ಸೃಷ್ಟಿಯನ್ನು ಬ್ರಹ್ಮಾಂಡದೊಳಗೆ ನಿರ್ವಚಿಸುತ್ತಾ ಇಂದಿನ ಮಿಲ್ಕಿವೇ ಅಧ್ಯಯನಗಳು ೧೨ನೇ ಶತಮಾನದಲ್ಲಿ ಚರ್ಚಿತವಾಗಿರುವುದನ್ನು ಗಮನಿಸಿದರೆ, ನಮ್ಮ ವೈಜ್ಞಾನಿಕ ಅನ್ವೇಷಣೆಗಳ ಇತಿಹಾಸವು ಬಹಳ ಹಿಂದಕ್ಕೂ ಸಾಗಬಹುದು.
೫. ಭೂಮಿಯ ಉದಯ, ರಚನೆ, ಪರಿಸರ ಹಾಗೂ ಭೂಮಿಯೊಳಗಿನ ಪರಿಕಲ್ಪನೆಗಳನ್ನು ಅಳತೆ – ಪ್ರಮಾಣದಂತೆ ಸೂಚಿಸಿರುವುದು ಇಲ್ಲಿನ ವಿಶೇಷ.
೬. ಶಿವನ ಪರಿಕಲ್ಪನೆಯನ್ನು ದೈವತ್ವದ ಹಿನ್ನಲೆಯಲ್ಲಿ ನಿರೂಪಿಸಿದ್ದರೂ ಕೂಡ ಅದೊಂದು ಲಿಂಗ ಸ್ವರೂಪಿಯಾಗಿ ಪರಿಭಾವಿಸಿದರೆ, ನಮ್ಮ ಮನಸ್ಸಿನ ಪರಿಭಾವಗಳ ಸೃಷ್ಟಿಯ ಉಲ್ಲೇಖವನ್ನು ಈ ವಚನವು ವಿಸ್ತಾರವಾಗಿ ಚರ್ಚಿಸಿದೆ.
೭. ಇಡೀ ವಚನ ಸಾಹಿತ್ಯದಲ್ಲಿಯೇ ಸೃಷ್ಟಿಯನ್ನು ವೈಜ್ಞಾನಿಕ ನಿರ್ವಚಿಸುವ ಬಗೆಗಳಲ್ಲಿ ಬಾಲಸಂಗಯ್ಯನ ವಚನಗಳನ್ನು ಬಿಟ್ಟರೆ ಇಷ್ಟು ಸುದೀರ್ಘವಾದ ಬೇರೆ ವಚನಗಳು ದೊರೆತಿರಲಾರವು. ಇಲ್ಲಿ ವೈಜ್ಞಾನಿಕವಾಗಿ ಸೃಷ್ಟಿಯ ಶಕ್ತಿಯನ್ನು ವಿವರಿಸಲಾಗಿದೆ.
೮. ಇಂದಿನ ವೈಜ್ಞಾನಿಕ ಅಧ್ಯಯನಗಳಿಗೆ ಇಲ್ಲಿ ಸಾಕಷ್ಟು ವಿಚಾರಗಳು ಲಭಿಸಬಹುದು. ಅದರಿಂದ ಹೊಸ ಮಾದರಿಯ ಅನ್ವೇಷಣೆಗಳೂ ಜರುಗಬಹುದು.
೯. ಒಂದು ವಚನವು ವಿಚಾರವಾಗಿ, ಅನ್ವೇಷಣೆಯ ಫಲಿತವಾಗಿ ಸಂಖ್ಯಾಶಾಸ್ತ್ರದಲ್ಲಿ ನಿರೂಪಿತವಾಗುವುದನ್ನು ಚರ್ಚಿಸಬಹುದು.
೧೦. ಲೌಕಿಕ – ಅಲೌಕಿಕ ಎಲ್ಲೆಗಳನ್ನು ಮೀರಿ, ವೈಜ್ಞಾನಿಕ ಅನ್ವೇಷಣೆಗಳನ್ನು ನಮ್ಮ ಆಲೋಚನೆಗಳಿಗೆ ಸರಳವಾಗಿ ತಿಳಿಯುವಂತೆ ನಿರೂಪಿಸಿದ ಸಿದ್ಧಾಂತವಾಗಿ ಈ ವಚನವನ್ನು ಸ್ವೀಕರಿಸಬಹುದು.

ಒಟ್ಟಾರೆಯಾಗಿ ವಚನ ಸಾಹಿತ್ಯವು ವೈಜ್ಞಾನಿಕ ಅಂಶಗಳನ್ನು ನಿರೂಪಿಸುವ ವಿಧಾನವು ವಿಶೇಷವಾಗಿದೆ. ಮುಖ್ಯವಾಗಿ ನಮ್ಮ ಮೂಲ ವಿಷಯವಾದ ಸೃಷ್ಟಿ ಕುರಿತು ನಿರ್ವಚಿಸುವ ಹೊಸ ಅರ್ಥಗಳು ಈ ಅಧ್ಯಯನದಲ್ಲಿ ಲಭಿಸುತ್ತವೆ. ಇನ್ನೂ ಹಲವು ಅಧ್ಯಯನಗಳಿಗೆ ಇಲ್ಲಿ ಸೂಕ್ತ ವಿಚಾರಗಳು ಲಭಿಸಬಹುದು.

ಅಧ್ಯಯನ ಕೃತಿಗಳು :

೧. ಬಸವೋತ್ತರ ಯುಗದ ವಚನ ಮಹಾಸಂಪುಟ., ೨೦೧೬., (ಪ್ರ.ಸಂ.) ಎಂ.ಎಂ. ಕಲಬುರ್ಗಿ., ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ.
೨. ವಚನ ಸಾಹಿತ್ಯ ಸಂಗ್ರಹ., ಸಂ.ಶಿ. ಭೂಸನೂರು ಮಠ., ೧೯೬೫., ಮೈಸೂರು ಸರ್ಕಾರ – ವಿದ್ಯಾಭ್ಯಾಸ ಇಲಾಖೆ, ಬೆಂಗಳೂರು.

ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ

ಡಾ. ರವೀಶ ಎಚ್. ವಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು ಸ್ವಾಯತ್ತ, ಬೆಂಗಳೂರು

ಇಂಗ್ಲೀಷ್‌ನ ಸೈನ್ಸ್ ಎನ್ನುವ ಪದಕ್ಕೆ ಸಂವಾದಿಯಾಗಿ ವಿಜ್ಞಾನ ಎಂಬ ಪದವನ್ನು ಬಳಸಿಕೊಳ್ಳುತ್ತಿದ್ದೇವೆ. ಬೇರೊಂದು ಭಾಷೆಯಿಂದ ನಮ್ಮ ಭಾಷೆಗೆ ಯಾವುದಾದರು ಪದವನ್ನು ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ಆ ಪದವನ್ನು ಯಥಾವತ್ತಾಗಿ ಬಳಸಿಕೊಳ್ಳುವುದು ಅಥವಾ ನಮ್ಮಲ್ಲಿ ಈಗಲೇ ಇರುವ ಪದವನ್ನು ಆ ಪದಕ್ಕೆ ಸಂವಾದಿಯಾಗಿ ಟಂಕಿಸುವುದು ಅಥವಾ ಬೇರೊಂದು ಹೊಸ ಪದವನ್ನು ರೂಪಿಸಿಕೊಳ್ಳುವುದು ನಡೆಯುತ್ತಿದೆ. ಸೈನ್ಸ್ ಗೆ ಸಂಬಂಧಪಟ್ಟ ಅನೇಕ ಪದಗಳನ್ನು ಇಂದು ಮೂಲ ಭಾಷೆಯ ರೂಪದಲ್ಲೇ ಬಳಸಿಕೊಳ್ಳುತ್ತಿದ್ದೇವೆ. ಹಾಗೆಯೇ ಮೂಲ ಪದಕ್ಕೆ ಸಂವಾದಿಯಾಗಿ ಈಗಾಗಲೇ ನಮ್ಮಲ್ಲಿರುವ ಪದವನ್ನೋ ಅಥವಾ ಆ ಪದದ ಸಮೀಪ ಅರ್ಥ ಕೊಡುವ ಪದವೊಂದನ್ನೋ ಅಲ್ಪಸಲ್ಪ ಬದಲಾವಣೆ ಮಾಡಿ ಬಳಸಿಕೊಳ್ಳುತ್ತಿರುವುದು ರೂಢಿಯಲ್ಲಿದೆ. ಉದಾ. ಇಂಗ್ಲಿಷ್‌ನ Culture ಎನ್ನುವ ಪದಕ್ಕೆ ಸಂವಾದಿಯಾಗಿ ನಾವು 'ಸಂಸ್ಕೃ ತಿ' ಎನ್ನುವ ಪದವನ್ನು ಬಳಸಿಕೊಳ್ಳುತ್ತಿದ್ದೇವೆ. ಸಂಸ್ಕೃತಿ ಎನ್ನುವ ಪದ ನಮ್ಮಲ್ಲಿರಲಿಲ್ಲ ಆದರೆ ನಮ್ಮಲ್ಲಿ ಸಂಸ್ಕಾರ ಎನ್ನುವ ಪದವಿತ್ತು. ಸಂಸ್ಕಾರ ಎಂದರೆ ಪವಿತ್ರ ಆಚಾರ–ವಿಚಾರಗಳು ತ್ಯಾಗಗಳು ಮತ್ತು ಧಾರ್ಮಿಕ ಕ್ರಿಯಾವಿಧಿಗಳ ಒಂದು ಸರಣಿ ಮತ್ತು ಮಾನವ ಜೀವನದ ವಿವಿಧ ಘಟ್ಟಗಳಲ್ಲಿ ತಿಳಿಸುವ ಪದವಾಗಿದೆ. ಅದನ್ನು ಸಂಸ್ಕೃತಿ ಎಂದು ಬದಲಿಸಿಕೊಂಡು culture ಎಂಬ ಪದಕ್ಕೆ ಸಂವಾದಿಯಾಗಿ ಬಳಸುವುದು ರೂಢಿಗೆ ಬಂದಿದೆ. ಈಗ ಸಂಸ್ಕಾರ ಮತ್ತು ಸಂಸ್ಕೃತಿ ಎರಡು ಪದಗಳು ತುಸು ಭಿನ್ನ ಅರ್ಥದಲ್ಲಿ ಬಳಕೆಯಲ್ಲಿವೆ. ಹಾಗೆಯೇ city, citizen ಎಂಬ ಪದಗಳನ್ನೇ ನೋಡುವುದಾದರೆ city ಎನ್ನುವ ಪದಕ್ಕೆ ಕನ್ನಡದಲ್ಲಿ ನಗರ ಎಂಬುದಿತ್ತು citizen ಎಂಬುದಕ್ಕೆ ನಾಗರಿಕ ಎಂದು ಬಳಸುವುದು ಅಭ್ಯಾಸಕ್ಕೆ ಬಂತು ಹಾಗೆಯೇ ಸೈನ್ಸ್ ಎನ್ನುವ ಪದಕ್ಕೆ ಸಂಪಾದಿಯಾಗಿ ವೇದಗಳಲ್ಲೇ ಬಳಕೆಯಿದ್ದ ವಿಜ್ಞಾನ ಎಂಬ ಪದವನ್ನು ಸರಿಯಾಗಿ ಬಳಸುತ್ತಿದ್ದೇವೆ. ವಿಜ್ಞಾನ ಎಂದರೆ ಬ್ರಹ್ಮಾಂಡ ಜ್ಞಾನದಲ್ಲಿನ ಒಂದು ಭಾಗ, cience is also knowledge, ಆದರೆ which kind of knowledge? - Science is the study of the natural and social world through observation experimentation and evidence, ಎಂದು ವಿವರಣೆ ಇದೆ.

ಅದೇ ರೀತಿ ನಮ್ಮ 'ವಿಜ್ಞಾನ' ಎಂಬ ಪದ ವೇದ ಉಪನಿಷತ್ತುಗಳಲ್ಲಿ ವಿಶಾಲಾರ್ಥದಲ್ಲಿಯೇ ಬಳಕೆಯಾಗಿದೆ. ಇಂಗ್ಲಿಷ್ ನ ಸೈನ್ಸ್ ಎನ್ನುವ ಪದ ನಮ್ಮಲ್ಲಿಗೆ ಬಂದಾಗ ಅದು ಕೇವಲ ರಸಾಯನಶಾಸ್ತ್ರ, ಭೌತಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಹೀಗೆ ಕೇವಲ subjectಗೆ ಬಳಸುವ ಪದವಾಗಿ ಸೀಮಿತ ಅರ್ಥದಲ್ಲಿ ಬಳಕೆಯಾಗುತ್ತಿತ್ತು. ನಮ್ಮಲ್ಲಿ ಶಾಸ್ತ್ರ ಎನ್ನುವುದು ವಿಜ್ಞಾನ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಇಂತಹ subjectಗೆ ಸೀಮಿತವಾದ ವಿಜ್ಞಾನವನ್ನು ಕೇವಲ ವಿಜ್ಞಾನದಲ್ಲಿ ಆಸಕ್ತಿಯಿರುವವರು, ವಿಜ್ಞಾನವನ್ನು ಪಠ್ಯವಾಗಿ ಓದುವ ವಿದ್ಯಾರ್ಥಿಗಳು ಮಾತ್ರ ಓದುತ್ತಾರೆ. ಆದರೆ ವಿಜ್ಞಾನವನ್ನು ಜನಸಾಮಾನ್ಯರು ಓದುವಂತಾಗಬೇಕು. ಏಕೆಂದರೆ ಆಸಕ್ತಿ ಇಲ್ಲದವರಿಗೆ ವಿಜ್ಞಾನ ಅನ್ನೋದು ಶುಷ್ಕವಾಗಿ ಕಾಣುತ್ತದೆ. ಹಾಗೆ ನೋಡಿದರೆ ಕನ್ನಡದಲ್ಲಿ ೧೯ನೇ ಶತಮಾನದ ಪ್ರಾರಂಭದ ದಶಕಗಳು ವಿಜ್ಞಾನವನ್ನು ಕನ್ನಡದಲ್ಲಿ ವಿವರಿಸುವ ಪ್ರಯತ್ನಗಳು ವಿಪುಲವಾಗಿ ಕಂಡುಬಂದಿವೆ. ವಿಜ್ಞಾನ ಪ್ರಸಾರ ಮಾಡಲು ಅನೇಕ ವಿಜ್ಞಾನದ್ದೇ ಆದ ಪತ್ರಿಕೆಗಳು ಪ್ರಕಟಗೊಂಡಿವೆ. ಡಾ. ಶಿವರಾಮ ಕಾರಂತರು ವಿಜ್ಞಾನವನ್ನು ಸರಳ ಕನ್ನಡದಲ್ಲಿ ಮಕ್ಕಳಿಗೆ ಅರ್ಥವಾಗುವಂತೆ ಬರೆದರು. ವಿಜ್ಞಾನವನ್ನು ವಿಜ್ಞಾನದ ರೀತಿಯಲ್ಲೇ ಬರೆದರು. ರಾಜಶೇಖರ್ ಭೂಸನೂರಮಠ ಅವರು ಕಲ್ಪಿತ ಸಾಹಿತ್ಯದ ಮೂಲಕ ವಿಜ್ಞಾನವನ್ನು ಕಥೆ ಕಾದಂಬರಿಗಳ ಮೂಲಕ ರಚನೆ ಮಾಡಿದರು. ರಾಕ್ಷಸ ದ್ವೀಪ, ಅಟ್ಲಾಂಟಿಸ್, ಅತೀಂದ್ರಿಯ ಪ್ರಪಂಚ, ಯಂತ್ರ ಮಾನವ, ಮನ್ವಂತರ, ಮಾಯಾ, ಆಪರೇಷನ್ ಯು. ಎಫ್. ಓ, ನೌಕಘಾತ ಇನ್ನೂ ಮುಂತಾದ ವಿಜ್ಞಾನದ ಕೃತಿಗಳನ್ನು ರಚಿಸಿದರು. ನಂತರದ ದಿನಗಳಲ್ಲಿ ಅನೇಕರು ವಿಜ್ಞಾನದ ಕೃತಿಗಳನ್ನು ರಚಿಸಿದ್ದಾರೆ. ಇತ್ತೀಚಿಗಂತೂ ಕನ್ನಡದಲ್ಲಿ ವಿಜ್ಞಾನ ಕೃತಿಗಳ ಇತಿಹಾಸವೇ ನಿರ್ಮಾಣವಾಗಿದೆ.

ವಿಜ್ಞಾನವು ಜನಸಾಮಾನ್ಯರನ್ನು ತಲುಪಬೇಕಾದರೆ ಅಂತಹ ವಿಜ್ಞಾನ ಸಾಹಿತ್ಯ ಹೇಗಿರಬೇಕು ಎಂದರೆ ಕಥನ ಸ್ವರೂಪದಲ್ಲಿರಬೇಕು. ಈಗಾಗಲೇ ರಾಜಶೇಖರ ಭೂಸನೂರಮಠ ಮುಂತಾದವರು ಕಥೆ ಕಾದಂಬರಿಗಳ ಮೂಲಕ ವಿಜ್ಞಾನ ಸಾಹಿತ್ಯವನ್ನು ಬರೆದಿದ್ದಾರೆ. ಆದರೆ ಅವು ಕಲ್ಪಿತವಾದವುಗಳು. ಕನ್ನಡದಲ್ಲಿ ವಿಭಿನ್ನ ಶೈಲಿಯಲ್ಲಿ ವಿಜ್ಞಾನದ ಕೃತಿಗಳನ್ನು ರಚಿಸಿದವರೆಂದರೆ ಬಿ.ಜಿ.ಎಲ್ ಸ್ವಾಮಿಯವರು. ಇವರು ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಅಮೆರಿಕಾದಲ್ಲಿ ಇರ್ವಿಂಗ್ ಬೈಲಿಯೇ ಅವರ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ ಪದವಿ ಪಡೆದವರು. ಅವರು ಬೆಂಗಳೂರಿನಲ್ಲಿ ಓದುವ ಸಂದರ್ಭದಲ್ಲೇ ಬರೆದ ಕೆಲವು ಲೇಖನಗಳು 'ಕನ್ನಡ ನುಡಿ' ಪತ್ರಿಕೆಯಲ್ಲಿ ಪ್ರಕಟವಾದವು. ಅಲ್ಲಿಂದ ಬರವಣಿಗೆ ಆರಂಭವಾಗಿ ಅಮೆರಿಕಾದಲ್ಲಿ ನಾನು, ಪಂಚಕಳಶ ಗೋಪುರ, ತಮಿಳು ತಲೆಗಳ ನಡುವೆ ಈ ರೀತಿ ಬರೆಯುತ್ತಾ ಹೋದರು ಬಿ.ಜಿ.ಎಲ್ ಸ್ವಾಮಿ. ಆದರೆ ಡಿ.ವಿ.ಜಿ.ಯವರಿಗೆ ಬರವಣಿಗೆಯಿಂದ ಬಡತನ ನಿವಾರಣೆಯಾಗದು ಎಂಬುದು ಅವರಿಗೆ ಆ ಕಾಲದಲ್ಲಿ ಮನವರಿಕೆಯಾಗಿತ್ತು. ಮಗನಾದರು ತನ್ನಂತೆ ಬಡತನದ ಬವಣೆಗೆ ಗುರಿಯಾಗದಿರಲಿ ಎಂದು ಅವರಿಗೆ ಈ ರೀತಿ ಹೇಳಿದ್ದರಂತೆ ಅವರ ಮಾತುಗಳನ್ನು ಹಸಿರು ಹೊನ್ನು ಕೃತಿಯಲ್ಲಿ 'ಸ್ಮರಣೆ' ಎಂದು ಪ್ರಕಟಿಸಿದ್ದಾರೆ ಆ ಮಾತುಗಳು ಹೀಗಿವೆ...

"ನೀನು ಕನ್ನಡದಲ್ಲಿ ಬರೆಯುವುದು ಬೇಡ,
ಮನೆಗೊಬ್ಬನಿದ್ದೇನಲ್ಲ ನಾನು ಸಾಕು..."
ಎಂದು ಬುದ್ಧಿ ಮಾತು ಹೇಳುತ್ತಿದ್ದರೂ

ನನ್ನ ಬರವಣಿಗೆಯನ್ನು ಓದಿಯಾದ ಮೇಲೆ
ಹುರಿದುಂಬಿಸುವ ಮಾತುಗಳನ್ನಾಡಿ
"ಹಸುರು ಹೊನ್ನು" ಹಸ್ತಪ್ರತಿಯನ್ನು ಓದಿಸಿ ಕೇಳಿಯಾದ ಮೇಲೆ
ಕನ್ನಡದಲ್ಲಿ ಇಂಥ ಪುಸ್ತಕಗಳು ಬೇಕು" ಎಂದು ಹೇಳಿ

ಪುಸ್ತಕ ಅಚ್ಚಾಗುವುದರೊಳಗಾಗಿಯೇ ಕಣ್ಮುಚ್ಚಿದರಂತೆ ಡಿ.ವಿ.ಜಿಯವರೇ ಕನ್ನಡಕ್ಕೆ ಇಂತಹ ಪುಸ್ತಕಗಳು ಬೇಕು ಎಂದು ಪ್ರಶಂಸೆ ಪಡೆದ ಕೃತಿ "ಹಸುರು ಹೊನ್ನು" ಈ ಕೃತಿಯನ್ನು ಸಸ್ಯಶಾಸ್ತ್ರ ಅಭ್ಯಾಸ ಮಾಡುವ ವಿದ್ಯಾರ್ಥಿಗಳಲ್ಲದೆ ಕನ್ನಡಿಗರೆಲ್ಲರೂ ಓದಲೇ ಬೇಕಾದ ಕೃತಿ. ಅದೇ ರೀತಿ ಸಸ್ಯಶಾಸ್ತ್ರ ಕೇಂದ್ರಿತ ಅವರ ಸಾಕ್ಷಾತ್ಕಾರದ ದಾರಿಯಲ್ಲಿ, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ ಇನ್ನೂ ಮುಂತಾದವು ಓದುಗರನ್ನು ಆಕರ್ಷಿಸುತ್ತವೆ.

ಕನ್ನಡ ಸಾಹಿತ್ಯದಲ್ಲಿ ಮತ್ತೊಂದು ಧೈತ್ಯ ಪ್ರತಿಭೆ ಎಂದರೆ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು. ನವ್ಯ ಚಳುವಳಿಯ ಸಂದರ್ಭದಲ್ಲಿ ಬರವಣಿಗೆ ಪ್ರಾರಂಭಿಸಿ ನಂತರ ಯಾವುದೇ ಸಾಹಿತ್ಯ ಪ್ರಕಾರಗಳಿಗೆ ಅಂಟಿಕೊಳ್ಳದೆ ಕಾಡಿನಲ್ಲಿಯ ಒಂಟಿ ಸಲಗನಂತೆ ತನ್ನದೇ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡು ಕನ್ನಡ ಸಾಹಿತ್ಯದ ಮೂಲಕ ಪರಿಸರ ವಿಜ್ಞಾನವನ್ನು ಸರಳವಾಗಿ ಎಂತಹವರಿಗೂ ಅರ್ಥವಾಗುವಂತೆ ಕಥನ ಶೈಲಿಯಲ್ಲಿ ಕೊಟ್ಟ ಕೃತಿಗಳು ಅನೇಕ. ಕರ್ವಾಲೋ, ಮಾಯಾಲೋಕ, ಕಾಡು ಮತ್ತು ಕ್ರೌರ್ಯ ಇವು ಕಾದಂಬರಿಗಳಾದರೆ ಪರಿಸರದ ಕಥೆ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಹಕ್ಕಿಪುಕ್ಕ, ಮಿಂಚುಳ್ಳಿ–ಕನ್ನಡ ನಾಡಿನ ಹಕ್ಕಿಗಳು ಭಾಗ–೧, ಹೆಜ್ಜೆ ಮೂಡದ ಹಾದಿ–ಕನ್ನಡ ನಾಡಿನ ಹಕ್ಕಿಗಳು ಭಾಗ–೨, ವಿಸ್ಮಯ ೧, ೨, ೩ ಫ್ಲೈಯಿಂಗ್ ಸಾಸರ್– ಭಾಗ ೧ ಮತ್ತು ೨, ನಡೆಯುವ ಕಡ್ಡಿ, ಹಾರುವ ಎಲೆ ಇವುಗಳ ಜೊತೆಗೆ ವೈಜ್ಞಾನಿಕ ಮತ್ತು ಐತಿಹಾಸಿಕ ಸಂಕಲನಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪ್ರವೇಶ ಮಾಡುವವರು ತೇಜಸ್ವಿಯವರ ಕೃತಿಗಳನ್ನು ಓದುವುದರ ಮೂಲಕ ತುಂಬಾ ಸುಲಭವಾಗಿ ಕನ್ನಡ ಸಾಹಿತ್ಯವನ್ನು ಓದಬಹುದು ಅಷ್ಟರಮಟ್ಟಿಗೆ ತೇಜಸ್ವಿ ಅವರ ಕೃತಿಗಳು ಮಹತ್ವ ಪಡೆದಿವೆ.

ಡಾ. ಟಿ. ಎಸ್. ರಮಾನಂದ್ ಅವರು ಪಶುವೈದ್ಯರು, ವನ್ಯಜೀವಿ ವೈದ್ಯರು, ಜನರೇ ಇವರಿಗೆ 'ಗಜವೈದ್ಯರು' ಎಂಬ ಅಭಿದಾನವನ್ನು ಕೊಟ್ಟಿದ್ದಾರೆ. ಇವರ ವೈದ್ಯರ ಶಿಕಾರಿ (ಶಿಕಾರಿಯಲ್ಲದ ಶಿಕಾರಿ ಅನುಭವಗಳು) ಮತ್ತು ದಿಟ ನಾಗರ ಕಂಡರೆ, ವೃತ್ತಿ ಪರಿಧಿ, ದನೀನ ಆಸ್ಪತ್ರೆ ಹೀಗೆ ಕೆಲವೇ ಕೃತಿಗಳನ್ನು ಪ್ರಕಟಿಸಿದರೂ ಅವರು ತಮ್ಮ ವೈದ್ಯ ವ್ಯಕ್ತಿಯ ಅನುಭವವನ್ನಷ್ಟೇ ಹೇಳದೆ ಪ್ರಾಣಿ ಪ್ರಪಂಚದ ಅನನ್ಯತೆ ಅವುಗಳ ಸಹಜ ವ್ಯಾಪಾರಗಳು, ಸೃಷ್ಟಿಯ ತಂತ್ರಗಳು ಇವೆಲ್ಲದರ ಮೂಲಕ ಓದುಗರ ಗಮನ ಸೆಳೆಯುತ್ತವೆ.
ರುಕ್ಮಿಣಿಯ ಆಕಸ್ಮಿಕ ಅಪಘಾತ ಎಂಬ ಲೇಖನ ಓದುಗರಿಗೆ ಕುತೂಹಲ ವಿಸ್ಮಯವನ್ನುಂಟು ಮಾಡುತ್ತದೆ. ಮಠದ ಆನೆಯೊಂದು ಹೇಗೆ ಅಷ್ಟೊಂದು ಜನರ ಪ್ರೀತಿಗೆ ಪಾತ್ರವಾದದ್ದು ಎಂಬುದು ಆಶ್ಚರ್ಯ ಹುಟ್ಟಿಸುತ್ತದೆ. ಅದು ಆಕಸ್ಮಿಕ ಅಪಘಾತಕ್ಕೆ ತುತ್ತಾಗಿ ಕಾಡಿನ ಪರಿಸರಕ್ಕೆ ಬಂದರೂ ಅಲ್ಲಿನ ಆನೆಗಳ ಜೊತೆ ಕಾಡಿಗೆ ಹೋದರೂ ಸಕ್ರೆಬೈಲಿನ ಸೊಪ್ಪು ಸೆದೆ ಅದಕ್ಕೆ ರುಚಿಸಲೇ ಇಲ್ಲ. ಮಠದಲ್ಲಿನ ಅಕ್ಕಿ, ಬೆಲ್ಲ, ಹಣ್ಣುಗಳ ಆಹಾರದ ಕ್ರಮಕ್ಕೆ ಒಗ್ಗಿಹೋಗಿತ್ತು. ಅಷ್ಟೇ ಅಲ್ಲದೆ ಕಾಡಿನಲ್ಲಿ ಇತರ ಆನೆಗಳ ಜೊತೆ ಇರಲು ಬಯಸದೆ "ಪಟ್ಟಣದ

ನಾಗರಿಕರ ಜೊತೆ ನಲಿದುಕೊಂಡಿದ್ದ ರುಕ್ಮಿಣಿ ಕಾಡಿನ ನಿರ್ಜನ ಮತ್ತು ಮೌನಕ್ಕೆ ಹೊಂದಿಕೊಳ್ಳಲಾಗದೆ ಜನರ ಆಸರೆ ಹುಡುಕಿ ಊರಿಗೆ ಬಂದು ಆಟವಾಡುತ್ತಿದ್ದ ಮಕ್ಕಳ ಗುಂಪಿನೆದುರು ಉತ್ಸಾಹದಿಂದ ಸೊಂಡಿಲನ್ನು ಬೀಸುತ್ತಾ ನಿಂತಿರುವುದನ್ನು ನೋಡಿದರೆ ಆಹಾರಕ್ಕಿಂತ ಹೆಚ್ಚಾಗಿ ಮನುಷ್ಯನ ಒಡನಾಟವೇ ಅವಳಿಗೆ ಪ್ರಿಯವಿರಬಹುದು ಎನಿಸಿತು". ಅಚಿತಿಮವಾಗಿ 'ಗಜರಾಜನಿಂದ ನಾಗರಾಜನ ಬಲಿ' ಎಂಬ ಕೊನೆಯ ಲೇಖನದಲ್ಲಿ ಅವರು ಆನೆಗಳ ಬಗ್ಗೆ ಈ ರೀತಿ ಹೇಳುತ್ತಾರೆ "ಆನೆಗಳಿಗೆ ಗಾಯಗಳಾಗಿ ಕ್ರಿಮಿಗಳಾದ ಸಂದರ್ಭದಲ್ಲಿ ಅವು ನದಿಯಲ್ಲಿಯೋ ಅಥವಾ ನೀರಿನಲ್ಲಿಯೋ ಮಲಗಿಬಿಡುತ್ತವೆ. ನೀರಿನಲ್ಲಿ ಮೀನುಗಳು ಕ್ರಿಮಿಗಳನ್ನು, ದುರ್ಮಾಂಸವನ್ನೂ, ಕೀವುರಕ್ತವನ್ನು ತಿಂದು ಗಾಯವನ್ನು ಸ್ವಚ್ಛ ಮಾಡುತ್ತವೆ. ನಂತರ ನೀರಿನಿಂದ ಮೇಲೆ ಬಂದ ಆನೆಗಳು ಕೆಸರನ್ನು ಗಾಯದ ಮೇಲೆ ಸಿಂಪಡಿಸಿಕೊಂಡು ನೊಣಗಳ ಕಾಟವನ್ನು ಪರಿಹರಿಸಿಕೊಳ್ಳುತ್ತವೆ. ಗಾಯ ವಾಸಿಯಾದ ನಂತರ ಮರಕ್ಕೆ ಉಜ್ಜಿ, ಮಣ್ಣಿನ ಕವಚವನ್ನು ಬಿಡಿಸಿಕೊಳ್ಳುತ್ತವೆ". ಇದರಿಂದ ಕಾಡಿನ ಪ್ರಾಣಿಗಳು ಹೇಗೆ ಸ್ವಯಂ ವೈದ್ಯವನ್ನು ಮಾಡಿಕೊಳ್ಳುತ್ತವೆ ಎನ್ನುವುದನ್ನು ಪಶು ವೈದ್ಯರು ವನ್ಯಜೀವಿ ವೈದ್ಯರು ಆದ ಡಾ. ಟಿ. ಎಸ್. ರಮಾನಂದ ಅವರು ತಿಳಿಸುತ್ತಾರೆ.

ಡಾ. ಕಿರಣ್ ವಿ. ಎಸ್. ಅವರು ಬರೆದ 'ಸೆರೆಂಡಿಪಿಟಿ' ವೈದ್ಯಲೋಕದ ಅದ್ಭುತ ಆಕಸ್ಮಿಕಗಳು – ಎಂಬ ಕೃತಿಯಲ್ಲಿ ೫೦ ಲೇಖನಗಳನ್ನು ಒಳಗೊಂಡಂತೆ ಪ್ರಕಟಿಸಿದ್ದಾರೆ. ಸೆರೆಂಡಿಪಿಟಿ ಎಂಬ ಸುಂದರವಾದ ಪದ ಇಂಗ್ಲಿಷ್ ನಲ್ಲಿದೆ. ಇತರ ಭಾಷೆಗಳಿಗೆ ಅನುವಾದ ಮಾಡಲು ಆಗದ ಇಂಗ್ಲೀಷ್ ಪದಗಳಲ್ಲಿ ಇದೂ ಒಂದು ಎಂದು ಲೇಖಕರು ಹೇಳುತ್ತಾರೆ. ಶ್ರೀ ವತ್ಸ ಜೋಶಿ ಅವರು ಈ ಕೃತಿಗೆ ಮುನ್ನೋಟವನ್ನು ದೀರ್ಘವಾಗಿ ಬರೆಯುತ್ತ ಏನನ್ನೋ ಹುಡುಕಲು ಹೋಗಿ ಅದಕ್ಕಿಂತ ಮಹತ್ವದ್ದು ಸಿಕ್ಕಿದರೆ ಎಷ್ಟು ಆಶ್ಚರ್ಯದ ಸಂತೋಷವಾಗುವುದು ಎಂಬುದನ್ನು "ಸಾಮಾನ್ಯ ಬಳ್ಳಿಯನ್ನು ಹುಡುಕಲು ಹೋದವರಿಗೆ ಅಮೃತ ಬಳ್ಳಿ ಸಿಕ್ಕಷ್ಟು ಸಂಭ್ರಮವಾಗುತ್ತೆ" ಎಂದು ಈ ಕೃತಿಯ ಬಗ್ಗೆ ಹೇಳಿದ್ದಾರೆ.

ಪೆರು ದೇಶದ ಬುಡಕಟ್ಟು ಜನರು ತಮಗೆ ಜ್ವರ ಬಂದರೆ ಒಂದು ಮರದ ತೊಗಟೆಯ ಕಷಾಯವನ್ನು ಸೇವಿಸಿ ಜ್ವರ ವಾಸಿ ಮಾಡಿಕೊಳ್ಳುತ್ತಿದ್ದರು. ಅದು ಸಿಂಕೋನ ಮರದ ತೊಗಟೆ. ಆ ತೊಗಟೆಯಲ್ಲಿನ ರಾಸಾಯನಿಕ ಅಂಶ ಕ್ವಿನೀನ್‌ನ್ನು ಹೇಗೆ ಮಲೇರಿಯಾಗೆ ಔಷಧಿಯಾಗಿ ಕಂಡುಹಿಡಿದರು ಎನ್ನುವುದನ್ನು 'ಪೆರು ದೇಶದಿಂದ ಬಂದ ಪರಿಹಾರ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಹಾಗೆ 'ಅಜ್ಜಮ್ಮನ ಜಾದು ಕಷಾಯ' ಎಂಬ ಲೇಖನದಲ್ಲಿ ೧೭೭೫ ರಲ್ಲಿ ಬ್ರಿಟನ್ ನ ಅತ್ಯಂತ ಪ್ರಸಿದ್ಧ ವೈದ್ಯ ಡಾ. ವಿಲಿಯಂ ವಿದರಿಂಗ್ ಅವರ ಬಳಿಗೆ ಒಬ್ಬ ವೃದ್ಧರು ಚಿಕಿತ್ಸೆಗೆ ಬಂದಿದ್ದರು. ಆ ರೋಗಿಯ ಕೈ ಕಾಲು ಊದಿಕೊಂಡಿದ್ದವು. ಅವರ ಹೃದಯದ ಪರಿಸ್ಥಿತಿ ಬಹಳ ಗಂಭೀರವಾಗಿತ್ತು. ಇಂತಹ ರೋಗಿ ಬಹಳ ಕಾಲ ಬದುಕುವುದಿಲ್ಲ ಎಂದು ಹೇಳಿ ಕಳುಹಿಸಿದ್ದರು. ಕೆಲವು ದಿನಗಳ ನಂತರ ಆ ರೋಗಿ ಮರಳಿ ಡಾ. ವಿಲಿಯಂ ವಿದರಿಂಗ್ ಅವರ ಹತ್ತಿರ ಬಂದಾಗ ಡಾಕ್ಟರ್‌ಗೆ ಆಶ್ಚರ್ಯ ಕಾದಿತ್ತು, ಏಕೆಂದರೆ ಅಂತಹ ಕಾಯಿಲೆಗೆ ಯಾವ ಔಷಧಿಯು ಇರಲಿಲ್ಲ ಈಗ ಅವರ ಕಾಯಿಲೆ ವಾಸಿಯಾದದ್ದು ಹೇಗೆ? ಎಂದು ಕೇಳಿದಾಗ ತಮ್ಮ ಹತ್ತಿರದ ಪ್ರಾಂತ್ಯದಲ್ಲಿ ಅಲೆಮಾರಿ ಜನಾಂಗಕ್ಕೆ ಸೇರಿದ ಓರ್ವ ವೃದ್ಧ ಮಹಿಳೆ ಔಷಧಿ ನೀಡಿದಳೆಂದು ತಿಳಿಸಿದಾಗ ಡಾಕ್ಟರ್ ಅವಳನ್ನು ಹುಡುಕಿ ಔಷಧಿಯ ಬಗ್ಗೆ ವಿಚಾರಿಸಿದರೆ, ಆಕೆ ಮೊದಲಿಗೆ ಗುಟ್ಟು ಬಿಟ್ಟು ಕೊಡುವುದಿಲ್ಲ. ತಾನು ಅದನ್ನು ಹೇಳಿದರೆ ಔಷಧಿಯ ಸಾಮರ್ಥ್ಯ ಕುಂದುತ್ತದೆ ಎಂದು ಹೇಳುತ್ತಾಳೆ. ಇದು ನಮ್ಮ ನಾಟಿ ವೈದ್ಯ ಪದ್ಧತಿಯ ರೀತಿಯನ್ನೂ ಅವರು ಗುಟ್ಟು ಮಾಡುವ ರಹಸ್ಯವನ್ನು ಸಂಪೂರ್ಣವಾಗಿ ಹೋಲುವುದಲ್ಲದೆ ತೇಜಸ್ವಿಯವರು ಬರೆದ 'ಒಂದು ಮೂಲಿಕೆ ಬಳ್ಳಿಯ ಸುತ್ತ' ಎಂಬ ಲೇಖನವನ್ನು ನೆನಪಿಗೆ ತರುತ್ತದೆ. (ಇಂತಹ ನಾಟಿ ಔಷಧ ಅಥವಾ ಗಿಡಮೂಲಿಕೆ ಔಷಧಗಳ ಬಗ್ಗೆ ಪ್ರಪಂಚದ ಎಲ್ಲಾ ಭಾಗದಲ್ಲೂ ಇದ್ದ ನಂಬಿಕೆ ಒಂದೇ ಎಂದು ತಿಳಿಯುತ್ತದೆ) ನಂತರ ಆ ವೃದ್ಧೆಗೆ ಹಣದ ಆಮಿಷ ತೋರಿದಾಗ ಆಕೆ ಬಳಸುವ ಕಷಾಯಕ್ಕೆ ಸುಮಾರು ೨೦ ವಿವಿಧ ಸಸ್ಯಗಳ ಬಗ್ಗೆ ತಿಳಿಸುತ್ತಾಳೆಯೇ ವಿನ: ಯಾವುದು ಎಷ್ಟು ಪ್ರಮಾಣ ಎನ್ನುವುದನ್ನು ತಿಳಿಸುವುದಿಲ್ಲ. ಡಾ. ವಿಲಿಯಂ ವಿದರಿಂಗ್ ೯ ವರ್ಷಗಳ ಸತತ ಪ್ರಯೋಗ ಮಾಡಿ ತಿಲಪುಷ್ಪ (Foxglove) ಎಂಬ ಸಸ್ಯದ ಎಲೆಗಳೆಂದು ಕಂಡುಹಿಡಿಯುತ್ತಾರೆ. ಆದರೆ ಅದರಲ್ಲಿನ ಯಾವ ರಾಸಾಯನಿಕ ಎಂಬುದನ್ನು ೧೯೨೫ ರಲ್ಲಿ ಪತ್ತೆಹಚ್ಚಲಾಯಿತು ಎಂದು ತಿಳಿಸುತ್ತಾರೆ. ಇದೇ ರೀತಿ ಈ ಕೃತಿಯ ೫೦ ಲೇಖನಗಳು ರೋಚಕತೆಯನ್ನು, ಅಚ್ಚರಿಯನ್ನು ಉಂಟು ಮಾಡುತ್ತವೆ. ಇದೇ ರೀತಿ ಕನ್ನಡದಲ್ಲಿ ಇನ್ನೂ ಅನೇಕ ಕೃತಿಗಳು ಈ ಸಾಲಿಗೆ ಸೇರುತ್ತವೆ.

ಅಡಿಟಿಪ್ಪಣಿ

೧. ವಿಜ್ಞಾನ ಎಂದರೇನು? – ವಿಕಿಪೀಡಿಯಾ.
೨. ಹಸುರು ಹೊನ್ನು– ಸ್ಮರಣೆ– ಬಿ.ಜಿ.ಎಲ್ ಸ್ವಾಮಿ.
೩. ವೈದ್ಯರ ಶಿಕಾರಿ – ಲೇ.ಡಾ.ಟಿ.ಎಸ್ ರಮಾನಂದ್, ಪುಟ ಸಂಖ್ಯೆ ೧೧೨, ೧೨೦.
೪. ಸೆರೆಂಡಿಪಿಟಿ– ಕಿರಣ್ ವಿ.ಎಸ್. ಪುಟ ಸಂಖ್ಯೆ ೨೫, ೨೬, ೨೮.

ಚಂದಿರನ ಮಡಿಲಲ್ಲಿ: ಒಂದು ವೈಜ್ಞಾನಿಕ ಕಲ್ಪನೆ

ಡಾ. ಚೇತನಾ ಹೆಗಡೆ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು,ಸ್ವಾಯತ್ತ

ವಿಜ್ಞಾನ ಮಾರ್ಗದಲಿ ನಡೆದವನ ಸತ್ಯವಂ
ದರ್ಶಿಸಲು, ಭಾವ ನೌಕೆಯಲಿ ಯಾನಿಸಿದನಿವ
ಸೌಂದರ್ಯಶೋಧನೆಗೆ ಸಂಧಿಸಿದರುಭಯರುಂ
ಭೇದರಹಿತಾಭಿನ್ನತೆಯಲಿ ಕಾಣ್! ಅತ್ರಿಸೂನು[೧]

ನಿರೂಪಣೆ, ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ, ಊಹಾ ಮಂಡಣೆ, ಪ್ರಾಯೋಗಿಕ ತಪಾಸಣೆ, ಸಿದ್ಧಾಂತ ಮಂಡಣೆ ಎಂಬ ಕ್ರಮಬದ್ಧ ಹಂತಗಳನ್ನು ದಾಟಿ ತನ್ನ ನಿರ್ಣಯವನ್ನು ಪ್ರಕಟಿಸುವ ವಿಜ್ಞಾನಿ ಸತ್ಯಶೋಧಕ. ಆತ ತರ್ಕ ಲೋಕದಲ್ಲಿ ನಡೆವವ. ಸಾಹಿತಿ ಸೌಂದರ್ಯದ ಅನ್ವೇಷಕ. ವಿಜ್ಞಾನಿ ವಸ್ತು ನಿಷ್ಠ. ಸಾಹಿತಿ ಭಾವ ನಿಷ್ಠ. ವಿಜ್ಞಾನಿ ಮತ್ತು ಸಾಹಿತಿ ಭಿನ್ನ ಪಥದಲ್ಲಿ ಸಂಚರಿಸಿದರೂ ಇಬ್ಬರ ಶೋಧನೆಯಲ್ಲಿ ಹಲವಾರು ಸಮಾನ ಅಂಶಗಳು ಗೋಚರಿಸುತ್ತವೆ. ಏಕೆಂದರೆ ವಿಜ್ಞಾನಿ ಮತ್ತು ಸಾಹಿತಿಯ ಮೂಲ ಆಕರ ಪ್ರಕೃತಿ ಮತ್ತು ಮನುಷ್ಯ. ನಮ್ಮ ವಿಶ್ವದ ಅಗೋಚರ ವಿದ್ಯಮಾನಗಳ ಬಗ್ಗೆ ಮನುಕುಲ ಎಂದಿಗೂ ಕುತೂಹಲಿಯಾಗಿದೆ. ವಿಜ್ಞಾನಿಗಳ ಅವಿರತ ಪ್ರಯತ್ನದಿಂದ ಸಾಮಾನ್ಯರ ಕಣ್ಣಿಗೆ ಎಟುಕದ ಎಷ್ಟೊ ಪ್ರಕೃತಿಯ ರಹಸ್ಯಗಳು ವಿಸ್ಮಯಗಳು ಪರಿಶೋಧನೆಯ ಫಲವಾಗಿ ಬಹಿರಂಗಗೊಂಡಿದೆ. ವಿಶ್ವದ ಉಗಮ, ರಚನೆ, ಗ್ರಹ, ನಕ್ಷತ್ರ, ಭೂಗರ್ಭದ ಖನಿಜ ಸಂಪತ್ತು ಹೀಗೆ ನಮ್ಮನ್ನು ದಿಗ್ಭ್ರಮೆಗೊಳಿಸುವ ಅನೇಕ ನಿಗೂಢಗಳು ಶೋಧಿಸಲ್ಪಟ್ಟಿವೆ. ನಮ್ಮ ಅರಿವನ್ನು ವಿಸ್ತರಿಸಿವೆ. ವಿಶ್ವಪ್ರಪಂಚದ ಎಲ್ಲ ಅಂಶಗಳನ್ನೂ ಪರೀಕ್ಷೆಗೆ ಒಳಪಡಿಸಿ, ಸೃಷ್ಟಿಯ ರಹಸ್ಯಗಳನ್ನು ಭೇದಿಸುವ ನಿಟ್ಟಿನಲ್ಲಿ ಮನುಷ್ಯ ಹೆಜ್ಜೆಹಾಕುತ್ತಿದ್ದಾನೆ. ಸೃಷ್ಟಿಯ ನಿಜ ಚೈತನ್ಯ ಎಲ್ಲಿಯದು? ನಿಸರ್ಗದ ಪ್ರತಿ ಅಂಶದಲ್ಲಿನ ಶಕ್ತಿ ಯಾವುದು? ಅದರ ಗುಣಧರ್ಮಗಳೇನು? ಎಂಬ ಕುತೂಹಲವೇ ಹಲವಾರು ಆವಿಷ್ಕಾರಗಳಿಗೆ ನಾಂದಿ ಹಾಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಮನುಷ್ಯನ ಬದುಕಿಗೆ ಹೊಸ ಸೌಖ್ಯ ಒದಗಿಸಿವೆ. ವಿಜ್ಞಾನ ಮತ್ತು ಸಾಹಿತ್ಯ ಎರಡರಲ್ಲೂ ಸಮಾನ ಧರ್ಮ ಹುಡುಕಲು ಸಾಧ್ಯವಿದೆ. ಇವೆರಡೂ ವಿಶ್ವವನ್ನು ಹೊಸ ಕಣ್ಣಿನಿಂದ ನೋಡಲು ಸಾಧ್ಯವಾಗುವಂತೆ ಮಾಡುತ್ತವೆ.

ವಿಶ್ವದ ವೈವಿಧ್ಯ ಅನಂತವಾದುದು. ನಿಸರ್ಗದ ನಡೆ ನಿರಂತರ. ಅದರ ಹಿಂದೆ ನಾವು ಚಲಿಸಿದರೆ ಈ ಕಾಲದ ಪ್ರಶ್ನೆಗಳಿಗೆ ಭವಿಷ್ಯತ್ತಿನಲ್ಲಿ ಪರಿಹಾರ ದೊರಕುವ ಸಾಧ್ಯತೆ ಇದೆ. ಭೌತ ವಿಶ್ವದಲ್ಲಿ ಶಾಶ್ವತ ಸಮಸ್ಯೆ ಮತ್ತು ಅಂತಿಮ ಪರಿಹಾರ ಇಲ್ಲ. ಪ್ರತಿಯೊಂದು ಆಯಾ ಸಮಯ ಸಂದರ್ಭಕ್ಕೆ ಅನ್ವಯವಾಗುವಂತಿರುತ್ತದೆ. ವಿಶ್ವದ ರಹಸ್ಯ ಅರಿಯಲು ಮುಂದಾಗುವ ಮನುಷ್ಯ ಅದರ ಮಾರ್ಗವನ್ನು ತೆರೆಯುತ್ತಾ ಸಾಗುತ್ತಾನೆ. ಸಾಹಿತಿ ಕುತೂಹಲ ಬೆರೆತ ಕಲ್ಪನಾ ವಿಹಾರಿ. ವಿಜ್ಞಾನ ಕುತೂಹಲವನ್ನು ಮೀರಿದ ತರ್ಕಬದ್ಧ ವಿಚಾರಣೆಗಳ ಪ್ರತಿಪಾದನೆ. ಸಾಹಿತಿಯಲ್ಲಿ ವೈಜ್ಞಾನಿಕ ಸತ್ಯದೊಂದಿಗೆ ಕುತೂಹಲ ಬೆರೆತ ಕಲ್ಪನೆ ಮುಂದುವರಿಯುತ್ತದೆ ಎಂಬುದಕ್ಕೆ ಶ್ರೀಮತಿ ಸವಿತಾ ಶ್ರೀನಿವಾಸ ಅವರ 'ಗಾಳಕ್ಕೆ ಸಿಕ್ಕ ಚಂದಿರ' ಕಾದಂಬರಿ ಉತ್ತಮ ಉದಾಹರಣೆಯಾಗುತ್ತದೆ.

ಲೇಖಕಿ ಹಾಗೂ ಐಪಿಎಸ್ ಅಧಿಕಾರಿಯಾಗಿರುವ ಶ್ರೀಮತಿ ಸವಿತಾ ಶ್ರೀನಿವಾಸ ಅವರು ಸಣ್ಣಕತೆ, ಕಾದಂಬರಿ, ಪ್ರವಾಸ ಕಥನ, ಮಕ್ಕಳ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯದ ಸಂಪಾದನೆ ಹೀಗೆ ಹಲವು ಪ್ರಕಾರಗಳಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ಲೇಖಕಿ ಸವಿತಾ ಶ್ರೀನಿವಾಸ ಅವರು ೧೮ ಕೃತಿಗಳನ್ನು ಬರೆದಿದ್ದು, ಇತ್ತೀಚಿಗೆ ೩ ಸರಣಿ ವೈಜ್ಞಾನಿಕ ಕಾದಂಬರಿ ಬರೆದಿದ್ದಾರೆ. 'ಗುಪ್ತಗಾಮಿನಿ' ಕಥಾ ಸಂಕಲನ ಮತ್ತು 'ತ್ರಿಲೋಕ ಸಂಚಾರಿ ನೀರೆ', 'ಗಾಳಕ್ಕೆ ಸಿಕ್ಕ ಚಂದಿರ', 'ಜಗದಗಲ ಮುಗಿಲಗಲ' ಕಾದಂಬರಿಗಳು ವೈಜ್ಞಾನಿಕ ಸಾಹಿತ್ಯದ ಸಾಲಿಗೆ ಸೇರ್ಪಡೆಯಾಗುತ್ತವೆ. ಇವರ 'ಗಾಳಕ್ಕೆ ಸಿಕ್ಕ ಚಂದಿರ' ಎಂಬ ಕಾಲ್ಪನಿಕ ವೈಜ್ಞಾನಿಕ ಕಾದಂಬರಿಯನ್ನು ಪ್ರಸ್ತುತ ಸಂಶೋಧನಾ ಲೇಖನ ಚರ್ಚಿಸುತ್ತದೆ.

ಸೌರವ್ಯೂಹದ ಬೇರೆ ಬೇರೆ ಗ್ರಹಗಳ ಅಂತರಾಳ ಹೇಗಿದೆ? ಎಂಬ ಬಗ್ಗೆ ಹಲವಾರು ಸಂಶೋಧನೆಗಳು ಜಗತ್ತಿನಾದ್ಯಂತ ನಡೆಯುತ್ತಿವೆ. ಅವುಗಳನ್ನು ಪತ್ತೆ ಹಚ್ಚಲು ಅತ್ಯಾಧುನಿಕ ಉಪಕರಣಗಳು ಸೃಷ್ಟಿ ಆಗಿವೆ. ಅಂತರಿಕ್ಷದ ಯಾನ ಹಲವರ ಕನಸಾಗಿದೆ. ಬಾಹ್ಯಾಕಾಶದ ನಿಗೂಢತೆಯಲ್ಲಿ ಲೇಖಕಿ ನಮ್ಮನ್ನು ಒಳಗು ಮಾಡಿಕೊಳ್ಳುತ್ತಾರೆ. 'ಗಾಳಕ್ಕೆ ಸಿಕ್ಕ ಚಂದಿರ' ಕಾದಂಬರಿಯು ವಿಶ್ವಪ್ರಕೃತಿ ಮತ್ತು ಮಾನವನ ಬದುಕಿನ ತೊಳಲಾಟವನ್ನು ಕೇಂದ್ರೀಕರಿಸುತ್ತದೆ.

ಭೂಮಿ ಮತ್ತು ಚಂದ್ರನ ನಡುವೆ ಅವಿನಾಭಾವ ಸಂಬಂಧವಿದೆ. ಭೂಮಿಯ ಗುರುತ್ವಾಕರ್ಷಣಾ ಶಕ್ತಿಗೆ ಸಿಲುಕಿದ ಚಂದ್ರ ಭೂಮಿಯ ಸುತ್ತ ಪರಿಭ್ರಮಣೆ ಮಾಡುತ್ತಾನೆ. ಭೂ ಜೀವಿಗಳು ಚಂದ್ರನನ್ನು ತಮ್ಮ ಆಕರ್ಷಣೆಯ ಕೇಂದ್ರವಾಗಿರಿಸಿಕೊಂಡಿದ್ದಾರೆ. ಚಂದ್ರಯಾನ ಹಲವು ಮನುಷ್ಯರ ಕನಸು. ಚಂದ್ರನಲ್ಲಿ ವಾಸಿಸಲು ಸಾಧ್ಯವೇ? ಮನುಷ್ಯನ ಉಳಿವು ಅಲ್ಲಿ ಸಾಧ್ಯವೇ? ಅಲ್ಲಿ ಹಸಿರು ಕುಡಿಯೊಡೆಯಲು ಸಾಧ್ಯವೇ? ಅಲ್ಲಿನ ವಾತಾವರಣ, ನೀರಿನ ಸಾಧ್ಯತೆ, ಉಸಿರಾಟಕ್ಕೆ ಅಗತ್ಯವಾದ ಆಮ್ಲಜನಕ ಹೀಗೆ ಹಲವಾರು ಪ್ರಶ್ನೆಗಳಿಗೆ ಸಮರ್ಪಕ ಉತ್ತರ ದೊರಕಿಲ್ಲ. ಮನುಷ್ಯನ ಇಂತಹ ಕುತೂಹಲಗಳಿಗೆ ಬೆರಗು ಹುಟ್ಟಿಸುವಂತೆ ಸಿದ್ಧವಾದ ವೈಜ್ಞಾನಿಕ ಕಾದಂಬರಿ 'ಗಾಳಕ್ಕೆ ಸಿಕ್ಕ ಚಂದಿರ'. ವೈಜ್ಞಾನಿಕ ಸತ್ಯವನ್ನು ಆಧರಿಸುತ್ತಾ ಸವಿತಾ ಅವರು ತಮ್ಮ ಕಾಲ್ಪನಿಕತೆಯ ಬೆನ್ನೆತ್ತಿ ಸಾಗುತ್ತಾರೆ. ಉನ್ನತ ತಂತ್ರಜ್ಞಾನದ ಕುರಿತು ವಿಶ್ಲೇಷಣೆ ನೀಡುವ ಲೇಖಕಿ ನಮ್ಮನ್ನು ಚಂದ್ರಗ್ರಹದೊಳಗೆ ಎಳೆದುಕೊಳ್ಳುತ್ತಾರೆ.

ಚಂದ್ರನ ಅಂತರಾಳದ ವೀಕ್ಷಣೆಗೆ ಹಲವಾರು ದೇಶಗಳು ಉಪಗ್ರಹ ಉಡಾವಣೆ ಮಾಡಿವೆ. ಹಾಗಿದ್ದರೆ ಚಂದ್ರ ಯಾವ ದೇಶದ ಸ್ವತ್ತು? ಕಾರ್ಯನಿರತ ಪ್ರತಿ ದೇಶವೂ ತನ್ನ ಹಕ್ಕು ಸ್ಥಾಪಿಸಲು ಪ್ರಯತ್ನಿಸುತ್ತದೆ. ಅಧಿಕಾರ ಸ್ಥಾಪನೆಯ ಹೋರಾಟವನ್ನು ತಪ್ಪಿಸಲು ಲೇಖಕಿ ಸುಲಭ ಪರಿಹಾರವನ್ನೂ ಸೂಚಿಸುತ್ತಾರೆ. ಹಲವು ದೇಶಗಳ ಸದಸ್ಯತ್ವದೊಂದಿಗೆ ವಿಶ್ವಬಾಹ್ಯಾಕಾಶ ಒಕ್ಕೂಟ ಸ್ಥಾಪನೆಯಾಗಿದೆ. ಭೂಮಿ ಹಾಗೂ ಚಂದ್ರನ ನಡುವಿನ ಗುರುತ್ವಾಕರ್ಷಣೆಯ ಕೇಂದ್ರಾಭಿಗಾಮಿ ಬಲಕ್ಕೆ ಸಮನಾಗಿರುವ ವಿಶಿಷ್ಟ ಸ್ಥಾನಗಳಾದ ಎಲ್ ೪ ಮತ್ತು ಎಲ್ ೫ ಲೆಗ್ರಾಂಜ್ ಬಿಂದುಗಳೆಂಬ ಸ್ಥಿರ ಸಮತೋಲನ ಸ್ಥಾನಗಳಲ್ಲಿ ಕಾಲೋನಿ ನಿರ್ಮಾಣವಾಗಿದೆ. ಸದಸ್ಯತ್ವ ಪಡೆದ ದೇಶಗಳು ತಮ್ಮ ಕಾಲೋನಿಗಳನ್ನು ಸ್ಥಾಪಿಸಿಕೊಂಡು, ತಮ್ಮ ದೇಶದಿಂದ ಪ್ರತಿನಿಧಿಗಳನ್ನು ಕಳಿಸಿವೆ.

ಕುಳಿಗಳುಳ್ಳ ಬರಡು ನೆಲದ ಮೇಲೆ ಜೀವಿಗಳು ಕೊನರಲೂ ಅವಕಾಶವಿಲ್ಲದಿರುವ ಜಾಗದಲ್ಲಿ ಕೃತಕ ಗುರುತ್ವಾಕರ್ಷಣೆಯ ಬಿಲ್ಲೆಗಳನ್ನು ನೆಲದಲ್ಲಿ ಅಳವಡಿಸಿ ಮನುಷ್ಯರಿಗೆ ಸಹಜವಾಗಿ ನಡೆಯಲು ಅನುವು ಮಾಡಲಾಗಿದೆ. ಭೂಮಿಯ ವಾಸಯೋಗ್ಯ ವಾತಾವರಣ ಹೋಲುವ ಉಷ್ಣಾಂಶ, ಜಲ, ಆಮ್ಲಜನಕದ ವ್ಯವಸ್ಥೆ ಮಾಡಲಾಗಿದೆ. ಚಂದ್ರನ ತಾಪಮಾನ ಸಹಿಸಿಕೊಳ್ಳಲು ಸಾಧ್ಯವಿಲ್ಲದ ಮನುಷ್ಯ ಜೀವಿ ಚಂದ್ರನಲ್ಲಿ ಕಂಡುಬರುವ ಬಿಲಗಳನ್ನು ಕೊರೆದು ಮನೆ ಮಾಡಿಕೊಂಡಿದ್ದಾನೆ. ಚಂದ್ರನ ಕುಳಿಯೊಳಗೆ ಸುರಂಗಗಳಾಗಿ ಕೊರೆಯಲಾದ ಲಾವಾ ಟ್ಯೂಬ್‌ಗಳನ್ನು ವಾಸಯೋಗ್ಯ ಮಾಡಲಾಗಿದೆ. ಸೌರ ಶಕ್ತಿಯ ಬಳಕೆ ನಿವಾಸಿಗಳ ವಾಸ್ತವ್ಯಕ್ಕೆ ಮಾತ್ರವಲ್ಲದೆ ಬಾಹ್ಯಾಕಾಶ ನೌಕೆಗಳಿಗೂ ಇಂಧನಕ್ಕೆ ಪರ್ಯಾಯ ವ್ಯವಸ್ಥೆ ಮಾಡುತ್ತಿದೆ. ಚಂದ್ರಯಾನ ಭೂ ಜೀವಿಗಳಿಗೆ ಈಗ ಅಸಾಧ್ಯದ ಸಂಗತಿ ಅಲ್ಲ. ಮನಮೋಹಕ ವಾಸ್ತವ್ಯ ಹಾಗೂ ಪ್ರವಾಸಕ್ಕೆ ಏರ್ಪಾಡು ಮಾಡಿರುವುದರಿಂದ ಚಂದ್ರವಿಹಾರಿಗಳು ಸರ್ವೆ ಸಾಮಾನ್ಯವೆಂಬಂತೆ ಕಂಡುಬರುತ್ತಾರೆ.

ಬಾಹ್ಯಾಕಾಶ ಕಾಲೋನಿ ಸ್ಥಾಪಿಸುವಾಗ ಮುಂದೆ ಬರಬಹುದಾದ ವಿಪತ್ತುಗಳನ್ನು ಗಮನಿಸಿ ಎಲ್ಲೆಡೆ ಕ್ಯಾಮರಾ, ಕಂಪ್ಯೂಟೆಕ್ಟರ್ ಅಳವಡಿಸಲಾಗಿದೆ. ಭೂ ಅಧಿಕಾರಿಗಳ ನೇತೃತ್ವದಲ್ಲಿ ವೀಕ್ಷಣಾ ತಂಡ ಮತ್ತು ಕಾರ್ಯಾಚರಣೆಯ ಪಡೆಯ ಸಹಾಯದಿಂದ ಚಂದ್ರನ ನೆಲ ಬೃಹತ್ ಕೈಗಾರಿಕಾ ಪ್ರದೇಶವಾಗಿ ಪರಿವರ್ತನೆಗೊಂಡಿದೆ. ಬಾಹ್ಯಾಕಾಶದ ಖಜಾನೆಯನ್ನು ಶೋಧಿಸುವ ಅವಿರತ ಪ್ರಯತ್ನ ನಡೆಯುತ್ತಿದೆ. ರೋಬೋಟ್ ಚಾಲಕ ಸ್ಪೇಸ್ ರೈಲಿನಲ್ಲಿ ಕ್ಷುದ್ರಗ್ರಹಗಳ ಖನಿಜ ನಿಕ್ಷೇಪಗಳನ್ನು ಭೂಮಿಗೆ ಸಾಗಿಸುತ್ತಾನೆ. ಭೂಮಿ ಮತ್ತು ಚಂದ್ರನ ನಡುವೆ ಸಂಚಾರ ಮತ್ತು ಸಂವಹನ ಸಾಮಾನ್ಯವೆಂಬಂತೆ ನಡೆಯುತ್ತದೆ.

ವ್ಯೋಮದಲ್ಲಿ ಜರುಗುವ ನಿರಂತರ ಕ್ರಿಯೆಗಳ ಮೇಲೆ ಭೂಮಿಯ ನೆಲ ನಿಯಂತ್ರಣ ಕೇಂದ್ರ ನಿಗಾ ಇರಿಸಿದೆ. ಚಂದ್ರನ ನಿವಾಸಿಗಳು ಭೂ ಅಧಿಕಾರಿಗಳ ಆಣತಿಯಿಲ್ಲದೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅವಕಾಶವಿರಲಿಲ್ಲ. ಬಾಹ್ಯಾಕಾಶದಲ್ಲಿ ಸಿಗಬಹುದಾದ ಖನಿಜ ಸಂಪತ್ತನ್ನು ಭೂಮಿಗೆ ಕಳಿಸುವ ಬಗ್ಗೆ ತಮಗೆ ಮುಕ್ತ ಅವಕಾಶವಿಲ್ಲ ಎಂಬ ವೀಕ್ಷಣಾ ತಂಡದ ಕೆಲ ಸದಸ್ಯರ ಅಸಮಾಧಾನ ಮುಂದುವರಿಯುತ್ತಾ, ಸಂಘರ್ಷವಾಗಿ ಪರಿಣಮಿಸುತ್ತದೆ. ಭೂ ಅಧಿಕಾರಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಹೋಗಿದ್ದರೂ, ಅಲ್ಲಿನ ನೆಲದ ಮೇಲೆ ಸ್ವಂತಿಕೆ ಸ್ಥಾಪಿಸಲು ವೀಕ್ಷಣಾ ತಂಡದ ಸದಸ್ಯರು ಮಾಡುವ ಪ್ರಯತ್ನ, ಆಶಯ ಈಡೇರದಿದ್ದಾಗ ಅಸಹಕಾರ ಚಳವಳಿ ಕೈಗೊಳ್ಳುವುದು, ಬಾಹ್ಯಾಕಾಶದ ಸಂಪನ್ಮೂಲಗಳೆಲ್ಲವೂ ಭೂಮಿಗೆ ದೊರಕಬೇಕು ಎಂಬ ಭೂ ಅಧಿಕಾರಿಗಳ ನಿರ್ಣಯ ಇವೆಲ್ಲ ಅಂಶಗಳು ಇನ್ನೊಂದು ಮಹಾಯುದ್ಧದ ಕಿಡಿಗಳಾಗುವ ಸಾಧ್ಯತೆಯನ್ನು ಎತ್ತಿ ಹಿಡಿಯುತ್ತಿವೆ. ವರ್ತಮಾನದಲ್ಲಿ ಭಿನ್ನ ಭಿನ್ನ ಕಾರಣಗಳಿಂದ ದೇಶಗಳ ನಡುವೆ ಭಿನ್ನಾಭಿಪ್ರಾಯ, ಯುದ್ಧಗಳು ನಡೆಯುತ್ತಿವೆ. ಮುಂದೊಂದು ದಿನ ಭೂಮಿ ಮತ್ತು ಅನ್ಯಗ್ರಹಗಳ ನಡುವೆ ಉಂಟಾಗಬಹುದಾದ ಸಮಸ್ಯೆಯನ್ನು ಲೇಖಕಿ ಸೂಚ್ಯವಾಗಿ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

"ಈ ಪರಿಸರದಲ್ಲಿ ಚಂದ್ರ ನಿವಾಸಿಗಳು ಹಕ್ಕಿಗಳ ಕಲರವ, ಪ್ರಕೃತಿಯ ಸದ್ದನ್ನು ಕೃತ್ರಿಮವಾಗಿ ಹಿನ್ನೆಲೆ ಧ್ವನಿವರ್ಧಕ ವ್ಯವಸ್ಥೆ ಮೂಲಕ ಮಾಡಿಸಲು ಕಾರಣ ಚಂದ್ರನಿವಾಸಿಗಳು ಸಹಜ ಸ್ಥಿತಿಯಲ್ಲಿರಲು ನೆರವಾಗಲಿಕಷ್ಟೆ. ಇಲ್ಲಿನ ನಿವಾಸಿಗಳು ಹೋಮ್ ಸಿಕ್ ಆಗಬಾರದೆಂಬ ಉದ್ದೇಶಕ್ಕೆ ಭೂಮಿಯ ಪರಿಸರವನ್ನು ಇಲ್ಲಿ ಪುನರಾವರ್ತನೆ ಮಾಡಲಾಗಿತ್ತು."೨ ಮನುಷ್ಯ ಸಾಮಾಜಿಕ ಜೀವಿ. ಪ್ರತಿನಿತ್ಯ ಅವನೊಡನೆ ಇರಬಹುದಾದ ಒಡನಾಡಿಗಳು, ಅಲ್ಲಿನ ವಾತಾವರಣ, ಪರಿಸರ ಬಹಳ ಪ್ರಭಾವ ಬೀರುತ್ತದೆ. ಭೂಮಿಯಿಂದ ಬಂದವರು ಹೋಮ್ ಸಿಕ್ ಆಗಬಾರದು ಎನ್ನುವಂತೆ ಚಂದ್ರನ ನೆಲದಲ್ಲಿ ಭೂಮಿಯ ವಾತಾವರಣ, ಪ್ರಕೃತಿಯ ಪಡಿಯಚ್ಚು ಮೂಡಿಸುವ ಪ್ರಯತ್ನ, ಸುತ್ತಮುತ್ತಲಿನ ಪರಿಸರ ವಾಸಯೋಗ್ಯವಾಗಿಸುವಿಕೆ ನಡೆಸಿದರೂ ಯಂತ್ರಮಾನವರ ನಡುವೆ ನಾವು ಯಂತ್ರಗಳಾಗಿ ಬಿಡಬಹುದಾದ ಸಾಧ್ಯತೆ ಹಾಗೂ ಯಾಂತ್ರೀಕೃತ ಜೀವನದ ಸ್ಪಷ್ಟತೆ ಓದುಗನಿಗೆ ರಾಚುವಂತಿದೆ.

ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದೊಂದಿಗೆ ಮುಂದಿನ ದಿನಗಳಲ್ಲಿ ಜಗತ್ತು ರೋಬೋಟ್‌ಮಯವಾಗಲಿದೆ. ಮಾನವರ ಸ್ಥಾನವನ್ನು ರೋಬೋಟ್ ತುಂಬುವುದಾಗಲಿ, ರೋಬೋಟ್ ಸ್ಥಾನ ಮಾನವರು ತುಂಬುವುದಾಗಲಿ ಸಾಧ್ಯವೇ? ಚಂದ್ರನ ಮೇಲೆ ಯಂತ್ರಮಾನವರು, ಪ್ರತಿರೂಪಿಗಳು ಹೆಚ್ಚಾದಾಗ ಇರಾಳ ಭಾವನಾತ್ಮಕ ಅಸ್ತಿತ್ವ ಅಲುಗಾಡುವುದು, ಏಕಾಂಗಿತನ ಅನುಭವಿಸುವುದು, ಚಂದ್ರನ ಮೇಲಿನ ವಾತಾವರಣದಿಂದ ದೂರ ಹೋದರೆ ಸಾಕೆಂಬ ಭಾವ, ರೋಬೋಟ್ ಪ್ರತಿರೂಪಿಗಳ ಒಡನಾಟದಿಂದ ಕೆಲಕಾಲ ದೂರವಿರಬೇಕೆಂಬ ಮನದಾಳದ ಅನಿಸಿಕೆ, ರಕ್ತ ಮಾಂಸಗಳುಳ್ಳ ದೇಹದ ಸಾಂತ್ವನ ಸ್ಪರ್ಶದ ಹಂಬಲ, ಭಾವನೆಗಳಿಗೆ ಸ್ಪಂದಿಸುವ ಸಹಜ ಮಾತುಕತೆ, ಯಂತ್ರಗಳ ಸಹವಾಸದಲ್ಲಿ ನಾನು ಮನುಷ್ಯಳು ಎಂಬುದೇ ಮರೆಯುತ್ತಿದ್ದೇನೆ ಎಂಬ ಖೇದ ಎಲ್ಲವೂ ಮುಂದೆ ಮನುಷ್ಯರು ಎದುರಿಸಬಹುದಾದ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಇತ್ತೀಚಿಗೆ ಅಮೆರಿಕಾದ ನೆವಾಡಾದ ಲಾಸ್ ವೇಗಾನ್ ನಲ್ಲಿ ನಡೆದ ಕನ್ಸ್ಯೂಮರ್ ಎಲೆಕ್ಟ್ರಾನಿಕ್ ಶೋ ೨೦೨೫ ದಲ್ಲಿ ಹಲವು ರೋಬೋಗಳು ಜನರ ಗಮನ ಸೆಳೆದವು. ಕೃತಕ ಬುದ್ಧಿಮತ್ತೆಯ ಸಹಾಯದಿಂದ ಇತ್ತೀಚೆಗೆ ನೋಡಲು ಮಾನವರಂತೆ ಕಾಣುವ ರೋಬೋಟ್‌ಗಳನ್ನು ಸೃಷ್ಟಿಸಲಾಗುತ್ತದೆ. ಆರಿಯಾ ಎಂಬ ಹೆಣ್ಣು ರೋಬೋ ಮಾನವರ ವರ್ತನೆಗಳು ನನ್ನಲ್ಲಿವೆ ಅವರಂತೆ ಹಾವಭಾವ ವ್ಯಕ್ತಪಡಿಸಬಲ್ಲೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ಸಂಚಲನವನ್ನು ಉಂಟುಮಾಡಿತು. ಅಮೇಕಾ, ಸೋಫಿಯಾರಂತಹ ರೋಬೋಟ್‌ಗಳು ಈ ಹಿಂದೆ ನಿರ್ಮಿತವಾಗಿದ್ದರೂ ಆರಿಯಾದಷ್ಟು ಮನುಷ್ಯರೂಪಿ ಆಗಿರಲಿಲ್ಲ. ಈ ಅಂಶವೇ ಮುಂದುವರಿಯುತ್ತ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಮನುಷ್ಯ ಸುಲಭದಲ್ಲಿ ಗುರುತಿಸಲಾಗದಂತೆ, ಯಂತ್ರಗಳು ನಮ್ಮ ರೂಪದಲ್ಲಿ ಪ್ರತಿರೂಪಿಗಳಾಗುವ ಸಂಭವನೀಯತೆ ಇಲ್ಲಿ ಕಂಡುಬರುತ್ತದೆ.

ರೋಬೋಟ್‌ಗಳು ಮನೆ, ಕಛೇರಿ, ಹೋಟೆಲ್, ಆಸ್ಪತ್ರೆ ಕೆಲಸ ಮಾತ್ರವಲ್ಲದೆ ಯುದ್ಧಗಳನ್ನೂ ಮಾಡುತ್ತಿವೆ. ಬ್ಯಾಟೆಲ್ ರೋಬೋಗಳ ಆಗಮನವಾಗುತ್ತಿದೆ. ೨೦೨೫ ಜನವರಿ ೧೫ ಆರ್ಮಿ ಡೇ ದಲ್ಲಿ ಮಲ್ಟಿ ಯುಟಿಲಿಟಿ ಲೆಗ್ ಇಕ್ಯುಪ್ಮೆಂಟ್ ರೋಬೋಟ್‌ಗಳು ಮಿಲ್ಟ್ರಿ ಪರೇಡ್‌ನಲ್ಲಿ ಭಾಗವಹಿಸಿದ್ದವು. ದೆಹಲಿ ಮೂಲದ ಏರೋ ಆರ್ಕ ಕಂಪನಿಯು ಸಿದ್ಧಪಡಿಸಿದ ರೋಬೋ ಡಾಗ್ ಗಳು ವಿಕಿರಣ ಪತ್ತೆ ಮಾಡುವ ಶಕ್ತಿ ಹೊಂದಿವೆ. ಮೆಟ್ಟಿಲು ಹತ್ತಿ, ಕಡಿದಾದ ದಾರಿಯಲ್ಲಿ ಚಲಿಸುತ್ತವೆ. ಒಮ್ಮೆ ಚಾರ್ಜ್ ಮಾಡಿದರೆ ೨೦ ಗಂಟೆಗಳ ಕಾಲ ಕೆಲಸ ಮಾಡುತ್ತವೆ. ಎಲ್ಲ ವಲಯಗಳಲ್ಲೂ ಬಹುತೇಕವಾಗಿ ಉದ್ಯೋಗಸ್ಥರಾಗಿ ಮನುಷ್ಯರು ಇದ್ದರೂ, ನಿರುದ್ಯೋಗ ವಿಶ್ವದಾದ್ಯಂತ ತಾಂಡವವಾಡುತ್ತಿದೆ. ಈ ಸ್ಥಿತಿಯಲ್ಲಿ ಯಂತ್ರಮಾನವರು, ಭೂ ವಿಜ್ಞಾನಿಗಳ (ಹೋಲೋಗ್ರಾಮ್) ಪ್ರಕಾಶಬಿಂಬದ ಪ್ರತಿರೂಪಿಗಳ ಹೆಚ್ಚಳ ಮನುಷ್ಯನ ಬದುಕನ್ನು ಅತಂತ್ರಗೊಳಿಸುತ್ತವೆ. ರೋಬೋಟಿಕರಣ ವ್ಯವಸ್ಥೆ ಮಾನವನ ಕೆಲಸವನ್ನು ಸುಲಭಗೊಳಿಸಿದರೂ ಅವನ

ಅಸ್ತಿತ್ವವನ್ನು ಬುಡಮೇಲು ಮಾಡುವ ಸಾಧ್ಯತೆ ಇದೆ. ಯಂತ್ರಮಾನವರು ಎಲ್ಲ ಕಡೆಯೂ ಹೆಚ್ಚುತ್ತಿರುವುದು ಮುಂದಿನ ವೈಜ್ಞಾನಿಕ ಯುಗದಲ್ಲಿ ಮನುಷ್ಯನ ಬದುಕಿನೆಡೆಗೆ ಆತಂಕವನ್ನು ಮೂಡಿಸುತ್ತಿದೆ.

ಭೂಮಿಯಲ್ಲಿ ಮಾನವನ ಪ್ರಗತಿಗೆ ಬಹುತೇಕ ನಿಸರ್ಗ ಬಲಿಯಾಗುತ್ತಿದೆ. ಮಾನವ ಎಚ್ಚೆತ್ತುಕೊಂಡು ಚಂದ್ರಲೋಕದಲ್ಲಿ ಭೂಮಿಯನ್ನು ಪುನರ್ ಸೃಷ್ಟಿಸುವ ಪ್ರಯತ್ನಕ್ಕೆ ಧನ್ವಂತರಿ ಸಸ್ಯ ಧಾಮ ಸಾಕ್ಷಿಯಾಗುತ್ತದೆ. "ನಮಗೆ ವಾತಾವರಣವಿಲ್ಲದ ಈ ಬರಡು ನೆಲದ ಮೇಲೆ ಜೀವ ಕೊನರಲು ಕೃತಕ ವ್ಯವಸ್ಥೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆ. ಭೂಮಿಯ ಮೇಲಿನ ಸಸ್ಯರಾಶಿಗಳನ್ನು ಜಾಲಾಡಿಸಿ ಆಯ್ದು ಅವಶ್ಯಕ ಗಿಡ,ಬಳ್ಳಿ, ಕುಬ್ಜ ಮರಗಳನ್ನು ಬೆಳೆಸುವ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಚಂದ್ರ ನಿವಾಸಿಗಳಿಗೆ ಈ ನೆಲದ ಆಹಾರವನ್ನು ಒದಗಿಸುತ್ತ ಸ್ವಾವಲಂಬಿಗಳಾಗುವುದು ಇದರ ಉದ್ದೇಶ"೩. ಅಪರೂಪದ ಸಸ್ಯ ಪ್ರಭೇಧಗಳನ್ನು ಚಂದ್ರನ ಮೇಲೆ ಬೆಳೆಸುವ ಮಹತ್ವದ ಯೋಜನೆಯನ್ನು ವಿಶ್ವಬಾಹ್ಯಾಕಾಶಕೂಟ ಒಕ್ಕೂಟ ಹಮ್ಮಿಕೊಂಡಿತ್ತು. ಚಂದ್ರನ ನೆಲದಲ್ಲಿ ಹಸಿರು ವಲಯಗಳನ್ನು ಮೈಲಿಗಟ್ಟಲೇ ಪ್ರದೇಶದಲ್ಲಿ ಬೆಳೆಸುವ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಭೂ ಪರಿಸರದ ಒಂದು ತುಂಡು ಚಂದ್ರನ ಮೇಲೆ ಬಿದ್ದು ಕುಡಿಯೊಡೆದಿತ್ತೇನೋ ಎಂಬಂತೆ ವೈವಿಧ್ಯಮಯ ಸಂಜೀವಿನಿ ಸಸ್ಯಗಳು ಕುಡಿಯೊಡೆದಿದ್ದವು. ಧನ್ವಂತರಿ ಸಸ್ಯಧಾಮದಲ್ಲಿ ಅತ್ಯಾಧುನಿಕ ತಳಿ ಶಾಸ್ತ್ರದ ತಂತ್ರಗಳನ್ನು ಬಳಸಿ ಸಸ್ಯ ಗಾಜಿನ ಪೆಟ್ಟಿಗೆಯೊಳಗಿನ ಕೃತಕ ಬೆಳಕು, ಔಷಧಿಯ ಗಿಡ, ಮರ, ಮೂಲಿಕೆ ಎಲ್ಲವನ್ನೂ ಬೆಳೆಸಲಾಗುತ್ತದೆ. ಭೂಮಿಯಲ್ಲಿ ಆಧುನಿಕತೆಯ ದಾಳಿಗೆ, ಮನುಷ್ಯನ ಸ್ವಾರ್ಥಕ್ಕೆ ಹಸಿರುವಲಯ ಗರಿಷ್ಟ ಮಟ್ಟದಲ್ಲಿ ಕಡಿಮೆಯಾಗುತ್ತಿದೆ. ಭೂಮಿಯಲ್ಲಿ ಕಾಡು ನಾಡಾಗಿ ನಾಶವಾದ ಮೇಲೆ, ಚಂದ್ರನಲ್ಲಿ ಮರುಳುಭೂಮಿಯನ್ನು ಹಸಿರಾಗಿಸುವತ್ತ, ಮಾಲಿನ್ಯ ರಹಿತ ಪರಿಸರ ಸೃಷ್ಟಿಸಲು ಪ್ರಯತ್ನ ನಡೆಯುತ್ತದೆ. ವಾತಾವರಣ ಇದ್ದಲ್ಲಿ ಪ್ರಕೃತಿಯನ್ನು ನಾಶ ಮಾಡಿ ವಾತಾವರಣವಿಲ್ಲದ ಚಂದ್ರನ ಆವರಣದಲ್ಲಿ ಹಸಿರು ಬೆಳೆಸಲು ಉತ್ತೇಜನ ನೀಡುತ್ತಿರುವುದು ಒಂದಕ್ಕೊಂದು ಮುಖಾಮುಖಿಯಾಗುತ್ತದೆ.

ಸೃಷ್ಟಿಯಾಶಯವದೇನಸ್ಪಷ್ಟ ಸಂಶ್ಲಿಷ್ಟ
ಇಷ್ಟ ಮೋಹಕ ದಿವ್ಯಗುಣಗಳೊಂದು ಕಡೆ
ಕಷ್ಟ ಭೀಭತ್ಸ ಘೋರಂಗಳಿನ್ನೊಂದು ಕಡೆ
ಕ್ಲಿಷ್ಟವೀ ಬ್ರಹ್ಮಕೃತಿ – ಮಂಕುತಿಮ್ಮಳ

ಸೃಷ್ಟಿಯ ಉದ್ದೇಶವೇನು? ಎಂಬುದು ಅಸ್ಪಷ್ಟ. ಒಂದು ಕಡೆ ಮೋಹಕ ದಿವ್ಯಗುಣಗಳು ಮತ್ತೊಂದೆಡೆ ಭೀಭತ್ಸ ಘೋರಗಳು ನಮ್ಮನ್ನು ಸುತ್ತುವರೆದಿವೆ. ಬ್ರಹ್ಮಸೃಷ್ಟಿಯನ್ನು ಅರ್ಥೈಸುವುದು ಮನುಷ್ಯನಿಗೆ ಅಸಾಧ್ಯವಾದ ಸಂಗತಿ. ಚಂದ್ರ ಎಷ್ಟೇ ಆಕರ್ಷಕ ಎನಿಸಿದರೂ ಆತ ಭೂಮಿಯಿಂದ ಸರಾಸರಿ ೨,೩೮,೮೫೭ ಮೈಲಿ (೩,೮೪,೪೦೪ ಕಿ.ಮಿ) ದೂರದಲ್ಲಿದ್ದಾನೆ. ಲಕ್ಷಾಂತರ ವರ್ಷದಲ್ಲಿ ಮನುಷ್ಯ ಭೂಮಿಯಲ್ಲಿ ತನ್ನ ನೆಲೆಯನ್ನು ಕಂಡುಕೊಂಡಂತೆ, ಚಂದ್ರಲೋಕದಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ವಿಶ್ವಪ್ರಕೃತಿಯು ತನ್ನ ಭಿನ್ನ ಘಟಕಗಳನ್ನು ಆಯಾ ಅಂತರಗಳಲ್ಲಿ ಇರಿಸಿದೆ. ಪ್ರಾಕೃತಿಕವಾಗಿ ಒಂದಕ್ಕೊಂದು ಹೆಣೆದುಕೊಂಡು ಸೃಷ್ಟಿ ನಿಯಮಕ್ಕನುಸಾರವಾಗಿ ವರ್ತಿಸುವ ಹಾಗೂ ತನ್ನ ನೆಲೆಯಲ್ಲಿ ಸ್ವತಂತ್ರವಾಗಿರುವ ಘಟಕಗಳನ್ನು ಮನುಷ್ಯ ತನ್ನ ಲಾಭಕ್ಕೆ ಬಳಸಹೊರಟರೆ ಅಪಾಯ ಕಟ್ಟಿಟ್ಟಬುತ್ತಿ. ಸ್ವತಂತ್ರನಾಗಿರುವ ಚಂದ್ರನನ್ನು ನಮ್ಮ ಗಾಳಕ್ಕೆ ಸಿಕ್ಕಿಸಿ, ನಮ್ಮ ಪ್ರಯೋಗಗಳಿಗೆ ಗುರಿ ಮಾಡಿ, ಭೂಮಿಯಿಂದ ನಾವು ನಿಯಂತ್ರಿಸಲು ಪ್ರಯತ್ನಿಸಿದರೆ ಊಹೆಗೂ ಎಟುಕದಷ್ಟು ಸಮಸ್ಯೆಗಳು ನಮ್ಮನ್ನು ಅರಸಿಬರುತ್ತವೆ ಎಂಬುದನ್ನು ಲೇಖಕಿ ಮತ್ತೆ–ಮತ್ತೆ ಎಚ್ಚರಿಸುತ್ತಾರೆ. ಪ್ರಕೃತಿಗೆ ಅಸಹಜವಾದುದನ್ನು ಮನುಷ್ಯ ಮಾಡಹೊರಟಾಗ, ಒಮ್ಮೆ ಪ್ರಕೃತಿ ಮೈ ಕೊಡವಿಬಿಟ್ಟರೆ ಎಂಬ ಆತಂಕವನ್ನು ಸವಿತಾ ಅವರು ಕಾದಂಬರಿಯುದ್ದಕ್ಕೂ ನಿರೂಪಿಸುತ್ತ ಸಾಗುತ್ತಾರೆ.

"ಪ್ರತಿ ದಿನವೂ ಹಲವಾರು ಉಲ್ಕೆಗಳು, ಬಂಡೆಗಳ ಚೂರುಗಳು ಬಾಹ್ಯಾಕಾಶದಲ್ಲಿ ಸ್ವತಂತ್ರವಾಗಿ ಅಲೆಯುತ್ತಿದ್ದು ಅವುಗಳಿಗೆ ಕಡಿವಾಣ ಹಾಕುವುದು ದುಸ್ತರವೇ ಆಗಿತ್ತು. ಅಂತಹದ್ದರಲ್ಲಿ ಭೂಮಿಯ ಸಮೀಪದಲ್ಲಿ ಇಲ್ಲವೇ ಚಂದ್ರನ ದಿಕ್ಕಿಗೆ ಹಾದು ಬರುವಂತಹ ಅದೆಷ್ಟೋ ಬಂಡೆಯ ಚೂರುಗಳು ಭೂಮಿಯ ವಾತಾವರಣವನ್ನು ಪ್ರವೇಶಿಸುತ್ತಲೇ ಉರಿದು ಹೋಗಿ, ಅದರ ಧೂಳು ನೆಲ ತಲುಪುತ್ತಿತ್ತು. ಅದು ಚಂದ್ರನ ನೆಲಕ್ಕೆ ಅಪ್ಪಳಿಸಿದರೆ, ಅಣುಬಾಂಬಿನಷ್ಟು ಪರಿಣಾಮಕಾರಿ ಎಂಬ ವಾಸ್ತವಾಂಶ ವೀಕ್ಷಣಾಲಯದಲ್ಲಿದ್ದ ಎಲ್ಲರ ಅರಿವಿಗೆ ಬಂದಿತ್ತು"೫ಎಷ್ಟೇ ತಂತ್ರಜ್ಞಾನದ ಸಹಾಯ ಪಡೆದುಕೊಂಡರೂ ಉಲ್ಕೆಗಳು ಬಾಹ್ಯಾಕಾಶದ ಎಷ್ಟೋ ತ್ಯಾಜ್ಯ ವಸ್ತುಗಳು ಚಂದ್ರನೆಡೆಗೆ ಬೀಳುವ ಸಾಧ್ಯತೆ ಇದ್ದಾಗ ಜನರನ್ನು ಅಲ್ಲಿಂದ ಸಾಗಿಸುವ ಪ್ರಯತ್ನ, ತುರ್ತು ಸಂದರ್ಭ ಅಲ್ಲಿಂದ ಯಾವ ಕ್ಷಣದಲ್ಲಾದರೂ ಹೊರಡ ಬೇಕಾದ ಅನಿವಾರ್ಯತೆ, ಗುರುತ್ವಾಕರ್ಷಣೆಯ ಬಿಲ್ಲೆಗಳು ಸ್ವಲ್ಪ ವ್ಯತ್ಯಾಸವಾದರೂ ಜನಜೀವನ ಅಸ್ತವ್ಯಸ್ಥವಾಗುವುದು ನಿಚ್ಛಳವಾಗಿ ಗೋಚರಿಸುತ್ತದೆ. ಅಪಾಯಕಾರಿ ಸನ್ನಿವೇಶಗಳು ಪದೇ ಪದೇ ಎದುರಾಗುವ ಮತ್ತು ಅದನ್ನು ಎದುರಿಸುವ ವಾತಾವರಣ ಚಂದ್ರನಲ್ಲಿ ಇಲ್ಲ ಎಂಬ ಸತ್ಯ

ಮುಖಾಮುಖಿಯಾಗುತ್ತದೆ. ಭೂಮಿಯನ್ನು ಹೊರತುಪಡಿಸಿ ಮತ್ತೆಲ್ಲೂ ಮನುಷ್ಯ ಸುಖವಾಗಿ ಜೀವಿಸಲಾರ. ಭೂಮಿಯನ್ನು ನಾಶಪಡಿಸಿಕೊಂಡು ಬೇರೆಡೆ ಎಲ್ಲಿ ಜಾಗನ್ನು ಕಂಡುಕೊಂಡರೂ ಅವರ ಬದುಕು ಅಸ್ತವ್ಯಸ್ಥವೆಂಬುದನ್ನು ಭಿನ್ನನೆಲೆಗಳಲ್ಲಿ ಕಾದಂಬರಿ ಧ್ವನಿಸುತ್ತದೆ.

ಸ್ಪೇಸ್ ರೈಲು, ಲೂನಾರ್ ರೈಲು, ಲಾವಾ ಸುರಂಗಗಳನ್ನು ಬಳಸಿಕೊಂಡು ನಿರ್ಮಿತವಾದ ಹಳಿ, ೫೪ ಮೈಲಿ ವ್ಯಾಸವುಳ್ಳ ಟೈಕೊ ಕುಂಡದಿಂದ ಹೊರಡುವ ಬೆಳಕಿನ ರೇಖೆಗಳು, ವಾಯುವಿಲ್ಲದ ಪರಿಸರದಲ್ಲಿ ಸಂಪೂರ್ಣ ರೋಬೋಟ್‌ಗಳ ಯಂತ್ರಜಗತ್ತು, ಚಂದ್ರನಲ್ಲಿ ಹಸಿರು ಮನೆ, ಧೂಮಕೇತು ಅಪ್ಪಳಿಸಿದರೆ ಆಗಬಹುದಾದ ನಷ್ಟಗಳು, ಕ್ಷುದ್ರಗ್ರಹಗಳು ಹಾಯಬಹುದಾದ ಸಾಧ್ಯತೆ, ಆಕಾಶಕಾಯಗಳ ಘರ್ಷಣೆಯ ಸಾಧ್ಯತೆ, ದಾಳಿಯ ಸಂಭವನೀಯತೆ ಹೀಗೆ ಚಂದ್ರಲೋಕದಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಲೇಖಕಿ ತರ್ಕಿಸಿ ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಅಲ್ಲಿ ಮನುಷ್ಯ ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಎದುರಿಸಬೇಕಾದ ಸವಾಲುಗಳು ಹಾಗೂ ಸ್ಪರ್ಧೆಗಳು, ಮಾನಸಿಕವಾಗಿ ಅನುಭವಿಸಬಹುದಾದ ಒಂಟಿತನ, ರೋಬೋಟ್‌ಗಳೊಂದಿಗಿನ ಬದುಕು ಮುಂತಾದ ಸಂಭವನೀಯ ಸನ್ನಿವೇಶಗಳನ್ನು ಎಳೆ ಎಳೆಯಾಗಿ ಸೃಷ್ಟಿಸಲಾಗಿದೆ. ಆಧುನೀಕರಣ ತಂದೊಡ್ಡುವ ಕೆಲವು ಸವಾಲುಗಳು ಕಲ್ಪನೆಗಳಾಗಿದ್ದರೂ, ಕ್ಷಿಪ್ರಗತಿಯಲ್ಲಿ ಮುಂದುವರಿಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಗಳಿಗೆ ಕಲ್ಪನೆಯನ್ನು ಸಾಕಾರಗೊಳಿಸುವ ಸಾಧ್ಯತೆ ಇದೆ.

ಭೂಖಂಡದಾಚೆಗಿನ ಜೀವನದ ಅವಲೋಕನ, ಹೊಸ ಆವಿಷ್ಕಾರಗಳು, ಅತ್ಯಾಧುನಿಕ ಉಪಕರಣಗಳು, ವೈಜ್ಞಾನಿಕ ಸಾಧನೆ, ಅವು ಉಂಟು ಮಾಡುವ ಪರಿಣಾಮ, ಗೊಂದಲದಲ್ಲಿರುವ ಹಲವು ನಿಗೂಢಗಳಿಗೆ ಕಾಲ್ಪನಿಕ ಮಾಂತ್ರಿಕ ಸ್ಪರ್ಶ, ಕಾದಂಬರಿ ಉದ್ದಕ್ಕೂ ಕಂಡುಬರುವ ಜೀವನ ಪ್ರೀತಿ, ಚಂದ್ರಲೋಕ ತಲುಪಿದರೂ ಮನುಷ್ಯ ತನ್ನ ಭಾವನೆಗಳಿಗೆ ಬಂಧಿಯಾಗಿರುವ ಅಂಶವನ್ನು ಸ್ಪಷ್ಟವಾಗಿ ಲೇಖಕಿ ಚಿತ್ರಿಸುತ್ತಾರೆ. ಚಂದ್ರನ ಮೇಲಿನ ವೀಕ್ಷಣಾಲಯದಲ್ಲಿ ಕಾರ್ಯ ನಿರ್ವಾಹಕಿ ಇರಾ ಹಾಗೂ ಆಪರೇಷನ್ ವಿಭಾಗದ ಕಾರ್ಯಾಚರಣೆ ತಂಡದ ಮುಖ್ಯಸ್ಥ ಅವಧೂತನ ಪ್ರೇಮಹಂದರ ಕಾದಂಬರಿಯಲ್ಲಿ ಸಹಜವೆಂಬಂತೆ ಬೆರೆತಿದೆ. ಅತಿ ವಿರಳ ಸನ್ನಿವೇಶಗಳಲ್ಲಿ ಪ್ರೇಮಕತೆ ಚಿತ್ರಿತವಾಗಿದ್ದು, ಜನಪ್ರಿಯ ಕಾದಂಬರಿಯಾಗುವ ಹಂತದಿಂದ 'ಗಾಳಕ್ಕೆ ಸಿಕ್ಕ ಚಂದಿರ' ಪಾರಾಗಿದೆ. ಕಾದಂಬರಿಯ ಮೂಲ ಕೇಂದ್ರ ವೈಜ್ಞಾನಿಕ ಪ್ರಗತಿಯಾಗಿದ್ದರೂ ಮಾನವೀಯ ಅಂಶಗಳ ಸೆಲೆ ಕಾದಂಬರಿಯುದ್ದಕ್ಕೂ ಕಂಡುಬರುತ್ತದೆ. ಎಲ್ಲಾ ಕ್ಷೇತ್ರದಲ್ಲಿಯೂ ನಡೆಯುತ್ತಿರುವ ಸಂಶೋಧನೆ ಮತ್ತು ಪ್ರಗತಿ ಮುಂದಿನ ದಿನಗಳಲ್ಲಿ ಮತ್ತಷ್ಟು ವಿಸ್ತರಿಸಿಕೊಳ್ಳಬಹುದಾದ ಅಂಶಕ್ಕೆ ಈ ಕಾದಂಬರಿ ಅಡಿಪಾಯ ಹಾಕುತ್ತಿದೆ. ಆಧುನಿಕ ಸಂಶೋಧನೆ ಮತ್ತು ಜೀವನ ಶೈಲಿಯ ಇಣುಕು ನೋಟ ನಮ್ಮನ್ನು ಆಶ್ಚರ್ಯಕ್ಕೆ ಕೊಂಡೊಯ್ಯುತ್ತದೆ. ಮಾಹಿತಿಗಳನ್ನು ಕಲೆ ಹಾಕಿ, ಸ್ಪಷ್ಟ ವಿಶ್ಲೇಷಣೆಯಲ್ಲಿ ಬಾಹ್ಯಾಕಾಶದಲ್ಲಿ ಸಂಭವನೀಯ ಆಗುಹೋಗುಗಳನ್ನು ಲೇಖಕಿ ವಿಸ್ತರಿಸಿದ್ದಾರೆ.

ಟ್ರಾಫಿಕ್ ವಾರ್ಡನ್, ಟ್ರಾಫಿಕ್ ಇಂಜಿನಿಯರ್‌ಗಳು ಮತ್ತು ರೋಬೋಟ್‌ಗಳ ಘರ್ಷಣೆ, ಯಂತ್ರದ ಅಂಗಾಂಗಗಳನ್ನು ಹೊಂದಿರುವ ಅರೆಮಾನವರು, ಗಗನಯಾತ್ರಿಗಳು, ವಿಜ್ಞಾನಿಗಳು ಎದುರಿಸುತ್ತಿರುವ ಸಮಸ್ಯೆಗಳು, ೩ ವಿಭಾಗದಲ್ಲಿ ಕಂಡುಬರುವ ಸಂಚಾರ ವ್ಯವಸ್ಥೆಯನ್ನು ಅದನ್ನು ನಿಭಾಯಿಸುವಲ್ಲಿನ ಸವಾಲುಗಳನ್ನು ವೈಜ್ಞಾನಿಕ ತಳಹದಿಯಲ್ಲಿ 'ತ್ರಿಲೋಕ ಸಂಚಾರಿ ನೀರೆ' ಎಂಬ ಕಾದಂಬರಿಯಲ್ಲಿ ನಿರೂಪಿಸಿರುವ ಸವಿತಾ ಅವರು ಇಲ್ಲಿನ ಪ್ರಮುಖ ಪಾತ್ರಗಳನ್ನು ಚಂದ್ರಯಾನಕ್ಕೆ ವಿಹಾರಕ್ಕಾಗಿ ಕಳಿಸುವ ಮೂಲಕ 'ಗಾಳಕ್ಕೆ ಸಿಕ್ಕ ಚಂದಿರ' ಕಾದಂಬರಿಯಲ್ಲಿ ವಿಸ್ತರಣೆ ನೀಡುತ್ತಾರೆ.

ಭೂಮಿಯ ಬೃಹತ್ ಪ್ರದೇಶವನ್ನು ಬೆಂಕಿಯ ಜ್ವಾಲೆಗಳು ವ್ಯಾಪಿಸಿವೆ. ಭೂಮಿಯ ಅರಣ್ಯ ಪ್ರದೇಶದಲ್ಲಿ ಅಗ್ನಿ ಅನಾಹುತ ನಡೆಯುತ್ತಿದ್ದು, ವಾಯು ಮಾಲಿನ್ಯ ಹೆಚ್ಚಾಗಿ ಹಿಮ ಪ್ರದೇಶದಲ್ಲಿ ಉಷ್ಣಾಂಶ ಏರುಪೇರಾಗಿ ಮಂಜು ಕರಗುತ್ತಿದೆ. ಸಮುದ್ರ ಮಟ್ಟ ಏರುತ್ತಿದೆ ಎಂಬ ಆಘಾತಕಾರಿ ಸನ್ನಿವೇಶ ನಮ್ಮಿಂದ ಬಹಳ ದೂರವಿಲ್ಲ."ಭೂಮಿಯ ಸಂಕಷ್ಟದ ಸಮಯದಲ್ಲಿ ನಾವು ಅಲ್ಲಿ ಇರಬೇಕಿತ್ತೇನೊ ಅನಿಸಿದೆ. ಇಲ್ಲಿ ಭೂಮಿಯ ಮೇಲಿನ ಆಗುಹೋಗುಗಳ ಪರಿವೀಕ್ಷಣೆ ಹಾಗೂ ವಿಶ್ಲೇಷಣೆ ಕಾರ್ಯ ಜರುಗುತ್ತಿದೆಯೇ ಹೊರತು, ಭೌತಿಕವಾಗಿ ನಾವು ಅಲ್ಲಿ ಉಪಸ್ಥಿತರಿದ್ದು ಸಹಾಯಹಸ್ತ ಚಾಚಲಿಕ್ಕಾಗುತ್ತಿಲ್ಲವಲ್ಲಾ ಎಂಬ ಖೇದವಿದೆ"೫೫ ಎಂಬ ಇರಾಳ ಮಾತಿನಲ್ಲಿ ಮಾತೃ ಭೂಮಿಯತ್ತ ತುಡಿತ, ಮರಳಿ ಮಣ್ಣಿಗೆ ಹೋಗುವ ಹಂಬಲ ಎದ್ದು ಕಾಣುತ್ತದೆ. ಈ ಕಾದಂಬರಿಯ ಅಂತ್ಯ ಮುಂದಿನ ಕಾದಂಬರಿಯ ಆರಂಭಕ್ಕೆ ಪೂರಕವಾಗುತ್ತದೆ. 'ಗಾಳಕ್ಕೆ ಸಿಕ್ಕ ಚಂದಿರ' ಕಾದಂಬರಿಯ ಪ್ರಮುಖ ಪಾತ್ರಗಳು ಭೂಮಿಯ ಸಮಸ್ಯೆಯ ಪರಿಹಾರ ಕಾರ್ಯದಲ್ಲಿ ತಮ್ಮ ಸೇವೆ ಸಲ್ಲಿಸಲು ಅವರ ಮುಂದಿನ ಕಾದಂಬರಿ 'ಮುಗಿಲಗಲ ಜಗದಗಲ'ಕ್ಕೆ ಚಲಿಸುತ್ತಾರೆ. ಈ ರೀತಿಯ ವೈಜ್ಞಾನಿಕ ಸರಣಿಯ ಕಾದಂಬರಿಗಳು ಕನ್ನಡದಲ್ಲಿ ಅಪರೂಪವೆನ್ನಬಹುದು.

ಕೊನೆ ಟಿಪ್ಪಣಿಗಳು :

೧. ಡಾ.ಬಿ.ಎಸ್.ಶೈಲಜಾ(ಸಂ), ವಿಜ್ಞಾನ ಸಾಹಿತ್ಯ೨೦೦೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೯, ಪು ೭.
೨. ಸವಿತಾ ಶ್ರೀನಿವಾಸ, ಗಾಳಕ್ಕೆ ಸಿಕ್ಕ ಚಂದಿರ, ಟೋಟಲ್ ಕನ್ನಡ, ೨೦೨೦, ಪು ೪೦.
೩. ಸವಿತಾ ಶ್ರೀನಿವಾಸ, ಗಾಳಕ್ಕೆ ಸಿಕ್ಕ ಚಂದಿರ, ಟೋಟಲ್ ಕನ್ನಡ, ೨೦೨೦, ಪು ೩೯.
೪. ಶ್ರೀಕಾಂತ, ಮಂಕುತಿಮ್ಮನ ಕಗ್ಗ – ತಾತ್ಪರ್ಯ, ಶ್ರೀರಂಗ ಪ್ರಿಂಟರ್ಸ್ ಪ್ರೈ.ಲಿ೨೦೨೨,ಪು೨೬.
೫. ಸವಿತಾ ಶ್ರೀನಿವಾಸ, ಗಾಳಕ್ಕೆ ಸಿಕ್ಕ ಚಂದಿರ, ಟೋಟಲ್ ಕನ್ನಡ, ೨೦೨೦, ಪು ೬.
೬. ಸವಿತಾ ಶ್ರೀನಿವಾಸ, ಗಾಳಕ್ಕೆ ಸಿಕ್ಕ ಚಂದಿರ, ಟೋಟಲ್ ಕನ್ನಡ, ೨೦೨೦, ಪು ೧೧೭.

ಆಕರ ಗ್ರಂಥ :

೧. ಸವಿತಾ ಶ್ರೀನಿವಾಸ, ಗಾಳಕ್ಕೆ ಸಿಕ್ಕ ಚಂದಿರ, ಟೋಟಲ್ ಕನ್ನಡ, ೨೦೨೦.

ಪರಾಮರ್ಶನ ಗ್ರಂಥಗಳು :

೧. ಡಾ.ಬಿ.ಎಸ್.ಶೈಲಜಾ(ಸಂ), ವಿಜ್ಞಾನ ಸಾಹಿತ್ಯ೨೦೦೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೯.
೨. ಸವಿತಾ ಶ್ರೀನಿವಾಸ, ತ್ರಿಲೋಕ ಸಂಚಾರಿ ನೀರೆ, ನವಕರ್ನಾಟಕ ಪ್ರಕಾಶನ, ೨೦೧೯.
೩. ಸವಿತಾ ಶ್ರೀನಿವಾಸ, ಮುಗಿಲಗಲ ಜಗದಗಲ, ಅಪ್ರಕಟಿತ.
೪. ಶ್ರೀಕಾಂತ, ಮಂಕುತಿಮ್ಮನ ಕಗ್ಗ – ತಾತ್ಪರ್ಯ, ಶ್ರೀರಂಗ ಪ್ರಿಂಟರ್ಸ್ ಪ್ರೈ.ಲಿ೨೦೨೨.

ವಿವಾಹ ಸಂಸ್ಕೃತಿ: ವೈಜ್ಞಾನಿಕ ಚಿಂತನೆಗಳು

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು ಸ್ವಾಯತ್ತ, ಬೆಂಗಳೂರು

"ವಿವಾಹವೆಂಬುದು ಒಂದು ವೈಜ್ಞಾನಿಕ ಚಿಂತನೆ. ಜೀವ ಸೃಷ್ಟಿಯ ಕಾರ್ಯಕಾರಣಕ್ಕಾಗಿ ನಿಯೋಜಿಸಿರುವ ಭದ್ರಕೊಂಡಿ. ಇದನ್ನು ವೈಜ್ಞಾನಿಕವಾಗಿ ಆಲೋಚಿಸಿದಷ್ಟೂ ಅರ್ಥಪೂರ್ಣ ಸೃಷ್ಟಿಗಳು ಕಾಣಸಿಗುತ್ತವೆ. ಹಾಗೆಯೇ ಇಲ್ಲಿ ಮೂಢನಂಬಿಕೆ, ಸಂಬಂಧಗಳ ಮನೋಚಿಂತನೆಯಲ್ಲಿ ಸೃಷ್ಟಿಯ ಅಧಃಪತನವನ್ನು ನಾವು ಹಲವು ಮಾದರಿಯಲ್ಲಿ ಗಮನಿಸಿದ್ದೇವೆ. ಇದು ಮನುಷ್ಯ ಲೋಕದಲ್ಲಿ ಮಾತ್ರ ಕಾಣುವ ಒಂದು ವಿಸ್ತಾರವಾದ ಸರಪಣಿಯಾಗಿದೆ. ಈ ಮೂಲಕ ಮನುಷ್ಯನು ತನ್ನ ಮೂಲವನ್ನು ಉಳಿಸುತ್ತಾ ಬಂದಿದ್ದಾನೆ. ಪ್ರಾಣಿ, ಪಕ್ಷಿ, ಜೀವ ಜಂತುಗಳ ಲೋಕದಲ್ಲಿ ನಾಲ್ಕೈದು ತಲೆಮಾರಿಗೆ ವಂಶವೇ ನಶಿಸುವುದನ್ನು ಕಾಣಬಹುದು. ಈ ವೈಜ್ಞಾನಿಕ ಆಲೋಚನೆಗಳು ಮನುಷ್ಯ ಲೋಕದಲ್ಲಿ ಜರುಗಿದಾಗ ಸಾಕಷ್ಟು ಸಮಸ್ಯೆಗಳೇ ಎದುರಾಗಿರಬಹುದು. ಇಂದಿಗೂ ಜಾತಿ, ಧರ್ಮಗಳು ವಿಶ್ವದಾದ್ಯಂತ ಭದ್ರಕೋಟೆಗಳಾಗಿ ಕೆಲಸಮಾಡುತ್ತಿರುವಾಗ ನಮ್ಮ ಮುಂದುವರೆದ ಜ್ಞಾನದ ವಿಕೇಂದ್ರೀಕರಣವು ಹೇಗೆ ಸಾಧ್ಯ. ಆದರೂ, ಒಬ್ಬೊಬ್ಬರೇ ಅರ್ಥಪೂರ್ಣವಾಗಿ ವಿಜ್ಞಾನಮುಖಿ ಚಿಂತನೆಗಳಿಗೆ ಒಳಗಾಗುತ್ತಿರುವುದು ಹರ್ಷನೀಯ ಬೆಳವಣಿಗೆ.

ಪ್ರಮುಖ ಪದಗಳು: ವಿವಾಹ, ವೈಜ್ಞಾನಿಕ ಚಿಂತನೆ, ವಿಕೇಂದ್ರೀಕರಣ.

ಈ ಲೇಖನದಲ್ಲಿ ವಿವಾಹ ಕುರಿತು ಕೆಲವು ಅಂಶಗಳನ್ನು ಚರ್ಚಿಸಲು ಆಲೋಚಿಸಿದ್ದೇನೆ. ವಿವಾಹ ಸಾಮಾಜಿಕ ವಿಚಾರವಾದರೂ, ಇದೊಂದು ಭಾವನೆಗಳ ನಂಟನ್ನು ಹೊಂದಿ, ವೈಜ್ಞಾನಿಕ ಚಿಂತನೆಗಳ ಮೂಲಕ ಕಲೆ, ವಿಜ್ಞಾನ ಹಾಗೂ ವ್ಯವಹಾರಿಕ ವಿಚಾರವಾಗಿಯೂ ಇಂದು ಮರ್ಪಾಟು ಹೊಂದಿದೆ.

ಡಾ. ವಸುಂಧರ ಭೂಪತಿ ಅವರು ಸಂಪಾದಿಸಿರುವ 'ವಿಜ್ಞಾನ ಸಾಹಿತ್ಯ ೨೦೧೦' ಕೃತಿಯಲ್ಲಿ ಡಾ. ಜೆ. ಬಾಲಕೃಷ್ಣ ಅವರು ರಚಿಸಿರುವ 'ಪ್ರೇಮ, ಕಾಮ ಮತ್ತು ವಿಜ್ಞಾನ' ಲೇಖನದಲ್ಲಿ ತಿಳಿಸಿರುವಂತೆ "ಬಹುಪಾಲು ಎಲ್ಲ ಸಂಸ್ಕೃತಿಗಳು ಪ್ರೇಮವನ್ನು ಅಮರವೆಂದು ಹೇಳುತ್ತವೆ. ಆದರೆ ಪ್ರಕೃತಿಯಲ್ಲಿ 'ಅಮರ ಪ್ರೇಮ' ನಾಲ್ಕು ವರ್ಷಗಳಿಗೊಮ್ಮೆ ತೊಡರುತ್ತದೆ. ಎಂದು ವಿಜ್ಞಾನಿಗಳು ಹೇಳುತ್ತಾರೆ. ಆದಿ ಮಾನವ ಹೆಣ್ಣು–ಗಂಡು ಜೋಡಿಗಳು ತಮ್ಮ ಹಸುಗೂಸು ತುಸು ದೊಡ್ಡದಾಗುವವರೆಗೂ, ಅಂದರೆ ಸುಮಾರು ನಾಲ್ಕು ವರ್ಷಗಳು ಮಾತ್ರ ಒಂದಾಗಿರುತ್ತಿದ್ದರು. ಅದಾದ ನಂತರ ಅವರಿಬ್ಬರೂ ಬೇರೆ ಸಂಗಾತಿಗಳನ್ನು ಅರಸುತ್ತಿದ್ದರು ಹಾಗೂ ಪುನಃ ಆ ಹೊಸ ಸಂಗಾತಿಗಳೊಂದಿಗೆ ತಮ್ಮ ಭಾವುಕ ಬಂಧನ ಆರಂಭವಾಗುತ್ತಿತ್ತು. ಇದರ ಬಗ್ಗೆ ೬೨ ವಿವಿಧ ಸಂಸ್ಕೃತಿಗಳಲ್ಲಿ ಅಧ್ಯಯನ ನಡೆಸಿರುವ ಹೆಲೆನ್ ಫಿಶರ್ ಬಹುಪಾಲು ವಿವಾಹ ವಿಚ್ಛೇದನಗಳು ಮದುವೆಯಾದ ನಾಲ್ಕು ವರ್ಷಗಳ ನಂತರ ನಡೆಯುತ್ತಿದ್ದುದನ್ನು ಗಮನಿಸಿದ್ದಾರೆ. ಅಷ್ಟರಲ್ಲಿ ಆ ದಂಪತಿಗಳಿಗೆ ಮತ್ತೊಂದು ಮಗುವಾದಲ್ಲಿ ಮತ್ತೆ ನಾಲ್ಕು ಜೊತೆಯಾಗಿರುತ್ತಿದ್ದರು. ಹಾಗೆಂದಾಕ್ಷಣ ಅದೇ ಖಡಾಖಂಡಿತ ನಿಯಮವೆಂದೇನಲ್ಲ. ಶೇಕಡಾ ಐದರಷ್ಟು ಸ್ತನಿ ಜೀವಿಗಳು (Mammal) ತಮ್ಮ ಜೀವನಪರ್ಯಂತ ತಮ್ಮ ಸಂಗಾತಿಗಳಿಗೆ ನಿಷ್ಠರಾಗಿ ಜೀವನ ನಡೆಸುತ್ತವೆ. ತಮ್ಮ ಸಂಗಾತಿಗಳು ಆಕಾಲ ಮರಣಕ್ಕೀಡಾದಲ್ಲಿ ಒಂಟಿಯಾಗಿಯೇ ಜೀವನ ಸಾಗಿಸುತ್ತವೆ. ಮನುಷ್ಯನೂ ಸಹ ಪ್ರಾಚೀನ ಕಾಲದಿಂದಲೂ ಒಬ್ಬರೇ

ಸಂಗಾತಿಗಳೊಂದಿಗೆ ಜೀವನ ನಡೆಸುವ ಪ್ರಯತ್ನ ನಡೆಸುತ್ತಿದ್ದಾನೆ. ಈ ಪ್ರಯತ್ನದ ನಡುವೆ ಅವನ ವಿವಾಹೇತರ ಸಂಬಂಧಗಳು ಗೋಪ್ಯವಾಗಿ ನಡೆಯುತ್ತಿರುತ್ತವೆ. ಇದು ಜೀವವಿಕಾಸದ ನಿಯಮಕ್ಕನುಗುಣವಾಗಿ ಲಾಭದಾಯಕವೂ ಹೌದು ಏಕೆಂದರೆ ಇದರಿಂದ ಮುಂದಿನ ಸಂತತಿಗೆ ಹೊಸ ವಂಶವಾಹಿಗಳ ಸಂಯೋಜನೆಯು ದೊರೆಯುತ್ತದೆ. ಈ ರೀತಿಯ ಜೀವವೈವಿಧ್ಯತೆಯೇ ಜೀವವಿಕಾಸದ ಮೂಲೋದ್ದೇಶವಲ್ಲವೇ? ಈ ರೀತಿಯ ವಂಶವಾಹಿಗಳ ಸಂಯೋಜನೆಗೆ ಗೋಪ್ಯವಾಗಿ ಗಂಡು ಮಾತ್ರ ಹೊರಡುವುದಿಲ್ಲ, ಹೆಣ್ಣು ಸಹ ಪ್ರಾಚೀನ ಕಾಲದಿಂದಲೂ ಭಾಗಿಯಾಗಿದ್ದಾಳೆ. ವಾಸ್ತವವಾಗಿ ಪ್ರಕೃತಿಯಲ್ಲಿ ಗಂಡಿನ ಆಯ್ಕೆ ಮಾಡುವವಳೇ ಹೆಣ್ಣು. ತನ್ನ ಸಂತತಿ ಆರೋಗ್ಯವಾಗಿರಬೇಕು, ಬಲಿಷ್ಠವಾಗಿರಬೇಕು ಎಂದು ಬಯಸುವ ಆಕೆ ಆ ರೀತಿಯ ವಂಶವಾಹಿಗಳನ್ನು ತನ್ನ ಸಂತತಿಗೆ ಒದಗಿಸಬಲ್ಲ ಗಂಡನ್ನೇ ಅರಸುತ್ತಾಳೆ. ಇದು ಬಹುಪಾಲು ಎಲ್ಲ ಪ್ರಾಣಿ, ಪಕ್ಷಿಗಳಲ್ಲಿ ಕಂಡುಬರುತ್ತದೆ.

ರಾಸಾಯನಿಕಗಳ ಕಲಸುಮೇಲೋಗರ

ಡಿ.ಎನ್.ಎ. ಆವಿಷ್ಕಾರ ಮಾಡಿ ನೊಬೆಲ್ ಪಾರಿತೋಷಕ ಪಡೆದ ಫ್ರಾನ್ಸಿಸ್ ಕ್ರಿಕ್ ಹೇಳುವಂತೆ ನಮ್ಮೆಲ್ಲ ಭಾವನೆಗಳು, ಆಸೆ ಆಕಾಂಕ್ಷೆಗಳು, ಸುಖದುಃಖಗಳು, ಜೀವನ ಪ್ರೀತಿ ಎಲ್ಲವೂ ನಮ್ಮ ದೇಹದಲ್ಲಿನ ನರಕೋಶಗಳ ಹಾಗೂ ಕೆಲ ರಾಸಾಯನಿಕಗಳ ಚಟುವಟಿಕೆಗಳ ಪ್ರತಿಫಲವಷ್ಟೆ. ನಮ್ಮ ದೈಹಿಕ ಹಾಗೂ ಮಾನಸಿಕ ಚಟುವಟಿಕೆಗಳನ್ನು ಹಾಗೂ ಅದರ ಸಮತೋಲನವನ್ನು ನಿಯಂತ್ರಿಸುತ್ತಿರುವುದು ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ರಾಸಾಯನಿಕಗಳ ಮಹಾಪೂರ. ಪ್ರೇಮಿಗಳು ಪ್ರೇಮದ ಅಲೆಗಳ ರಭಸಕ್ಕೆ ಕೊಚ್ಚಿಹೋಗುತ್ತಾರೆ. ಅದರಲ್ಲಿ ಉತ್ಪ್ರೇಕ್ಷೆಯೇನಿಲ್ಲ; ಅವರು ಅವರ ದೇಹದಲ್ಲಿನ ರಾಸಾಯನಿಕಗಳ ಮಹಾಪೂರದಲ್ಲಿ ಕೊಚ್ಚಿಹೋಗಿರುತ್ತಾರೆ. ಕಣ್ಣು ಕಣ್ಣು ಕೂಡಿದಾಗ. ಕೈ ಕೈ ತಗುಲಿದಾಗ ಅಥವಾ ಪ್ರೇಮಿಗಳ ದೇಹದ ವಾಸನೆ ಘ್ರಾಣಿಸಿದಾಗ ಮಿದುಳು ಕಾರ್ಯಪ್ರವೃತ್ತವಾಗಿ ರಾಸಾಯನಿಕಗಳ ಮಹಾಪೂರ ರಕ್ತದ ಮೂಲಕ ದೇಹದ ನರನಾಡಿಗಳಲ್ಲಿ ಪ್ರವಹಿಸುವಂತೆ ಮಾಡುತ್ತದೆ. ಇದರ ಪರಿಣಾಮವಾಗಿ ರಕ್ತ ನುಗ್ಗುವುದರಿಂದ ಕೆನ್ನೆ ಕೆಂಪಾಗುತ್ತದೆ. ಅಂಗೈಗಳು ಬೆವರತೊಡಗುತ್ತವೆ ಮತ್ತು ಉಸಿರಾಟ ಜೋರಾಗುತ್ತದೆ. ಆದರೆ ನೀವು ಆತಂಕಗೊಂಡಾಗ, ಅತೀವ ಮಾನಸಿಕ ಒತ್ತಡಕ್ಕೊಳಗಾದಾಗ ಸಹ ಇದೇ ರೀತಿ ಆಗುತ್ತದೆ. ವಾಸ್ತವವೆಂದರೆ ಎರಡೂ ಒಂದೇ ಹಾಗೂ ಎರಡರ ರಾಸಾಯನಿಕ ಪಥಗಳೂ ಒಂದೇ ರೀತಿ ಕಾರ್ಯ ನಿರ್ವಹಿಸುತ್ತವೆ. ವ್ಯತ್ಯಾಸವೆಂದರೆ, ಪ್ರೇಮದ ಒತ್ತಡ ಒಂದು ರೀತಿಯ ಸುಖಾನುಭವ ಕೊಡುತ್ತದೆ. ಈ ಸುಖಾನುಭವಕ್ಕೆ ಕಾರಣವಾಗುವುದು ಡೋಪಮೈನ್, ನಾರ್‌ಎಪಿನೆಫ್ರಿನ್, ಸೆರೊಟೋನಿನ್ ಮತ್ತು ವಿಶೇಷವಾಗಿ ಫೀನೈಲ್‌ಈಥೈಲ್‌ಅಮೈನ್ ಎಂಬ ಆಂಫೀಟಮಿನ್ಸ್ ಗುಂಪಿಗೆ ಸೇರಿದ ರಾಸಾಯನಿಕಗಳು".

ಕಥೆ, ಕಾದಂಬರಿ, ಅಂಕಣಗಳ ಕಾರ್ಯ

ವಿವಾಹ ಕುರಿತು ನಮ್ಮ ಸಮಾಜದ ಆಧುನಿಕ ಇಲ್ಲವೆ ವೈಜ್ಞಾನಿಕ ಬದಲಾವಣೆಗಳನ್ನು ಸಾಮಾನ್ಯ ಜನಗಳಿಗೆ ತೋರಿಸುವ ಮಾಧ್ಯಮವೆಂದರೆ ಸಾಹಿತ್ಯ ಮಾತ್ರ. ಈ ಸಾಹಿತ್ಯದ ಅಭಿವ್ಯಕ್ತಿಯು ಇಂದು ನೂರಾರು ಮಾದರಿಗಳಲ್ಲಿ ಇರಬಹುದು. ಕಥೆ, ಕಾದಂಬರಿ, ಅಂಕಣ ಮೊದಲಾದ ಸಾಹಿತ್ಯ ಪ್ರಕಾರಗಳು ನಿರೂಪಿಸುವ ಸಮಾಜದ ಅಭಿವ್ಯಕ್ತಿಗಳು ತುಂಬಾ ಹಳೆಯ ಮಾದರಿಗಳನ್ನೇ ಅನುಸರಿಸುವ ಪ್ರಕ್ರಿಯೆಗಳನ್ನು ಗಮನಿಸಬಹುದು. ಈ ವಿಚಾರದಲ್ಲಿ ಅಂಕಣ ಸಾಹಿತ್ಯಗಳು ಸ್ವಲ್ಪ ಹೊರತಾಗಿವೆ. ಅಂಕಣ ಸಾಹಿತ್ಯವು ಆಧುನಿಕ ಪ್ರಕ್ರಿಯೆಗಳ ಮುಖಾಮುಖಿಯಾಗಿ ಕೆಲಸಮಾಡುತ್ತಾ ತನ್ನದೇ ಬೌದ್ಧಿಕ ನಿರ್ವಚನಗಳಿಗೆ ದಾರಿ ಮಾಡಿಕೊಟ್ಟಿದೆ. ನೇಮಿಚಂದ್ರ ಅವರ ಅಂಕಣ ಬರಹಗಳಿಂದಿಡಿದು, ಗೀತಾ ವಸಂತ ಅವರ ಅಂಕಣಗಳವರೆಗೂ ವರ್ತಮಾನ ಪ್ರತಿನಿಧಿಸುವ ವಿಚಾರಗಳು ಅಡಗಿರುತ್ತವೆ. ಇಲ್ಲಿ ವಿವಾಹದ ಹೊಸ ಅರ್ಥಗಳು ಸಂಕಲನಗೊಂಡಿರುತ್ತವೆ.

ವಿವಾಹವೆಂಬ ನೆಪದ ಮೂಲಕ ಬಂಡವಾಳದ ಆಕ್ರಮಣ, ಸುಖದ ನೇಪಥ್ಯ ಇವೆಲ್ಲವನ್ನೂ ಪ್ರತಿನಿಧಿಸಿ ಹೆಣ್ಣು ಭೋಗದ ವಸ್ತುವಲ್ಲ, ಆಕೆಯು ವ್ಯಾಪಾರದ ಸರಕೂ ಅಲ್ಲವೆಂಬ ಧೈರ್ಯವನ್ನು ಇತ್ತಿಚಿನ ಅಂಕಣಗಳು ನಿರೂಪಿಸಿವೆ. ಕವಿತೆ, ಸಂಶೋಧನೆ ಮತ್ತು ವಿಮರ್ಶೆಗಳು ವಿವಾಹದ ಕುರಿತು ಎತ್ತಿರುವ ಪ್ರಶ್ನೆಗಳು ವರ್ತಮಾನದ ಓದುವಿಗೆ ಬಹುದೊಡ್ಡ ಕೊಡುಗೆ. ಆದರೆ ಸೃಜನ ಬರಹಗಳಲ್ಲಿ ಕವಿತೆಯು ಅತ್ಯಂತ ಸೂಕ್ತ ಅಸ್ತ್ರವಾದರೂ, ಕಥೆಗಿರುವ ಓದುವಿನ ಸುಲಭ ದಾರಿಗಳು ಕವಿತೆಗಿಲ್ಲ. ಕವಿತೆಯು ನೇರವಾಗಿ ಹೇಳುವುದಿಲ್ಲ. ಕಥೆಗಳು ನೇರವಾಗಿಯೇ ನಿರೂಪಿಸುತ್ತವೆ.

ಎಂ.ಎಸ್ ರುದ್ರೇಶ್ವರ ಸ್ವಾಮಿ ಅವರ ಅವಳ ಕವಿತೆ ಸಂಕಲನದ ಒಂದು ಕವಿತೆಯನ್ನು ಗಮನಿಸೋಣ..

ಇರಬೇಕು ಅಂದು ಕೊಂಡಿದ್ದೆವು

ಇಬ್ಬರು

ಸಹಯಾತ್ರಿಗಳು ಇದ್ದ ಹಾಗೆ, ಒಂದೇ
ರಸ್ತೆಯಲ್ಲಿ ನಡೆಯುತ್ತಿದ್ದರೂ
ಕಟ್ಟುಪಾಡಿಲ್ಲದ, ಬಂಧನ
ಬೀತಿಯಿಲ್ಲದ
ಮಾತು ಕೊಡಬೇಕಿಲ್ಲದ, ನಿರೀಕ್ಷೆ–
ಗಳಿಲ್ಲದ ಬದುಕು
ಬಾಳಬೇಕು ಎಂದು–
ಕೊಂಡಿದ್ದೆವು

ಈ ಕವಿತೆ ಕುರಿತು ಅಧ್ಯಯನಕಾರರಾದ ಶ್ರೀದೇವಿ ಕೆರೆಮನೆ ಅವರ ಚಿಂತನೆಗಳು ಹೀಗಿವೆ.
ಹೆಣ್ಣು ಮತ್ತು ಗಂಡಿನ ನಡುವಣ ಸಂಬಂಧಕ್ಕೆ ಅಣ್ಣ, ತಮ್ಮ, ಅಪ್ಪ, ಗೆಳೆಯ, ಪ್ರೇಮಿ, ಗುರು ಎಂಬಂತಹ ಒಂದು ನಿರ್ಧಿಷ್ಟ ಹೆಸರು ಬೇಕೇ? ಅಂತಹುದ್ದೊಂದು ನಿರ್ದಿಷ್ಟ ಹೆಸರುಗಳಿಲ್ಲದ ಆತ್ಮೀಯ ಸಂಬಂಧವೊಂದು ಯಾಕೆ ಸಾಧ್ಯವಿಲ್ಲ? ಅವನು ಎಂದರೆ ಅಣ್ಣ, ತಂದೆ, ಪ್ರಿಯಕರ, ಅಥವಾ ಗಂಡನೇ ಯಾಕಾಗಬೇಕು? ಬಹುಶಃ ಇಂತಹ ಹೆಸರೇ ಬೇಕಿಲ್ಲದ ಒಂದು ಆತ್ಮಬಂಧು ಪ್ರತಿಯೊಬ್ಬ ಹೆಣ್ಣಿನ ಮನದಾಳದ ಬಯಕೆ.

ಅಂತಹ ನಿಜವಾದ ಸಂಬಂಧವೊಂದು ದೊರಕಿದರೆ ಅವಳಷ್ಟು ಅದೃಷ್ಟವಂತರು ಮತ್ಯಾರಿದ್ದಾರೆ? ಕವಿಗೂ ಅವಳಿಗೊಬ್ಬ ಅಂತಹ ಹೆಸರೇ ಬೇಕಿಲ್ಲದ ಸಂಬಂಧವೊಂದು ಬೇಕಿತ್ತು ಎಂಬುದನ್ನು ಗ್ರಹಿಸುತ್ತಾರಾದರೂ, ಆಕೆಗದು ಕನವರಿಕೆಯೇ. ಆದರೆ ಮಗಳು ತನು ಮಾತ್ರ, ತಿಂಗಳ ಮೇಲೆ ವಾರ ಕಳೆದರೂ ಸಂಜೆ ಬರುವ ಗೂಸ್ಲುವಿನ ಜೊತೆಗೆ ಮದುವೆ ಗಿದುವೆ ಏನಿಲ್ಲ ಎಂದು ನಿರ್ಭೀಡೆಯಿಂದ ಅಮ್ಮನಿಗೆ ಹೇಳುತ್ತಾಳೆ. ಅಮ್ಮ ಒಂದು ಕ್ಷಣ ಆಘಾತಕ್ಕೊಳಗಾದರೂ ತನಗಿಲ್ಲದ ಸ್ವಾತಂತ್ರ್ಯ ಮಗಳಿಗೆ ಲಭಿಸಿದ್ದಕ್ಕೆ ಸಮಾಧಾನಗೊಳ್ಳುತ್ತಾಳೆಯೇ? ಪ್ರಶ್ನೆಯೊಂದು ಹಾಗಿಯೇ ಉಳಿದು ಬಿಡುತ್ತದೆ.

ಒಂದು ಕವಿತೆಯು ನಿರೂಪಿಸುವ ಸ್ವಾತಂತ್ರ್ಯ, ಅರ್ಥ ಚಿಂತನೆಗಳು ಬೇರೆ ಯಾವ ಪ್ರಕಾರಕ್ಕೂ ಸಲ್ಲದ ಗುಣಮಟ್ಟ ಶಕ್ತಿ. ಆದರೆ, ಸಮಾಜದಲ್ಲಿ ಕವಿತೆಯನ್ನು ಓದುವವರು ಯಾರು ಎನ್ನುವುದರ ಮೇಲೆ ಅದು ಸಮಾಜದ ಮೇಲೆ ಪ್ರಭಾವಿಸುವ ಕ್ರಮಗಳು ಕಾಣುತ್ತವೆ. ಇಂದು ವಿವಾಹಕ್ಕಿರುವ ಅರ್ಥ, ಬದುಕುತ್ತಿರುವ ಸಾಧ್ಯತೆಗಳನ್ನು ಈ ಕವಿತೆಯು ಅಭಿವ್ಯಕ್ತಪಡಿಸುತ್ತಿದೆ. ಇದರ ಅಧ್ಯಯನಕಾರರು ಕೂಡ ಅತ್ಯಂತ ಅರ್ಥಪೂರ್ಣ ವಿಮರ್ಶೆಯನ್ನು ನೀಡಿದ್ದಾರೆ. ಅದು ಪ್ರತಿ ಶೋಷಣೆಯ ಮನಸ್ಸುಗಳನ್ನು ಎಚ್ಚರಗೊಳಿಸಿ, ಹೆಣ್ಣಿನ ನೈಜತೆಯನ್ನು ಸಮಾನತೆಗೆ ಕೊಂಡೊಯ್ಯುವ ಧೀಮಂತಿಕೆ ಕಾವ್ಯ ಜಗತ್ತಿನಲ್ಲಿ ಕಾಣಿಸಿರುವುದು ಹರ್ಷನೀಯ.

ಒಂದು ಕಥೆ ಮತ್ತು ಅಂಕಣ ಬರಹವನ್ನು ಎರಡು ಶತಮಾನಗಳ ಆಜುಬಾಜಿನಲಿಟ್ಟು ಗಮನಿಸೋಣ. ಈ ಇಬ್ಬರೂ ಲೇಖಕರು ವರ್ತಮಾನವನ್ನು ಅವುಗಳ ಸಾದೃಶ್ಯಗಳನ್ನು ಸಂಕಲಿಸಿ ಬರೆಯುವವರು. ಇವರಲ್ಲಿ ಯಾವ ವ್ಯತ್ಯಾಸಗಳಿವೆ. ಕವಿತೆಯಷ್ಟು ಕ್ರಾಂತಿ ಈ ಬರಹಗಳಿಗಿದೆಯೇ ಗಮನಿಸೋಣ.

ಅಮರೇಶ ನುಗಡೋಣಿ ಅವರ ಮಣ್ಣು ಸೇರಿತು ಬೀಜ ಕಥಾ ಸಂಕಲನದ ಬಯಲು ಆಲಯದೆಡೆಗೆ ಕಥೆಯ ಭಾಗವಿದು.

ಸೂರ್ಯ ಮೂಡುವ ಮುನ್ನ ಶಿವಯ್ಯ ಎದ್ದು ತೋಟ ಸುತ್ತ ತೊಡಗಿದ್ದ. ಮಂಜು ಕವಿದು ಜಗವೆಲ್ಲ ತೋದಿತ್ತು. ಚಳಿಗೆ ಹಕ್ಕಿ ಪಕ್ಷಿಗಳನ್ನು ಗೂಡಿನಿಂದೆದ್ದು ಹೊರಬರಲು ಅಂಜುತ್ತಿದ್ದವು. ತುಡುಗು ದನಗಳು ಬಂದ ಲಕ್ಷಣ ಕಾಣಲಿಲ್ಲ. ನಿತ್ಯಕರ್ಮ ಮುಗಿಸಲು ತಯಾರಾಗಿ ಗುಡಿಸಲು ಕಡೆ ಬಂದ. ಬಾವಿಯಲ್ಲಿ ಏನೋ ಸಪ್ಪಳವಾಯಿತು. ಬಂದು ನೋಡಿ ಬೆಕ್ಕಸ ಬೆರಗಾಗಿ ನಿಂತುಬಿಟ್ಟ. ಆಕೆ ಬಾವಿಯಲ್ಲಿ ಕುಳಿತು ಮೈಯಿಗೆ ನೀರು ಹಾಕಿಕೊಳ್ಳುತ್ತಿದ್ದಾಳೆ. ಮೈಮೇಲೆ ಚೂರು ಬಟ್ಟೆಯಿಲ್ಲ. ಶಿವಯ್ಯ ನೋಡಿ ಭಯದಿಂದ ಸರಿದು ಮರೆಯಾಗಿ ನಿಂತ. ನೋಡು ನೋಡುತ್ತಿದ್ದಂತೆ ಆಕೆ ಮೇಲೇರಿ ಬಂದು ಹಾಗೆಯೇ ಬೆತ್ತಲೆ ಬೆಟ್ಟದ ಕಡೆ ನಡೆದಳು.
ಬೆಟ್ಟ ಹತ್ತಿ ಹನುಮನ ಗುಡಿ ಸುತ್ತಿದಳು. ಚುಮು ಚುಮು ಬೆಳಕು ಹರಿಯುವ ಮುನ್ನಿನ ಸಮಯ, ಕಣ್ಣಾರೆ ಕಂಡ ಆತನ ಮನಸ್ಸು ಕದಡಿತು! ತನ್ನ ಹೆಂಡತಿ ನೆನಪಾದಳು! ಏನೇನೋ ಬಯಕೆಗಳು ಎದ್ದು ಕುಳಿತವು! ಎಷ್ಟು

ಪ್ರಯತ್ನಿಸಿದರೂ ಮನಸ್ಸಿನ ಉದ್ವೇಗ ಕಮ್ಮಿಯಾಗಲಿಲ್ಲ. ತನ್ನ ಸಂಸಾರದಲ್ಲಿ ಯಾವುದೋ ತೊಂದರೆಗೆ ಹೆಂಡತಿಯ ಜೊತೆಗೆ ಒಂದು ದಿನ ಜಗ್ಗಳ ವಾಯಿತು. ಅದೊಂದು ವಿಷಗಳಿಗೆ! ವಿಧಿಯ ಕೈವಾಡವೂ ಇರಬಹುದು! ಹತ್ತು ವರ್ಷದ ಒಬ್ಬ ಮಗನನ್ನು, ಹೆಂಡತಿಯನ್ನು ಬಿಟ್ಟು ಬಂದ ಶಿವಯ್ಯ ಹದಿನೈದು ವರ್ಷಗಳಾದರೂ ಆ ಕಡೆ ಹೋಗಿರಲಿಲ್ಲ. ಅವರ ನೆನಪನ್ನು ಮಾಸಿಕೊಂಡಿದ್ದ. ಈಗ ಈ ಸಂಸಾರ ನೋಡಿ ತನ್ನ ಹೆಂಡತಿ, ಮಗನ ನೆನಪು ತೀವ್ರವಾಗಿ ಮರುಕಳಿಸಿತ್ತು. ಬೆಟ್ಟಕ್ಕೆ ಬಂದ. ದಿನವಿಡೀ ಆ ಸಂಸಾರದ ಜತೆ ಕುಳಿತು ಮಾತನಾಡಿದ. ಆಕೆಯನ್ನು ನೋಡಿ ನೋಡಿ ಅವ್ಯಕ್ತವಾದ ನೋವಿನಿಂದ ನರಳಿದ. ಆಗಿನಿಂದ ಆತ ಹುಚ್ಚನಾಗತೊಡಗಿದ. ತೋಟದ ಕಡೆ ಲಕ್ಷ್ಯ ಹರಿಯದೆ ನಿಗಾ ಕಮ್ಮಿ ಯಾಯಿತು. ಉಳಿದ ಎರಡು ದಿನ ಆಕೆ ಬೆತ್ತಲೆ ಬಾವಿಯಲ್ಲಿ ಮುಳುಗುವುದನ್ನು, ಹನುಮನ ಗುಡಿ ಸುತ್ತುವುದನ್ನು ಮರೆಯಲ್ಲಿ ನಿಂತು ನೋಡಿದ. ಮತ್ತಷ್ಟು ಉದ್ವೇಗ ಹೆಚ್ಚಾಯಿತು.

ಹದಿನೈದು ವರ್ಷಗಳ ಕಾಲ ಮರೆತ ತನ್ನ ಸಾಂಸಾರಿಕ ಬದುಕು ಕಣ್ಣಮುಂದೆ ಮೂಡಿತು. 'ಈಗಲೇ ಹೆಂಡತಿಯನ್ನು ಹೋಗಿ ಅಪ್ಪಿಕೊಳ್ಳಲೇ' ಎಂದು ತವಕಿಸಿದ. ಪ್ರಕೃತಿಯಲ್ಲಿ ಒಂದಾಗಿ ಬೆಳೆಸಿಕೊಂಡ ಸಾತ್ವಿಕ ಶಕ್ತಿಯನ್ನು ಕಳೆದುಕೊಂಡ. ಸೋಲ ತೊಡಗಿದ! ಈ ಮೂರು ದಿನಗಳಲ್ಲಿ ನಾಲ್ಕಾರು ಸಲ ತುಡುಗು ದನಗಳು ಬಂದು ತೋಟ ಹೊಕ್ಕು ಹಾಳುಮಾಡುತ್ತಲೇ ಇದ್ದವು.

ಇಲ್ಲಿ ಅಭಿವ್ಯಕ್ತಗೊಳ್ಳುವ ಭಾವವು ಶಿವಯ್ಯನದೇ ಅಥವಾ ಪ್ರತಿಯೊಂದು ಜೀವಿಯಲ್ಲೂ ತಾನು ನಿಯಂತ್ರಿಸಲಾರದ ವೈಜ್ಞಾನಿಕ ತುಡಿತವೇ ಮೊದಲಾದ ಪ್ರಶ್ನೆಗಳು ಕಾಡುತ್ತವೆ. ಏಕೆಂದರೆ, ಇಲ್ಲಿ ವಿವಾಹದ ವಿಷಯವು ನೇರವಾಗಿ ನಮೂದಾಗದಿದ್ದರೂ ತನ್ನ ಕಾಮದ ತುಡಿತಗಳನ್ನು ವಿವಾಹವಾದ ಹೆಂಡತಿಯೊಂದಿಗೆ ಹೊಂದಬೇಕೆಂಬ ಬಯಕೆಯು ವೈಜ್ಞಾನಿಕ ಅಂಶಗಳನ್ನು ಅತ್ಯಂತ ನಾಗರೀಕವಾಗಿ ರೂಪಿಸಿಬಿಡುತ್ತದೆ. ಇಲ್ಲಿ ಆಧುನಿಕ ತುಡಿತಗಳ ಪರಿತಾಪಗಳಿಲ್ಲ. ಮನುಷ್ಯ ಸಂಸ್ಕೃತಿಯಲ್ಲಿ ನಿರ್ಮಿಸಿದ ವಿವಾಹದ ಚಿಂತನೆಗಳನ್ನು ಸರಿಯಾಗಿ ಗ್ರಹಿಸುವ ಪಠ್ಯಗಳು ಕಳೆದ ಶತಮಾನದಲ್ಲಿ ಜರುಗಿವೆ.

ಈ ಶತಮಾನದ ಪಠ್ಯಗಳನ್ನು ಗಮನಿಸುತ್ತಲೇ ವಿವಾಹವು ಹೇಗೆ ಸಂದಿಗ್ಧವಾದ ಸ್ಥಿತಿಯಾಗಿ ಪರಿಣಮಿಸಿದೆ ಎಂಬುದನ್ನು ವೈಜ್ಞಾನಿಕವಾದ ಚಿಂತನೆಗಳಲ್ಲಿ ಪರೀಕ್ಷಿಸಬಹುದು. ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಅವರ ಚಿಂತನೆಗಳಲ್ಲಿ ಲೈಂಗಿಕ ತುಡಿತಗಳನ್ನು ಹತ್ತಿಕ್ಕುವ ಮಿತಿಗಳು ಇಲ್ಲದಿರಬಹುದು. ಅಂತಹ ಚಿಂತನೆಗಳು ನಮ್ಮ ಸಮಾಜದಲ್ಲಿ ಸಹಜವಾಗಿಯೇ ಜರುಗಬಹುದು. ಆದರೆ, ಅದು ವೈಜ್ಞಾನಿಕವೇ? ರಕ್ತಸಂಬಂಧಗಳಲ್ಲಿ ಕೂಡುವುದು ಅವೈಜ್ಞಾನಿಕವೇ? ತಿಳಿದು ಕೂಡುವ ಚಿಂತನೆಗಳನ್ನು ಹೇಗೆ ಮನುಷ್ಯ ನಾಗರೀಕತೆಯು ಚರ್ಚಿಸಬಹುದು. ಚರ್ಚಿಸಿದರೂ, ಅದು ಸಂಸ್ಕೃತಿಯೇ ಎಂಬ ಹಲವು ಪ್ರಶ್ನೆಗಳು ವಿವಾಹ ಪರಿಕಲ್ಪನೆಯ ಅಡಿಯಲ್ಲಿ ಚರ್ಚೆಗೆ ಒಳಗಾಗುತ್ತವೆ.

ಲೈಂಗಿಕ ಚಿಂತನೆಗಳು

ಇತ್ತೀಚಿನ ವಿವಾಹಗಳು ಬೌದ್ಧಿಕವಾದ ಆಲೋಚನೆಗಳಾಗಿರುವುದು ವಿಶೇಷ ಅನಿಸುತ್ತದೆ. ಈ ಕುರಿತ ಕಥೆ, ಕಾದಂಬರಿಗಳು ಅತ್ಯಂತ ಕಡಿಮೆ ಇವೆ. ನಮ್ಮ ಹಳೆಯ ಅವೈಜ್ಞಾನಿಕ ಚಿಂತನೆಗಳನ್ನೇ ತಮ್ಮ ಮೂಲಬೇರಿನ ನೆನಪು ಎಂಬಂತೆ ನೀಡುವ ಕಥನಗಳು ಸಾಕಷ್ಟು ಸುಳ್ಳುಗಳನ್ನು ಮುಂದುವರೆಸುತ್ತಿರುತ್ತವೆ. ಇನ್ನೂ ಕೆಲವು ಅವೈಜ್ಞಾನಿಕ ಲೈಂಗಿಕ ಆಸಕ್ತಿಗಳನ್ನು ಕಥನಗೊಳಿಸುವ ಇನ್ನಷ್ಟು ಕೃತಿಗಳು 'ಓದುಗಳನ್ನು' ಓದಿನ ಪರಿಣಾಮದ 'ಸಮಾಜವನ್ನು' ಮೌಢ್ಯತೆಗೆ ತೆಗೆದುಕೊಂಡು ಹೋಗುವ ಸಾಕ್ಷಿಗಳಾಗಿವೆ.

ಲೈಂಗಿಕತೆ ಎಂಬುದು ಇತ್ತೀಚಿಗೆ ಸಹಜವಾದ ವಿಷಯವಾಗಿದೆ. ಅದು ವಿವಾಹ ಪರಿಧಿಗೆ ಸಂಬಂಧಿಸದ ಒಂದು ಸುಖದ ಆಯಾಮವಾಗಿ ಮಾರ್ಪಟ್ಟಿರುವುದು ನಾವು ಮನುಷ್ಯ ಲೋಕದಲ್ಲಿ ತೆರೆದ ವೈಜ್ಞಾನಿಕ ಆಲೋಚನೆಗಳಿಗೆ ವಿರುದ್ಧವಾಗಿದೆ. ಈ ರೀತಿಯಲ್ಲಿ ಪ್ರತಿ ಮುಂಜಾನೆ ಬೀದಿ ಬೀದಿಯಲ್ಲೂ ಚೆಲ್ಲುವ ಕಾಂಡೋಮ್‌ಗಳ ಕಥೆಯನ್ನು ಹೇಗೆ ನಿರ್ವಚಿಸಬೇಕಿದೆ. ಇದನ್ನು ಸಮರ್ಥಿಸುವ ಆಲೋಚನೆಗಳೂ ಅತಿ ಹೆಚ್ಚಿರುವಾಗ ಆರೋಗ್ಯಯುತ ಲೈಂಗಿಕ ಸುಖವನ್ನು ವೈದ್ಯಕೀಯದಲ್ಲಿ ವಿವರಿಸಲು ಸಾಧ್ಯವೇ? ಈ ಎಲ್ಲಾ ಪ್ರಶ್ನೆಗಳು ನಮ್ಮನ್ನು ವಿವಾಹ ಚಿಂತನಗಳಲ್ಲಿ ಕಾಡುತ್ತಿವೆ. ಇದೊಂದು ಸಂಶೋಧನೆಯ ವಿಚಾರವಲ್ಲ ಎಂಬಂತೆ ಸಮಾಜವೂ ಮೌನವಾಗಿದೆ. ಕಾನೂನುಗಳು ಕೂಡ ಲೈಂಗಿಕ ಸ್ವಾತಂತ್ರ್ಯವನ್ನು ಸಾಂವಿಧಾನಿಕಗೊಳಿಸುವ ಪ್ರಕ್ರಿಯೆ ನಡೆಸಿವೆ. ಒಪ್ಪಿತ ಲೈಂಗಿಕತೆ ಸರಿ ಎನ್ನುವಾಗ 'ಸೃಷ್ಟಿ'ಯ ಪ್ರಾರಂಭದಲ್ಲೋ, 'ಸೃಷ್ಟಿ' ನಂತರವೋ ಇದಕ್ಕೆ ಕಾನೂನಿನ ನಿಯಮಗಳಿಲ್ಲ. ಒಪ್ಪಿತವಾದರೆ ಲೈಂಗಿಕವಾದ ಅಪರಾಧವಲ್ಲ

ಎಂಬ ಹಿನ್ನಲೆಯಲ್ಲಿ ಮನುಷ್ಯ ಸಂಸ್ಕೃತಿಯನ್ನು ಸಾಹಿತ್ಯ ಅಥವಾ ಶಿಕ್ಷಣದಲ್ಲಿ ಹೇಗೆ ಕಲಿಸಲು ಸಾಧ್ಯವೆಂಬ ಹಲವು ಪ್ರಶ್ನೆಗಳು ಚರ್ಚೆಯಾಗುತ್ತವೆ.

ಪ್ರೀತಿ ಮತ್ತು ವಿವಾಹದ ನಡುವೆ

ಪ್ರೀತಿ ಮತ್ತು ವಿವಾಹಗಳು ಹೇಗೆ ವೈಜ್ಞಾನಿಕವಾಗಿ ಮನುಷ್ಯನ ಮಾನಸಿಕ ಹಾಗೂ ದೈಹಿಕವಾಗಿ ವಿಭಿನ್ನ ಆಲೋಚನೆಗಳನ್ನು ತಳೆಯುತ್ತವೆ ಎಂಬುದನ್ನು ಇಲ್ಲಿ ಚರ್ಚಿಸಬಹುದು. ಪ್ರೀತಿ ಬಾಹ್ಯ ಆಕರ್ಷಣೆ. ವಿವಾಹದ ಪೂರ್ವ ಮೆಟ್ಟಿಲು ಎನ್ನುತ್ತಾರೆ. ಆದರೆ, ವೈಜ್ಞಾನಿಕ ಅನ್ವೇಷಣೆ ಮಾಡಿದರೆ, ಲೈಂಗಿಕ ಚೈತನ್ಯಕ್ಕೆ, ಮಾನಸಿಕ ತೃಪ್ತಿಗಳಿಗೆ ಹೇಗೆ ಕರಣವಾಗಿದೆ ಎಂಬುದನ್ನು ಅಧ್ಯಯನಮಾಡಬಹುದು. ಈ ಕುರಿತಾಗಿ ಮೊದಲಿಗೆ ಜೋಗಿ ಅವರ ಬರಹವನ್ನು ಗ್ರಹಿಸಬಹುದು.

> ಪ್ರೀತಿ ಅನ್ನುವುದು ಕೂಡ ಅತ್ಯಂತ ಕಮರ್ಷಿಯಲ್, ಇವತ್ತು ಜಗತ್ತಿನಲ್ಲಿ ತಯಾರಾಗುವ ಎಲ್ಲಾ ಸಿನೆಮಾಗಳ ವಸ್ತುವೂ ಪ್ರೀತಿ. ಪ್ರೀತಿಯ ಕುರಿತ ಕತೆ, ಕಾದಂಬರಿ, ಸಿನೆಮಾ ಸಂಪಾದಿಸಿ ದಷ್ಟು ದುಡ್ಡನ್ನು ಯಾವ ಕಥಾವಸ್ತುವೂ ಸಂಪಾದಿಸಿಲ್ಲ. ಯಾವ ಉದ್ಯಮವೂ ಸಂಪಾದಿಸಿಲ್ಲ.
> ಅಷ್ಟೇ ಅಲ್ಲ, ಮತ್ತೊಂದು ಕಾರಣಕ್ಕೂ ಪ್ರೀತಿ ಕಮರ್ಷಿಯಲ್ಲು, ಪ್ರೀತಿಸುತ್ತಲೇ ಇರುವ ಹುಡುಗಿಗೆ ಹುಡುಗನ ಆಸ್ತಿಯಲ್ಲಿ ಪಾಲಿಲ್ಲ. ಅದೇ ಮದುವೆಯಾದರೆ ಆಸ್ತಿ ಆಕೆಯದು. ಆದ್ದರಿಂದ ಪ್ರೀತಿಸಿದವರು ಮದುವೆ ಆಗಲೇಬೇಕು. ಮದುವೆ ಆದ ಮೇಲೆ ಯಥಾ ಪ್ರಕಾರ, ಆಸ್ತಿ, ಸಂಪತ್ತು, ಮನೆ, ಮಕ್ಕಳು, ಸಂಸಾರ, ಸ್ವಾರ್ಥ ಎಲ್ಲವೂ ಶುರುವಾಗುತ್ತದೆ. ಜಗತ್ತಿನ ಎಲ್ಲಾ ಜಗಳಗಳಿಗೂ ಕೌಟುಂಬಿಕ ಕಲಹಗಳಿಗೂ ಪ್ರೀತಿಯೇ ಮೂಲ.
>
> ಅಷ್ಟೇ ಅಲ್ಲ, ಪ್ರೀತಿ ತೀರಾ ಸಂಕುಚಿತ. ಒಬ್ಬರನ್ನಲ್ಲದೆ ಇನ್ನೊಬ್ಬರನ್ನು ಪ್ರೀತಿಸಿದರೆ ಅಲ್ಲಿ ಹಾಹಾಕಾರ. ಇಬ್ಬರನ್ನು ಮದುವೆಯಾಗುತ್ತೇನೆ ಅಂದರೆ ರಣರಂಗ, ಮದುವೆಯಾದರೆ ಜಗತ್ತೇ ಮುಳುಗಿಹೋದಂತೆ, ಆಕಾಶವೇ ಕಳಚಿ ಬಿದ್ದಂತೆ ಗಾಬರಿ, ಗಲಭೆ, ಕುರುಕ್ಷೇತ್ರ, ಮೊದಲ ಹೆಂಡತಿ, ನಂತರ ಬಂದವಳನ್ನೇಕೆ ಪ್ರೀತಿಸಬಾರದು. ಇಬ್ಬರೂ ಒಬ್ಬರನ್ನೇ ಯಾಕೆ ಮೆಚ್ಚಬಾರದು. ಇಬ್ಬರಿಗೂ ಬದನೆಕಾಯಿ ಎಣ್ಣೆಗಾಯಿ ಇಷ್ಟವಾದರೆ, ಒಬ್ಬನೇ ಹುಡುಗನನ್ನು ಯಾಕೆ ಪ್ರೀತಿಸುವಂತಿಲ್ಲ.
>
> ಅಲ್ಲಿ ಮತ್ತೆ ಆಸ್ತಿಪಾಸ್ತಿಯ ಪ್ರಶ್ನೆ ಬರುತ್ತದೆ. ಹಂಚಿಕೆಯ ಮಾತು ಬರುತ್ತದೆ. ಲೆಕ್ಕಾಚಾರ ಶುರುವಾಗುತ್ತದೆ. ಪ್ರೀತಿ ಯಾವ ಹಂತದಲ್ಲಿ ಪ್ರೀತಿಯ ಗುಣಗಳನ್ನು ಕಳೆದುಕೊಂಡು ಲೆಕ್ಕಾಚಾರ ಆಗುತ್ತದೆ ಅಂತ ಹೇಳೋದು ಕಷ್ಟ.
>
> ಪ್ರೀತಿಸುವುದು ಅಭ್ಯಾಸ ಆಗಿಬಿಟ್ಟರೆ ಮತ್ತೂ ಅಪಾಯ. ಅಭ್ಯಾಸ ಆಗದಿದ್ದರೂ ಅಪಾಯ. ಪ್ರೀತಿಯನ್ನು ಅಂತಸ್ಫೂರ್ತಿ ಅಂದರೂ ತಪ್ಪು, ಮೂಲಗುಣ ಅನ್ನುವುದೂ ತಪ್ಪು. ಪ್ರೀತಿ ಹಸಿವೆಯ ಹಾಗೆ; ಆಗುತ್ತದೆ. ನೋವಿನ ಹಾಗೆ; ನೋಯುತ್ತದೆ. ಅಜೀರ್ಣದ ಹಾಗೆ; ಅತಿಯಾದರೆ ತೊಂದರೆ ಮಾಡುತ್ತದೆ. ಬೆಳಕಿನ ಹಾಗೆ; ಕಡಿಮೆಯಿದ್ದರೂ ಕತ್ತಲೆ, ಅತಿಯಾದರೂ ಕಣ್ಣು ಕುಕ್ಕಿ ಕತ್ತಲೆ.
>
> ಹಾಗಿದ್ದರೆ ಎಂಥ ಪ್ರೀತಿ ಒಳ್ಳೇದು?
>
> ಜ್ವರದಂಥ ಪ್ರೀತಿ! ಬರಬೇಕು, ಬೆವರಿದಾಗ ಹೋಗಿಬಿಡಬೇಕು.

ಜೋಗಿಮನೆ ಕೃತಿಯ ಪ್ರೀತಿ ಎನುವ ಮಾಯೆ ಏನು ಮಾಡಿತು? ಎಂಬ ಜೋಗಿ ಅವರ ಲೇಖನದ ಚಿಂತನೆಗಳು ವಿಭಿನ್ನ ದೃಷ್ಟಿಕೋನಗಳನ್ನು ಚರ್ಚಿಸುತ್ತವೆ. ಪ್ರೀತಿ ಮತ್ತು ಮದುವೆಯ ನಡುವಣ ತಾನು ಏರ್ಪಡಿಸುವ ಕಂದಕ ಮತ್ತು ಬೆಸುಗೆಗಳನ್ನು ತಿಳಿಸುತ್ತದೆ. ಇದು ಮೂಲತಹಃ ಕಲಾ ವಿಷಯವೇ ಸರಿ. ಆದರೆ, ಗಂಡು ಮತ್ತು ಹೆಣ್ಣು ಅರ್ಥಪೂರ್ಣವಾಗಿ ಒಂದಾಗಲು ಪ್ರೀತಿ ಒಂದು ಅಸ್ತ್ರವಾಗುವುದಾದರೆ, ಪ್ರಯೋಗಾಲಯದಲ್ಲಿ ಬಳಸುವ ಆಸಿಡ್‌ಗಳ ಸ್ವರೂಪವೇ ತಾನೇ.. ಪ್ರೀತಿಯಿಂದ ಎರಡು ಮೂಲವಸ್ತುಗಳು ತನ್ನ ಸ್ವರೂಪವನ್ನೇ ಬದಲಿಸಿಕೊಂಡು, ಹೊಸದೊಂದು ಸೃಷ್ಟಿಗೆ ಕಾರಣವಾಗುವ ಪ್ರಕ್ರಿಯೆಯನ್ನು ಕಲೆಯಲ್ಲಿ ಗಮನಿಸಲಾರೆವು.

ಪ್ರೀತಿಯಲ್ಲಿ ಬಂಧನಗಳಿಲ್ಲ, ಅನುಭವಗಳು ಮಾತ್ರವೆನ್ನುವ ಜೋಗಿ ಅವರ ಚಿಂತನೆಯು ವಿವಾಹವನ್ನು ಬಂಧನದಂತೆ, ಮತ್ತು ಅದರಿಂದ ವ್ಯವಹಾರ ಜಗತ್ತು ತೆರೆಯುವ ಬಗೆಗಳನ್ನು ಗಂಭೀರಗೊಳಿಸುವ ಲೇಖಕರು, ಸೃಷ್ಟಿಯ ಕುರಿತು ಯಾವ ವ್ಯಾಖ್ಯಾನ ನೀಡಬಲ್ಲರು. ಮನುಷ್ಯನು ಸಂಪತ್ತು ಹೊಂದಿದಷ್ಟೂ ವ್ಯವಹಾರಗಳು ಜರುಗತ್ತವೆ. ಆದರೆ, ಆ ಸಂಪತ್ತೇ ಮುಖ್ಯ ಕಾರಣವಾಗಬಾರದು. ಇದೊಂದು ವೈಜ್ಞಾನಿಕ ಆಲೋಚನೆಯಾಬೇಕು. ಇಲ್ಲಿ ಭಾವನೆಗಳಲ್ಲಿ ನುಡಿಯುತ್ತಾ ಪ್ರತಿಯೊಬ್ಬರೂ ಪ್ರೀತಿಯನ್ನು ಅನುಭವಿಸಿ, ಸೃಷ್ಟಿಗಾಗಿ ಇನ್ನಾವುದೋ ಸಂಬಂಧಗಳಿಗೆ ಒಳಗಾಗಿ ಎಂಬ ತಾತ್ವಿಕತೆಯು ಅತ್ಯಂತ ಮಾರಕವಾಗಿರುತ್ತದೆ.

ಈ ವಿಚಾರವನ್ನು ಮಹಿಳಾ ಚಿಂತಕರಾದ ಎನ್. ಗಾಯತ್ರಿ ಅವರು ಮಹಿಳೆ ಬಿಡುಗಡೆಯ ಹಾದಿಯಲ್ಲಿ ಎಂಬ ಕೃತಿಯಲ್ಲಿ ಹಲವು ಮಾದರಿಗಳನ್ನಿಟ್ಟು ಚರ್ಚಿಸಿದ್ದಾರೆ. ಈ ವಿಚಾರಗಳೆಲ್ಲವೂ ವೈಜ್ಞಾನಿಕ ತಳಹದಿಯ ಮೇಲೆ ಸ್ವರೂಪಗೊಂಡ ಕಾರಣ, ಪ್ರತಿಯೊಬ್ಬರೂ ಆಲೋಚಿಸಲು ತೊಡಕುಗಳಿಲ್ಲ. ಈ ಕೃತಿಯಲ್ಲಿ ಸಂಕೋಲೆಯ ಹಿಡಿತದಲ್ಲಿ ಎಂಬ ಲೇಖನದ ಕೆಲವು ಚರ್ಚೆಗಳನ್ನು ಇಲ್ಲಿ ನೀಡಿದ್ದೇನೆ.

> ಹೆಣ್ಣಿನ ಬದುಕಿನಲ್ಲಿ ವಿವಾಹವೆನ್ನುವುದು ಮಹತ್ತರ ಬದಲಾವಣೆಗಳನ್ನು ತರುವ ಘಟನೆ. ಹೆಣ್ಣಿನ ಆಸೆ, ಆಕಾಂಕ್ಷೆಗಳು, ಕಲಿಕೆ, ಸಾಮರ್ಥ್ಯಗಳು, ಸೃಜನಶೀಲತೆಯ ಅಳಿವು–ಉಳಿವುಗಳು ಬಹಳಷ್ಟು ಬಾರಿ ವಿವಾಹವನ್ನು ಅವಲಂಬಿಸಿರುತ್ತದೆ. ಹೆಣ್ಣು ಮದುವೆಯಾಗುವುದು ಬರೀ ಗಂಡನನ್ನಲ್ಲ, ಅವನ ಇಡೀ ಕುಟುಂಬವನ್ನು, ಆದರೆ ಗಂಡಿನ ಪಾಲಿಗೆ ಇದು ಹಾಗಾಗಬೇಕೆಂದೇನೂ ಇಲ್ಲ. ಬಯಸಲಿ, ಬಯಸದಿರಲಿ ವಿವಾಹ ಹೆಣ್ಣಿನ ಪಾಲಿಗೆ ಬಂಧನವಾಗಿಯೇ ಪರಿಣಮಿಸುತ್ತದೆ. ಈ 'ಪವಿತ್ರ' ಬಂಧನ ಪ್ರೇಮ ಬಂಧನವೂ ಆಗಬೇಕಾದರೆ ಅದು ಬಹಳಷ್ಟು ತ್ಯಾಗವನ್ನು ಸ್ತ್ರೀ– ಪುರುಷರಿಬ್ಬರಿಂದಲೂ ಅಪೇಕ್ಷಿಸುತ್ತದೆ. ಆದರೆ ಈ ಅಪೇಕ್ಷೆ ಹೆಣ್ಣಿನ ಕಡೆಯಿಂದಲೇ ಹೆಚ್ಚಿರುತ್ತದೆ. ವೈವಾಹಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಎಷ್ಟೇ ಕಾನೂನುಗಳು ಬಂದರೂ ಒಟ್ಟಾರೆಯಾಗಿ ಸಮಾಜದಲ್ಲಿ ವಿವಾಹವನ್ನು ಕುರಿತಾದ ಪರಿಕಲ್ಪನೆ ಬದಲಾಗದಿದ್ದರೆ ಸಮಸ್ಯೆಗಳು ಸಂಪೂರ್ಣವಾಗಿ ಇಲ್ಲದಂತಾಗುವುದಿಲ್ಲ. ಆದ್ದರಿಂದ ಯಾವುದೇ ಸಮಾಜದಲ್ಲಿನ ವಿವಾಹದ ಚೌಕಟ್ಟು ಮಹಿಳೆಯರ ಸ್ಥಾನಮಾನದ ಸ್ವರೂಪ, ಧೋರಣೆಗಳನ್ನು ರೂಪಿಸುವ ನಿರ್ಣಾಯಕ ಅಂಶವಾಗಿರುತ್ತದೆ. ಬರ್ಟ್ರೆಂಡ್ ರಸೆಲ್ ಹೇಳುವಂತೆ "ಒಳ್ಳೆಯ ವಿವಾಹದ ಜೀವಾಳವಿರುವುದು ಪರಸ್ಪರ ವ್ಯಕ್ತಿತ್ವಗಳಿಗೆ ನೀಡುವ ಗೌರವದಲ್ಲಿ. ಇಬ್ಬರ ನಡುವಿರುವ ಆಳವಾದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ವ್ಯಕ್ತಿತ್ವಗಳು ಸಮ್ಮಿಳಿತಗೊಂಡು ಸ್ತ್ರೀ ಪುರುಷರ ನಡುವಣ ಪ್ರೀತಿಯು ಹೆಚ್ಚು ಫಲಕಾರಿಯಾಗಲು ಅಪಾರವಾದ ತ್ಯಾಗ ಮನೋಭಾವ ಅವಶ್ಯವಾಗುತ್ತದೆ. ಇಂತಹ ತ್ಯಾಗವು ಸ್ವಯಂ ಇಚ್ಛೆಯಿಂದ ಕೂಡಿರದಿದ್ದರೆ ಅದು ಪ್ರೀತಿಯ ಅಸ್ತಿಭಾರವನ್ನು ನಾಶ ಮಾಡಿಬಿಡುತ್ತದೆ". ಈ ಮಾತುಗಳು ಯಾವುದೇ ದೇಶದ ಸಮಾಜಕ್ಕೂ ಅನ್ವಯಿಸುವ ಮಾತು.

ಮನಸ್ಸಿನ ಭಾವಗಳೂ ಕೂಡ ವೈಜ್ಞಾನಿಕ ವಿಚಾರಗಳನ್ನು ಚರ್ಚಿಸುತ್ತವೆಯೇ ಹೊರೆತು, ಅವೈಜ್ಞಾನಿಕ ಕ್ರಮಗಳನ್ನಲ್ಲ. ಸಮಾನತೆ, ಸಮತೆಯ ಮನೋಲಕ್ಷಣಗಳ ವಿಚಾರಗಳು ಗಂಡು ಹೆಣ್ಣು ಇಬ್ಬರಲ್ಲೂ ಮೂಡುವುದು ಒಳಿತು. ಇಲ್ಲದಿದ್ದರೆ, ಪ್ರೀತಿಯು ವಿವಾಹದ ಮೆಟ್ಟಿಲಾಗದೆ, ಬರೀ ಅಲಂಕಾರವಾಗುತ್ತದೆ.

ಸಂಪ್ರದಾಯಗಳು

ವಿವಾಹದ ಸಂಪ್ರದಾಯಗಳಲ್ಲಿ ಸಾಕಷ್ಟು ವೈಜ್ಞಾನಿಕ ವಿಚಾರಗಳಿವೆ. ಅವು ಮೌಢ್ಯದ ನೆರಳಿಗೆ ಸೋಕಿ, ಅವೈಜ್ಞಾನಿಕ ಎನಿಸಿಕೊಂಡಿರುವುದು ಅಷ್ಟೇ ಸತ್ಯವಾಗಿದೆ. ವಿವಾಹದ ಸಂದರ್ಭದಲ್ಲಿ ಸಮಯಗಳ ಪರಿಪಾಲನೆಯು ಶಾಸ್ತ್ರವೆನಿಸಬಹುದು ಆದರೆ, ಪ್ರಕೃತಿಯ ಋತು ಚಕ್ರವನ್ನು ಅನುಸರಿಸುವ ಮೂಲಕ, ಮನೋವೈಕಲ್ಯಗಳನ್ನು ತಡೆದು ಹರ್ಷಸೂಚ್ಯಗಳನ್ನು ವೈಜ್ಞಾನಿಕವಾಗಿ ನಿರೂಪಿಸುವ ಕ್ರಮಗಳನ್ನು ತಿಳಿಸುತ್ತವೆ. ವಿವಾಹದ ಸಂದರ್ಭಗಳಲ್ಲಿ ಕೆಲವು ಆಚರಣೆಗಳು ಅತ್ಯಂತ ಶಾಸ್ತ್ರಬದ್ಧವಾಗಿ ನಡೆಯುವುದು ತಪ್ಪಲ್ಲ. ಇಂತಹ ಶಾಸ್ತ್ರಗಳನ್ನು ಸಂಶೋಧನೆ ನಡೆಸಿ, ಆರೋಗ್ಯವನ್ನು ಕಾಪಾಡುವಲ್ಲಿ ಈ ಶಾಸ್ತ್ರಗಳು ನಿರೂಪಿಸುವ ಕ್ರಮಗಳನ್ನು ಚರ್ಚಿಸಲಾಗಿದೆ.

ಅರಿಶಿಣ ಶಾಸ್ತ್ರ ವಿವಾಹದ ಸಂದರ್ಭದಲ್ಲಿ ಅರಿಶಿಣ ಹಚ್ಚುವ ಸಂಪ್ರದಾಯವು ವೈಜ್ಞಾನಿಕವಾದುದು. ಗಂಡು–ಹೆಣ್ಣಿನ ಆರೋಗ್ಯವು ಸುಧಾರಿಸುತ್ತಾ, ಕ್ರಮವಾಗಿ ಚೈತನ್ಯ ಪೂರ್ಣವಾಗಿ ಕೂಡಿರಲು ಸಹಕರಿಸುತ್ತದೆ. ವಿವಾಹಕ್ಕೆ ಬರುವ ಸಾಕಷ್ಟು ಜನರು ಹಲವು ಖಾಯಿಲೆಗಳನ್ನು ಹೊಂದಿರಬಹುದು. ಇವರಿಂದ ವಧು ವರರಿಗೆ ಯಾವುದೇ ಸಮಸ್ಯೆಗಳಾಗಬಾರದೆಂಬ ಮುಖ್ಯ ಕಾರಣವನ್ನು ಅನುಸರಿಸಲಾಗಿದೆ. ಕರಿಬಳೆ, ಹಸಿರು ಚಪ್ಪರಗಳು ಇವೆಲ್ಲವೂ ಇಂತಹದ್ದೇ ಕಾರಣಗಳನ್ನು ನೀಡುತ್ತವೆ. ಊಟೋಪಚಾರಗಳಿಂದ ಹಿಡಿದು, ಮೊದಲರಾತ್ರಿಯ ಲೈಂಗಿಕ ಆಚರಣೆಯವರೆಗೂ ಇಂತಹ ಶಾಸ್ತ್ರಗಳು ಅವೈಜ್ಞಾನಿಕ ಪದ್ಧತಿಗಳನ್ನು ತಡೆದು ಒಂದು ಕ್ರಮ ಬದ್ಧತೆಯನ್ನು ಅನುಸರಿಸುತ್ತವೆ. ಈ ದೃಷ್ಟಿಯಿಂದ ಕುಟುಂಬದಲ್ಲಿ ನೆಮ್ಮದಿ, ಆರೋಗ್ಯಕರವಾದ ಜೀವನ ಹಾಗೂ ಆರೋಗ್ಯಕರ ಸಂತಾನೋತ್ಪತ್ತಿಯನ್ನು ಪಡೆಯಲು ಸಹಕರಿಸುತ್ತವೆ.

ಒಟ್ಟಾರೆಯಾಗಿ ನಮ್ಮ ಪೂರ್ವಿಕರ ಕಾರ್ಯಗಳಲ್ಲಿ ವೈಜ್ಞಾನಿಕ ವಿಚಾರಗಳು ಅತ್ಯಂತ ಬೌದ್ಧಿಕವಾಗಿದ್ದವು. ಆದರೆ, ಅವುಗಳ ಅನುಸರಣೆಯಲ್ಲಿ ಕೆಲವು ಮೌಢ್ಯಗಳು ಸೇರಿಹೋದವು. ಇದನ್ನು ಆಚರಣೆ ಮಾಡುವಾಗ ಉಂಟಾಗುವ ಜಾತಿ, ಧರ್ಮಗಳ ಕುರುಡು ಸಂಪ್ರದಾಯಗಳು, ತಪ್ಪು ತಿಳುವಳಿಕೆಗಳು ವೈಜ್ಞಾನಿಕ ವಿಚಾರಗಳಿಗೆ ವಿರುದ್ಧವಾಗಿ ಸಮಸ್ಯೆಗಳನ್ನು ಸೃಷ್ಟಿಸಿದವು. **ವಿವಾಹವೆಂಬ ಸೃಷ್ಟಿ ಕಾರಣ ವೇದಿಕೆಯನ್ನು** ಭಾರತದಂತಹ ದೇಶವು ಇಂದಿಗೂ ಗೌರವಿಸುತ್ತದೆ. ಈ ಗೌರವದಲ್ಲಿ ಆರೋಗ್ಯರ ಆಲೋಚನೆಗಳಿವೆ. ವ್ಯವಹಾರವೆಂಬುದು ಆಯಾ ಅಂತಸ್ತಿನ ತೋರ್ಪಡಿಕೆಯೇ ಹೊರೆತು, ಬಾಳ್ವೆಯ ಸ್ವೀಕಾರವಲ್ಲ. ಈ ಬಾಳ್ವೆಯ ಅನುಸರಣೆಯಲ್ಲಿ ಕ್ರಮಬದ್ಧತೆ ಹಾಗೂ ಆರೋಗ್ಯಕರ ಚಿಂತನೆಗಳನ್ನು ಪಾಲಿಸಲು ಇಂದಿನ ಯುವಕರಿಗೆ ಪ್ರಯೋಗಾತ್ಮಕವಾಗಿಯೇ ಅರ್ಥೈಸಬೇಕಾಗಿದೆ.

ಪರಾಮರ್ಶನ ಗ್ರಂಥಗಳು :

೧. ಎಂ.ಎಸ್ ರುದ್ರೇಶ್ವರ ಸ್ವಾಮಿ ಅವರ **ಅವಳ ಕವಿತೆ**.
೨. ಅವಧಿ ಲೇಖನ – ಶ್ರೀದೇವಿ ರೆಕಮೆಂಡ್ಸ್ – ಶ್ರೀದೇವಿ ಕೆರೆಮನೆ
೩. ಲಿಂಕ್: https://avadhimag.in/
೪. ಜೋಗಿ ಅವರ ಜೋಗಿಮನೆ ಕೃತಿ; **ಪ್ರೀತಿ ಎನುವ ಮಾಯೆ ಏನು ಮಾಡಿತು**? ಲೇಖನ.
೫. ಎನ್ ಗಾಯತ್ರಿ ಅವರ ಮಹಿಳೆ ಬಿಡುಗಡೆಯ ಹಾದಿಯಲ್ಲಿ; ಸಂಕೋಲೆಯ ಹಿಡಿತದಲ್ಲಿ ಎಂಬ ಲೇಖನ.

ಚೆನ್ನಬಸವಣ್ಣನ ವಚನಗಳಲ್ಲಿ ವೈಜ್ಞಾನಿಕ ಹೊಳಹು

ರಾಜೇಶ್ವರಿ ವೈ. ಎಂ. ಮತ್ತು ಡಾ. ಬಸಯ್ಯ ಸ್ವಾಮಿ
ಸಂಶೋಧನಾ ವಿದ್ಯಾರ್ಥಿ ಮತ್ತು ಮಾರ್ಗದರ್ಶಕರು
ಕನ್ನಡ ವಿಭಾಗ, ಜೈನ್ ಡೀಮ್ಡ್ ವಿಶ್ವವಿದ್ಯಾಲಯ

ಹನ್ನೆರಡನೆಯ ಶತಮಾನದ ವಚನ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಎಲ್ಲ ವಚನಕಾರರು ವೈಚಾರಿಕ ಚಿಂತಕರಾಗಿದ್ದರು. ಅವರ ಅಭಿವ್ಯಕ್ತಿಯಾದ ವಚನ ಸಾಹಿತ್ಯವು ಮಹೋನ್ನತ ಸಾಮಾಜಿಕ ಮೌಲ್ಯಗಳಿಂದ ಕೂಡಿದ ಮೇರುಸಾಹಿತ್ಯವಾಗಿದೆ. ಅನುಭಾವಿಗಳಾದ ಶರಣರ ಶ್ರೇಷ್ಠ ಸಾಹಿತ್ಯವು ಜಾಗತಿಕ ಅನುಭಾವ ಸಾಹಿತ್ಯದಲ್ಲಿ ಮನುಷ್ಯನ ಮನಸ್ಸು ಸಾಧಿಸಬಹುದಾದ ಅಧ್ಯಾತ್ಮಿಕ ಔನ್ನತ್ಯವನ್ನು ಮತ್ತು ಸಿದ್ಧಿಯ ಮಹೋನ್ನತಿಯನ್ನು ಪ್ರತಿನಿಧಿಸಿದೆ. ವಚನಕಾರರದು ಬದುಕಿನೆಡೆಗೆ ತೆರೆದಿಟ್ಟ ಮನಸ್ಸು ಆಗಿತ್ತು. ಆದ್ದರಿಂದ ಲೋಕದ ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ ವಚನಕಾರರು ಜಗತ್ತಿಗೆ ಮೇಲ್ಪಂಕ್ತಿಯಾದ ಕ್ರಾಂತಿಯನ್ನು ಹನ್ನೆರಡನೆಯ ಶತಮಾನದಲ್ಲಿ ಮಾಡಿದರು. ಸಮಾನತೆಯ ಪಾತಳಿಯ ಮೇಲೆ ಅವರು ಕಟ್ಟಲು ಹೊರಟಿದ್ದು ಸಮತೆಯ ಸಮಾಜವನ್ನು. ಬಹುಮುಖ್ಯವಾಗಿ 'ಅಂತರಂಗ–ಬಹಿರಂಗ ಶುದ್ಧಿ'ಯೆಡೆಗೆ ಸಮಾಜವನ್ನು ಒಯ್ಯಲು ಹರಸಾಹಸ ಮಾಡಿದ ವಚನಕಾರರು ಸಕಾರಾತ್ಮಕ ಮತ್ತು ಸಾರ್ವಕಾಲಿಕವೆನಿಸುವ ಚಿಂತನೆಗಳಿಂದ ಲೋಕಕ್ಕೇ ಆದರ್ಶರಾಗಿ ಅಮರರಾಗಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯಕ್ಕೆ ಸಿಕ್ಕಿದ ಮನ್ನಣೆ ಮತ್ತು ಅದು ಪಡೆದುಕೊಂಡ ವಿಸ್ತಾರ ಗಮನಾರ್ಹವಾದುದು. ವಚನಗಳು ಆಧುನಿಕ ಕಾಲದಲ್ಲಿಯೂ ಆಕರ ಸಾಹಿತ್ಯವಾಗಿ ಸಾಹಿತ್ಯಲೋಕದಲ್ಲಿ ಸಶಕ್ತವಾಗಿ ಸ್ಥಾನವನ್ನು ಪಡೆದಿದೆ ಎಂಬುದನ್ನು ಮರೆಯುವಂತಿಲ್ಲ. ಸಮಗ್ರವಾಗಿ ರಚನೆಯಾದ ವಚನ ಸಾಹಿತ್ಯವು ನಾನಾ ಬಗೆಯ ಅಧ್ಯಯನಗಳಿಗೆ ಒಳಗಾಗಿದೆ ಮತ್ತು ಹಲವಾರು ವಿಮರ್ಶೆ, ಸಂಶೋಧನಾ ಬರಹಗಳಿಗೆ ಪ್ರಮುಖ ಆಕರ ಸಾಮಾಗ್ರಿಯಾಗಿದೆ. ಕ್ರಾಂತಿಯ ಫಲಿತರೂಪವಾಗಿ ಮೂಡಿಬಂದ ವಚನ ಸಾಹಿತ್ಯ ಹೊಸದಾದ ಸಾಮಾಜಿಕ ವ್ಯವಸ್ಥೆಯೊಂದನ್ನು ಪರಿಚಯಿಸಿತು. ಸಾಮಾಜಿಕ ವ್ಯವಸ್ಥೆಯ ಬದಲಾವಣೆಗೆ ವಚನಕಾರರು ಧಾರ್ಮಿಕತೆಯ ತಳಪಾಯ ಹಾಕಿದರು. ಜನಜೀವನದ ಬಹುಪಾಲು ಧಾರ್ಮಿಕತೆಯೇ ಆಗಿದ್ದ ಹೊತ್ತಿನಲ್ಲಿ ಅದನ್ನು ಹೊಸದಾಗಿಸಲೂ ಶರಣರು ಧರ್ಮವನ್ನು ಆಯ್ಕೆ ಮಾಡಿದ್ದರು. ಆದ್ದರಿಂದ ಅವರು ಮೊದಲು ಶರಣರು ಆಗಿದ್ದರು ನಂತರವೇ ಅವರು ವಚನಕಾರರು. ಹೀಗೆ ವಚನಕಾರರು ಶರಣರಾಗಿ ಬದುಕುತ್ತಿದ್ದ ಹೊತ್ತಿನಲ್ಲಿ ಅವರು ಬದುಕಿನೊಂದಿಗೆ ಅನುಸಂಧಾನ ಮಾಡುತ್ತಾ ತಾವೂ ಬೆಳೆದು ಸುತ್ತಲಿನ ಸಮಾಜವನ್ನೂ ವಿಕಾಸದತ್ತ ಕೊಂಡೊಯ್ದದ್ದು ಈಗ ಇತಿಹಾಸವಾಗಿದೆ.

ಶರಣ ಪರಂಪರೆಯಲ್ಲಿ ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಸಿದ್ಧರಾಮನ ನಂತರ ಅಷ್ಟೇ ಪ್ರಖರ ಶರಣ ಮತ್ತು ವಚನಕಾರನಾಗಿ ಬೆಳಗಿದ್ದು ಚೆನ್ನಬಸವಣ್ಣ. ಭಕ್ತಿ ಭಂಡಾರಿ ಬಸವಣ್ಣನ ಸೋದರಳಿಯನಾದ ಚೆನ್ನಬಸವಣ್ಣ ಸಣ್ಣ ವಯಸ್ಸಿನಲ್ಲಿಯೇ ಮಹಂತನೆನಿಸಿಕೊಂಡವ. ವರ್ಣ, ಲಿಂಗ ತಾರತಮ್ಯದ ಒರಳಲ್ಲಿ ಸಿಕ್ಕಿ ನಲುಗುತ್ತಿದ್ದ ಸಮಾಜವನ್ನು ಭಕ್ತಿ, ಜ್ಞಾನ ಮತ್ತು ವೈರಾಗ್ಯಗಳ ಆಧಾರದಿಂದ ಮನಃಪರಿವರ್ತನೆ ಮಾಡಲು ಅಲ್ಲಮನ ಅಧ್ಯಕ್ಷತೆಯಲ್ಲಿ ಚೆನ್ನಬಸವಣ್ಣನ ಮುಂದಾಳತ್ವದಲ್ಲಿ ಅನುಭವ ಮಂಟಪ ರಚಿತವಾಯಿತು. ಪರಮ ವೈರಾಗ್ಯದ ಅಲ್ಲಮನ ಹಾಗೂ ಪರಮ ಭಕ್ತಿಯ ಬಸವಣ್ಣನ ಮಾರ್ಗದರ್ಶನದಲ್ಲಿ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಸಂವಾದಗಳ ಮೂಲಕ ಸಮಾಜದಲ್ಲಿ ಮಹತ್ತರವೆನಿಸಿದ ಸುಧಾರಣೆಗಳನ್ನು ಚೆನ್ನಬಸವಣ್ಣ ಕಾರ್ಯರೂಪಕ್ಕೆ ತಂದುದನ್ನು ಕಾಣಬಹುದು.

ಸಮಾಜ ಸುಧಾರಣೆಯ ಜೊತೆಗೆ ಚೆನ್ನಬಸವಣ್ಣ ಕನ್ನಡ ಸಾರಸ್ವತ ಲೋಕಕ್ಕೆ ಗಮನಾರ್ಹ ಕೊಡುಗೆ ನೀಡಿದ್ದನ್ನು ಇಲ್ಲಿ ಗಮನಿಸಬೇಕು. ೧೭೬೩ ವಚನಗಳನ್ನು, ಮನುಷ್ಯನ ಶರೀರ ರಚನೆಗೆ ಸಂಬಂಧಪಟ್ಟ 'ಕರಣ ಹಸಿಗೆ', ಮಿಶ್ರಾರ್ಪಣ, ಹಿರಿಯ ಮಂತ್ರಗೋಪ್ಯ, ಪದಮಂತ್ರಗೋಪ್ಯ, ೯೬ ಸಕೀಲಗಳು ಅಲ್ಲದೇ ಅನುಭಾವ ಗೀತ ಸಾಹಿತ್ಯವನ್ನೂ ರಚಿಸಿದ್ದಾರೆ ಎಂಬುದನ್ನು ಹಿರಿಯ ಸಂಶೋಧಕರು ಹೇಳಿದ್ದಾರೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಇತರ ವಚನಕಾರರಿಗಿಂತ ಚೆನ್ನಬಸವಣ್ಣ ಭಿನ್ನವಾಗಿ ಸಾಹಿತ್ಯ ರಚನೆ ಮಾಡಿರುವುದು. ಮನುಷ್ಯ ದೇಹದ ರಚನೆಯ ಬಗ್ಗೆ ನಿರೂಪಣೆ ನೀಡಿದ ಕರಣ ಹಸಿಗೆ ಅಲ್ಲದೇ ಅನೇಕ ವಚನಗಳ ಮೂಲಕ ಅವರು ಖಗೋಳ ವಿಜ್ಞಾನ, ಗಣಿತ ಶಾಸ್ತ್ರದ ಬಗ್ಗೆ ವಚನಗಳಲ್ಲಿ ಮಾತಾಡಿದ್ದುಂಟು. ಬಹುಶಃ ಇದೇ ಕಾರಣಕ್ಕಾಗಿ ಅಲ್ಲಮ ಪ್ರಭುದೇವರು ಚೆನ್ನಬಸವಣ್ಣನನ್ನು 'ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ'ಯೆಂದು ವಚನವೊಂದರಲ್ಲಿ ಹೇಳಿದ್ದು.

ಈ ಪ್ರಬಂಧದ ಪರಿಮಿತಿಗೆ ಅನುಗುಣವಾಗಿ ಕರಣಹಸಿಗೆ– ಮಾನವ ಶರೀರ ರಚನಾ ಶಾಸ್ತ್ರದ ಬಗ್ಗೆ ಮಾಡಿದ ವಿಶ್ಲೇಷಣೆಯನ್ನು ಇಲ್ಲಿ ಸಂಪೂರ್ಣವಾಗಿ ಮಾಡುವುದು ಅಸಾಧ್ಯವಾದುದರಿಂದ ಕರಣ ಹಸಿಗೆಯ ವಿವರಗಳನ್ನೆಲ್ಲ ಚೆನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಸಂಕ್ಷಿಪ್ತವಾಗಿ ನೀಡಿದ್ದನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಆತ್ಮಸ್ಥಿತಿ ಶಿವಯೋಗ ಸಂಬಂಧವ ಅರಿದೆನೆಂದಡೆ ಹೇಳಿರಣ್ಣ
ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಪಂಚತತ್ವದ
ವಿವರಂ ಪೇಳ್ವೆ:
ಅಸ್ಥಿ ಮಾಂಸ ಚರ್ಮ ರುಧಿರ ಶುಕ್ಲ ಮೇದಸ್ಸು ಮಜ್ಜೆ
ಎಂಬ ಸಪ್ತಧಾತುವಿನ ಇಹವು
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕು ಎಂಬ
ಪಂಚಜ್ಞಾನೇಂದ್ರಿಯಂಗಳಿಂದ ಶರೀರವೆನಿಸಿಕೊಂಬುದು
ಶಬ್ದ–ಸ್ಪರ್ಶ–ರೂಪು ರಸ ಗಂಧವೆಂಬಿವು ಪಂಚೇಂದ್ರಿಯಗಳು
ವಾಕು ಪಾಣಿ ಪಾದ ಪಾಯು ಗುಹ್ಯವೆಂಬ
ಪಂಚಕರ್ಮೇಂದ್ರಿಯಂಗಳಿವರು ಪರಚಾರಕರು
ಇಡಾ ಪಿಂಗಲಾ ಸುಷಮ್ನಾ ಗಾಂಧಾರಿ ಹಸ್ತಿ ಜಿಹ್ವಾ ಪೂಷಾ
ಅಲಂಬು ಲಕುಹಾ ಪಯಸ್ವಿನಿ ಶಂಕಿನಿಯೆಂಬ ದಶನಾಡಿಗಳಂ ಭೇದಿಸುತ್ತಂ
––––––––––––

ಹೀಗೆ ಸುಮಾರು ಮೂವತ್ತಮೂರು ಸಾಲುಗಳ ಸಾಕಷ್ಟು ದೀರ್ಘವಾದ ವಚನವಿದು. ಇದರಲ್ಲಿ ಸಂಪೂರ್ಣ ಮಾನವ ರಚನಾ ಶಾಸ್ತ್ರದ ಪರಿಚಯವಿದೆ.

ಪೃಥ್ವಿ, ನೀರು, ಬೆಂಕಿ, ವಾಯು ಮತ್ತು ಆಕಾಶ ಎಂಬ ಪಂಚ ಮಹಾಭೂತಗಳಿಂದ ಈ ಬ್ರಹ್ಮಾಂಡ ರೂಪುಗೊಂಡಿದೆ. ಈ ಜಗದಗಲವೂ ಕಾಣುವ ಅಂದರೆ ಬ್ರಹ್ಮಾಂಡದಲ್ಲಿ ಕಾಣುವ ಸಮಸ್ತ ಜೀವರಾಶಿಯಲ್ಲೂ ಈ ಗುಣವಿಶೇಷಗಳು ಮೇಳೈಸಿವೆ. ಪೃಥ್ವಿಯ ಅಂಶದಿಂದ ಜೀವದ ಮೂಳೆ, ಮಾಂಸ, ಚರ್ಮ, ನರ, ಕೂದಲು ಎಂಬ ಜೀವಲಕ್ಷಣಗಳು ಸಾಕಾರಗೊಂಡಿವೆ. ಜಲದಿಂದ ಕಫ, ಮೂತ್ರ, ಬೆವರು, ವೀರ್ಯ ಮತ್ತು ರಕ್ತ ಎಂಬ ಅಂಶಗಳು ದೇಹದಲ್ಲಿ ಸಿದ್ಧವಾಗಿ ವಿಸರ್ಜನೆಗೊಳ್ಳುವ ದ್ರವರೂಪಿ ವಸ್ತುಗಳು ಜೀವದಲ್ಲಿವೆ. ಇನ್ನು ಜೀವರಾಶಿಯಲ್ಲಿ ದೇಹದ ಕ್ರಿಯೆಗಳ ಗುಣಲಕ್ಷಣವಾಗಿ ಕಾಣಿಸಿಕೊಳ್ಳುವ ಹಸಿವು, ನೀರಡಿಕೆ, ನಿದ್ರೆ, ಆಲಸ್ಯ ಮತ್ತು ಮೈಥುನ ಇವು ಅಗ್ನಿತತ್ವದಿಂದ ಉಂಟಾಗಿವೆ. ವಾಯುವಿನಿಂದ ಜೀವರಾಶಿಯ ನಿರಂತರ ಚಲನೆ, ಜಿಗಿತ, ಒಂದಾಗುವ, ದೂರ ಹೋಗುವು ಗುಣಗಳು ಸಾಕಾರಗೊಂಡರೆ ಮನಸ್ಸಿನಲ್ಲಿ ಏಳುವ ಬಯಕೆ, ಕ್ರೋಧ, ಭಯ, ಲಜ್ಜೆ ಮತ್ತು ಮೋಹಗಳು ಆಕಾಶ ತತ್ವದ ಲಕ್ಷಣಗಳಾಗಿವೆ ಎನ್ನುತ್ತಾ ಚೆನ್ನ ಬಸವಣ್ಣನವರು 'ಈ ಬ್ರಹ್ಮಾಂಡದೊಳಗುಳ್ಳ ಗುಣಂಗಳಾಶ್ರಯ ಪಿಂಡದಲ್ಲಿ' ಅಂದರೆ ಜೀವದಲ್ಲಿ ಎಂದು ಹೇಳುತ್ತಾರೆ.

ವಿರೂಪಾಕ್ಷ ಪಂಡಿತ ರಚಿಸಿದ 'ಚೆನ್ನಬಸವ ಪುರಾಣ' ಕೃತಿಯ ಬಗ್ಗೆ ಮಹತ್ವದ ಅಧ್ಯಯನ ನಡೆಸಿರುವ "ಚೆನ್ನಬಸವ ಪರಾಣ–ಒಂದು ಅಧ್ಯಯನ" ಎಂಬ ಕೃತಿಯಲ್ಲಿ ಕರಣ ಹಸಿಗೆಯ ಕುರಿತು ಈ ವಿವರಗಳು ಲಭ್ಯವಿದೆ. "ಶರೀರ ವಿಜ್ಞಾನವನ್ನು ತಿಳಿಸುವಲ್ಲಿ ಚೆನ್ನಬಸವನ ಕರಣಹಸಿಗೆ ಮೊಟ್ಟ ಮೊದಲ ಕನ್ನಡ ಗ್ರಂಥವಾಗಿದೆ. ಚೆನ್ನಬಸವನ 'ಕರಣ ಹಸಿಗೆ'ಯಲ್ಲಿ ಕರಣ ಹಸಿಗೆ ಎಂಬ

ಪದದ ಅರ್ಥವನ್ನು ಪರಶಿವನೆಂಬ ಒಕ್ಕಲಿಗನಿಗೆ ಹೋಲಿಸಿ ಹೇಳಿರುವುದು ಬಹಳ ಅರ್ಥವತ್ತಾಗಿದೆ. ಕರಣವೆಂದೊಡೆ ತತ್ತ್ವಗಳು, ಹಸಿಗೆ ಎಂದೊಡೆ ವಿಭಾಗವು. ಅದು ಹೇಗೆಂದೊಡೆ ಒಬ್ಬಾನೊಬ್ಬ ಒಕ್ಕಲಿಗನು ಮಳೆಯ ಹದದಿ ಭೂಮಿಯ ಬೆಳೆಯನರಿದು, ಹರಗಿ, ಹಸನು ಮಾಡಿ, ಹದಿನೆಂಟು ಧಾನ್ಯಗಳನ್ನು ಬಿತ್ತಿ ಸಂರಕ್ಷಿತವಾಗಿ ಸಲಹಿ ಫಲಪೂರಿತವಾದ ಬಳಿಕ ಕೊಯ್ದು, ಕಟ್ಟಿ, ಬಣವೆಯೊಟ್ಟಿ, ಕಣಮಾಡಿ, ಒಕ್ಕಿ, ರಾಶಿಯಂ ಮಾಡಿದ ಬಳಿಕ ಇಷ್ಟು ಗೋಧಿ, ಇಷ್ಟು ಜೋಳ, ಇಷ್ಟು ತೊಗರಿ, ಅವರಿ, ಹೆಸರು ಇಷ್ಟಿಷ್ಟಾದವೆಂದು ಅಳೆದಳೆದು ಬೇರೆ ಮಾಡುವ ಹಾಗೆ ಈ ಬ್ರಹ್ಮಾಂಡವೆಂಬ ಕ್ಷೇತ್ರಕ್ಕೆ ಶಿವನು ಅಧಿಪತಿ.೧ ಪರಶಿವನೆಂಬ ಕಲಾಯುಧನು (ಒಕ್ಕಲಿಗನು) ಅನಾದಿಯಲ್ಲಿ ತನ್ನ ಪಂಚಮುಖಿಗಳಿಂದ ಪಂಚಭೂತಗಳನ್ನು ಮತ್ತು ಆ ಇಪ್ಪತ್ತೈದು ತತ್ವಯುಕ್ತವಾದ ಶರೀರವನ್ನು ತನ್ನ ಗೋಪ್ಯ ಮುಖದಲ್ಲಿ ಆತ್ಮನನ್ನು ಹುಟ್ಟಿಸಿದ. ಆ ಆತ್ಮನಿಗೆ ಸಂಬಂಧವಂ ಮಾಡಿಕೊಳ್ಳಲು, ಆತ್ಮನು ಅದೇ ಅಹಂಭಾವದ ಮರೆವೆಯಿಂದ ತನ್ನ ನಿಜವಂ ಮೆರೆದು ಅಜ್ಞಾನಿಯಾಗಿ ಅನೇಕ ಜನ್ಮಂಗಳಲ್ಲಿ ಹುಟ್ಟಿ –ಹುಟ್ಟಿ ಬರುವಲ್ಲಿ ಪುಣ್ಯದಿಂದ ದೇವತಾ ಜನ್ಮ, ಪಾಪದಿಂದ ಸ್ಥಾವರ ಜನ್ಮ, ಪಾಪಪುಣ್ಯಗಳ ಸಮಾನತ್ವದಿಂದ ಮನುಷ್ಯ ಜನ್ಮ ಪಡೆದು ಅಂತಪ್ಪ ಈ ಮನುಷ್ಯ ಜನ್ಮ ಸಂಬಂಧಿ ಯಾದಾತ್ಮನ ಸ್ಥೂಲವಲ್ಲದ ಸೂಕ್ಷ್ಮವಲ್ಲದ ಪ್ರಮಾಣದ ದೇಹದಲ್ಲಿರುವ ಸಕಲ ತತ್ತ್ವಂಗಳಿಂ ಬೇರೆ ಬೇರೆ ಹಸಿಗೆಯಂ ಮಾಡಿ ವಿಸ್ತರಿಸಿ ಹೇಳುತ್ತಿಹುದಾದ ಕಾರಣ ಈ ಶಾಸ್ತ್ರಕ್ಕೆ ತತ್ತ್ವ ವಿಭಾಗವೆಂದಭಿದಾನವು ಪ್ರಸಿದ್ಧವಾಯಿತ್ತೆಂಬುದೀ ಕರಣ ಹಸಿಗೆಯೆಂಬ ಶಬ್ದಕರ್ಥವು."೨ ಚೆನ್ನಬಸವಣ್ಣನ ಕುರಿತಾದ ಈ ಕೃತಿಯಲ್ಲಿಯೂ ಅವನ ಈ ಅಪರೂಪದ ಜ್ಞಾನದ ಕುರಿತಾದ ಬಹು ಮಹತ್ವದ ಪ್ರಸ್ತಾಪವನ್ನು ಗಮನಿಸಬಹುದು.

ಇಷ್ಟೇ ಅಲ್ಲದೇ ಚೆನ್ನಬಸವಣ್ಣನವರ ವಚನಗಳಲ್ಲಿ ಭೂಗೋಳ ಮತ್ತು ಖಗೋಳ ವಿಜ್ಞಾನದ ಬಗ್ಗೆಯೂ ಅವರು ಪಾಂಡಿತ್ಯವನ್ನು ಹೊಂದಿದ್ದರೆಂಬುದನ್ನು ಅವರ ವಚನಗಳನ್ನು ಅಧ್ಯಯನ ಮಾಡಿದ ಹಿರಿಯ ವಚನ ವಿದ್ವಾಂಸರು ನಿರೂಪಿಸುತ್ತಾರೆ.

ಪಂಚಶತಕೋಟಿ (ವಿಸ್ತೀರ್ಣ) ಭೂಮಂಡಲವಳಯದಲ್ಲಿ
ಮೇರು ಮಂದಿರಸ ವಿಸ್ತೀರ್ಣ
ಒಂದು ಕೋಟಿ ಇಪ್ಪತ್ತಾರು ಲಕ್ಷದ ಮೇಲೆ ಎಂಬತ್ತೈದು ಸಾವಿರ
ಯೋಜನ ಪ್ರಮಾಣ
ಆ ಮೇರುಮಂದಿರದ ಮೇಲೆ ಬ್ರಹ್ಮ ವಿಷ್ಣು ರುದ್ರ ಸದಾಶಿವ
ನಂದಿ ಮಹಾಕಾಳ ವೀರಭದ್ರ ಅಷ್ಟಾಶೀತಿ ಸಹಸ್ರ ಋಷಿಯರು
ಅಸಂಖ್ಯಾತ ಮಹಾಗಣಂಗಳು, ದ್ವಾದಶಾದಿತ್ಯರು, ನಾರದ ಯೋಗಿಶ್ವರರು
ಅಷ್ಟದಿಕ್ಪಾಲಕರು ಏಕಾದಶ ರುದ್ರರು ಮುಖ್ಯವಾಗಿ
ಶಿವಸುಖಸಂತೋಷದಿಂ ರಾಜ್ಯಂಗೆಯ್ವರು

ಹೀಗೆ ೬ಳ ಸಾಲುಗಳ ಈ ದೀರ್ಘ ವಚನದಲ್ಲಿ ಖಗೋಳ ಶಾಸ್ತ್ರದ ಬಗ್ಗೆ ತಮಗಿದ್ದ ಜ್ಞಾನವನ್ನು ವಚನದಲ್ಲಿ ಹೇಳಿರುವ ಚೆನ್ನಬಸವಣ್ಣನವರು ಇದರಲ್ಲಿ ಭೂಮಿ ಮೇಲಿನ ಖಂಡಗಳು, ದ್ವೀಪಗಳು, ಸಾಗರಗಳ ವಿಸ್ತಾರ, ಪ್ರತಿ ಖಂಡಗಳ ನಡುವೆ ಇರುವ ಅಂತರ, ಸೂರ್ಯ ಮತ್ತು ಚಂದ್ರರು ಭೂಮಿಯಿಂದ ಇರುವ ದೂರದ ಕುರಿತು ನಿಖರವಾಗಿ ಹೇಳಿದ್ದಾರೆ ಎಂದು ವಿದ್ವಾಂಸರ ಅಧ್ಯಯನಗಳಿಂದ ತಿಳಿದು ಬರುತ್ತದೆ.

ವಚನದಲ್ಲಿ ವಿವರಿಸಿದಂತೆ "ಈ ಭೂಮಂಡಲದ ವಿಸ್ತೀರ್ಣ ಪಂಚಶತಕೋಟಿ ಅದೇ ರೀತಿ ಆಧುನಿಕ ವೈಜ್ಞಾನಿಕ ಸಾಧನ ಸಲಕರಣೆಯ ಮೂಲಕ ಭೂಮಿಯ ವಿಸ್ತೀರ್ಣವನ್ನು ೫೧೦ ಮಿಲಿಯನ್ ಚದರ ಕಿ.ಮೀ ಎಂದು ಅಳತೆ ಮಾಡಲಾಗಿದೆ. ಇಂತಹ ಭೂಮಂಡಲದ ಮೇಲೆ ಮೆರೆಯುತ್ತಿರುವ ಭಾರತದ ವಿಸ್ತೀರ್ಣ ಚೆನ್ನಬಸವಣ್ಣನವರ ಪ್ರಕಾರ ಲಕ್ಷದ ಮೇಲೆ ಇಪ್ಪತ್ತೈದು ಸಾವಿರ ಯೋಜನ. ಅಂದಿನ ಕಾಲದಲ್ಲಿಯ ಜಂಬೂದ್ವೀಪವಾಗಿದ್ದ ಭಾರತದ ಉಪಖಂಡದ ವಿಸ್ತೀರ್ಣವನ್ನು ಅವರು ನೀಡಿದ್ದಾರೆ.೩ ಪ್ರಸ್ತುತ ಭಾರತದ ವಿಸ್ತೀರ್ಣ ೩೨,೮೭,೨೬೩ ಚದರ ಕಿ.ಮೀ. (ಪೂರ್ವ ಪಶ್ಚಿಮವಾಗಿ ೨೯೩೩ ಕಿಮೀ. ದಕ್ಷಿಣೋತ್ತರವಾಗಿ ೩೨೧೪ ಕಿ.ಮೀ ಸಮುದ್ರ ತೀರ ಉದ್ದ, ೬೧೦೦ ಕಿ.ಮೀ ಇಂತಹ ಭಾರತವನ್ನು ರಕ್ಷಿಸುತ್ತ ಉತ್ತರಭಾಗದಲ್ಲಿ ನಿಂತಿರುವ ಮೇರುಮಂದಿರ ಅಂದರೆ ಹಿಮಾಲಯದ ಪರ್ವತ ಶ್ರೇಣಿಯ ವಿಸ್ತೀರ್ಣವನ್ನು ಒಂದು ಕೋಟಿ ಇಪ್ಪತ್ತಾರು ಲಕ್ಷದ ಮೇಲೆ ಎಂಬತ್ತೈದು ಸಾವಿರ ಯೋಜನ) ಎಂದಿರುವರು. ಅಂದರೆ ಅಂದಿನ ಮಾನವಾದ ಒಂದು ಯೋಜನವೆಂದರೆ ಇಂದಿನ ದೂರದ ಮಾನವಾದ ಕಿಲೋಮೀಟರ್‌ಗೆ ಪರಿವರ್ತಿಸಿದಾಗ ನಮಗೆ ನಿಜವಾದ ಅಳತೆಯ ಕಲ್ಪನೆ ಮಾಡಲು ಸಾಧ್ಯ."೪

ಆಧುನಿಕ ಖಗೋಳ ಶಾಸ್ತ್ರದ ಪಠ್ಯ ಅಥವಾ ಕಲಿಕೆಯ ಪದ್ಧತಿ ಅಥವಾ ಅದೊಂದು ಅಧ್ಯಯನ ಕೇಂದ್ರಿತ ಜ್ಞಾನ ಶಾಖೆಯಾಗಿ ಆರಂಭವಾಗಿದ್ದು ೧೯೫೦ರ ದಶಕದಲ್ಲಿ ಎಂದು ಅಂದಾಜು ಮಾಡಬಹುದು. ಅಂದರೆ ಪ್ರಾಚೀನ ಕಾಲದಿಂದಲೂ ಭೂಮಿಯ ಮೇಲಿನ ಆಕಾಶಕಾಯಗಳು ಅಲ್ಲದೇ ಸೂರ್ಯ, ಚಂದ್ರ, ನಕ್ಷತ್ರಗಳ ಬಗ್ಗೆ ಪ್ರಪಂಚದ ಎಲ್ಲ ಸಂಸ್ಕೃತಿಯಲ್ಲಿಯೂ ಪ್ರಸ್ತಾಪವಿದ್ದರೂ ವಿಜ್ಞಾನದ ಆಧಾರದ ಮೇಲೆ ನಂಬುವ ಆಧುನಿಕ ಜಗತ್ತಿಗೆ ಇವೆಲ್ಲವೂ ಸಾಧಾರವೆನಿಸದೇ ಇದ್ದವು. ಚೆನ್ನಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಇವುಗಳ ಬಗ್ಗೆ ಅಂದರೆ ಮನುಷ್ಯ ದೇಹದ ರಚನೆಯ ಬಗ್ಗೆ ಹಾಗೂ ಭೂಗೋಳ ಶಾಸ್ತ್ರದ ಕುರಿತೂ ಜ್ಞಾನವನ್ನು ಹೊಂದಿದ್ದರೆಂದು ವಚನಗಳು ಸಾಬೀತು ಪಡಿಸುತ್ತಿವೆ. ಬಹುಶಃ ಈ ಕಾರಣಕ್ಕಾಗಿಯೇ ದಾರ್ಶನಿಕ ಅಲ್ಲಮ ಪ್ರಭುದೇವರು ಚೆನ್ನಬಸವಣ್ಣನನ್ನು "ಕಿರಿಯರಾದಡೇನು? ಹಿರಿಯರಾದಡೇನು? ಅರಿವಿಂಗೆ ಹಿರಿದು ಕಿರಿದು ಉಂಟೆ? ಆದಿ ಅನಾದಿ ಇಲ್ಲದಂದು ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ ಎಂಬುದು ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣ" ಎಂದು ಮನದುಂಬಿ ಹಾಡಿರುವುದನ್ನು ನೋಡಬಹುದು.

ಚೆನ್ನಬಸವಣ್ಣ ಮನುಷ್ಯ ದೇಹದ ಆತ್ಮದರ್ಶನ ಮಾಡುವಂತಹ ವಿವರವಾದ ವಿಶಿಷ್ಟವಾದ ಮಾಹಿತಿಕೋಶವೆನ್ನುವಂತಹ ಕೈಪಿಡಿಯಾದ ಕರಣಹಸಿಗೆಯನ್ನು ರಚಿಸಿದ್ದು ವಚನಯುಗದ ಅನೇಕ ಮಹತ್ವದ ಕೊಡುಗೆಗಳಲ್ಲಿ ಪ್ರಮುಖವಾದುದು ಆಗಿದೆ. ಯೋಚನೆ ಮಾಡುವ ಶಕ್ತಿಯೊಂದಿಗೆ ಜನಿಸಿದ ಮನುಷ್ಯ, ಸಾಮಾನ್ಯ ಮನುಷ್ಯನಿಂದ ಅಸಾಮಾನ್ಯ ಮನುಷ್ಯನಾಗಲು ಮತ್ತು ಆ ಸಾಧನೆಯ ಮಾರ್ಗಕ್ಕೆ ಹೋಗಲು ಮಾಧ್ಯಮವಾಗುವುದು ಆತನ ದೇಹವಾಗಿದೆ. ಅವನು ದೇಹದ ಮೂಲಕವೇ ಅಲೌಕಿಕವನ್ನು ಮುಟ್ಟುವ ಪಯಣ ಆರಂಭವಾಗುವುದು. ದೇಹದ ಒಳಗಿನ ಕುರಿತು ಹನ್ನೆರಡನೆಯ ಶತಮಾನದಲ್ಲಿ ವಚನಗಳ ಮೂಲಕ ಆ ಜ್ಞಾನವನ್ನು ಹಂಚಲು ಹೊರಟಿದ್ದು ವಚನಯುಗದ ಸಾಧನೆಯ ಮೈಲಿಗಲ್ಲು ಆಗಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ದೇಹ, ಮಾಂಸ, ಮೂಳೆ, ರಕ್ತ, ನಾಡಿಗಳ ಬಗ್ಗೆಯೂ ವಚನಗಳಲ್ಲಿ ಪ್ರಸ್ತಾಪ ಮಾಡಿರುವ ಚೆನ್ನಬಸವಣ್ಣನವರು ದೇಹದೊಳಗಿರುವ ಪಿತ್ತ, ಕಫ ಇವುಗಳ ಬಗ್ಗೆಯೂ ಮಾತಾಡುತ್ತಾರೆ. ಹೀಗೆ ದೇಹದ ಬಗ್ಗೆ ಮಾತಾಡುತ್ತಲೇ ಮನುಷ್ಯನ ಮನಸ್ಸಿನ ಕುರಿತೂ ಪ್ರಸ್ತಾಪ ಮಾಡುತ್ತಾರೆ. ನಾಲ್ಕು ಅಂತಃಕರಣಗಳಾದ ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರವೂ ಮನುಷ್ಯ ದೇಹದ ಒಳಗಿರುವ ಹಾಗೂ ಅವನಿಗೆ ಗುಣವಾಗಿ ವಿಶೇಷತೆಯನ್ನು ನೀಡುವ ವಿಸ್ಮಯಗಳು ಎನ್ನುತ್ತಾರೆ.

ಚೆನ್ನಬಸವಣ್ಣ ಅತ್ಯಂತ ಕಿರಿಯ ವಯಸ್ಸಿನಲ್ಲಿ ಮಹಾನ್ ಸಾಧನೆ ಮಾಡಿದ ವಚನಯುಗದ ದಾರ್ಶನಿಕ. ಪಾಶ್ಚಾತ್ಯ ವೈದ್ಯವಿಜ್ಞಾನಿಗಳು ಹದಿನೈದನೆಯ ಶತಮಾನದಲ್ಲಿ ವಿವರಿಸಿದ ಮಾನವ ದೇಹದ ವಿವಿಧ ಅಂಗಗಳ ವಿವರಗಳನ್ನು ಹನ್ನೆರಡನೆಯ ಶತಮಾನದಲ್ಲಿ ಚೆನ್ನಬಸವಣ್ಣನವರು ವಚನಗಳಲ್ಲಿ ನೀಡಿದ್ದಾರೆ. ಆಧುನಿಕ ವಿಜ್ಞಾನಕ್ಕೆ ಇತಿಹಾಸದ ಕೊಡುಗೆಯ ಸಾಧ್ಯತೆಗಳನ್ನು ಹಾಗೂ ಸವಾಲುಗಳನ್ನು ಜನಮನಕ್ಕೆ ತಲುಪಿಸಲು, ವಚನಗಳ ಕುರಿತು ವೈದ್ಯಕೀಯ ಚೌಕಟ್ಟಿನಲ್ಲಿ ಇನ್ನಷ್ಟು ಅಧ್ಯಯನಗಳು ನಡೆಯುವ ಅಗತ್ಯವಿದೆ. ಈ ದಿಸೆಯಲ್ಲಿ ಸಾಹಿತ್ಯದ ಜೊತೆಯಲ್ಲಿ ವೈದ್ಯ ವಿಜ್ಞಾನ ಕೈಜೋಡಿಸಿದರೆ ಇನ್ನಷ್ಟು ಅಂಶಗಳು ಹೊರಬರಬಹುದು.

ಕೊನೆಟಿಪ್ಪಣಿಗಳು:

೧.ಚೆನ್ನಬಸವ ಪುರಾಣ–ಒಂದು ಅಧ್ಯಯನ,ಡಾ.ವಿಜಯಾದೇವಿ, ಪ್ರಭುದೇವ ಗ್ರಂಥಮಾಲೆ, ಬೆಂಗಳೂರು,೧೯೯೮, ಪುಟ ೧೩೪.
೨.ಚೆನ್ನಬಸವ ಪುರಾಣ–ಒಂದು ಅಧ್ಯಯನ, ಡಾ.ವಿಜಯಾದೇವಿ, ಪ್ರಭುದೇವ ಗ್ರಂಥಮಾಲೆ, ಬೆಂಗಳೂರು,೧೯೯೮, ಪುಟ ೧೩೪.
೩.ಚೆನ್ನಬಸವಣ್ಣ – ಸಂ: ಮಲ್ಲೇಪುರಂ ವೆಂಕಟೇಶ್, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ–೨೦೧೧–ಪುಟ, ೨೦೨.
೪. ಚೆನ್ನಬಸವಣ್ಣ–ಸಂ: ಮಲ್ಲೇಪುರಂ ವೆಂಕಟೇಶ್, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ–೨೦೧೧–ಪುಟ, ೨೦೨.

ಪರಾಮರ್ಶನ ಗ್ರಂಥಗಳು :

೧.ಸಂ:ಡಾ ಜಿ. ಎಸ್. ಕಾಪಸೆ, ಚೆನ್ನಬಸವಣ್ಣನವರ ವಚನ ವ್ಯಾಖ್ಯಾನ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೨೦೦೫.
೨.ಚೆನ್ನಬಸವ ಪುರಾಣ–ಒಂದು ಅಧ್ಯಯನ,ಡಾ.ವಿಜಯಾದೇವಿ, ಪ್ರಭುದೇವ ಗ್ರಂಥಮಾಲೆ, ಬೆಂಗಳೂರು,೧೯೯೮, ಪ್ರಭುದೇವ ಗ್ರಂಥಮಾಲೆ, ಬೆಂಗಳೂರು, ೧೯೯೮,
೩.ಸಂ:ಮಲ್ಲೇಪುರಂ ವೆಂಕಟೇಶ್, ಚೆನ್ನಬಸವಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೧.



Mount Carmel College, Autonomous

58, Palace Road, Bengaluru - 560052